
ಶನಿವಾರ, ನವೆಂಬರ್ 5, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಅತ್ಯಾಚಾರ ಪ್ರಕರಣಗಳಲ್ಲಿ ಸಂತ್ರಸ್ತೆಗೆ ನಡೆಸುವ 'ಟೂ ಫಿಂಗರ್ ಟೆಸ್ಟ್' ಅವೈಜ್ಞಾನಿಕವಾಗಿದ್ದು, ಈ ಕುರಿತ ವಿವರ ಇಲ್ಲಿದೆ.



ಬಿಜೆಪಿ, 'ಕೈ' ಕಾರ್ಯಕರ್ತರ ಜಟಾಪಟಿ

ಬಸ್ ತಂಗುದಾಣ ಉದ್ಘಾಟನೆ: ಶಿಷ್ಟಾಚಾರ ಉಲ್ಲಂಘನೆ ಆರೋಪ

ಪ್ರಜಾವಾಣಿ ವಾರ್ತೆ

ಯಲಹಂಕ: ಬಸ್ ತಂಗುದಾಣದ ಮೇಲೆ ಸಂಸದರ ಭಾವಚಿತ್ರ ಹಾಕದೆ ಶಿಷ್ಟಾಚಾರ ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ವಾಗ್ವಾದ ಮತ್ತು ಪ್ರತಿಭಟನೆಯು ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ವಿದ್ಯಾನಗರ ಕ್ರಾಸ್ ಬಳಿ ನಡೆಯಿತು.

ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ₹18 ಲಕ್ಷ ವೆಚ್ಚದಲ್ಲಿ ವಿದ್ಯಾನಗರ ಕ್ರಾಸ್ ಬಳಿ ನೂತನವಾಗಿ ನಿರ್ಮಿಸಿರುವ ಬಸ್ ತಂಗುದಾಣದ ಉದ್ಘಾಟನಾ ಸಮಾರಂಭವನ್ನು ಶುಕ್ರವಾರ ನಿಗದಿಪಡಿಸಲಾಗಿತ್ತು. ಅದರಂತೆ ಕಾಂಗ್ರೆಸ್ ಕಾರ್ಯಕರ್ತರು ತಂಗುದಾಣದ ಉದ್ಘಾಟನಾ ಸಮಾರಂಭಕ್ಕೆ ಸಿದ್ಧತೆ ನಡೆಸಿ, ಶಾಸಕರ ಆಗಮನಕ್ಕೆ ಕಾಯುತ್ತಿದ್ದರು. ಈ ವೇಳೆ ಸ್ಥಳದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು, ತಂಗುದಾಣದ ಮೇಲೆ ಕೇವಲ ಶಾಸಕ ಕೃಷ್ಣ ಬೈರೇಗೌಡರ ಭಾವಚಿತ್ರ ಮಾತ್ರ ಹಾಕಿಸಿ, ಸಂಸದ ಡಿ.ವಿ.ಸದಾನಂದಗೌಡ ಅವರ ಭಾವಚಿತ್ರ ಹಾಕದೆ ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ತಗಾದೆ ತೆಗೆದರು.



ಬಸ್ ತಂಗುದಾಣದ ಮೇಲೆ ಸಂಸದರ ಭಾವಚಿತ್ರ ಹಾಕದೆ ಶಿಷ್ಟಾಚಾರ ಉಲ್ಲಂಘನೆ ಮಾಡಲಾಗಿದೆ ಎಂದು ಆರೋಪಿಸಿ, ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಇದಕ್ಕೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಕಾರ್ಯಕರ್ತರು, 'ಶಾಸಕರ ಅನುದಾನದಲ್ಲಿ ನಿರ್ಮಿಸಿರುವ ತಂಗುದಾಣದ ಮೇಲೆ ಸಂಸದರ ಭಾವಚಿತ್ರ ಏಕೆ ಹಾಕಬೇಕು? ನೀವು ಸಂಸದರ ಅನುದಾನದಲ್ಲಿ ನಿರ್ಮಿಸಿರುವ ತಂಗುದಾಣಗಳ ಮೇಲೆ ಶಾಸಕರ ಭಾವಚಿತ್ರ ಹಾಕಿಸಿದ್ದೀರಾ' ಎಂದು ಪ್ರಶ್ನಿಸಿದರು.

ಈ ವೇಳೆ ಎರಡೂ ಪಕ್ಷಗಳ ಮುಖಂಡರ ನಡುವೆ ಮಾತಿನ ಚಕಮಕಿ ನಡೆದು, ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಪೊಲೀಸರು, ಎರಡೂ ಪಕ್ಷಗಳ ಮುಖಂಡರ ಮನವೊಲಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ನಂತರ ಕೃಷ್ಣ ಬೈರೇಗೌಡ ಸ್ಥಳಕ್ಕೆ ಬರುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ಅವರ ವಿರುದ್ಧ ಘೋಷಣೆ ಕೂಗಿದರು. ಇದರಿಂದ ಕೆರಳಿದ ಕಾಂಗ್ರೆಸ್ ಕಾರ್ಯಕರ್ತರು, ಬಿಜೆಪಿ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಪರಸ್ಪರ ಘೋಷಣೆಗಳ ನಡುವೆಯೇ ಕೃಷ್ಣ ಬೈರೇಗೌಡ ಬಸ್ ತಂಗುದಾಣವನ್ನು ಉದ್ಘಾಟಿಸಿದರು.

ಈ ವೇಳೆ ವರದಿಗಾರರೊಂದಿಗೆ ಮಾತನಾಡಿದ ಅವರು, 'ಮೊದಲು ಸಂಸದರ ಅನುದಾನದಲ್ಲಿ ನಿರ್ಮಿಸಿರುವ ಬಸ್ ತಂಗುದಾಣಗಳ ಮೇಲೆ ಶಾಸಕರ ಭಾವಚಿತ್ರ ಹಾಕಿಸಿ, ಶಿಷ್ಟಾಚಾರ ಪಾಲಿಸಲಿ; ನಂತರ ಈ ಬಗ್ಗೆ ಮಾತನಾಡೋಣ' ಎಂದರು.

19ರಂದು 'ತುಂತುರು ಅಲ್ಲಿ ನೀರ ಹಾಡು'

ಬೆಂಗಳೂರು: ಗೀತ ರಚನೆಕಾರ, ಸಂಗೀತ ನಿರ್ದೇಶಕ ಕೆ. ಕಲ್ಯಾಣ್ ಅವರ ಸಂಗೀತ ನಿರ್ದೇಶನದ ಯಶಸ್ವಿ ಚಿತ್ರ 'ಅಮೃತವರ್ಷಿಣಿ'ಗೆ 25 ವರ್ಷಗಳು ತುಂಬಿದ ಪ್ರಯುಕ್ತ 'ತುಂತುರು ಅಲ್ಲಿ ನೀರ ಹಾಡು' ವಿಶೇಷ ಕಾರ್ಯಕ್ರಮ ನ. 19ರಂದು ಸಂಜೆ 6ರಿಂದ ಬೆಂಗಳೂರಿನ ಬಸವನಗುಡಿ ಎನ್.ಆರ್.ಕಾಲೊನಿಯ ಡಾ.ಅಶ್ವತ್ಥ್ ಕಲಾಭವನದಲ್ಲಿ ನಡೆಯಲಿದೆ.

ಸ್ವಸ್ತಿ ಈವೆಂಟ್ಸ್ ಸಂಸ್ಥೆ ಹಮ್ಮಿಕೊಂಡಿರುವ ಈ ಕಾರ್ಯಕ್ರಮದಲ್ಲಿ ಕಲ್ಯಾಣ್ ಅವರನ್ನು ಸನ್ಮಾನಿಸಲಾಗುವುದು. ಕಲ್ಯಾಣ್ ಅವರ ರಚನೆ, ಸಂಗೀತ ನಿರ್ದೇಶನದ ಗೀತೆಗಳನ್ನು ಗಾಯಕರಾದ ಜಯಸಿಂಹ, ಅನಿತಾ ಭಟ್, ಉದಯ್ ಅಂಕೋಲ, ಪ್ರಿಯಾ ಯಾದವ್ ಹಾಡಲಿದ್ದಾರೆ. ಸಂಗೀತ ನಿರ್ದೇಶಕ ವಿ.ಮನೋಹರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಸೀಮಿತ ಪ್ರೇಕ್ಷಕರ ಸಮ್ಮುಖದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಆಸಕ್ತರು ಮುಂಚಿತವಾಗಿ ಹೆಸರು ನೋಂದಾಯಿಸಬೇಕು ಎಂದು ಸಂಘಟಕರ ಪ್ರಕಟಣೆ ತಿಳಿಸಿದೆ.

ಮಾಹಿತಿಗೆ ಸಂಪರ್ಕಿಸಿ: 98459 42513

7ರಂದು ವಿಚಾರಣೆಗೆ ಹಾಜರಾಗುವಂತೆ ಇ.ಡಿ ಸೂಚನೆ

ಡಿ.ಕೆ. ಸಹೋದರರಿಗೆ ಮತ್ತೆ ಸಮನ್ಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಅವರ ಸೋದರ ಮತ್ತು ಸಂಸದ ಡಿ.ಕೆ.ಸುರೇಶ್ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ.) ಮತ್ತೆ ಸಮನ್ಸ್ ನೀಡಿದ್ದು, ಇದೇ 7ರಂದು ಬೆಳಿಗ್ಗೆ 11ಕ್ಕೆ ಹಾಜರಾಗುವಂತೆ ಸೂಚಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ಸೆಪ್ಟೆಂಬರ್ 19ರಂದು ಹಾಗೂ ಅಕ್ಟೋಬರ್ 7ರಂದು ಡಿ.ಕೆ.ಸಹೋದರರನ್ನು ಇ.ಡಿ. ವಿಚಾರಣೆಗೆ ಒಳಪಡಿಸಿತ್ತು. ನ್ಯಾಷನಲ್ ಹೆರಾಲ್ಡ್‌ನ ಮಾತೃ ಸಂಸ್ಥೆಯಾದ ಯಂಗ್ ಇಂಡಿಯನ್ ಲಿಮಿಟೆಡ್‌ಗೆ ಶಿವಕುಮಾರ್ ಮತ್ತು ಸುರೇಶ್ ಅವರು ದೇಣಿಗೆ ನೀಡಿರುವುದಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ. 'ಈ ವರ್ಷ ಯಂಗ್ ಇಂಡಿಯನ್ ಕಂಪನಿಗೆ ನಾವು ಸ್ವಲ್ಪ ದೇಣಿಗೆ ನೀಡಿದ್ದೇವೆ' ಎಂದು ಶಿವಕುಮಾರ್ ಹೇಳಿಕೊಂಡಿದ್ದರು.

ಕಳೆದ ತಿಂಗಳು ವಿಚಾರಣೆ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ್ದ ಡಿ.ಕೆ.ಸುರೇಶ್, 'ನಾನು ಈ ವರ್ಷ ಯಂಗ್ ಇಂಡಿಯನ್ ಕಂಪನಿಗೆ ₹25 ಲಕ್ಷ ದೇಣಿಗೆ ನೀಡಿದ್ದೇನೆ. ಆ ಕಂಪನಿಗೆ ನೀಡುವ ದೇಣಿಗೆಗೆ ತೆರಿಗೆ ವಿನಾಯಿತಿ ರದ್ದುಪಡಿಸಲಾಗಿದೆ. ಹೀಗಿದ್ದೂ ದೇಣಿಗೆ ಹೇಗೆ ನೀಡಿದಿರಿ ಎಂದು ನನ್ನನ್ನು ಅಧಿಕಾರಿಗಳು ಪ್ರಶ್ನಿಸಿದರು. ವಿನಾಯಿತಿ ರದ್ದಾಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ವರ್ಷ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವಾಗ ತೆರಿಗೆ ವಿನಾಯಿತಿ ಕೇಳುವುದಿಲ್ಲ ಎಂದು ಅವರಿಗೆ ಹೇಳಿದ್ದೇನೆ' ಎಂದು ತಿಳಿಸಿದ್ದರು.

ಇದೇ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡ ಪವನ್ ಬನ್ಸಲ್ ಸೇರಿದಂತೆ ಕಾಂಗ್ರೆಸ್‌ನ ಹಲವು ಮುಖಂಡರನ್ನು ಜಾರಿ ನಿರ್ದೇಶನಾಲಯ ವಿಚಾರಣೆಗೆ ಒಳಪಡಿಸಿದೆ.

ಹೈಕೋರ್ಟ್ ಮೆಟ್ಟಿಲೇರಿದ ಶಿವಕುಮಾರ್: 'ಒಂದೇ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯದವರು ಪದೇ ಪದೇ ಸಮನ್ಸ್ ನೀಡಬಾರದು, ಮರು ವಿಚಾರಣೆ ನಡೆಸಬಾರದು ಹಾಗೂ ಬಂಧನದಿಂದ ರಕ್ಷಣೆ ನೀಡಬೇಕು' ಎಂದು ಡಿ.ಕೆ. ಶಿವಕುಮಾರ್ ಅವರು ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ನ್ಯಾಯಾಲಯವು ಇ.ಡಿ.ಗೆ ನೋಟಿಸ್ ನೀಡಿದ್ದು, ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿದೆ.

'ಗೂಗಲ್ ವಿಮರ್ಶೆ ಪರಿಗಣಿಸಲು ಆಗದು'

ಬೆಂಗಳೂರು: 'ಗೂಗಲ್‌ನಲ್ಲಿ ಬರುವ ಟಿಪ್ಪಣಿ, ವಿಮರ್ಶೆಗಳನ್ನು ಸಾಕ್ಷ್ಯಾಧಾರ ಎಂದು ಪರಿಗಣಿಸಲು ಆಗದು' ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಒಪ್ಪಂದದಂತೆ ಸರಕುಗಳನ್ನು ಪೂರೈಕೆ ಮಾಡದ ವ್ಯಕ್ತಿಯೊಬ್ಬರ ವಿರುದ್ಧ ದಾಖಲಾಗಿದ್ದ ಪ್ರಕರಣದಲ್ಲಿ ಷರತ್ತುಬದ್ಧ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಬಂಧನದ ಭೀತಿ ಎದುರಿಸುತ್ತಿದ್ದ ಮುಂಬೈನ ಓಂ ಪ್ರತಾಪ್ ಸಿಂಗ್ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಗೂಗಲ್ ವಿಮರ್ಶೆಗಳನ್ನು ಸಾಕ್ಷ್ಯ ಎಂದು ಪರಿಗಣಿಸಲು ಸಾಧ್ಯವಿಲ್ಲ' ಎಂದಿದೆ.

ಪ್ರಕರಣವೇನು?: ರಾಮನಗರದಲ್ಲಿ ದೀಪದ ಎಣ್ಣೆ ಉದ್ಯಮ ನಡೆಸುತ್ತಿರುವ ಪವಿತ್ರಾ ಎಂಬುವವರು ಮುಂಬೈನ ಡೈಮಂಡ್ ಪೆಟ್ರೋಲಿಯಂ ಸಂಸ್ಥೆ ಜೊತೆ ಲಿಕ್ವಿಡ್ ಪ್ಯಾರಾಫೈನ್ ಖರೀದಿ ವ್ಯಾಪಾರ ನಡೆಸುತ್ತಿದ್ದರು. 'ತಮ್ಮ ಬೇಡಿಕೆಯ ಸರಕಿಗೆ ನಿಗದಿತ ಹಣ ಸಂದಾಯ ಮಾಡಿದ್ದರೂ ಸಂಸ್ಥೆ ಸರಕು ಪೂರೈಕೆ ಮಾಡಿಲ್ಲ' ಎಂದು ಆರೋಪಿಸಿ ರಾಮನಗರದ ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. 'ಗೂಗಲ್‌ನಲ್ಲಿ ಪರಿಶೀಲಿಸಿದಾಗ ಕಂಪನಿಯ ಮಾಲೀಕ ಓಂ ಪ್ರತಾಪ್ ಸಿಂಗ್ ಹಲವರಿಗೆ ವಂಚಿಸಿದ್ದಾರೆ ಎಂಬ ವಿಮರ್ಶೆ ಇತ್ತು. ಆದ್ದರಿಂದ, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಕೋರಿದ್ದರು. ಬಂಧನದ ಭೀತಿ ಎದುರಿಸುತ್ತಿದ್ದ ಓಂ ಪ್ರತಾಪ್ ಸಿಂಗ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಕ್ಷಮೆ ಯಾಚಿಸಿಲ್ಲ: ವಿಶ್ವೇಶ್ವರ ಭಟ್

ನವದೆಹಲಿ: 'ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕುರಿತ ಅವಹೇಳನಕಾರಿಯಾಗಿ ಲೇಖನ ಬರೆದಿದ್ದೇನೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನಾನು ಕ್ಷಮೆ ಕೇಳಿಲ್ಲ. ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಪ್ರಮಾಣಪತ್ರ ಸಲ್ಲಿಸಿ ವಿಷಾದ ವ್ಯಕ್ತಪಡಿಸಿದ್ದೇನೆ' ಎಂದು ಕನ್ನಡ ದಿನಪತ್ರಿಕೆ 'ವಿಶ್ವವಾಣಿ'ಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಸ್ಪಷ್ಟಪಡಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿಗೆ ಅವರು ಈ ಸ್ಪಷ್ಟನೆ ನೀಡಿದ್ದಾರೆ. ಆದರೆ, 'ವಿಶ್ವೇಶ್ವರ ಭಟ್ ಕ್ಷಮೆ ಯಾಚಿಸಿದ್ದಾರೆ' ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಹಾಗೂ ತನಿಖಾಧಿಕಾರಿ ತಿಳಿಸಿದ್ದಾರೆ.

ಜಲಮಂಡಳಿ ಫೋನ್–ಇನ್ ಇಂದು

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಇದೇ ನ.5ರಂದು ಬೆಳಿಗ್ಗೆ 9ರಿಂದ 10.30ರವರೆಗೆ ನೇರ ಫೋನ್–ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ.

ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಅವರು ಅಹವಾಲು ಆಲಿಸಲಿದ್ದಾರೆ.

ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆಗಳಿಂದ ತ್ಯಾಜ್ಯ ನೀರು, ಜಲಮಾಪನ ಹಾಗೂ ನೀರಿನ ಬಿಲ್ ಸಮಸ್ಯೆಯ ಬಗ್ಗೆ ಮಾತನಾಡಿ ಕುಂದು–ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆ ತಿಳಿಸಿ ದೂರು ನೀಡಬಹುದು. ದೂರವಾಣಿ ಸಂಖ್ಯೆ: 080-22945119.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land

Devanahalli

SALE 26 Guntas Farm land. 7 kms after Devanahally. 0.5 kms off NH44. Price 2 Cr. Clear title. Owner: 9986366366.

Dobaspet

SALE AGRICULTURE Land 4.1Acre, 12km from Dabaspet with 80ft State Highway. 65Lac Per Acre, Owner: 9611776523

General

AGRICULTURAL, RESIDENTIAL Lands Available 1to50 Acres on Mysore Road, Kanakapura Road In and Around Bidadi, Ramanagar, Kanakapura. Clear Title. Call- 9900115519

Ramanagar

SALE 17 Guntas Fully Developed from Bangalore Mysore Highway 15 Minit Total Cost 18L: 9845169300

Commerical

Airport Road



BSNL LAYOUT
Premium Residential / Commercial Plots
Near B'lore Intl Airport Next to Mini Vidhana Soudha on 6 lane NH 207
@ 1100/Sft
OPEN FOR GENERAL PUBLIC
Call: 9071534000

Double Road

SALE: FULLY Furnished 444 Sft Office. Money Point Building KH Road, Near Canara Bank, Attractive Price. Call: 99455-22220

Indiranagar

TENANTED SHOWROOM/ Office/ Independent Buildings Koramangala, Indiranagar, CBD, Whitefield 1.20 Cr Onwards. Falcon: 9845447868/ 9845061345

Kengeri

NADAPRABHU KEMPEGOWDA, Commercial Site 50x80, East Facing 8th Block, 'H' Sector, Rate 5,500/-. Kumar: 9945112279

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Flat

Begur

BEGUR: VISHWAPRIYA Layout 'GAYATHRI BLOSSOM' 2BHK/ 3BHK FLATS BBMP Approved, GST, Carparking, Bescom Deposit All inclusive. 4500/ Sft. Contact: 98805-35109/ 63632-69059

BTM Layout

FLATS_14' units for sale (G+2)`Kudlu Gate,BBMP A`Katha, urgency Sale, expecting 2,90,00,000/- (for`14 units) negotiable -8904522650/ 9108853139

SALE SNN RAJ LAKE VIEW 4BHK West Facing 2375sft semifurnished Servants Room 2carpark 'UMAIR' 9845291967 9900743700

Basaveshwaranagar

"2&3BHK FLAT Ready to Occupy with occupancy certificate covered Car-park 1km from Basaveshwarnagar, Magadi Road. 9845286505"

Bannerghatta Road

SALE: FULLY Furnished East facing 2 Bedroom Apartment, Posh Vijaya Bank Layout. Attractive Price: 99455-22220

Cambridge Layout

INDEPENDENT BUILDING with 6 Apartments for sale. 4700 Sft Plot. Occupation certificate, lift. 'Prime' 9845079698

Frazer Town

SALE PROPERTY Jeevanahalli, Cox Town 6 Nos. 2 BHK. Good Rent. A Khata. Owner: 9686897004.

HSR Layout

NEW_FLAT for_sale 3`BHK furnished HSR_Layout, Swimming pool,`Gym etc,`Bank_loan availed, urgency`sale (old_Rate 1,10,00,000/-`Now 95,00,000/-) 8904522650/ 9108853139

Jayanagar

SALE- 3STORYED, EF, Corner Building with 7 Flats, Eastend Road, Jayanagar-4th T Block 4050 Sqft, 30000 Contact: 7892149427

J P Nagar

3 BHK Duplex flat with car parking, Basic amenities in Shakambarinagar. 1 Crore Call 8792627658

Mysore Road

SALE: FURNISHED 3BR Apartment Sunworth-Purvankara Project, Behind Rajeshwari Medical College, Near Metro Station. Attractive Price: Call: 99455-22220

R T Nagar

R.T.NAGAR NEAR HMT Layout 2BHK apartment, first floor, North, Vastu, carparking, AEH, lift, going cheap. Immediate settlement. 7259293212/ 9343744723

Tumkur

FLATS FOR SALE Industrial flat at Anthrasanahalli KSSIDC Industrial Area Tumkur. plant Building With machinery Area 16500 sqft for Sale 9343087899

Farm House/ Land/ Resorts

Multiple Locations

NANDI HILLS rd 1/2 acre gated 15 rooms AC furnished resto cafe converted eKhata Rs.9Cr. Ph:7019346409

House

Banashankari

SALE-BDA CORNER 30x40, 20x30 Fully Furnished Triplex Houses, Carparking Banashankari 6th Stage 2nd Block Call:8722777999 9449812176

BUILDING'S 20X30, 95L & 1.15cr. Banashankari 6th Stage 10th Block, Kengeri. Mascot Constructions. 9945760765/ 9880909989.

J P Nagar

J.P.NAGAR 30X40 NORTH 3 BHK House For Sale Full Cheque Payment 2.85cr Negotiable Call:9845069739 9380613718

Koramangala

"KORAMANGALA 7TH Block P.G.Building 70,000/- Rental Income, Built on 622 Sqft Plot, Sale-1.50 Crore. 9845286505"

Padmanabha Nagar

30X41.5 WEST Facing, 3 BHK Independent House, RK Layout, Padmanabhanagar. 2.10 Cr. Negotiable. 9448684258

Rajarajeshwari Nagar

SALE: BRAND New Ready to occupy Independent House on 30'x40' Site GF 1BHK and Parking, FF, SF & TF. 5BHK Triplex, all amenities, Italian Marble/ All Teak, WF Site, Main Door NF, Krishna Garden, RR.Nagar. Ph: 98451-82419

Thanisandra

SALE 1200SFT Property 3-Floors, 5-Houses, Own Borewell,Solar, UPS, Excellent Location, Near Manyatha. 1.50CR. Owner: 8217057488

Sites

Anjanapura

ANJANAPURA 6TH Block 30x40 North Facing BDA SITE For SALE. Ready for Construction, Near 80 Feet Road Call: 98455-35348

ANJANAPURA 5th G Block 30×40 North Facing BDA Site For Sale Direct Registration Only. 9845298419

Banashankari

BANASHANKARI 6TH Stage 6th Block 40x60 EF Near 100' Road 7000/ 10th Block 40x60 EF 6900/- Anjanapura 5th G 30x40 NF 5900/ 6th Block 30x40 NF 6250/ 9964627255/ 9880300791

BANASHANKARI 6TH Stage, 4th B Block, 50x80 North. Commercial South East Corner, BDA 8680 Sqft. 9945114693, 9632852947.

40X60 BDA Plot For Sale at Banashankari 6th Stage, 11th Block. Contact: 7676900174 8660220048

BANASHANKARI 6TH STAGE- Surroundings BDA AVAILABLE/ WANTED- 20x30, 30x40, 40x60, 50x80 Sites. 'BRINDAVAN ASSOCIATES'- 9980863245

BDA SITE for with more discount price Residential and Commercial, Banashankari 6th stage Uttrahalli, Anjanapura, Vishweshwaraiah Layout, Kempegowda Layout, 30x40, 40x60, 50x80 Corner/ intermediate with 80% Bank Loan. 9916592400

BANASHANKARI 6TH stage, BDA corner site 30x40 for sale, purchased in BDA auction, excellent location, looking for direct buyers. 9844136241

BANASHANKARI 6TH STAGE,3rd Block 50x80, Commercial S/F 7,500/- 6th Block, 30x40, N/F 4,850/- 9538680364/ 9513004587.

BANASHANKARI 6TH Stage 50x80 Commercial Site Sale 2nd/ 5th Block, 80 Feet Road, 9972720488/ 9880448478.

Hosur Road

SITE FOR Sale: AECS layout Singasandra 'B' Block #878/A, 50x80 ft West facing, 7500/- sft. Contact: 9448388330/ 9845088566

SALE 1575 Sqft Site at Begur. North Facing. 1km from Hosur Road Metro Station. Bank Loans: 7022645835

Kengeri

KENGERI, HEMMIGEPURA, BBMP 'A' Katha, 30x50 East Facing Site for Sale. Gated Community. Contact: 92434-19641.

Kalyan Nagar

SALE EAST facing 40X36 & 23X48 Sites @ Kalayanagar 2nd Block,Direct access to Ring Road, B-Katha, Clear Titles, Direct buyers only call: 7619404681

Kanakapura Road

NARAYANNAGAR 1ST Block 50x80 SF 60' Road 11250/-, 3rd Block 30x45 WF 8500/ Kumaraswamy Layout 2nd Stage 30x40 SF 14000- 9964627255/ 9880300791

Kempegowda Layout

KEMPEGOWDA LAYOUT BDA Sites for Sale Commercial 50x80 300ft Peripheral Ring Road 40x60 100ft Road: 9731594565/ 9449556869

KEMPEGOWDA LAYOUT 8th Block BDA Site for Sale, Site No.2330, North-40x60, Rate:Rs.4,600 persft, PH:9632227878, 9448793428

M G Road And Around

WANTED BDA/ A-Katha Plots/houses Arkavathy Layout, R.T.Nagar, Thanisandra, Hebbal, Jakkur,Yelahanka, HBR, Indiranagar, Koramangala. Immediate settlement. 'Spacelinks' 9845129934.

Magadi Road

BEL LAYOUT 1st Stage 40x60 West Face 7500/- Negotiable Near SBI Bank. Contact: 9845497047

Mysore

HUNSUR ROAD Kuberananda Sagara Layout, Sale 50X80 Site #691, 1 K.M. From Main Road. 9945724472.

Nagarabhavi

30X40 EAST SITE AMBEDKAR COLLEGE 30X50 EAST 3 FLOORS HOUSE MYSORE ROAD CHRIST COLLEGE: 9448081380

Nelamangala

E/F-24X135 NELAMANGALA Development Authority layout, Fully Developed, Ready For Construction. Clear Documents. Genuine Buyers Only Contact Owner- 7019981997/ 9448014586

SITE FOR Sale Nelamangala Karnataka Postal &Telecom Housing Co-Operative Society BMRDA Approval Rs 1050/ Sqft Booking Open for Public Bank Loan Available: 8660519436

Padmanabha Nagar

COMMERCIAL SITE For Sale 30x42 W/F Rs.12,500/Sqft Near Mane Tindi Hotel Rajeev Nagar Main Road: 9980741687/9743315557

Vishweshwariah Layout

AVAILABLE VISHWESHWARIAH Layout 1st Block 30x40 40ft Road, 9th Block 30X40 WF Near Vidhyanikethan School Ready To Construction: 8553908699

50X80 BDA Commercial Site Sale Vishweshwaraiah Layout 5th Block 100ft Road WF13000 Negotiable Full White: 8892901567/ 9341733480

"50X80 NORTH Facing Good Location Residential BDA Site 2nd Block Vishveshwaraiah Layout Immediate Sale- 7338328879"

VISHWESHWARAIAH LAYOUT 5th Block 50x80 Commercial Site For Sale BDA Allotte Site 100 Feet Road: 9964000019

SMV LAYOUT 3rd Block, Site #1172/1, NF 36x40, 40 Feet Road, Near 100 feet Road, Good Location. 8123910222.

BHARATHNAGAR ATTACH 40x40 BBMP A Katha SE Corner and SMV BDA Site 7th Block 30x40 East: 9964971895

VISHWESHWARAIAH LAYOUT 7th Block 30x40 East Facing BDA Site For Sale Contact: 7892224597

VISHWESHWARAIAH LAYOUT 5th Block 30x40 East Facing BDA Site For Sale Contact: 9845078185

VISHVESHWARAIAH LAYOUT Double-road near KLE Law College,A-khata 80X180 Commercial Site Sale,6500/-per-sqft. Contact:9945079777

BDA VISHWESHWARAYA Layout, 6th Block, 40x60, NF, Near KLE College, 7300/- Sft, Negotiable. 9108507222/ 7411101116

SITE FOR Sale 30x40, 40x60 Visweshwaraiah Layout Near Railway RTO Office Direct Owner: 9620696913/ 8971851966

Vidyaranyapura

VILLA PLOTS for Sale in Premium Res Layout (BBMP Limits) at Vidyaranyapura Blr Ready for Construction and Bank Loans Available :9901833455/ 9686300772

BUSINESS

Business to Business

Shares

EARN REGULAR daily income through online trading in a disciplined way. We give ONE TO ONE, personal training from basics to advanced level in FOREX, EQUITY and F&O segments.Call 8105303232

Business Offers

Distributors

COOL- RANGE of Gourmet Ice Creams & Alkaline Water Packs Invites Areawise Distribution/ Master Franchises: 9845013347

Finance

LOANS AVAILABLE against properties (mortgage, purchase, personal loans) preferred direct owners. Interested Please contact: 8296092609.

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

JOB OPPORTUNITIES

Accounts & Finance

JOB OPPORTUNITIES in Bangalore Wanted fulltime Executives and Telecallers For Banking Process fiv (BGV) and Collections. Call: 9986954958

Teachers/ Professors

Going to School Bengaluru, is in search of WOMEN FOOTBALL COACHES to teach children football at school.
To apply, send your CV to : remy.fernandes@goingtoschool.com or Call : WhatsApp : 9011270372
WALK-IN INTERVIEW : on 8th to 11th Nov. 2022 Call : 9892880860

Wanted

WANTED FEMALE executive Language English, hindi, Kannada Salary negotiable Contact :- 9703057999.

HORTICULTURE QUALIFIED Manager required to manage a Retail Plant Nursery business in Bangalore. Age no bar. Retired professionals also may apply. Annual Salary Rs Two Lakhs plus incentives. Contact on Mob No: 9620440909

MATRIMONIAL

Matrimonial Bureaus

ASWATH MATRIMONIAL Services, High class First/ Second Marriages All ages, India/Abroad. Aswath G.V- 9739855599

WEEKEND CORNER

ಭಾರತೀಯ ರೈಲ್ವೆ
ಕಾಶಿ ರಾಮೇಶ್ವರಂ ರೈಲ್ವೆ ಯಾತ್ರೆ
ವಾರಣಾಸಿ -ಗಯಾ- ಪ್ರಯಾಗರಾಜ್ ಚಿತ್ರಕೂಟದಾಮ ಅಯೋಧ್ಯ -ಪೂರಿ ಕೊನಾರ್ಕ್-ರಾಮೇಶ್ವರಂ -ಮಧುರೈ
18.11.22 - 11 ದಿವಸ - 2SL Rs 23500
ರೈಲಿನಲ್ಲಿ ಪ್ರಯಾಣ- ವಸತಿ ಬಸ್-ಊಟ ಸೆಕ್ಯೂರಿಟಿ ಟುರ್-ಮ್ಯಾನೇಜರ್
87544 04260 | WWW.ULARAIL.COM

ಶ್ರೀ ಸಾಯಿದುರ್ಗಾ ಜ್ಯೋತಿಷ್ಯ ಪೀಠಂ
(ನುಡಿದಂತೆ ನಡೆಯುವುದು)
ಪಂಡಿತ್|| ಅಶೋಕನಾಥ್ ಭಟ್
ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಸತಿ–ಪತಿ ಕಲಹ, ದಾಂಪತ್ಯ ಸಮಸ್ಯೆ, ಬಿಸಿನೆಸ್, ಮಧುವೆ, ಪ್ರೇಮ ವಿವಾಹ, ಕೌಟುಂಬಿಕ ಕಲಹ, ಧನಪ್ರಾಪ್ತಿ ಯೋಗ, ಕೋರ್ಟ್ ಕೇಸ್, ಹಣಕಾಸು, ರಾಜಕೀಯ ಇನ್ನೂ ಯಾವುದೇ ಸಮಸ್ಯೆಗಳಿಗೆ ಅತೀ ಶೀಘ್ರ ಶಾಶ್ವತ ಪರಿಹಾರಕ್ಕಾಗಿ ಇಂದೇ ಸಂಪರ್ಕಿಸಿ:
ಮನೆ ನಂ:40/ಎ, ಸುಬ್ರಹ್ಮಣ್ಯ ದೇವಸ್ಥಾನದ ಹಿಂಭಾಗ, ಕೃಷ್ಣ ಕಲ್ಯಾಣ ಮಂಟಪ ಹತ್ತಿರ, ಬಸವೇಶ್ವರನಗರ ಬೆಂಗಳೂರು-560079 9945555282

ಸ್ಪರ್ಧಾ ಮಿತ್ರ ACADEMY
IAS / KAS
PSI / PDO
PC Police Constable
Classes Starts From 7th Nov.-22
RRB / SSC / BANK-PO
Near Attigupppe Metro Station, opp. Maruti Medicals (338 Pillar) Vijayanagar, Bengaluru - 40.
9535111188 / 9535111199

PERSONAL

Change of Name

CHANGE OF NAME
I, **Prema M,** residing at #4, 3rd Main Road, Moodalapalya, Nagarabhavi Main Road, Bangalore - 560 072, have changed my name to **Premalatha** vide affidavit dated: 01.07.2017, before notary Raghunath A, Bangalore.

I, GRACE PEARL ZIONY. C. R/a#.96/6, 2nd cross, 4th Block Thyagarajanagar, Bangalore- 560028 Have Changed my Name to GRACE PEARL ZIONY.V Vide Affidavit Dated 04/11/2022 before Notary L. Shankaranarayana Bangalore

CHANGE OF NAME
I, **O. Padmaja,** Spouse of 14800870P, Ex-NK, Obulareddi Sudhakar, residing at #50/1/28, 1st Main, Sri Anjaneya Layout, Sri Abhayanjaneya Swamy Temple Road, Near Country Club, Sathanur Village, Bagalur Post, Bangalore - 562149, have changed my name to **Nagisetty Padmaja** & my DOB is wrongly mentioned in the service record as 27.03.1982, **Correct D.O.B is 01.06.1982.** Vide affidavit dated: 03.11.2022 before Notary Mr. Narendran, Bangalore

CHANGE OF NAME
I, **Shruthi S.** residing at: #912, Shruthi Nilaya, 8th 'A' Main, L.R. Bande Main Road, Adithyanagar, Kavalbyrasandra, New Extension, Bangalore - 32, have changed my name to **Shruthi Manjunath** & in my son's School record my name is mentioned as **Shruthi S.** my correct name is **Shruthi Manjunath** vide affidavit dated: 23.09.2022, before notary K.C. Gowthami, Bangalore.

Lost

DOCUMENTS LOST & FOUND
I, Muneer Siddique son of Mohammed Saab Siddique proprietor of M/s Mass Engineering Works, #29/1-1, Bhoopsandra, 60 feet road, Kalpana Chavla Road, RMV Extension, 2nd stage, Sanjaynagara, Bengaluru – 560094, do hereby inform the general pubic that I am the absolute owner of the Plot No: 378 in the Sub Layout of Sompura 1st stage Industrial Area comprised in Sy. Number parts 172 and 171 of Niduvanda village, Sompura Hobli, Nelamangala Taluk, Bengaluru rural district measuring 3986. Sq.mts bounded on east by Plot No: 378-P, west by: KIADB Road, North by Plot No: 378–P and 376-P and South by KIADB Road. Whereas the original of the following documents relating to the above-mentioned property are lost / misplaced on 06/06/2022 and not traceable which are (1) Allotment letter dated 02-08-2010 in No: HO /AS /Allot /D'Pet /18795/ 7043/2010-11 (2) Possession Certificate dated 16-03-2013 in No: IADB/DO-3 & EE/18795/964/ 2012-13 (3) Original Lease cum sale deed dated 27-10-2014 registered as Document No: NMG-1-07609-2014-15. (4) Approved Drawing (5) BESCOM Sanction Letter.
Despite my best search, I could not trace the above documents. In that regard I have lodged an online police complaint No: 0374054/2022 dated: 03/11/2022. If anybody finds the said original of the above said documents, Kindly inform: Jagadeesh K, 9900770586 / Vivekanand, 9731598000.

MORE Classifieds IN SUPPLEMENT

ಶನಿವಾರ, ನವೆಂಬರ್ 5, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 305 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	₹/$
60,950 ▲	18,117 ▲	82.35 ▲

ರಾಜ್ಯದಲ್ಲಿ 10 ಲಕ್ಷ ಉದ್ಯೋಗ ಸೃಷ್ಟಿ ನಿರೀಕ್ಷೆ–ಮುರುಗೇಶ ನಿರಾಣಿ

₹10 ಲಕ್ಷ ಕೋಟಿ ಸೆಳೆದ 'ಜಿಮ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶ–2022 ಒಟ್ಟು ₹10 ಲಕ್ಷ ಕೋಟಿ ಬಂಡವಾಳ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಇದರಿಂದ ರಾಜ್ಯದಲ್ಲಿ ಮುಂಬರುವ ವರ್ಷಗಳಲ್ಲಿ 10 ಲಕ್ಷ ಉದ್ಯೋಗಗಳು ಸೃಷ್ಟಿಯಾಗುವ ಸಾಧ್ಯತೆ ಇದೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ಹೇಳಿದರು.

'ಇನ್ವೆಸ್ಟ್ ಕರ್ನಾಟಕ– ಬಿಲ್ಡ್ ಫಾರ್ ದ ವರ್ಲ್ಡ್' ಆಶಯದಡಿ ಮೂರು ದಿನ ನಡೆದ ಸಮಾವೇಶದ ಕೊನೆಯ ದಿನವಾದ ಶುಕ್ರವಾರ ಸಚಿವರು ಈ ಮಾಹಿತಿ ನೀಡಿದರು.

ಈ ಬಾರಿಯ ಹೂಡಿಕೆ ಒಪ್ಪಂದಗಳಲ್ಲಿ ಅತಿ ಹೆಚ್ಚು ಒಪ್ಪಂದ ಇಂಧನ ಕ್ಷೇತ್ರದಲ್ಲಿ ಆಗಿದೆ. ಶೇ 70 ರಷ್ಟು ಹೂಡಿಕೆಗಳು ಬೆಂಗಳೂರು ಬಿಟ್ಟು ರಾಜ್ಯದ ಇತರ ಪ್ರಮುಖ ನಗರಗಳಲ್ಲಿ ಆಗಲಿವೆ. ಹೀಗಾಗಿ ರಾಜ್ಯದ ಇತರ ನಗರಗಳಲ್ಲೂ ಕೈಗಾರಿಕಾ ಬೆಳವಣಿಗೆಯು ತ್ವರಿತಗತಿಯಲ್ಲಿ ಆಗಲಿದೆ ಎಂಬ ವಿಶ್ವಾಸವನ್ನು ನಿರಾಣಿ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಸಮಾರೋಪ ಭಾಷಣದಲ್ಲಿ, ₹9.8 ಲಕ್ಷ ಕೋಟಿ ಹೂಡಿಕೆ ಬಂದಿದೆ ಎಂದು ಹೇಳಿದರು.

'ನಮ್ಮ ನಿರೀಕ್ಷೆಗೂ ಮೀರಿ ಹೂಡಿಕೆ ಒಪ್ಪಂದಗಳು ಆಗಿವೆ. ಸರ್ಕಾರವು ಉದ್ಯಮಿಗಳ ನಿರೀಕ್ಷೆಯನ್ನು ಹುಸಿಗೊಳಿಸುವುದಿಲ್ಲ. ಅವರು ಬಯಸುವ ಮೂಲಸೌಕರ್ಯಗಳನ್ನು ಬದ್ಧತೆಯಿಂದಲೇ ಕಲ್ಪಿಸಲಿದೆ. ಇಲ್ಲಿ ಮೂಲಸೌಕರ್ಯ ಸರಿ ಇಲ್ಲ ಎಂದು ಟೀಕಿಸುವವರಿಗೆ ಒಂದು ಮಾತು ಹೇಳುತ್ತೇನೆ. ಸಾವಿರಾರು ಕೋಟಿ ಬಂಡವಾಳ ಹೂಡುವವರು ರಾಜ್ಯದಲ್ಲಿ ಮೂಲಸೌಕರ್ಯ ಸೇರಿದಂತೆ ಎಲ್ಲ ವಿಷಯಗಳ ಬಗ್ಗೆಯೂ ಹೋಂ ವರ್ಕ್ ಮಾಡಿಯೇ ಬರುತ್ತಾರೆ. ಕಣ್ಣು ಮುಚ್ಚಿ ಹೂಡಿಕೆ ಮಾಡುವುದಿಲ್ಲ. ಒಮ್ಮೆ ರಾಜ್ಯದಲ್ಲಿ ಹೂಡಿಕೆ ಮಾಡಿದ ಮೇಲೆ ವಾಪಸ್ ಹೋಗುವ ಬಗ್ಗೆ ಅವರು ಯೋಚಿಸುವುದಿಲ್ಲ' ಎಂದು ಬೊಮ್ಮಾಯಿ ಹೇಳಿದರು.

'ಬೆಂಗಳೂರು ಬಿಟ್ಟು, ಮಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಬಳ್ಳಾರಿ, ತುಮಕೂರುಗಳಲ್ಲಿ ಉದ್ಯಮಗಳ ಸ್ಥಾಪನೆಗಾಗಿ ಸುಮಾರು 50 ಸಾವಿರ ಎಕರೆ ವಿಸ್ತೀರ್ಣದ 'ಲ್ಯಾಂಡ್ ಬ್ಯಾಂಕ್' ಇದೆ. ಇವು ರಾಷ್ಟ್ರೀಯ ಹೆದ್ದಾರಿಗಳಿಗೆ ನೇರ ಸಂಪರ್ಕ ಹೊಂದಿವೆ. ಉತ್ತಮ ಮೂಲಸೌಕರ್ಯಗಳನ್ನೂ ಹೊಂದಿವೆ. ಶಿವಮೊಗ್ಗ, ವಿಜಯಪುರ ಮತ್ತು ಕಾರವಾರಗಳಲ್ಲಿ ವಿಮಾನ ನಿಲ್ದಾಣಗಳು ಸ್ಥಾಪನೆ ಆಗಲಿವೆ' ಎಂದರು.

4B ಪುಟ ನೋಡಿ

ಜಲಜನಕ ಇಂಧನ: ಕೊಲ್ಲಿ ರಾಷ್ಟ್ರಗಳಿಗೆ ಸ್ಪರ್ಧೆ

'ಜಲಜನಕ ಇಂಧನ (ಹೈಡ್ರೋಜನ್ ಫ್ಯೂಯೆಲ್) ತಯಾರಿಕೆ ಕ್ಷೇತ್ರದಲ್ಲಿ ಕರ್ನಾಟಕವು ಕೊಲ್ಲಿ ರಾಷ್ಟ್ರಗಳಿಗೆ ಸ್ಪರ್ಧೆ ನೀಡಲಿದ್ದು, ಆ ರಾಷ್ಟ್ರಗಳನ್ನು ಕರ್ನಾಟಕ ಹಿಂದಿಕ್ಕುವ ವಿಶ್ವಾಸವಿದೆ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ಸಮಾರೋಪ ಭಾಷಣದಲ್ಲಿ ಅವರು, 'ಹಸಿರು ಜಲಜನಕ ಇಂಧನ ಕ್ಷೇತ್ರದಲ್ಲಿ ಕೊಲ್ಲಿ ರಾಷ್ಟ್ರಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಆಗಿದೆ. ನಮ್ಮ ದೇಶದಲ್ಲಿ ಕರ್ನಾಟಕದಲ್ಲಿ ಈ ಕ್ಷೇತ್ರದಲ್ಲಿ ಅತಿ ಹೆಚ್ಚು ಹೂಡಿಕೆ ಆಗುತ್ತಿದೆ. ಈ ತಂತ್ರಜ್ಞಾನವನ್ನು ಅವರಿಗಿಂತ ಮೊದಲೇ ಅಂದರೆ, ಫೆಬ್ರುವರಿ– ಮಾರ್ಚ್ ವೇಳೆಗೆ ನಾವು ಅಭಿವೃದ್ಧಿ ಪಡಿಸುತ್ತೇವೆ ಎಂಬ ವಿಶ್ವಾಸವಿದೆ. ಈ ಕ್ಷೇತ್ರದಲ್ಲಿ ಇನ್ನಷ್ಟು ಗಂಭೀರ ಹೂಡಿಕೆದಾರರು ಮುಂದೆ ಬರಬೇಕು' ಎಂದರು.

ಜಲಜನಕ ಆಧಾರಿತ ಇಂಧನ ಕೋಶಗಳನ್ನು (ಸೆಲ್) ವಾಹನಗಳಲ್ಲಿ ಬಳಸುವುದರಿಂದ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅವಲಂಬನೆ ಕಡಿಮೆ ಆಗಲಿದೆ. ಮಾಲಿನ್ಯವೂ ಆಗುವುದಿಲ್ಲ.

₹ 40 ಸಾವಿರ ಕೋಟಿ ಹೂಡಿಕೆ: ಕರ್ನಾಟಕದಲ್ಲಿ ಗ್ರೀನ್ ಹೈಡ್ರೋಜನ್ ಕ್ಷೇತ್ರದಲ್ಲಿ ₹40 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡುವುದಾಗಿ ಅವಾಡ ಗ್ರೂಪ್‌ನ ಅಧ್ಯಕ್ಷ ವಿನೀತ್ ಮಿತ್ತಲ್ ತಿಳಿಸಿದರು.

'ಜಲಜನಕ ಇಂಧನ ತಂತ್ರಜ್ಞಾನದಿಂದ ವಿಶೇಷವಾಗಿ ವಾಹನ ಕ್ಷೇತ್ರದಲ್ಲಿ ಕ್ರಾಂತಿ ಆಗಲಿದೆ. ಕರ್ನಾಟಕ ಈ ಕ್ಷೇತ್ರದ ರಾಜಧಾನಿಯಾಗಲಿದೆ. 2026 ರಲ್ಲಿ ನಮ್ಮ ಉದ್ಯಮ ಕಾರ್ಯಾರಂಭ ಮಾಡಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹಸಿರು ಇಂಧನ: ₹2 ಲಕ್ಷ ಕೋಟಿ ಹೂಡಿಕೆ

'ಹಸಿರು ಇಂಧನ ಕ್ಷೇತ್ರದಲ್ಲಿ ಸುಮಾರು ₹2 ಲಕ್ಷ ಕೋಟಿ ಬಂಡವಾಳ ಹೂಡಿಕೆಯ ಒಪ್ಪಂದಗಳಾಗಿವೆ. 2030ರ ವೇಳೆಗೆ ದೇಶದ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಶೇ 50 ರಷ್ಟು ಕರ್ನಾಟಕದಲ್ಲೇ ಉತ್ಪಾದನೆಯಾಗಲಿದೆ. ಈ ಮೂಲಕ ಕರ್ನಾಟಕ ಮೊದಲ ಸ್ಥಾನಕ್ಕೇರಲಿದೆ' ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಈ ಬೆಳವಣಿಗೆಗೆ ಪೂರಕವಾಗಿ ರಾಜ್ಯದಲ್ಲಿ ಹೈಬ್ರಿಡ್ ಪಾರ್ಕ್ ಸ್ಥಾಪಿಸಲಾಗುವುದು. ಈಗಾಗಲೇ ವಿಸ್ತೃತ ಯೋಜನಾ ವರದಿಯನ್ನೂ ತಯಾರಿಸಲಾಗಿದೆ' ಎಂದು ತಿಳಿಸಿದರು.

ಜಾಗತಿಕ ಮಟ್ಟದಲ್ಲಿ ಕನ್ನಡಿಗರಿಗೆ ಉದ್ಯಮಗಳನ್ನು ಸ್ಥಾಪಿಸುವ ಸಾಮರ್ಥ್ಯ ಬರಬೇಕು. ದಲಿತರು ಉದ್ಯಮ ಕ್ಷೇತ್ರದಲ್ಲಿ ಹೆಚ್ಚು ಉತ್ಸಾಹದಿಂದ ಮುಂದೆ ಬರುತ್ತಿರುವುದು, ಉತ್ತಮ ಬೆಳವಣಿಗೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ



ಸೂರ್ಯಕಾಂತಿ ಸೊಬಗು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದ ಮಾದರಿ ತೋಟದಲ್ಲಿ ಅರಳಿದ್ದ ಸೂರ್ಯಕಾಂತಿ ಅಂದವನ್ನು ಶುಕ್ರವಾರ ಕೃಷಿ ಮೇಳಕ್ಕೆ ಬಂದವರು ಕಣ್ತುಂಬಿಕೊಂಡರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ಸುದ್ದಿ, ಚಿತ್ರಗಳು 3C

ಪಿಂಚಣಿ ಯೋಜನೆಯ ಲಾಭ ಪಡೆಯಲು ಅವಕಾಶ

2014ರ ಇಪಿಎಸ್ ಯೋಜನೆ ಎತ್ತಿಹಿಡಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ



ನವದೆಹಲಿ: ಉದ್ಯೋಗಿಗಳ ಪಿಂಚಣಿ (ತಿದ್ದುಪಡಿ)– 2014ರ ಯೋಜನೆಯ (ಇಪಿಎಸ್) ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಎತ್ತಿಹಿಡಿದಿದೆ. ಜತೆಗೆ ಇದರಲ್ಲಿದ್ದ ಕೆಲವು ನಿಬಂಧನೆಗಳನ್ನು ಕೈಬಿಟ್ಟು, ಉದ್ಯೋಗಿಗಳಿಗೆ ಯೋಜನೆಯ ಲಾಭ ಪಡೆಯಲು ಅವಕಾಶ ಕಲ್ಪಿಸಿದೆ.

ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್, ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ಪೀಠವು, 2014ರ ಆಗಸ್ಟ್ 22ರಂದು ಹೊರಡಿಸಿರುವ ಇಪಿಎಸ್ ತಿದ್ದುಪಡಿ ಯೋಜನೆಯ ನಿಬಂಧನೆಗಳ ಅಧಿಸೂಚನೆಯ ಕಾನೂನುಬದ್ಧತೆಯನ್ನು ಮಾನ್ಯ ಮಾಡಿದೆ. ಇದರಿಂದ ಉದ್ಯೋಗದಾತರು ಮತ್ತು ಉದ್ಯೋಗಿಗಳು ಪಿಂಚಣಿ ನಿಧಿಗೆ ಮಿತಿಯಿಲ್ಲದೇ ವಂತಿಗೆ ನೀಡುವ ಅವಕಾಶ ಲಭಿಸಿದೆ.

ಆರ್.ಸಿ. ಗುಪ್ತ ವಿರುದ್ಧದ ಪ್ರಾದೇಶಿಕ ಪಿಂಚಣಿ ನಿಧಿ ಆಯುಕ್ತರ ಪ್ರಕರಣ ಸಂಬಂಧ 2016ರಲ್ಲಿ ನೀಡಿರುವ ತೀರ್ಪನ್ನು ಪೀಠ ಎತ್ತಿಹಿಡಿದಿದೆ. ಈ ತೀರ್ಪಿನ ಪ್ರಕಾರ ಯೋಜನೆಯ ಆಯ್ಕೆಯ ಲಾಭ ಪಡೆಯಲು ಯಾವುದೇ ಕೊನೆಯ ದಿನಾಂಕವಿಲ್ಲ ಎಂದು ಸ್ಪಷ್ಟಪಡಿಸಿದೆ. ಈವರೆಗೆ ಈ ಪಿಂಚಣಿ ಯೋಜನೆ ಆಯ್ದುಕೊಳ್ಳದ ಉದ್ಯೋಗಿಗಳು ಈ ಯೋಜನೆಗೆ ಸೇರಲು ಅವಕಾಶ ಕಲ್ಪಿಸಿದೆ. ಕೊನೆ ದಿನಾಂಕದೊಳಗೆ ಯೋಜನೆಗೆ ಸೇರಲು ಸಾಧ್ಯವಾಗದ ಅರ್ಹ ಉದ್ಯೋಗಿಗಳಿಗೆ ಈ ವಿಷಯದ ಬಗ್ಗೆ ಸ್ಪಷ್ಟತೆಯ ಕೊರತೆ ಇರುವುದರಿಂದ ಹೆಚ್ಚುವರಿ ನಾಲ್ಕು ತಿಂಗಳ ಕಾಲಾವಕಾಶ ನೀಡಬೇಕು ಎಂದೂ ಪೀಠ ಹೇಳಿದೆ.

2014ರ ಸೆಪ್ಟೆಂಬರ್ 1ರ ತಿದ್ದುಪಡಿಗೂ ಮುನ್ನ ನಿವೃತ್ತಿ ಹೊಂದಿದ ಉದ್ಯೋಗಿಗಳು, ತಿದ್ದುಪಡಿಯಾದ ಇಪಿಎಸ್ ಯೋಜನೆಯ ಪ್ಯಾರಾ 11(3)ರ ಅಡಿ ಯೋಜನೆಯ ಆಯ್ಕೆ ಬಳಸಿಕೊಳ್ಳಲು ಅರ್ಹರಾಗಿರುವುದಿಲ್ಲ ಎಂದು ಹೇಳಿದೆ. ಮುಖ್ಯವಾಗಿ, ತಿದ್ದುಪಡಿಯಾದ ಯೋಜನೆಯನ್ನು ಎತ್ತಿಹಿಡಿಯುವಲ್ಲಿ ನ್ಯಾಯಾಲಯವು ನೈಜ ಸಂಬಳದ ಬದಲಿಗೆ ಪಿಂಚಣಿ ಲೆಕ್ಕಾಚಾರಕ್ಕಾಗಿ ₹ 15,000 ಮಿತಿಯನ್ನು ಮಾನ್ಯ ಮಾಡಿದೆ.

4B ಪುಟ ನೋಡಿ

'ಅಮಾನವೀಯವಾಗಿ ವರ್ತಿಸಿದರೆ ವಜಾಗೊಳಿಸಲು ಕ್ರಮ'

ಆರೋಗ್ಯ ತುರ್ತುಸ್ಥಿತಿಯಲ್ಲಿ ದಾಖಲೆ ಬೇಡ: ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ರೋಗಿ ತುರ್ತು ಪರಿಸ್ಥಿತಿಯಲ್ಲಿ ಆಸ್ಪತ್ರೆಗೆ ಬಂದಾಗ ದಾಖಲೆಗಳು ಮುಖ್ಯವಲ್ಲ. ತಾಯಿ ಕಾರ್ಡ್, ಆಧಾರ್ ಕಾರ್ಡ್‌ಗಳನ್ನು ಚಿಕಿತ್ಸೆ ನೀಡಿದ ಬಳಿಕವೂ ಕೇಳಬಹುದು' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ತಾಯಿ ಹಾಗೂ ನವಜಾತ ಶಿಶುಗಳ ಮರಣದ ದುರ್ಘಟನೆ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈ ಬಗ್ಗೆ ಹಿಂದಿನಿಂದಲೂ ಸೂಚನೆ ಇದೆ. ಖಾಸಗಿ ಆಸ್ಪತ್ರೆಗಳ ಜತೆ 76 ತುರ್ತು ಸೇವೆಗಳನ್ನು ಜೋಡಿಸಲಾಗಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ಈ ಸೇವೆಗಳು ಇಲ್ಲವಾದರೆ, ಖಾಸಗಿ ಆಸ್ಪತ್ರೆಯಲ್ಲಿ ಆ ಸೇವೆಗಳನ್ನು ಪಡೆಯಬಹುದು. ಆಗ ಸರ್ಕಾರವೇ ವೆಚ್ಚ ಭರಿಸುತ್ತದೆ' ಎಂದು ವಿವರಿಸಿದರು.

'ಆಸ್ಪತ್ರೆಗಳಲ್ಲಿ ವೈದ್ಯರು, ವೈದ್ಯಾಧಿಕಾರಿಗಳು ಅಮಾನವೀಯವಾಗಿ ನಡೆದುಕೊಂಡರೆ ಕೇವಲ ಅಮಾನತು ಮಾತ್ರವಲ್ಲ, ಕೆಲಸದಿಂದಲೇ ವಜಾ ಮಾಡಲಾಗುವುದು' ಎಂದು ಸಚಿವರು ಎಚ್ಚರಿಕೆ ನೀಡಿದ್ದಾರೆ.

'ವಜಾ ಮಾಡಲು ಕಾನೂನಿನಲ್ಲಿ ಬದಲಾವಣೆ ತರಲು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಲಾಗುವುದು. ನಂತರ, ಮುಂದಿನ ಅಧಿವೇಶನದಲ್ಲೇ ಕಾನೂನು ತಿದ್ದುಪಡಿಗೆ ಮಸೂದೆಯನ್ನು ಮಂಡಿಸಲಾಗುವುದು' ಎಂದರು.

5ನೇ ಪುಟ ನೋಡಿ

'ಪ್ರಜಾವಾಣಿ' ವರದಿ ಆಧರಿಸಿ ಲೋಕಾಯುಕ್ತ ಪ್ರಕರಣ ದಾಖಲು

ಬೆಂಗಳೂರು: ತುಮಕೂರಿನಲ್ಲಿ ಆಧಾರ್ ಕಾರ್ಡ್ ಮತ್ತು ತಾಯಿ ಕಾರ್ಡ್ ಇಲ್ಲ ಎಂದು ಗರ್ಭಿಣಿಯೊಬ್ಬರನ್ನು ಆಸ್ಪತ್ರೆಗೆ ದಾಖಲಿಸಿಕೊಳ್ಳಲು ವೈದ್ಯರು ನಿರಾಕರಿಸಿದ್ದರಿಂದ ತಾಯಿ ಹಾಗೂ ಶಿಶುಗಳು ಮೃತಪಟ್ಟ ಘಟನೆ ಕುರಿತು 'ಪ್ರಜಾವಾಣಿ' ವರದಿ ಆಧರಿಸಿ ಲೋಕಾಯುಕ್ತರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ಆರಂಭಿಸಿದ್ದಾರೆ.

ತುಮಕೂರಿನ ಭಾರತಿನಗರದ ನಿವಾಸಿ ಕಸ್ತೂರಿ (30) ಎಂಬುವವರನ್ನು ಸೇರಿಸಿಕೊಳ್ಳಲು ತುಮಕೂರು ಜಿಲ್ಲಾ ಆಸ್ಪತ್ರೆ ಸಿಬ್ಬಂದಿ ನಿರಾಕರಿಸಿದ್ದರು. ತೀವ್ರ ರಕ್ತಸ್ರಾವದಿಂದ ಮಹಿಳೆ ಮತ್ತು ಅವಳಿ ಶಿಶುಗಳು ಗುರುವಾರ ಮೃತಪಟ್ಟಿದ್ದರು. ಈ ಕುರಿತು 'ಪ್ರಜಾವಾಣಿ'ಯ ಶುಕ್ರವಾರದ ಸಂಚಿಕೆಯಲ್ಲಿ 'ತಾಯಿ, ಅವಳಿ ಶಿಶುಗಳ ಸಾವು' ಶೀರ್ಷಿಕೆಯಡಿ ಪ್ರಕಟವಾದ ವರದಿ ಆಧರಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಆದೇಶ ಹೊರಡಿಸಿದ್ದಾರೆ.

ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ, ನಿರ್ದೇಶಕರು, ಆಯುಕ್ತರು, ತುಮಕೂರು ಜಿಲ್ಲಾ ಆರೋಗ್ಯಾಧಿಕಾರಿ, ಜಿಲ್ಲಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು, ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ ಮತ್ತು ಶುಶ್ರೂಷಾ ಅಧೀಕ್ಷಕರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಚಿಕಿತ್ಸೆ ನಿರಾಕರಿಸಿ ತಾಯಿ ಮತ್ತು ಅವಳಿ ಶಿಶುಗಳ ಸಾವಿಗೆ ಕಾರಣವಾದ ಆರೋಪದ ಕುರಿತು ಪ್ರತಿಕ್ರಿಯಿಸುವಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೆ ಆದೇಶಿಸಲಾಗಿದೆ.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ





ಟ್ವಿಟರ್‌ನಲ್ಲಿ ಉದ್ಯೋಗ ಕಡಿತ

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ಉದ್ಯೋಗ ಕಡಿತ ಮಾಡುವುದರ ಭಾಗವಾಗಿ ಟ್ವಿಟರ್ ಕಂಪನಿಯು ಭಾರತದಲ್ಲಿಯೂ ನೌಕರರನ್ನು ಕೆಲಸದಿಂದ ತೆಗೆಯಲು ಆರಂಭಿಸಿದೆ. ಟ್ವಿಟರ್ ಕಂಪನಿಯ ನೂತನ ಮಾಲೀಕ ಎಲಾನ್ ಮಸ್ಕ್ ಅವರು ಉದ್ಯೋಗ ಕಡಿತಕ್ಕೆ ಮುಂದಾಗಿದ್ದಾರೆ.

ಭಾರತದಲ್ಲಿನ ಮಾರುಕಟ್ಟೆ ಹಾಗೂ ಸಂವಹನ ವಿಭಾಗದ ಅಷ್ಟೂ ನೌಕರರನ್ನು ಕೆಲಸದಿಂದ ತೆಗೆಯಲಾಗಿದೆ ಎಂದು ಗೊತ್ತಾಗಿದೆ. 'ನೌಕರಿಯಿಂದ ತೆಗೆಯುವ ಕಾರ್ಯ ಆರಂಭವಾಗಿದೆ. ನನ್ನ ಕೆಲವು ಸಹೋದ್ಯೋಗಿಗಳಿಗೆ ಈ ವಿಚಾರವಾಗಿ ಇಮೇಲ್ ಬಂದಿದೆ' ಎಂದು ಟ್ವಿಟರ್ ಇಂಡಿಯಾ ನೌಕರರೊಬ್ಬರು ತಿಳಿಸಿದ್ದಾರೆ. ಈ ವಿಚಾರವಾಗಿ ಟ್ವಿಟರ್ ಇಂಡಿಯಾ ಪ್ರತಿಕ್ರಿಯೆ ಲಭ್ಯವಾಗಿಲ್ಲ.

'ಟ್ವಿಟರ್ ಕಂಪನಿಯನ್ನು ಆರೋಗ್ಯಕರ ಹಾದಿಗೆ ತರುವ ಪ್ರಯತ್ನವಾಗಿ ನಾವು ನಮ್ಮ ಜಾಗತಿಕ ಉದ್ಯೋಗಿಗಳ ಸಂಖ್ಯೆಯನ್ನು ಕಡಿತಮಾಡುವ ಕಷ್ಟದ ಪ್ರಕ್ರಿಯೆಯನ್ನು ಶುಕ್ರವಾರ ಆರಂಭಿಸಲಿದ್ದೇವೆ' ಎಂದು ಕಂಪನಿಯು ನೌಕರರಿಗೆ ಈ ಮೊದಲು ತಿಳಿಸಿತ್ತು. ನೌಕರರ ಸುರಕ್ಷತೆ ಹಾಗೂ ಟ್ವಿಟರ್ ವ್ಯವಸ್ಥೆಯ ಮತ್ತು ಗ್ರಾಹಕರ ದತ್ತಾಂಶ ಸುರಕ್ಷತೆಯ ದೃಷ್ಟಿಯಿಂದ ಕಂಪನಿಯು ತನ್ನ ಎಲ್ಲ ಕಚೇರಿಗಳನ್ನು ತಾತ್ಕಾಲಿಕವಾಗಿ ಮುಚ್ಚಲಿದೆ. 'ನೀವು ಕಚೇರಿಯಲ್ಲಿ ಇದ್ದರೆ ಅಥವಾ ಕಚೇರಿಗೆ ಬರುವ ಮಾರ್ಗದಲ್ಲಿದ್ದರೆ ದಯವಿಟ್ಟು ಮನೆಗೆ ವಾಪಸ್ಸಾಗಿ' ಎಂದು ಕಂಪನಿಯು ತಿಳಿಸಿತ್ತು. ಟ್ವಿಟರ್ ಕಂಪನಿಯು ಅಭಿವ್ಯಕ್ತಿ ಸ್ವಾತಂತ್ರ್ಯದ ವಿಚಾರವಾಗಿ ಕೇಂದ್ರ ಸರ್ಕಾರದ ಜೊತೆ ಹಲವು ಬಾರಿ ವಾಗ್ವಾದ ನಡೆಸಿದೆ. ಈಗ ಕಂಪನಿಯು ತನ್ನ ಗೋಪ್ಯ ವಿಚಾರಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅಥವಾ ಮಾಧ್ಯಮಗಳ ಜೊತೆ ಮಾತುಕತೆ ನಡೆಸಬಾರದು ಎಂದು ನೌಕರರಿಗೆ ಸೂಚಿಸಿದೆ.

ವರಮಾನ ಇಳಿಕೆ

(ರಾಯಿಟರ್ಸ್): ಸಾಮಾಜಿಕ ಕಾರ್ಯಕರ್ತರು ಜಾಹೀರಾತುದಾರರ ಮೇಲೆ ಒತ್ತಡ ತಂದ ಕಾರಣವಾಗಿ ಟ್ವಿಟರ್ ಕಂಪನಿಯ ಆದಾಯದಲ್ಲಿ ಭಾರಿ ಇಳಿಕೆ ಆಗಿದೆ ಎಂದು ಎಲಾನ್ ಮಸ್ಕ್ ಹೇಳಿದ್ದಾರೆ. 'ಟ್ವಿಟರ್‌ನಲ್ಲಿನ ವಸ್ತು–ವಿಷಯವನ್ನು ನಿಯಂತ್ರಿಸುವ ವಿಚಾರದಲ್ಲಿ ಹೆಚ್ಚೇನೂ ಬದಲಾವಣೆ ಆಗಿರದಿದ್ದರೂ, ಸಾಮಾಜಿಕ ಕಾರ್ಯಕರ್ತರನ್ನು ತೃಪ್ತಿಪಡಿಸಲು ನಾವು ಸಾಧ್ಯವಿದ್ದ ಎಲ್ಲವನ್ನೂ ಮಾಡಿದ್ದರೂ ವರಮಾನ ತಗ್ಗಿದೆ' ಎಂದು ಮಸ್ಕ್ ಹೇಳಿದ್ದಾರೆ.

'ಅವರು ಅಮೆರಿಕದಲ್ಲಿ ಮುಕ್ತ ಅಭಿವ್ಯಕ್ತಿಯನ್ನು ನಾಶಮಾಡಲು ಯತ್ನಿಸುತ್ತಿದ್ದಾರೆ' ಎಂದು ಮಸ್ಕ್ ಟ್ವೀಟ್ ಮಾಡಿದ್ದಾರೆ. ಟ್ವಿಟರ್ ತನ್ನ ತ್ರೈಮಾಸಿಕ ಹಣಕಾಸು ಫಲಿತಾಂಶವನ್ನು ಕಡೆಯ ಬಾರಿ ವರದಿ ಮಾಡಿದ್ದು ಜುಲೈನಲ್ಲಿ. ಆಗ ವರಮಾನದಲ್ಲಿ ಇಳಿಕೆ ಆಗಿತ್ತು.

ಸಲೂನ್ ವಹಿವಾಟಿನತ್ತ ರಿಲಯನ್ಸ್ ರಿಟೇಲ್ ಕಂಪನಿ

ನವದೆಹಲಿ (ಪಿಟಿಐ): ರಿಲಯನ್ಸ್ ರಿಟೇಲ್ ಕಂಪನಿಯು ಸಲೂನ್ ವಹಿವಾಟು ಪ್ರವೇಶಿಸಲು ಚಿಂತನೆ ನಡೆಸಿದ್ದು, ಇದರ ಭಾಗವಾಗಿ ಚೆನ್ನೈ ಮೂಲದ ನ್ಯಾಚುರಲ್ಸ್ ಸಲೂನ್ ಆ್ಯಂಡ್ ಸ್ಪಾ ಕಂಪನಿಯ ಶೇಕಡ 49ರಷ್ಟು ಷೇರುಗಳ ಸ್ವಾಧೀನಕ್ಕೆ ಮಾತುಕತೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ನ್ಯಾಚುರಲ್ಸ್ ಕಂಪನಿಯು ದೇಶದಾದ್ಯಂತ 650ಕ್ಕೂ ಅಧಿಕ ಸಲೂನ್ ಮಳಿಗೆಗಳನ್ನು ಹೊಂದಿದ್ದು, ಅದರ ಪ್ರವರ್ತಕರ ಜೊತೆ ರಿಲಯನ್ಸ್ ರಿಟೇಲ್ ಮಾತುಕತೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

2000ನೇ ಇಸವಿಯ ಆರಂಭದಲ್ಲಿ ನ್ಯಾಚುರಲ್ಸ್ ಸಲೂನ್ ಆ್ಯಂಡ್ ಸ್ಪಾ ಆರಂಭವಾಗಿದೆ. 2025ರ ವೇಳೆಗೆ ಒಟ್ಟು ಮೂರು ಸಾವಿರ ಸಲೂನ್‌ಗಳನ್ನು ಹೊಂದುವ ಗುರಿಯನ್ನು ಅದು ಇರಿಸಿಕೊಂಡಿದೆ.

ಶೇ 49ರಷ್ಟು ಷೇರು ಸ್ವಾಧೀನದ ಬಳಿಕ ರಿಲಯನ್ಸ್ ರಿಟೇಲ್ ಕಂಪನಿಯು ಎಚ್‌ಯುಎಲ್ ಜೊತೆ ಸ್ಪರ್ಧೆಗೆ ಇಳಿಯಲಿದೆ. ಎಚ್‌ಯುಎಲ್ ಕಂಪನಿಯು ಲ್ಯಾಕ್ಮೆ ಬ್ರ್ಯಾಂಡ್ ಮೂಲಕ ಸಲೂನ್ ವಿಭಾಗದಲ್ಲಿ ವಹಿವಾಟು ನಡೆಸುತ್ತಿದೆ.

ಈ ಬೆಳವಣಿಗೆಯ ಕುರಿತು ಮಾತನಾಡಿದ ರಿಲಯನ್ಸ್‌ನ ವಕ್ತಾರರು, 'ನಮ್ಮ ಕಂಪನಿಯು ಕಾಲಕಾಲಕ್ಕೆ ವಿವಿಧ ಅವಕಾಶಗಳನ್ನು ಪರಿಶೀಲಿಸುತ್ತಿರುತ್ತದೆ' ಎಂದು ತಿಳಿಸಿದ್ದಾರೆ.

'ಬಹುರಾಷ್ಟ್ರೀಯ ಕಂಪನಿಯೊಂದು ಸಲೂನ್ ಉದ್ಯಮ ಪ್ರವೇಶಿಸಲು ಮುಂದಾಗಿದೆ. ಇದು ನಮ್ಮ ಕಂಪನಿಯ ಇತಿಹಾಸದಲ್ಲಿ ಒಂದು ಅತಿದೊಡ್ಡ ತಿರುವು' ಎಂದು ನ್ಯಾಚುರಲ್ಸ್‌ನ ಸಹ ಸ್ಥಾಪಕ ಸಿ.ಕೆ. ಕುಮಾರವೇಲು ಅವರು ಲಿಂಕ್ಡ್‌ಇನ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

'ರಿಲಯನ್ಸ್ ರಿಟೇಲ್ ಕಂಪನಿಯು ನ್ಯಾಚುರಲ್ಸ್‌ನಲ್ಲಿ ಶೇ 49ರಷ್ಟು ಷೇರುಗಳನ್ನು ಇನ್ನಷ್ಟೇ ಸ್ವಾಧೀನಪಡಿಸಿಕೊಳ್ಳಬೇಕಿದೆ' ಎಂದೂ ಅವರು ಹೇಳಿದ್ದಾರೆ.

'700 ಸಲೂನ್‌ಗಳ ಮಟ್ಟದಿಂದ ಭಾರಿ ಪ್ರಮಾಣದ ಬೆಳವಣಿಗೆ ಆಗಲಿದೆ. ಬೆಳವಣಿಗೆಯು 4ರಿಂದ 5 ಪಟ್ಟು ಹೆಚ್ಚಾಗುವ ಸಾಧ್ಯತೆ ಇದೆ. ಮುಂಬರುವ ವರ್ಷಗಳಲ್ಲಿ ನ್ಯಾಚುರಲ್ಸ್ ಸಲೂನ್ ಆ್ಯಂಡ್ ಸ್ಪಾದಲ್ಲಿ ಮಹತ್ವದ ಬದಲಾವಣೆಗಳಿಗೆ ನಾವು ಸಾಕ್ಷಿಯಾಗಲಿದ್ದೇವೆ' ಎಂದು ಕುಮಾರವೇಲ್ ತಿಳಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕದಿಂದಾಗಿ ಬ್ಯೂಟಿ ಆ್ಯಂಡ್ ಸಲೂನ್ ಉದ್ಯಮದ ಮೇಲೆ ಪ್ರತಿಕೂಲ ಪರಿಣಾಮ ಆಗಿತ್ತು. ಇದೀಗ ಉದ್ಯಮವು ಕೋವಿಡ್‌ಗೂ ಮುಂಚಿನ ಮಟ್ಟಕ್ಕೆ ಬಹುತೇಕ ಮರಳಿದೆ.

ಕುಕ್ಕೆ: 8ಕ್ಕೆ ಸೇವೆ ಇಲ್ಲ

ಸುಬ್ರಹ್ಮಣ್ಯ: ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಚಂದ್ರಗ್ರಹಣದ ದಿನ ನ. 8ರಂದು ಯಾವ ಸೇವೆಗಳೂ ನೆರವೇರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಆವಲಹಳ್ಳಿ ಕೆರೆ, ರಾಜಕಾಲುವೆ ಸರ್ವೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಯಲಹಂಕ ಹೋಬಳಿ ಆವಲಹಳ್ಳಿ ಗ್ರಾಮದಲ್ಲಿ ವಿವಿಧ ಸರ್ವೆ ನಂಬರ್‌ಗಳಲ್ಲಿ ಹಾದು ಹೋಗಿರುವ ರಾಜಕಾಲುವೆಯ ಒತ್ತುವರಿ ಹಾಗೂ ಮೂಲ ಸ್ಥಳದ ವಿವರವನ್ನು ಗ್ರಾಮ ನಕ್ಷೆಯಂತೆ ಸಿದ್ಧಪಡಿಸಿ, ಒದಗಿಸಲು ಯಲಹಂಕ ತಾಲ್ಲೂಕು ತಹಶೀಲ್ದಾರ್ ಸೂಚಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಅ.31ರಂದು 'ರಾಜಕಾಲುವೆ ಹರಿವು ಬದಲು: ಬಡಾವಣೆ ಜಲಾವೃತ' ಶೀರ್ಷಿಕೆಯಲ್ಲಿ ಪ್ರಕಟವಾದ ವರದಿಯನ್ನು ಉಲ್ಲೇಖಿಸಿರುವ ತಹಶೀಲ್ದಾರ್, ವರದಿಯನ್ನು ಅತಿ ಜರೂರಾಗಿ ನೀಡಬೇಕು ಎಂದು ಯಲಹಂಕ ತಾಲ್ಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. ಅವರಿಗೆ ಎಲ್ಲ ರೀತಿಯ ಮಾಹಿತಿ ನೀಡಬೇಕೆಂದು ಉಪ ತಹಶೀಲ್ದಾರ್ ಅವರಿಗೆ ಆದೇಶಿಸಿದ್ದಾರೆ.

ಆವಲಹಳ್ಳಿ ಗ್ರಾಮದ ರಾಜಕಾಲುವೆ ಹಾಗೂ ಕೆರೆ ಒತ್ತುವರಿ ಹಾಗೂ ಪಥ ಬದಲಾವಣೆಗೆ ಸಂಬಂಧಿಸಿದಂತೆ ಸಮಕ್ಷಮ ಅಳತೆ ಕಾರ್ಯವನ್ನು ಕೈಗೊಂಡು, ನಕ್ಷೆ ಹಾಗೂ ದಾಖಲೆಗಳ ವರದಿಯನ್ನು ಶೀಘ್ರ ನೀಡಬೇಕು ಎಂದು ಸೂಚಿಸಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖಂಡ ಸುರೇಶ ಸೋನಿ ಪ್ರತಿಪಾದನೆ

ಭಾರತದ ಸದೃಢತೆಗೆ ಸನಾತನ ಶಿಕ್ಷಣವೇ ಬುನಾದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಸದೃಢತೆಗೆ ಸನಾತನ ಶಿಕ್ಷಣವೇ ಬುನಾದಿ. ಪ್ರಾಚೀನ ಕಾಲದಿಂದ ಹರಿದುಬಂದ ಈ ಜ್ಞಾನಪರಂಪರೆಯನ್ನು ಇಂದಿನ ಕಾಲಮಾನದ ಪೀಳಿಗೆಗೂ ತಲುಪಿಸಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖಂಡ ಸುರೇಶ ಸೋನಿ ಪ್ರತಿಪಾದಿಸಿದರು.

ಚನ್ನೇನಹಳ್ಳಿ ಜನಸೇವಾ ವಿಶ್ವಸ್ತ ಮಂಡಳಿಯ ಪ್ರಕಲ್ಪವಾದ ವೇದವಿಜ್ಞಾನ ಗುರುಕುಲ ಹಮ್ಮಿಕೊಂಡಿರುವ ಮೂರು ದಿನಗಳ ರಾಷ್ಟ್ರೀಯ ಗುರುಕುಲ ಸಂಗೋಷ್ಠಿ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಗುರುಕುಲ ಶಿಕ್ಷಾ ವಿಶ್ವ ಸುದೀಕ್ಷಾ' ಎಂಬ ಧ್ಯೇಯವಾಕ್ಯ ಕಾರ್ಯಕ್ರಮದ ಕೇಂದ್ರಬಿಂದು. ಗುರುಕುಲಗಳಲ್ಲಿ ಇರುವ ಭಾರತೀಯ ವಿದ್ಯೆಗಳಿಂದಲೇ ವಿಶ್ವದ ಕಲ್ಯಾಣ ನಿಶ್ಚಿತ. ಸ್ವಾಮಿ ವಿವೇಕಾನಂದರು ಹೇಳಿದಂತೆ ಮನುಷ್ಯನ ಜ್ಞಾನದ ಎಲ್ಲವನ್ನೂ ಜಾಗೃತಗೊಳಿಸಿ ಜೀವನಕ್ಕೆ ಅನ್ವಯಗೊಳಿಸುವುದೇ ನಿಜವಾದ ಶಿಕ್ಷಣ. ಅಂತಹ ಶಿಕ್ಷಣ ಗುರುಕುಲಗಳಂತಹ ಶಿಕ್ಷಣಸಂಸ್ಥೆಗಳಿಂದ ಸಾಧ್ಯ. ಹಾಗಾಗಿ, ಎಲ್ಲರ ನೆರವಿನಿಂದ ಭಾರತೀಯ ಶಿಕ್ಷಣದ ಕೇಂದ್ರಗಳಾದ ಗುರುಕುಲಗಳ ಕಡೆಗೆ ಸಾಗಲಿ' ಎಂದು ಅವರು ಆಶಿಸಿದರು.

ಕಾರ್ಯಕ್ರಮದಲ್ಲಿ ಸಚಿವ ಎಸ್.ಟಿ. ಸೋಮಶೇಖರ್, ಅಖಿಲ ಭಾರತ ಗುರುಕುಲ ಪ್ರಕಲ್ಪದ ವೇದ ವಿಜ್ಞಾನಶೋಧ ಸಂಸ್ಥಾನದ ಅಧ್ಯಕ್ಷ ಪ್ರೊ.ರಾಮಚಂದ್ರ ಭಟ್ಟ, ಮಹರ್ಷಿ ಸಾಂದೀಪನಿ ರಾಷ್ಟ್ರೀಯ ವೇದವಿದ್ಯಾ ಪ್ರತಿಷ್ಠಾನದ ಕಾರ್ಯದರ್ಶಿ ವಿರೂಪಾಕ್ಷ ಜಡ್ಡಿಪಾಲ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ನಗರದ ಚನ್ನೇನಹಳ್ಳಿಯ ಜನಸೇವಾ ವಿದ್ಯಾ ಕೇಂದ್ರದಲ್ಲಿ ಗುರುಕುಲ ಶಿಕ್ಷಾ ವಿಶ್ವ ಸುದೀಕ್ಷಾ ಶುಕ್ರವಾರ ಆಯೋಜಿಸಿದ್ದ ರಾಷ್ಟ್ರೀಯ ಗುರುಕುಲ ಸಂಗೋಷ್ಠಿ ಕಾರ್ಯಕ್ರಮವನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖಂಡ ಸುರೇಶ್ ಸೋನಿ ಉದ್ಘಾಟಿಸಿದರು. ನೇಪಾಳ ಶಿಕ್ಷಾ ಪರಿಷತ್ ಮಹಾಮಂತ್ರಿ ವಾಸುದೇವ ಕೃಷ್ಣ ಶಾಸ್ತ್ರಿ, ಜನಸೇವಾ ಟ್ರಸ್ಟ್ ನಿರ್ವಾಹಕ ವಿಶ್ವಸ್ತ ನಾ.ತಿಪ್ಪೇಸ್ವಾಮಿ, ವೇದ ವಿಜ್ಞಾನಶೋಧ ಸಂಸ್ಥಾನದ ಅಧ್ಯಕ್ಷ ಪ್ರೊ.ರಾಮಚಂದ್ರ ಜಿ. ಭಟ್ಟ ಕೋಟೆಮನೆ, ದೆಹಲಿಯ ಕೇಂದ್ರೀಯ ಸಂಸ್ಕೃತ ವಿ.ವಿ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿ, ಕರ್ನಾಟಕ ಸಂಸ್ಕೃತ ವಿ.ವಿ ಪ್ರಭಾರ ಕುಲಪತಿ ಪ್ರೊ.ಬಿ.ಗಿರೀಶ ಚಂದ್ರ, ಜನಸೇವಾ ವಿದ್ಯಾ ಕೇಂದ್ರದ ಅಧ್ಯಕ್ಷ ಶ್ರೀನಿವಾಸ್ ಗುಪ್ತ, ಭಾರತೀಯ ಶಿಕ್ಷಣ ಮಂಡಲದ ಮಹಾಮಂತ್ರಿ ಉಮಾಶಂಕರ್ ಪಚೌರಿ ಇದ್ದರು — ಪ್ರಜಾವಾಣಿ ಚಿತ್ರ



ನೋಂದಣಿಗೆ ಸೂಚನೆ

ಬೆಂಗಳೂರು: ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಗೆ ಸಂಬಂಧಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ಮತ್ತು ಎಲ್ಲ ವಿದ್ಯಾರ್ಥಿಗಳು ಸೌಲಭ್ಯ ಪಡೆಯಲು ಹಾಗೂ ಎಬಿ–ಎ ಆರ್ಕ್ ಕಾರ್ಡ್ ಪಡೆಯಲು ನೋಂದಣಿ ಮಾಡಿಕೊಳ್ಳಲು ಸೂಚಿಸಲಾಗಿದೆ.

ಆಧಾರ್ ಕಾರ್ಡ್ ಪ್ರತಿ, ಮೊಬೈಲ್ ಸಂಖ್ಯೆ ಮತ್ತು ಪಡಿತರ ಚೀಟಿ (ಎಪಿಎಲ್ ಅಥವಾ ಬಿಪಿಎಲ್ ಕಾರ್ಡ್) ದಾಖಲೆಗಳೊಂದಿಗೆ ನ. 5ರಿಂದ ನ.14ರವರೆಗೆ ನೋಂದಣಿ ಮಾಡಿಸಬೇಕು ಎಂದು ಕುಲಸಚಿವರು ತಿಳಿಸಿದ್ದಾರೆ.

ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಅಮೃತ ಮಹೋತ್ಸವ 7ಕ್ಕೆ

ಬೆಂಗಳೂರು: ಸದಾಶಿವನಗರದಲ್ಲಿರುವ ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ನ.7ರಂದು ಆಯೋಜಿಸಲಾಗಿದೆ.

1948ರಲ್ಲಿ ನೊಬೆಲ್ ಪುರಸ್ಕೃತರಾದ ಸರ್ ಸಿ.ವಿ. ರಾಮನ್ ಅವರು ಈ ಸಂಸ್ಥೆಯನ್ನು ಸ್ಥಾಪಿಸಿದ್ದರು. ನ.7ರಂದು (ಸೋಮವಾರ) ನಡೆಯುವ ಅಮೃತ ಮಹೋತ್ಸವ ಕಾರ್ಯಕ್ರಮದ ಅತಿಥಿಗಳಾಗಿ ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ.ಶ್ರೀವರಿ ಚಂದ್ರಶೇಖರ್, ಇಸ್ರೊ ಅಧ್ಯಕ್ಷರಾದ ಎಸ್. ಸೋಮನಾಥ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬಿಪಿಎಲ್ ಕಾರ್ಡ್: ದಂಡ ಪಾವತಿ

ಕನಕಪುರ: ಅಕ್ರಮವಾಗಿ ಬಿಪಿಎಲ್ ಪಡಿತರ ಚೀಟಿ ಪಡೆದು ಸರ್ಕಾರಕ್ಕೆ ವಂಚಿಸಿದ ಕಾರಣಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕುಟುಂಬ ದಂಡ ಪಾವತಿಸಿದೆ.

ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಅಚ್ಚಲು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿವಮ್ಮ ಅವರ ಪತಿ ಕೆಂಗೇಗೌಡ ದಂಡ ಕಟ್ಟಿದವರು.

ಕೆಂಗೇಗೌಡರು 25 ಎಕರೆಗೂ ಹೆಚ್ಚು ಭೂಮಿ, ಕಾರು ಹೊಂದಿದ್ದಾರೆ. ಐದು ಎಕರೆ ಜಾಗವನ್ನು ಬಿಡಬ್ಲ್ಯುಎಸ್‌ಎಸ್‌ಬಿ ಪೈಪ್ ತಯಾರಿಕಾ ಘಟಕಕ್ಕೆ ಬಾಡಿಗೆ ನೀಡಿದ್ದಾರೆ.

ಈ ಬಗ್ಗೆ ಸಾಮಾಜಿಕ ಕಾರ್ಯಕರ್ತ ಕಂಚನಹಳ್ಳಿ ರವಿಕುಮಾರ್ ನೀಡಿದ್ದ ದೂರಿನ ಅನ್ವಯ ಆಹಾರ ಇಲಾಖೆ ತನಿಖೆ ನಡೆಸಿ ಅಕ್ರಮ ಎಸಗಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಕೆಂಗೇಗೌಡರಿಗೆ ₹49 ಸಾವಿರ ದಂಡ ವಿಧಿಸಿದ್ದಾರೆ.

ಕಡಿಮೆ ದಂಡ ಕಟ್ಟಿಸಿ ಪ್ರಕರಣವನ್ನು ಇತ್ಯರ್ಥಗೊಳಿಸಿರುವುದರ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು ಎಂದು ರವಿಕುಮಾರ್ ಹೇಳಿದ್ದಾರೆ.

‘ಪ್ರಜಾವಾಣಿ ದೀಪಾವಳಿ ವಿಶೇಷಾಂಕ’ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ಇಂದು

ಬೆಂಗಳೂರು: ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಕಥೆ ಮತ್ತು ಕವನ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಸಮಾರಂಭ ಶನಿವಾರ ಸಂಜೆ 4ಕ್ಕೆ ಬಸವನಗುಡಿಯ ನ್ಯಾಷನಲ್ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಹಿರಿಯ ಸಾಹಿತಿ ರಹಮತ್ ತರೀಕೆರೆ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಕನ್ನಡದ ಸೃಜನಶೀಲತೆಯ ಸ್ವರೂಪದ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಕಥೆ-ಕವನ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆಯನ್ನೂ ಮಾಡಲಿದ್ದಾರೆ.

ಓದುಗರು ಹಾಗೂ ಸಾಹಿತ್ಯಾಸಕ್ತರೆಲ್ಲರಿಗೂ ಕಾರ್ಯಕ್ರಮಕ್ಕೆ ಸ್ವಾಗತ ಕೋರಲಾಗಿದೆ.

ಚಿತ್ರಾವಳಿ



ಜೂನಿಯರ್ ವಿಭಾಗದ ಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನ ಪಡೆದ ರಿಯಾನ್ ಇಂಟರ್ ನ್ಯಾಷನಲ್ ಸ್ಕೂಲ್‌ನ ಮಕ್ಕಳು ನೃತ್ಯ ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರ



‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ಶುಕ್ರವಾರ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತರಶಾಲಾ ‘ಸ್ಪೆಲ್ ಬೀ’ ಸ್ಪರ್ಧೆಯಲ್ಲಿ (ಬಲದಿಂದ) ಸೀನಿಯರ್ ವಿಭಾಗದಲ್ಲಿ ಬಿಜಿಎಸ್ ನ್ಯಾಷನಲ್ ಪಬ್ಲಿಕ್ ಶಾಲೆಯ ಆರ್ಯ ದೇವ ಪ್ರಥಮ ಸ್ಥಾನ, ನ್ಯಾಷನಲ್ ಪಬ್ಲಿಕ್ ಸ್ಕೂಲ್ ಕೋರಮಂಗಲದ ವಿದ್ಯಾರ್ಥಿನಿ ಪಲಕ್ ಮೆಹ್ತಾ ದ್ವಿತೀಯ ಸ್ಥಾನ, ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಸುಕೃತ ಶಿವಪ್ರಸಾದ್ ತೃತೀಯ ಸ್ಥಾನ, ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಪ್ರಾರ್ಥನಾ ವದೀಶ ಸಮಾಧಾನಕರ ಬಹುಮಾನ ಪಡೆದುಕೊಂಡರು. ಜೂನಿಯರ್ ವಿಭಾಗದಲ್ಲಿ ದಿ ಕೇಂಬ್ರಿಡ್ಜ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಆಗ್ನೇಯ ಪ್ರಥಮ ಸ್ಥಾನ, ಮೌಂಟ್ ಕಾರ್ಮೆಲ್ ಸೆಂಟ್ರಲ್ ಸ್ಕೂಲ್‌ನ ಗಾಯತ್ರಿ ಪಟ್ನಾಯಕ್ ದ್ವಿತೀಯ ಸ್ಥಾನ, ಕೇಂದ್ರೀಯ ವಿದ್ಯಾಲಯ ಹೆಬ್ಬಾಳದ ಸ್ತುತಿ ನರಸಿಂಹನ್ ತೃತೀಯ ಸ್ಥಾನ, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಕೋರಮಂಗಲದ ರೀಯಾಂಶ್ ಅಗರವಾಲ್ ಸಮಾಧಾನಕರ ಬಹುಮಾನ ಪಡೆದುಕೊಂಡರು. ಕ್ವಿಜ್ ಮಾಸ್ಟರ್ ಅರುಳ್ ಮಣಿ ಬಹುಮಾನ ವಿತರಿಸಿದರು. —ಪ್ರಜಾವಾಣಿ ಚಿತ್ರ

ಎಸ್.ಎಂ. ಕೃಷ್ಣ ಅವರಿಂದ ‘ಬ್ರೇಕಿಂಗ್ ಬ್ಯಾರಿಯರ್ಸ್’ ಆತ್ಮಕತೆ ಬಿಡುಗಡೆ

‘ಫಜಲ್ ಬದುಕೇ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶೋಷಣೆ ಮತ್ತು ಅನ್ಯಾಯದ ವಿರುದ್ಧದ ನಫೀಸ್ ಫಜಲ್ ಅವರ ಹೋರಾಟವೇ ಅವರನ್ನು ರಾಜಕಾರಣಿಯನ್ನಾಗಿ ಮಾಡಿತು’ ಎಂದು ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಅಭಿಪ್ರಾಯಪಟ್ಟರು.

ಲೇಖಕಿ ಸಂಧ್ಯಾ ಮೆಂಡೋನ್ಸಾ ಅವರು ಬರೆದಿರುವ ನಫೀಸ್ ಫಜಲ್ ಅವರ ಆತ್ಮಕತೆ ‘ಬ್ರೇಕಿಂಗ್ ಬ್ಯಾರಿಯರ್ಸ್’ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘1985ರಿಂದ ನಾನು ನಫೀಸ್ ಫಜಲ್ ಅವರನ್ನು ನೋಡಿದ್ದೇನೆ. ಮಹಿಳೆಯರು ರಾಜಕೀಯ ಕ್ಷೇತ್ರಕ್ಕೆ ಬರುವುದು ಸಾಧ್ಯವಿಲ್ಲದ ಕಾಲಘಟ್ಟದಲ್ಲಿ ನಿರಂತರ ಪರಿಶ್ರಮ ಮತ್ತು ದೃಢ ನಿಲುವಿನಿಂದ ಮುನ್ನಡೆದು ರಾಜಕೀಯ ಜೀವನದಲ್ಲಿ ಯಶಸ್ವಿಯಾದವರು. ಸಮುದಾಯ, ಸಂಪ್ರದಾಯದ ಅಡೆತಡೆ ಮೀರಿ, ಬದಲಾವಣೆಗಾಗಿ ಹೋರಾಟ ನಡೆಸಿದ ದಿಟ್ಟ ಮಹಿಳೆ ಅವರು. ಅನ್ಯಾಯದ ವಿರುದ್ಧ ಹೋರಾಟಕ್ಕೆ ಹಿಂಜರಿಯದ ಸ್ವಭಾವ ಅವರದ್ದು. ಆ ಸ್ವಭಾವವೇ ಅವರನ್ನು ರಾಜಕಾರಣಿಯನ್ನಾಗಿ ಮಾಡಿತು’ ಎಂದರು.



ಬ್ರೇಕಿಂಗ್ ಬ್ಯಾರಿಯರ್ಸ್ ಪುಸ್ತಕವನ್ನು ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಬಿಡುಗಡೆ ಮಾಡಿದರು. ನಫೀಸ್ ಫಜಲ್, ಅವರ ಪತಿ ಹಸನ್ ಇದ್ದರು —ಪ್ರಜಾವಾಣಿ ಚಿತ್ರ

‘ಅವರ ಸ್ವಭಾವದ ಕಾರಣಕ್ಕೇ ನಫೀಸ್ ಅವರಿಗೆ ಸಚಿವರಾಗಿ ಕೆಲಸ ಮಾಡಲು ಅವಕಾಶ ನೀಡಲಾಯಿತು. ಅದನ್ನು ಅವರು ಸಮರ್ಥವಾಗಿ ನಿಭಾಯಿಸಿದರು. ಸರ್ಕಾರಿ ಆಸ್ಪತ್ರೆಗಳಲ್ಲಿ ಬಡವರಿಗೆ ಸಮರ್ಪಕ ಚಿಕಿತ್ಸೆ ಕೊಡಿಸಲು ಇನ್ನಿಲ್ಲದ ಪ್ರಯತ್ನ ನಡೆಸುತ್ತಿದ್ದರು’ ಎಂದು ಶ್ಲಾಘಿಸಿದರು.

‘ಸದಾ ಒಂದಿಲ್ಲೊಂದು ವಿವಾದ ಅವರನ್ನು ಸುತ್ತಿಕೊಳ್ಳುತ್ತಿತ್ತು. ಅದ್ಯಾವುದನ್ನೂ ಲೆಕ್ಕಿಸದೆ ತಮಗೆ ಅನ್ನಿಸಿದ್ದನ್ನು ನೇರವಾಗಿ ಹೇಳುತ್ತಿದ್ದರು. ಹೋಟೆಲ್ ಒಂದರಲ್ಲಿ ಅವರು ನೃತ್ಯ ಮಾಡಿದ್ದು ವಿವಾದವಾಗಿ ಮಾರ್ಪಟ್ಟಿತ್ತು. ನೃತ್ಯ ಮಾಡುವುದು ತಪ್ಪು ಎಂದು ಹೇಳಲಾಗುವುದಿಲ್ಲ. ಆದರೂ ವೈದ್ಯಕೀಯ ಶಿಕ್ಷಣ ಸಚಿವ ಸ್ಥಾನದಿಂದ ಅವರನ್ನು ಕೈಬಿಡಬೇಕಾಯಿತು. ಬಳಿಕ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ನೀಡಲಾಯಿತು. ಅದನ್ನೂ ಅವರ ಯಶಸ್ವಿಯಾಗಿ ನಿರ್ವಹಿಸಿದರು. ಅಬ್ದುಲ್ ಕಲಾಂ ಅವರನ್ನು ವಿಧಾನಸೌಧಕ್ಕೆ ಕರೆತಂದು, ನಾನು ಅಚ್ಚರಿಪಡುವಂತೆ ಮಾಡಿದ್ದರು’ ಎಂದು ಕೃಷ್ಣ ನೆನಪಿಸಿಕೊಂಡರು.

ಕಾಂಗ್ರೆಸ್ ನಾಯಕಿ ಮಾರ್ಗರೇಟ್ ಆಳ್ವಾ ಮಾತನಾಡಿ, ‘ನಫೀಸ್ ಫಜಲ್ ಅವರು ಅತ್ಯಂತ ಧೈರ್ಯಶಾಲಿ ಮಹಿಳೆ. ಸಂಪ್ರದಾಯದ ಸಂಕೋಲೆಗಳನ್ನು ದಾಟಿ ರಾಜಕಾರಣಕ್ಕೆ ಬಂದವರು. ಅಂದುಕೊಂಡಿದ್ದನ್ನು ಮಾಡಿಯೇ ತೀರಲು ಹಿಂದೇಟು ಹಾಕಿದವರಲ್ಲ. ಕೊಂಕು ಮಾತುಗಳಿಗೆ ಕುಗ್ಗದೆ ನೇರವಾಗಿ ರಾಜಕಾರಣ ಮಾಡಿದರು. ಅವರ ಕುರಿತ ಪುಸ್ತಕ ಬಿಡುಗಡೆಯಾಗಿರುವುದು ಸಂತಸದ ವಿಷಯ’ ಎಂದು ಅವರು ಹೇಳಿದರು.

ಪುಸ್ತಕ ಪರಿಚಯ

ಪುಸ್ತಕ: ಬ್ರೇಕಿಂಗ್ ಬ್ಯಾರಿಯರ್ಸ್
ಲೇಖಕರು: ಸಂಧ್ಯಾ ಮೆಂಡೋನ್ಸಾ
ಪ್ರಕಾಶಕರು: ಕೊನಾರ್ಕ್ ಪ್ರಕಾಶನ
ಪುಟಗಳು: 188
ದರ: ₹750

ಜಿತೇಂದ್ರ ಆರೋಪದಲ್ಲಿ ಹುರುಳಿಲ್ಲ: ಪರಮಶಿವಯ್ಯ

ಬೆಂಗಳೂರು: ಚಿತ್ರದುರ್ಗದ ಶಿವಮೂರ್ತಿ ಶರಣರ ವಿಚಾರವಾಗಿ ತಮ್ಮ ಹೇಳಿಕೆ ಸೂಕ್ತವಾಗಿಯೇ ಇದೆ ಎಂದು ಕರ್ನಾಟಕ ವೀರಶೈವ ಲಿಂಗಾಯತ ಹಾಗೂ ಶಿವಯೋಗಿಗಳ ಮಠದ ಅಧ್ಯಕ್ಷ ಬಿ.ಎಸ್.ಪರಮಶಿವಯ್ಯ ಸಮರ್ಥನೆ ಮಾಡಿಕೊಂಡಿದ್ದಾರೆ.

‘ಶಿವಮೂರ್ತಿ ಶರಣರು ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರು ಕಾರಾಗೃಹದಿಂದ ಹೊರಗೆ ಬರಲು ಸಾಧ್ಯವಿಲ್ಲ. ಹೀಗಾಗಿ ಬೃಹನ್ಮಠಕ್ಕೆ ಉತ್ತರಾಧಿಕಾರಿ ನೇಮಕ ಮಾಡಬೇಕು ಎಂಬುದಾಗಿ ಪರಮಶಿವಯ್ಯ ನೀಡಿರುವ ಹೇಳಿಕೆಗೆ ಆಕ್ಷೇಪವಿದೆ. ಇದು ಸಮಾಜದಲ್ಲಿ ಗೊಂದಲ ಸೃಷ್ಟಿಸುತ್ತಿದೆ’ ಎಂದು ಮುರುಘಾ ಮಠದ ಸಲಹಾ ಸಮಿತಿ ಸದಸ್ಯ ಜಿತೇಂದ್ರ ಎನ್.ಹುಲಿಕುಂಟೆ ಹೇಳಿದ್ದರು. ಅದಕ್ಕೆ ಪ್ರತಿಕ್ರಿಯೆ ನೀಡಿರುವ ಪರಮಶಿವಯ್ಯ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

‘ಜಿತೇಂದ್ರ ಅವರು ಸರ್ಪಭೂಷಣ ಶಿವಯೋಗಿಗಳ ಮಠದಿಂದ ಬೃಹನ್ಮಠದ ಮೇಲೆ ನಾಲ್ಕಾರು ಪ್ರಕರಣಗಳು ಇವೆ ಎಂದು ದೂರಿದ್ದಾರೆ. ಆದರೆ ಅವುಗಳು ಸ್ವಾಮೀಜಿಗಳ ವರ್ಗಾವಣೆಗೆ ಸಂಬಂಧಿಸಿದಂಥವು. ಬೃಹನ್ಮಠದ ಮೇಲೆ ಸರ್ಪಭೂಷಣ ಮಠ ಮತ್ತು ಟ್ರಸ್ಟ್‌ನಿಂದ ಬೇರೆ ಯಾವ ಪ್ರಕರಣಗಳೂ ದಾಖಲಾಗಿಲ್ಲ. ಶಿವಮೂರ್ತಿ ಶರಣರೇ ಸರ್ಪಭೂಷಣ ಶಿವಯೋಗಿಗಳ ಮಠದ ಮಲ್ಲಿಕಾರ್ಜುನ ದೇವರನ್ನು ಬೃಹನ್ಮಠದ ದಸರಾ ಕಾರ್ಯಕ್ರಮಗಳಿಗೆ ಹಾಗೂ ಅಸಂಖ್ಯ ಪ್ರಮಥಗಣಮೇಳಕ್ಕೆ ಆಹ್ವಾನಿಸಿ ಆಶೀರ್ವದಿಸಿದ್ದಾರೆ. ಸಾರ್ವಜನಿಕ ಹಿತಾಸಕ್ತಿ ದಾವೆಯ ಪ್ರಕರಣದಲ್ಲಿ ಸರ್ಪಭೂಷಣ ಶಿವಯೋಗಿಗಳ ಮಠದ ಯಾವುದೇ ಪಾತ್ರವಿಲ್ಲ. ಶಿವಮೂರ್ತಿ ಶರಣರು ಟ್ರಸ್ಟ್ ಡೀಡ್‌ನ ನಿಯಮಾವಳಿಗಳ ಹೊರತಾಗಿ ಕೆಲವು ಆದೇಶಗಳನ್ನು ಮಾಡಿದಾಗ ಅವುಗಳನ್ನು ನಿಯಂತ್ರಿಸುವ ಸಲುವಾಗಿ ಸಂಭವಿಸಬಹುದಾದ ತೊಂದರೆಗಳನ್ನು ತಡೆಯುವ ಪ್ರಯತ್ನ ಟ್ರಸ್ಟ್ ಮಾಡಿದೆಯಷ್ಟೆ. ಆದರೆ ಶಿವಮೂರ್ತಿ ಶರಣರೇ ಟ್ರಸ್ಟ್ ಅನ್ನು ಕೂಡ ಈ ಪ್ರಕರಣದಲ್ಲಿ ಕಕ್ಷಿದಾರರನ್ನಾಗಿ ಮಾಡಿ ಎಳೆದು ತಂದಿದ್ದಾರೆ’ ಎಂದು ಪರಮಶಿವಯ್ಯ ಸ್ಪಷ್ಟನೆ ನೀಡಿದ್ದಾರೆ.

ಶಶಾಂಕ್ ಸುಬ್ರಹ್ಮಣ್ಯಮ್‌ಗೆ ಫ್ರೆಂಚ್ ನೈಟ್‌ಹುಡ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಶಶಾಂಕ್ ಸುಬ್ರಹ್ಮಣ್ಯಮ್

ಬೆಂಗಳೂರು: ಕರ್ನಾಟಕ ಶಾಸ್ತ್ರೀಯ ಸಂಗೀತ ಶೈಲಿಯ ಕೊಳಲು ವಾದಕ ಶಶಾಂಕ್ ಸುಬ್ರಹ್ಮಣ್ಯ ಅವರು ಫ್ರಾನ್ಸ್ ಸರ್ಕಾರ ಕೊಡಮಾಡುವ ಪ್ರತಿಷ್ಠಿತ ಫ್ರೆಂಚ್ ನೈಟ್‌ಹುಡ್ ಪ್ರಶಸ್ತಿ –2022ಗೆ (ಷೆವಲಿಯರ್ ಡಿ ಆರ್ಡರ್ ದೆಸ್ ಆರ್ಟ್ ಅಟ್ ದಿ ಲೆಟರ್ಸ್) ಪಾತ್ರರಾಗಿದ್ದಾರೆ.

ಈ ಹಿಂದೆ ಪಂ. ರವಿಶಂಕರ್, ಲತಾ ಮಂಗೇಶ್ಕರ್, ಹರಿಪ್ರಸಾದ್ ಚೌರಾಸಿಯ, ಡಾ.ಎಂ. ಬಾಲಮುರಳಿ ಕೃಷ್ಣ ಅವರಂತಹ ದಿಗ್ಗಜರಿಗೆ ಈ ಗೌರವಕ್ಕೆ ಭಾಜನರಾಗಿದ್ದರು.

ಸುದ್ದಿ 2 ನಿಮಿಷ


2 ವರ್ಷಗಳಲ್ಲಿ 8 ಸಾವಿರ ಟನ್ ಮೀನು ಉತ್ಪಾದನೆ: ಸಚಿವ ಅಂಗಾರ

ಬೆಂಗಳೂರು: ರಾಜ್ಯದಲ್ಲಿ ಮೀನಿನ ಖಾದ್ಯಗಳಿಗೆ ಸಾಕಷ್ಟು ಬೇಡಿಕೆ ಇದ್ದು, ಪೂರೈಕೆಯ ಕೊರತೆ ನೀಗಿಸಲು ಸರ್ಕಾರ ಒಳನಾಡು ಮೀನುಗಾರಿಕೆಗೆ ಹೆಚ್ಚಿನ ಉತ್ತೇಜನ ನೀಡುತ್ತಿದೆ ಎಂದು ಮೀನುಗಾರಿಕೆ ಸಚಿವ ಎಸ್.ಅಂಗಾರ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ರಾಜ್ಯದಲ್ಲಿ 6 ಸಾವಿರ ಟನ್ ಮೀನುಗಳಿಗೆ ಬೇಡಿಕೆ ಇದ್ದರೂ, ಲಭ್ಯತೆ 4 ಸಾವಿರ ಟನ್ ದಾಟಿಲ್ಲ. ಹೆಚ್ಚುವರಿ ಬೇಡಿಕೆ ನೀಗಿಸಲು ಆಂಧ್ರ ಪ್ರದೇಶ, ತಮಿಳುನಾಡಿನ ಮೇಲೆ ಅವಲಂಬಿತವಾಗಿದ್ದೇವೆ. ಕೊರತೆ ನೀಗಿಸಲು ಒಳನಾಡು ಮೀನುಗಾರಿಕೆಗೆ ಉತ್ತೇಜನ ನೀಡುವ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಎರಡು ವರ್ಷಗಳಲ್ಲಿ 8 ಸಾವಿರ ಟನ್ ಉತ್ಪಾದನೆಯ ಗುರಿ ತಲುಪುವ ನಿರೀಕ್ಷೆ ಇದೆ’ ಎಂದರು.

ಈಗಾಗಲೇ ಮೀನುಗಾರರ ಸಮಾವೇಶ ನಡೆಸಲಾಗಿದೆ. ಜಿಲ್ಲಾ, ತಾಲ್ಲೂಕು ಮಟ್ಟದಲ್ಲೂ ಸಮ್ಮೇಳನ ಆಯೋಜಿಸಲಾಗುವುದು. ಕೆರೆ, ಹೊಂಡಗಳಲ್ಲಿ ಮೀನು ಸಾಕಾಣಿಕೆಗೆ ಆದ್ಯತೆ ನೀಡಲಾಗುವುದು. ಮೀನುಕೃಷಿಗೆ ಸಹಾಯ ಕೋರಿ ಅರ್ಜಿ ಸಲ್ಲಿಸಿದವರಿಗೆ ಆರ್ಥಿಕ ನೆರವು ನೀಡುವುದು, ಮೀನಿನ ಮರಿಗಳ ಉಚಿತ ಪೂರೈಕೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ವಿವರ ನೀಡಿದರು.



‘ಹೇಳಿಕೆ ತಿರುಚಿದ ಪ್ರಿಯಾಂಕ್’

ಬೆಂಗಳೂರು: ‘ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿದ್ದರಿಂದಾಗಿ ಕಾನ್‌ಸ್ಟೆಬಲ್ ಹುದ್ದೆಗೆ ನೇಮಕಗೊಂಡ ವ್ಯಕ್ತಿ ಡಿವೈಎಸ್‌ಪಿಯಾಗಿ ನಿವೃತ್ತಿಯಾಗಬಹುದು ಎಂದು ನಾನು ನೀಡಿದ್ದ ಹೇಳಿಕೆಯನ್ನು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ತಿರುಚಿದ್ದಾರೆ’ ಎಂದು ವಿಧಾನಪರಿಷತ್ತಿನ ಸದಸ್ಯ ಬಾಬುರಾವ್ ಚಿಂಚನಸೂರ ಹೇಳಿದ್ದಾರೆ.

‘ಖಾಲಿ ಪೇಪರ್‌ನಲ್ಲಿ ಡಿವೈಎಸ್‌ಪಿಯಾಗಿ ಆಗಬಹುದೆಂದು ನಾನು ಹೇಳಿದ್ದಾಗಿ ಪ್ರಿಯಾಂಕ್ ತಿರುಚಿದ್ದಾರೆ. ನನ್ನ ಹೇಳಿಕೆಯನ್ನು ಅವರು ಮತ್ತೊಮ್ಮೆ ಕಣ್ತೆರೆದು ನೋಡಲಿ’ ಎಂದು ಅವರು ಆಗ್ರಹಿಸಿದ್ದಾರೆ.

‘ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಪರಿಶಿಷ್ಟ ಜಾತಿ, ಪಂಗಡದ ಮೀಸಲಾತಿಯನ್ನು ಹೆಚ್ಚಿಸುವ ಕೆಲಸವನ್ನು ಕಾಂಗ್ರೆಸ್ ಮಾಡಿರಲಿಲ್ಲ. ಶ್ರೀರಾಮುಲು ಅವರ ಹೋರಾಟ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕಾಳಜಿ, ಬದ್ಧತೆಯಿಂದಾಗಿ ಮೀಸಲಾತಿ ಲಭಿಸಿದೆ. ನನ್ನ ಹೇಳಿಕೆಯನ್ನು ತಿರುಚುವ ಮೂಲಕ ಪ್ರಿಯಾಂಕ್ ತಮ್ಮ ನಿಜ ಬಣ್ಣ ತೋರಿಸಿದ್ದಾರೆ’ ಎಂದು ಚಿಂಚನಸೂರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಇಂದು

ಲಾಡ್ಜ್ ಸ್ಟಾರ್ ಆಫ್ ದಿ ಸೌಥ್ ನಂ.101, ಜಿಎಲ್‌ಐದ ಶತಮಾನೋತ್ಸವ ಸಂಭ್ರಮ: ಉಪಸ್ಥಿತಿ: ಅನಿಶ್‌ಕುಮಾರ್ ಶರ್ಮಾ, ವಿಂಜಮುರ್ ಗೋವಿಂದರಾಜ್ ಮಧುಸೂದನ್, ಸ್ಥಳ: ಮೂರ್ ರಸ್ತೆ, ಫ್ರೇಜರ್ ಟೌನ್, ಬೆಳಿಗ್ಗೆ 9

ಶ್ರೀವತ್ಸ ಜೋಶಿ ಅವರ 'ಸ್ವಚ್ಛ ಅಭಿಯಾನ' ಪುಸ್ತಕ ಬಿಡುಗಡೆ: ಅತಿಥಿಗಳು: ಗಿರೀಶ್ ಹತ್ವಾರ, ದುಂಡಿರಾಜ, ಅನಸೂಯ ಶಿವರಾಂ, ಆಯೋಜನೆ: ಸಾಹಿತ್ಯ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬೆಳಿಗ್ಗೆ 10

ರಾಷ್ಟ್ರೀಯ ಸೇವಾ ದಿನಾಚರಣೆ: ಜಯಕರ್ ಎಸ್.ಎಂ., ಮಹೇಶ್‌ಬಾಬು, ಕೆ.ವಿ. ಖಾದರಿ ನರಸಿಂಹಯ್ಯ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ ಮತ್ತು ರಾಜ್ಯ ರಾಷ್ಟ್ರೀಯ ಸೇವಾ ಯೋಜನೆ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ಬಿ. ಎ ಅನ್ನದಾನೇಶ ಅವರು ಸಂಪಾದಿಸಿದ ‘ಗಿರೀಶ್ ಕಾರ್ನಾಡರ ತುಘಲಕ್ ಹಾಗೂ ಕುವೆಂಪು ಅವರ ಶೂದ್ರ ತಪಸ್ವಿ ನಾಟಕದ ವಿಮರ್ಶೆಗಳು’ ಪುಸ್ತಕಗಳ ಬಿಡುಗಡೆ: ಅತಿಥಿಗಳು: ಎಸ್.ಆರ್ ವಿಜಯಶಂಕರ್, ಪುಸ್ತಕದ ಕುರಿತು: ಎಚ್.ಎಸ್ ಸತ್ಯನಾರಾಯಣ, ಎಚ್. ದಂಡಪ್ಪ, ಉಪಸ್ಥಿತಿ: ಕೆ. ಜೈರಾಜ್, ಅಧ್ಯಕ್ಷತೆ: ನಾಗಲಕ್ಷ್ಮಿ ಬಿ.ಎನ್, ಆಯೋಜನೆ ಮತ್ತು ಸ್ಥಳ: ಮಹಾರಾಣಿ ಲಕ್ಷ್ಮಿ ಅಮ್ಮಣಿ ಮಹಿಳಾ ಕಾಲೇಜು, ಮಲ್ಲೇಶ್ವರ, ಅರವಿಂದ್ ಇಂಡಿಯಾ, ಬೆಳಿಗ್ಗೆ 10.30



ಗಿರೀಶ್ ಕಾಸರವಳ್ಳಿ

ರಾಷ್ಟ್ರಪ್ರಶಸ್ತಿ ವಿಜೇತ ಸಾಕ್ಷ್ಯಚಿತ್ರ ‘ನಾದದ ನವನೀತ’ದ ಅಭಿನಂದನ ಕಾರ್ಯಕ್ರಮ: ಅತಿಥಿಗಳು: ಗಿರೀಶ್ ಕಾಸರವಳ್ಳಿ, ಶ್ರೀಹರ್ಷ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಬೆಳಿಗ್ಗೆ 11.30

ಕೃಷಿ ಮೇಳ–2022 ಪ್ರಶಸ್ತಿ ಪ್ರದಾನ ಸಮಾರಂಭ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಬಿ.ಸಿ. ಪಾಟೀಲ, ಮುರುಗೇಶ್ ನಿರಾಣಿ, ಕೆ.ಸಿ ನಾರಾಯಣಗೌಡ, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಸ್ಥಳ: ಜಿಕೆವಿಕೆ ಆವರಣ, ಮಧ್ಯಾಹ್ನ 2


ಜ್ಞಾನ ವಾಣಿಜ್ಯೋತ್ಸವದ ಸಮಾರೋಪ ಸಮಾರಂಭ: ಅತಿಥಿಗಳು: ಅಜಿತ್‌ಕುಮಾರ್ ಹೆಗ್ಡೆ ಎಸ್., ನಿರ್ಮಲಾ ಕೆ., ರಮೇಶ್ ಚಂದ್ರ ಹೊಂಗಲ್, ಆಯೋಜನೆ: ಅರೊಬಿಂದು ಕಾಲೇಜು ಆವರಣ, ಮಹಾಲಕ್ಷ್ಮಿಪುರ, ಮಧ್ಯಾಹ್ನ 3

ಕನ್ನಡ ರಾಜ್ಯೋತ್ಸವ: ಅತಿಥಿಗಳು: ಡಾ.ಸಿ.ಎನ್ ಮಂಜುನಾಥ್, ಅಧ್ಯಕ್ಷತೆ: ಎಸ್.ಟಿ ಸೋಮಶೇಖರ್, ಆಯೋಜನೆ: ಭಾರತ್ ವಿದ್ಯಾ ಸಂಸ್ಥೆ, ಸ್ಥಳ: ಕೆ.ಆರ್ ಮರುದೇವಗೌಡ ರಂಗಮಂದಿರ ಭಾರತ್ ವಿದ್ಯಾ ಸಂಸ್ಥೆ, ಸಂಜೆ 4

ರಾಗ–ಸಂಗಮ: ಗಾಯನ ರಂಜನಿ ಮತ್ತು ಗಾಯತ್ರಿ, ಆಯೋಜನೆ: ದಿ ಶಿಬುಲಾಲ್ ಕುಟುಂಬ, ಸ್ಥಳ: ಜ್ಯೋತಿ ನಿವಾಸ ಕಾಲೇಜು ಸಭಾಂಗಣ, ಸಂಜೆ 5

ನೂತನ ಕನ್ನಡ ಭವನದ ಉದ್ಘಾಟನೆ ಮತ್ತು ಸಾರ್ವಜನಿಕ ಗ್ರಂಥಾಲಯದ ಲೋಕಾರ್ಪಣೆ: ಅತಿಥಿಗಳು: ಡಿ.ವಿ ಸದಾನಂದಗೌಡ, ಕೃಷ್ಣ ಬೈರೇಗೌಡ, ರವಿವರ್ಮ ಕುಮಾರ್, ಉದ್ಘಾಟನೆ: ಪ್ರಕಾಶಮೂರ್ತಿ, ಸತೀಶಕುಮಾರ್ ಎಸ್. ಹೊಸಮನಿ, ಅಧ್ಯಕ್ಷತೆ: ರೇಣುಕ ಹಗ್ಗಡೆ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ, ಸ್ಥಳ: ನೂತನ ಕನ್ನಡ ಭವನ, ಕಾಫಿ ಬೋರ್ಡ್ ಬಡಾವಣೆ, ಸಂಜೆ 5.30

ಮಾಲತೇಶ ಗರಡಿಮನಿ ಅವರ ಕಾರ್ಟೂನ್‌ಗಳ ಪ್ರದರ್ಶನ: ಉದ್ಘಾಟನೆ: ಬಿ.ಜಿ ಗುಜ್ಜಾರಪ್ಪ, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್, ಟ್ರಿನಿಟಿ ವೃತ್ತ, ಬೆಳಿಗ್ಗೆ 11



ತಿಹಾರ್ ಜೈಲು ಡಿಜಿಪಿ ವರ್ಗ

ನವದೆಹಲಿ (ಪಿಟಿಐ): ‘ಜೈಲಿನಲ್ಲಿ ಸುರಕ್ಷಿತವಾಗಿ ಇರುವಂತೆ ನೋಡಿಕೊಳ್ಳಲು ನನ್ನಿಂದ ₹10 ಕೋಟಿ ಸುಲಿಗೆ ಮಾಡಲಾಗಿದೆ’ ಎಂದು ವಂಚಕ ಸುಕೇಶ್ ಚಂದ್ರಶೇಖರ್ ಆರೋಪಿಸಿದ ಬೆನ್ನಲ್ಲೇ ತಿಹಾರ್ ಜೈಲಿನ ಡಿಜಿಪಿ ಸಂದೀಪ್ ಗೋಯಲ್ ಅವರನ್ನು ವರ್ಗಾಯಿಸಲಾಗಿದೆ.

ಆ ಜಾಗಕ್ಕೆ ಐಪಿಎಸ್ ಅಧಿಕಾರಿ ಸಂಜಯ್ ಬೇನಿವಾಲ್ ಅವರನ್ನು ವರ್ಗಾಯಿಸಿ ಆದೇಶಿಸಲಾಗಿದೆ.

‘ಸಚಿವ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡ ಸತ್ಯೇಂದರ್ ಜೈನ್ ಅವರು ನನ್ನಿಂದ ₹ 10 ಕೋಟಿ ಸುಲಿಗೆ ಮಾಡಿದ್ದಾರೆ. ಜೈಲಿನ ಡಿಜಿಪಿ ಸಂದೀಪ್ ಗೋಯಲ್ ಅವರಿಗೆ ₹ 1.5 ಕೋಟಿ ನೀಡುವಂತೆ ಅವರು ಹೇಳಿದ್ದರು’ ಎಂದು ಚಂದ್ರಶೇಖರ್ ಆರೋಪಿಸಿ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ಪತ್ರ ಬರೆದಿದ್ದರು.

ಕೆರ್ಸಾನ್‌ನಿಂದ ನಾಗರಿಕರ ಸ್ಥಳಾಂತರಕ್ಕೆ ಪುಟಿನ್ ಸೂಚನೆ

ಲಂಡನ್/ಮಾಸ್ಕೊ (ರಾಯಿಟರ್ಸ್/ಎಎಫ್‌ಪಿ): ಯುದ್ಧಪೀಡಿತ ಕೆರ್ಸಾನ್‌ನಿಂದ ನಾಗರಿಕರನ್ನು ತಕ್ಷಣವೇ ಸ್ಥಳಾಂತರಿಸಲು ರಷ್ಯಾ ಅಧ್ಯಕ್ಷ ಪುಟಿನ್ ತಮ್ಮ ಪರವಿರುವ ಪ್ರತ್ಯೇಕತಾವಾದಿ ನಾಯಕರಿಗೆ ಶುಕ್ರವಾರ ಸೂಚಿಸಿದ್ದಾರೆ.

ರಷ್ಯಾ ಸ್ವಾಧೀನಪಡಿಸಿಕೊಂಡಿರುವ ಪ್ರದೇಶದಲ್ಲಿ ಹದಗೆಡುತ್ತಿದ್ದು, ಅತ್ಯಂತ ಅಪಾಯಕಾರಿ ಪರಿಸ್ಥಿತಿ ಸೃಷ್ಟಿಯಾಗಿರುವುದರಿಂದ ನಾಗರಿಕರ ಸಾವು– ನೋವು ತಪ್ಪಿಸಲು ಪುಟಿನ್ ಈ ನಿರ್ಧಾರ ಕೈಗೊಂಡಿದ್ದಾರೆ. ಕೆಂಪು ಚೌಕದಲ್ಲಿ ರಷ್ಯಾದ ರಾಷ್ಟ್ರೀಯ ಏಕತಾ ದಿನದ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಗಳನ್ನು ಕೆರ್ಸಾನ್‌ಗೆ ತಲುಪಿಸುವ ಹೊಣೆಯನ್ನು ಕಾರ್ಯಕರ್ತರಿಗೆ ವಹಿಸಿ ಮಾತನಾಡಿದರು.

ಅಣ್ವಸ್ತ್ರ ಬಳಸಿದರೆ ಕಿಮ್ ಆಡಳಿತ ಅಂತ್ಯ– ಅಮೆರಿಕ, ದ.ಕೊರಿಯಾ ಎಚ್ಚರಿಕೆ: ವಾಷಿಂಗ್ಟನ್ (ಎಪಿ): ದಕ್ಷಿಣ ಕೊರಿಯಾ ಅಥವಾ ಇತರ ಪ್ರಾದೇಶಿಕ ಮಿತ್ರರಾಷ್ಟ್ರಗಳ ವಿರುದ್ಧ ಯಾವುದೇ ರೀತಿಯ ಅಣ್ವಸ್ತ್ರ ಬಳಸಿದರೆ ಕಿಮ್ ಜಾಂಗ್ ಉನ್ ಅವರ ಆಡಳಿತ ಅಂತ್ಯವಾಗಲಿದೆ ಎಂದು ಅಮೆರಿಕ ಮತ್ತು ದಕ್ಷಿಣ ಕೊರಿಯಾ ಜಂಟಿಯಾಗಿ ಉತ್ತರ ಕೊರಿಯಾಕ್ಕೆ ಎಚ್ಚರಿಕೆ ನೀಡಿವೆ.



ರೈತರ ಹಬ್ಬ...ಅನ್ವೇಷಣೆಯ ಹಿಗ್ಗು

ಜಿಕೆವಿಕೆಯ ಕೃಷಿ ಮಾರುಕಟ್ಟೆ ವಿಭಾಗದ ಹಳೆಯ ವಿದ್ಯಾರ್ಥಿಗಳಿಂದ ಆವಿಷ್ಕಾರ

ಕೃಷಿ ಬಳಕೆಗೆ ಬಹೂಪಯೋಗಿ ಡ್ರೋನ್

• ಖಲೀಲಅಹ್ಮದ ಶೇಖ

ಬೆಂಗಳೂರು: ಕೃಷಿ ಚಟುವಟಿಕೆಯಲ್ಲಿ ಡ್ರೋನ್‌ಗಳ ಪರಿಣಾಮಕಾರಿ ಬಳಕೆ ಮಾಡುವುದರಿಂದ ರೈತರ ಶ್ರಮ, ಸಮಯದ ಉಳಿತಾಯ, ವೆಚ್ಚವನ್ನು ತಗ್ಗಿಸುವುದು ಸಾಧ್ಯವಿದೆ. ಈ ನಿಟ್ಟನಲ್ಲಿ ಜಿಕೆವಿಕೆ ಕೃಷಿ ಮಾರುಕಟ್ಟೆ ವಿಭಾಗದ ಹಳೆಯ ವಿದ್ಯಾರ್ಥಿಗಳು ₹7 ಲಕ್ಷ ಮೌಲ್ಯದ ಬಹೂಪಯೋಗಿ ಡ್ರೋನ್ ಆವಿಷ್ಕರಿಸಿದ್ದಾರೆ.

ಜಿಕೆವಿಕೆಯ ಹಳೆಯ ವಿದ್ಯಾರ್ಥಿಗಳಾದ ಹವ್ಯಾಸ್ ಮತ್ತು ನಿತಿನ್ ಸಿಂಗ್ ಅವರು 'ಬಿಗಿಲ್ ಅಗ್ರಿಟೆಕ್' ಎಂಬ ಕಂಪನಿಯನ್ನು ಸ್ಥಾಪಿಸಿ ಈ ಡ್ರೋನ್ ಅಭಿವೃದ್ಧಿಪಡಿಸಿದ್ದಾರೆ.

ಕೃಷಿ ಮೇಳದಲ್ಲಿ ಹಲವಾರು ಕಂಪನಿಗಳ ಡ್ರೋನ್‌ಗಳು ಔಷಧಿ ಸಿಂಪಡಣೆಗೆ ಸೀಮಿತವಾಗಿವೆ. ಆದರೆ, ಹವ್ಯಾಸ್ ಹಾಗೂ ನಿತಿನ್ ಆವಿಷ್ಕರಿಸಿರುವ ಡ್ರೋನ್ ಮೂಲಕ ಬೆಳೆ ಸಮೀಕ್ಷೆ, ಬೆಳೆಯ ಆರೋಗ್ಯ, ಅಂದಾಜು ಇಳುವರಿ ಪ್ರಮಾಣ, ಆರ್‌ಜಿಬಿ ಥರ್ಮಲ್ ಚಿತ್ರಗಳ ಸೆರೆ ಹಿಡಿಯುವುದು, ಬೀಜಗಳ ಪ್ರಸರಣ, ಔಷಧ ಸಿಂಪಡಣೆ ಮತ್ತು 3ಡಿ ಮ್ಯಾಪಿಂಗ್ ಮಾಡಬಹುದಾಗಿದೆ.



ಜಿಕೆವಿಕೆ ಹಳೆಯ ವಿದ್ಯಾರ್ಥಿಗಳು ತಯಾರಿಸಿರುವ ಬಹೂಪಯೋಗಿ ಡ್ರೋನ್ –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

'ಸಮಯಕ್ಕೆ ಸರಿಯಾಗಿ ಬೆಳೆಗಳಿಗೆ ಔಷಧಿ ಸಿಂಪಡಿಸಲು ಕಾರ್ಮಿಕರು ಸಿಗುವುದಿಲ್ಲ. ಕಾರ್ಮಿಕರ ಕೊರತೆ ನಿವಾರಿಸಲು ಡ್ರೋನ್ ಸಹಕಾರಿಯಾಗಿದೆ. ಕೃಷಿ ಸಂಶೋಧನಾ ಸಂಸ್ಥೆಗಳು, ಅರಣ್ಯ ಇಲಾಖೆ ಮತ್ತು ಕಾರ್ಪೊರೇಟ್ ಸಂಸ್ಥೆಗಳಿಗೆ ಇದು ಹೆಚ್ಚು ನೆರವಾಗಲಿದೆ' ಎಂದು ನಿತಿನ್ ಹೇಳಿದರು.

'ಬೀಗಲ್ ಡ್ರೋನ್‌ನಲ್ಲಿ ಅಳವಡಿಸಲಾಗಿರುವ ಮಲ್ಟಿಸ್ಪೆಕ್ಟ್ರಲ್ ಕ್ಯಾಮೆರಾ ಬಳಸಿ ನಾಲ್ಕು ಎಕರೆ ಭತ್ತದ ಗದ್ದೆಯ ಚಿತ್ರವನ್ನು ಸೆರೆಹಿಡಿಯಲಿದೆ. ಬೆಳೆಯ ಯಾವ ಭಾಗ ಕೀಟಬಾಧೆಗೆ ಒಳಪಟ್ಟಿದೆ, ಎಲ್ಲಿ ಪೋಷಕಾಂಶಗಳ ಕೊರತೆ ಇದೆ, ಯಾವ ಭಾಗ ಉತ್ತಮವಾಗಿದೆ ಎಂಬುದನ್ನು ನಿಖರವಾಗಿ ತಿಳಿಸುವ ತಂತ್ರಜ್ಞಾನವನ್ನು ಅಳವಡಿಸಲಾಗಿದೆ' ಎಂದು ಹವ್ಯಾಸ್ ಮಾಹಿತಿ ನೀಡಿದರು.

'20ಕ್ಕೂ ಹೆಚ್ಚು ನಿಮಿಷ ಹಾರಬಲ್ಲ ಡ್ರೋನ್ ಅನ್ನು ರಿಮೋಟ್ ಮೂಲಕ ನಿಯಂತ್ರಣ ಮಾಡಬಹುದು. ಸಣ್ಣ ಡ್ರೋನ್ 5 ಕಿ.ಮೀ, ದೊಡ್ಡ ಡ್ರೋನ್ 2 ಕಿ.ಮೀ. ದೂರ ಹಾಗೂ 20 ಮೀಟರ್ ಎತ್ತರದಲ್ಲಿ ಹಾರಾಡುತ್ತದೆ. ಒಂದು ದಿನಕ್ಕೆ 1,000ಕ್ಕೂ ಹೆಚ್ಚು ಬೀಜಗಳನ್ನು ಬಿತ್ತನೆ ಮಾಡಬಹುದು. ಬಿತ್ತಿರುವ ಬೀಜಗಳಲ್ಲಿ ಎಷ್ಟು ಮೊಳಕೆಯೊಡೆದು ಬೆಳೆದಿವೆ ಎನ್ನುವುದನ್ನೂ ನೋಡಬಹುದು' ಎಂದು ತಿಳಿಸಿದರು.

ಈ ಡ್ರೋನ್ ತಂಬಾಕು, ಅಡಿಕೆ, ಬಾಳೆಹಣ್ಣು, ಸೂರ್ಯಕಾಂತಿ, ಭತ್ತ, ಕಬ್ಬು, ಹತ್ತಿ, ಮೆಕ್ಕೆಜೋಳ, ಟೊಮೆಟೊ, ದಾಳಿಂಬೆ, ಶುಂಠಿ, ಮೆಣಸಿನಕಾಯಿ, ಮಾವಿನಹಣ್ಣು, ಅರಣ್ಯಗಳಲ್ಲಿ ಬೀಜಗಳ ಪ್ರಸರಣ ಮಾಡುವುದು ಮತ್ತು ರೇಷ್ಮೆ ಬೆಳೆಗಳಿಗೆ ಔಷಧಿ ಸಿಂಪಡಣೆಗೆ ಸಹಕಾರಿಯಾಗಲಿದೆ. ಇದರ ಮೂಲಕ ಔಷಧಿ ಸಿಂಪಡಣೆ ಮಾಡಿದರೆ ಬೆಳೆಗಳ ಕಾಲಿನಡಿಗೆ ಸಿಲುಕಿ ಹಾಳಾಗುವುದು ತಪ್ಪುತ್ತದೆ. ಸಮಯದ ಉಳಿತಾಯದ ಜೊತೆಗೆ ವೆಚ್ಚವೂ ಕಡಿಮೆಯಾಗುತ್ತದೆ. ಒಂದು ಎಕರೆಗೆ ₹650 ಬಾಡಿಗೆ ಪಡೆದುಕೊಳ್ಳುತ್ತೇವೆ ಎಂದು ನಿತೀನ್ ತಿಳಿಸಿದರು.

'ಗ್ರಾಮ ಸಮೀಕ್ಷೆ, ಕ್ಷೇತ್ರ ಅಧ್ಯಯನಕ್ಕೆ ಸಹಕಾರಿ'

'ಈಗಾಗಲೇ ಪ್ರಾಯೋಗಿಕವಾಗಿ 800 ಎಕರೆ ಪ್ರದೇಶದ ಗ್ರಾಮವನ್ನು ಈ ಡ್ರೋನ್ ಬಳಸಿ ಸ್ಕ್ಯಾನ್ ಮಾಡಲಾಗಿದೆ. ಗ್ರಾಮದಲ್ಲಿ ಬೆಳೆದ ವಿವಿಧ ಬೆಳೆಗಳನ್ನು ನಿಖರವಾಗಿ ಗುರುತಿಸಿ ಮ್ಯಾಪಿಂಗ್ ಮಾಡಿದ್ದು, ವಿವಿಧ ಹಂತಗಳಲ್ಲಿ ಬೆಳೆದು ನಿಂತಿರುವ ಬೆಳೆಗಳ ಮಾಹಿತಿಯನ್ನು ಕೇವಲ ಆರು ದಿನಗಳಲ್ಲಿ ಶೇ 95ರಷ್ಟು ನಿಖರತೆಯೊಂದಿಗೆ ಪೂರ್ಣಗೊಳಿಸಲಾಗಿದೆ. ಇದು ಗ್ರಾಮದ ಸಮೀಕ್ಷೆ ಮತ್ತು ಕ್ಷೇತ್ರದ ಅಧ್ಯಯನ ಮಾಡಲು ಸಹಕಾರಿಯಾಗಿದೆ' ಎಂದು ಹವ್ಯಾಸ್ ತಿಳಿಸಿದರು.

ಬೆಳೆಗಳಿಗೆ ಕೀಟ ರೋಗ ಬಾಧೆ; ರೈತರ ಅಳಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡಿಕೆ, ತೆಂಗು, ದಾಳಿಂಬೆ, ಮುಸುಕಿನ ಜೋಳ... ಸೇರಿ ಹಲವು ಬೆಳೆಗಳಿಗೆ ಕೀಟಗಳು ಹಾಗೂ ರೋಗ ಬಾಧೆ ಕಾಡುತ್ತಿದೆ. ಈ ಬಗ್ಗೆ ಅಳಲು ತೋಡಿಕೊಂಡ ರೈತರು, ಕೃಷಿ ಮೇಳದಲ್ಲಿರುವ ಸಲಹಾ ಕೇಂದ್ರದಲ್ಲಿ ತಜ್ಞರಿಂದ ಪರಿಹಾರ ಕ್ರಮಗಳನ್ನು ತಿಳಿದುಕೊಂಡರು.

ಕೃಷಿ ಸಂಬಂಧಿತ ಪ್ರಶ್ನೆಗಳಿಗೆ ಉತ್ತರಿಸುವ ಉದ್ದೇಶದಿಂದ ಮೇಳದಲ್ಲಿ ಸಲಹಾ ಕೇಂದ್ರ ತೆರೆಯಲಾಗಿದೆ. ಮೊದಲ ದಿನದಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಕೇಂದ್ರಕ್ಕೆ ಭೇಟಿ ನೀಡುತ್ತಿದ್ದಾರೆ. ಕೃಷಿಯಲ್ಲಿ ತಾವು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸವಾಲುಗಳನ್ನು ತಜ್ಞರ ಬಳಿ ಹೇಳಿಕೊಳ್ಳುತ್ತಿದ್ದಾರೆ.

ಮಣ್ಣು ವಿಜ್ಞಾನ, ಕೃಷಿ ರಸಾಯನ ವಿಜ್ಞಾನ, ಬೇಸಾಯ ವಿಜ್ಞಾನ, ತೋಟಗಾರಿಕೆ ವಿಭಾಗ, ಕೃಷಿ ಕೀಟ ಹಾಗೂ ಸಸ್ಯ ವಿಜ್ಞಾನ, ಎಂಜಿನಿಯರಿಂಗ್ ವಿಭಾಗ, ಪ್ರಾಣಿ ವಿಜ್ಞಾನ ಸೇರಿ ಹಲವು ವಿಭಾಗಗಳ ತಜ್ಞರು ಸಲಹಾ ಕೇಂದ್ರದಲ್ಲಿದ್ದರು. ರೈತರ ಜೊತೆ ಆಪ್ತ ಸಮಾಲೋಚನೆ ನಡೆಸಿ, ಪರಿಹಾರ ಕ್ರಮಗಳನ್ನು ಸೂಚಿಸುತ್ತಿದ್ದಾರೆ.

'ಅಡಿಕೆಗೆ ಅಣಬೆ ರೋಗ, ದಾಳಿಂಬೆ ಹಾಗೂ ತರಕಾರಿ ಬೆಳೆಗಳಿಗೆ ಅಂಗಮಾರಿ ರೋಗ ಹೆಚ್ಚಾಗಿ ಕಂಡುಬರುತ್ತಿದೆ. ಬೆಳೆಗಳಲ್ಲಿ ಬಿಳಿ ನೊಣ, ಬಸವನ ಹುಳು, ಸೈನಿಕ ಹುಳು ಸೇರಿ ಕೀಟ ಬಾಧೆಯೂ ಹೆಚ್ಚಾಗಿದೆ. ಇಂಥ ರೋಗಗಳು ಹಾಗೂ ಕೀಟಗಳ ಬಗ್ಗೆ ರೈತರು ಹೆಚ್ಚು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ರೋಗಗಳ ಹತೋಟಿಗೆ ಯಾವೆಲ್ಲ ವೈಜ್ಞಾನಿಕ ಪರಿಹಾರಗಳಿವೆ ಎಂಬುದನ್ನು ರೈತರಿಗೆ ತಿಳಿಸಲಾಗಿದೆ' ಎಂದು ಕೇಂದ್ರದ ಉಸ್ತುವಾರಿಯೂ ಆಗಿರುವ ಡೀನ್ ಡಾ. ಎನ್.ಬಿ. ಪ್ರಕಾಶ್ ಹೇಳಿದರು.

350 ರೈತರ ಭೇಟಿ: 'ಕೃಷಿ ಮೇಳಕ್ಕೆ ಶುಕ್ರವಾರ ಬಂದಿದ್ದ 350 ರೈತರು, ಕೃಷಿ ಸಲಹಾ ಕೇಂದ್ರಕ್ಕೆ ಭೇಟಿ ನೀಡಿ ನೋಂದಣಿ ಮಾಡಿಸಿದ್ದಾರೆ. ತಮ್ಮ ಸಮಸ್ಯೆಗಳಿಗೆ ಪರಿಹಾರ ಪಡೆದುಕೊಂಡಿದ್ದಾರೆ' ಎಂದು ಪ್ರಕಾಶ್ ತಿಳಿಸಿದರು.





ಕೃಷಿ ಮೇಳದಲ್ಲಿ ಶುಕ್ರವಾರ ಯುವತಿಗೆ ಮಣ್ಣಿನ ಮಡಕೆ ಮಾಡುವುದನ್ನು ವ್ಯಕ್ತಿಯೊಬ್ಬರು ಹೇಳಿಕೊಟ್ಟರು (ಎಡಚಿತ್ರ) ಕೃಷಿ ಮೇಳದಲ್ಲಿ ಪಾಲ್ಗೊಂಡಿದ್ದ ಜನರು –ಪ್ರಜಾವಾಣಿ ಚಿತ್ರ

ಗಮನಸೆಳೆದ 'ಕೋಳಿ ಪ್ರಪಂಚ'

ಬೆಂಗಳೂರು: ಕೋಳಿ ಮಾಂಸ ಹಾಗೂ ಮೊಟ್ಟೆ ಏಕೆ ತಿನ್ನಬೇಕು? ಆರೋಗ್ಯಕ್ಕೆ ಆಗುವ ಪ್ರಯೋಜನಗಳೇನು ? ಕೋಳಿ ಸಾಕಿದರೆ ಲಾಭವೆಷ್ಟು ? ಪೌಲ್ಟ್ರಿ ಉದ್ಯಮ ಆರಂಭಿಸುವುದು ಹೇಗೆ ?... ಇತ್ಯಾದಿ ಪ್ರಶ್ನೆಗಳಿಗೆ 'ಕೋಳಿ ಪ್ರಪಂಚ'ವೇ ಉತ್ತರಿಸಿತು.

ಕೃಷಿ ಮೇಳದಲ್ಲಿ ಪ್ರಮುಖ ಆಕರ್ಷಣೆ ಆಗಿರುವ 'ಕೋಳಿ ಪ್ರಪಂಚ' ಮಳಿಗೆಗೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಬೃಹತ್ ಗಾತ್ರದ 'ಕೋಳಿ' ಆಕೃತಿ ಮೂಲಕ ಪ್ರಪಂಚದೊಳಗೆ ಹೋಗುವ ಜನರಿಗೆ, ಕುಕ್ಕುಟೋದ್ಯಮದ ಇತಿಹಾಸವೇ ತೆರೆದುಕೊಳ್ಳುತ್ತದೆ.

ಭಾರತೀಯ ಕುಕ್ಕುಟೋದ್ಯಮ ಪಿತಾಮಹ ಡಾ. ಬಿ.ವಿ. ರಾವ್ ಅವರು ಉದ್ಯಮಕ್ಕೆ ನೀಡಿದ ಕೊಡುಗೆಗಳ ಚಿತ್ರಣವನ್ನು ಮಳಿಗೆಯಲ್ಲಿ ಕಟ್ಟಿ ಕೊಡಲಾಗಿದೆ. ಬ್ರಾಯ್ಲರ್, ನಾಟಿ, ಗಿರಿರಾಜ್ ಹಾಗೂ ಇತರೆ ತಳಿಯ ಕೋಳಿಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ಅವುಗಳ ಮೊಟ್ಟೆಗಳೂ ಪ್ರದರ್ಶನದಲ್ಲಿ ಗಮನ ಸೆಳೆಯುತ್ತಿವೆ. ಭಾರತದಲ್ಲಿ ಮಾಂಸಾಹಾರಿಗಳ ಸಂಖ್ಯೆ ಹೆಚ್ಚುತ್ತಿರುವ ಮಾಹಿತಿಯನ್ನು ದಾಖಲೆ ಸಮೇತ ವಿವರಿಸಲಾಗಿದೆ.

'ಕೋಳಿ ಮಾಂಸ ಸೇವನೆಯಿಂದ ಸದೃಢ ಆರೋಗ್ಯ ಹೊಂದಬಹುದು. ಕೋಳಿ ಮಾಂಸ– ಮೊಟ್ಟೆ ಸೇವಿಸುವವರ ಪ್ರಮಾಣ ಹೆಚ್ಚುತ್ತಿದೆ. ಕುಕ್ಕುಟೋದ್ಯಮವೂ ಅಭಿವೃದ್ಧಿಯಾಗುತ್ತಿದ್ದು, ಈ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿವೆ. ಉದ್ಯಮದ ಬಗ್ಗೆ ಸಕಲ ಮಾಹಿತಿ ನೀಡಲು ಮಳಿಗೆ ತೆರೆಯಲಾಗಿದೆ' ಎಂದು ಪಶುವೈದ್ಯ ತಜ್ಞರ ಒಕ್ಕೂಟದ ಅಧ್ಯಕ್ಷ ಡಾ. ಜಿ. ದೇವೇಗೌಡ ತಿಳಿಸಿದರು.

ಕೃಷಿ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ • ₹ 2.10 ಕೋಟಿ ವಹಿವಾಟು

2ನೇ ದಿನ 2.45 ಲಕ್ಷ ಜನರಿಂದ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ 2ನೇ ದಿನವಾದ ಶುಕ್ರವಾರ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಮೊದಲ ದಿನಕ್ಕಿಂತ ಎರಡನೇ ದಿನ ಹೆಚ್ಚಿನ ಜನರು ಕಂಡುಬಂದರು. ಜಿಕೆವಿಕೆ ಆವರಣದಲ್ಲಿ ಇಡೀ ದಿನ ರೈತರು, ವಿದ್ಯಾರ್ಥಿಗಳ ಕಲರವ ಇತ್ತು. ರೈತರು ಎಲ್ಲ ಮಳಿಗೆಯನ್ನು ವೀಕ್ಷಿಸಿ, ಮಾಹಿತಿ ಪಡೆಯುವ ಪ್ರಯತ್ನ ಮಾಡಿದರು.

ಗ್ರಾಮೀಣ ಸೊಗಡು ಮಳಿಗೆಗಳು ಇರುವ ಕಡೆ ಹೆಚ್ಚಿನ ಜನರು ಕಾಣಿಸಿದರು. ಮಳೆ ಬಿಡುವು ನೀಡಿದ್ದರಿಂದ ಎಲ್ಲ ಕಡೆಯೂ ಓಡಾಟ ನಡೆಸಿ ಮೇಳ ವೀಕ್ಷಿಸಲು ಸಾಧ್ಯವಾಯಿತು.

ಎರಡನೇ ದಿನ 2.45 ಲಕ್ಷ ರೈತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. 11,250 ಜನರು ಕೃಷಿ ವಿಶ್ವವಿದ್ಯಾಲಯದ ರಿಯಾಯಿತಿ ದರದ ಊಟ ಸವಿದರು. ₹ 2.10 ಕೋಟಿ ವಹಿವಾಟು ನಡೆದಿದೆ. 575 ರೈತರು ಸಲಹಾ ಕೇಂದ್ರದಿಂದ ಮಾಹಿತಿ ಪಡೆದುಕೊಂಡಿದ್ದಾರೆ.

ಬೆಂಗಳೂರು ಕೃಷಿ ವಿವಿ ವಿಶ್ರಾಂತ ಕುಲಪತಿ ಡಾ.ಎಂ.ಎನ್. ಶೀಲವಂತರ್ ಮಾತನಾಡಿ, 'ಪ್ರಸ್ತುತ ಸನ್ನಿವೇಶದಲ್ಲಿ ರೈತರ ಜೀವನ ಸಂಕಷ್ಟದಲ್ಲಿದೆ. ರೈತರಿಗೆ ಅತ್ಯಂತ ಅವಶ್ಯವಾಗಿ ಬೇಕಾಗಿರುವುದು ಆರ್ಥಿಕ, ಪೋಷಕಾಂಶ, ಮಾರುಕಟ್ಟೆ ಭದ್ರತೆ ಮತ್ತು ಬೆಳೆಗಳಿಗೆ ನೀರು' ಎಂದು ಹೇಳಿದರು.

'ಮಣ್ಣಿನಲ್ಲಿ ಬೆಳೆಗಳಿಗೆ ಬೇಕಾದಂತಹ ಸೂಕ್ಷ್ಮ ಪೋಷಕಾಂಶಗಳ ಕೊರತೆ ಕಂಡುಬರುತ್ತಿದೆ. ಮಣ್ಣಿನಲ್ಲಿ ಪೋಷಕಾಂಶ ಹೆಚ್ಚಿಸಬೇಕಿದೆ. ಸೂಕ್ತವಾದ ವೈಜ್ಞಾನಿಕ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಬೇಕು' ಎಂದು ಮಾಹಿತಿ ನೀಡಿದರು. ಚಾಮರಾಜನಗರ, ಮೈಸೂರು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಹಾಗೂ ಅತ್ಯುತ್ತಮ ವೈಜ್ಞಾನಿಕ ಲೇಖನಗಳಿಗೆ ಡಾ.ಆರ್.ದ್ವಾರಕೀನಾಥ್ ಮತ್ತು ಪ್ರೊ.ಬಿ.ವಿ.ವೆಂಕಟರಾವ್ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಕೃಷಿ ಕುಲಪತಿ ಡಾ.ಎಸ್.ವಿ.ಸುರೇಶ ಅಧ್ಯಕ್ಷತೆ ವಹಿಸಿದ್ದರು. ಧಾರವಾಡ ಕೃಷಿ ವಿವಿ ಕುಲಪತಿ ಡಾ.ಪಿ.ಎಲ್. ಪಾಟೀಲ, ಡಾ.ಕೆ.ನಾರಾಯಣಗೌಡ, ಡಾ.ಎಂ. ಹನುಮಂತಪ್ಪ, ಡಾ.ಆರ್.ಸಿ.ಜಗದೀಶ, ಡಾ.ಎನ್.ಬಿ.ಪ್ರಕಾಶ್, ಡಾ.ಕೆ. ನಾರಾಯಣಗೌಡ ಹಾಜರಿದ್ದರು.


ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ರೇಷ್ಮೆ ಗೂಡುಗಳಿಂದ ತಯಾರಿಸಲಾದ, 'ಕಾಂತಾರ' ಸಿನಿಮಾದ ಪಂಜುರ್ಲಿ ದೈವದ ಪ್ರತಿಕೃತಿ ಜನರನ್ನು ಆಕರ್ಷಿಸಿತು –ಪ್ರಜಾವಾಣಿ ಚಿತ್ರ

ಹಸುಗಳ ದೇಹದಲ್ಲಿ ರಕ್ತ ಪರಿಚಲನೆಗೆ ಅನುಕೂಲ

ಜಾನುವಾರು ಸ್ವಚ್ಛತೆಗೆ ಬಂತು ಯಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾನುವಾರುಗಳ ಸ್ವಚ್ಛತೆ, ಆರೋಗ್ಯ ಕಾಪಾಡಲು, ವಿಶ್ರಾಂತಿಗೆ ನೆರವಾಗಲು ಯಂತ್ರವೊಂದು ಬಂದಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಆಯೋಜಿಸಿರುವ ಕೃಷಿ ಮೇಳದಲ್ಲಿ ಯಂತ್ರದ ಆವಿಷ್ಕಾರವು ಗಮನ ಸೆಳೆಯುತ್ತಿದೆ.

ಜಾನುವಾರುಗಳು ಮೇವಿಗೆ ದಿನವಿಡೀ ಅಲೆದಾಡಿ ಕೊಟ್ಟಿಗೆಗೆ ಬಂದು ವಿರಮಿಸುತ್ತವೆ. ಅವುಗಳ ಮೈ, ಕಾಲು, ಕಿವಿ, ಹೊಟ್ಟೆ ಭಾಗದಲ್ಲಿ ಕೆಸರು, ಸೆಗಣಿ, ಗಂಜಲ ಮೆತ್ತಿಕೊಂಡಿರುವ ಕಾರಣಕ್ಕೆ ವಿಶ್ರಾಂತಿ ಸಾಧ್ಯವಾಗುವುದಿಲ್ಲ. ಈ ಯಂತ್ರದಿಂದ ಕ್ಷಣದಲ್ಲಿ ಹಸುಗಳ ಮೈ ಸ್ವಚ್ಛ ಆಗಲಿದೆ.

ಟರ್ಕಿಯ ದೇಶದ ತಜ್ಞರು ಜಾನುವಾರುಗಳ ಮೈ ಸ್ವಚ್ಛಗೊಳಿಸುವ ರಬ್ಬಿಂಗ್ ಯಂತ್ರ ಅಭಿವೃದ್ಧಿ ಪಡಿಸಿ 'ಇ ಬ್ರಷ್' ಹಾಗೂ 'ಎಂ ಬ್ರಷ್' ಎಂಬ ಹೆಸರಿನಲ್ಲಿ ಮಾರುಕಟ್ಟೆಗೆ ಪರಿಚಯಿಸಿದ್ದಾರೆ. ಭಾರತದಲ್ಲೂ ಈಗ ಲಭ್ಯವಾಗಿದ್ದು, ಹೈನುಗಾರಿಕೆ ಅವಲಂಬಿಸಿರುವ ರೈತರನ್ನು ಆಕರ್ಷಿಸುತ್ತಿದೆ.


ಬೆಂಗಳೂರಿನ ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಹಸುಗಳ ರಬ್ಬಿಂಗ್ ಯಂತ್ರದ ಬಗ್ಗೆ ರೈತರೊಬ್ಬರು ಮಾಹಿತಿ ಪಡೆದುಕೊಂಡರು – ಪ್ರಜಾವಾಣಿ ಚಿತ್ರ

'ವಿದ್ಯುತ್ ಚಾಲಿತ ಯಂತ್ರವಾಗಿದ್ದು, 1 ಎಚ್.ಪಿ ಮೋಟರ್ ಅಳವಡಿಸಲಾಗಿದೆ. ವಿದ್ಯುತ್ ಚಾಲಿತ ವ್ಯವಸ್ಥೆಯಿಂದ ಈ ಯಂತ್ರವು ಕಾರ್ಯಾಚರಣೆ ನಡೆಸುತ್ತದೆ. 50 ಹಸುಗಳಿಗೆ ಒಂದು ಯಂತ್ರ ಅಳವಡಿಸಿಕೊಂಡರೆ ಸಾಕು' ಎಂದು ಜಿಇಎ ಫಾರಂ ಟೆಕ್ನಾಲಜಿಯ ರಾಜಣ್ಣ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಸೆನ್ಸಾರ್ ವ್ಯವಸ್ಥೆಯಿದ್ದು, ಹಸು, ಎತ್ತು ಹಾಗೂ ಕರುಗಳು ಯಂತ್ರದ ಎದುರು ಬಂದರೆ ಸಾಕು, ಸ್ವಯಂ ಚಾಲಿತವಾಗಿ ಯಂತ್ರವು ಜಾನುವಾರುಗಳ ಸ್ವಚ್ಛತೆ ಮಾಡುತ್ತದೆ. ಇದರಿಂದ ಜಾನುವಾರುಗಳ ದೇಹದ ಸ್ವಚ್ಛತೆಯ ಜತೆಗೆ ಮಸಾಜ್ ಸಹ ಆಗಲಿದೆ' ಎಂದು ತಿಳಿಸಿದರು.

'ರಾಜ್ಯದ ವಿವಿಧ ಜಿಲ್ಲೆಯ 28 ಪ್ರಗತಿಪರ ಕೃಷಿಕರಿಗೆ ಈ ಯಂತ್ರ ಪೂರೈಸಲಾಗಿದೆ. ಈ ಯಂತ್ರವನ್ನು ರೈತರು ಬಳಸುತ್ತಿದ್ದಾರೆ' ಎಂದರು.

ಜಾನುವಾರುಗಳ ಚರ್ಮ ಶುಭ್ರವಾಗುವ ಜೊತೆಗೆ ದೇಹದಲ್ಲಿ ಉಷ್ಣಾಂಶ ಹೆಚ್ಚಲಿದೆ. ರಕ್ತ ಪರಿಚಲನೆ ಹೆಚ್ಚಳದಿಂದ ಹಾಲು ಉತ್ಪಾದನೆ ಅಧಿಕ ಆಗಲಿದೆ ಎಂದು ಕೋಲಾರದ ರೈತ ಉಮೇಶ್ ರೆಡ್ಡಿ ಮಾಹಿತಿ ನೀಡಿದರು.

ಸಂತೋಷ್ ಐನಾತಿ ಕೆಲಸ ಹೊರಬರುತ್ತಿದೆ: ಕಾಂಗ್ರೆಸ್

ಬೆಂಗಳೂರು: 'ತೆಲಂಗಾಣದಲ್ಲಿ ₹ 150 ಕೋಟಿ ವ್ಯಯಿಸಿ ಆಪರೇಷನ್ ಕಮಲ ನಡೆಸಲು ಪ್ರಯತ್ನಿಸಿ ಸಿಕ್ಕಿಬಿದ್ದಿರುವವರು ಕರ್ನಾಟಕದಲ್ಲೂ ಕುದುರೆ ವ್ಯಾಪಾರದಲ್ಲಿ ಭಾಗವಹಿಸಿದ್ದನ್ನು ಒಪ್ಪಿಕೊಂಡಿದ್ದಾರೆ. ಬಿ.ಎಲ್. ಸಂತೋಷ್ ಎಂಬ ವ್ಯಕ್ತಿಯ ಐನಾತಿ ಕೆಲಸ ಈಗ ಹೊರ ಬರುತ್ತಿದೆ' ಎಂದು ಕಾಂಗ್ರೆಸ್ ಟೀಕಿಸಿದೆ.

ಅಧಿಕೃತ ಟ್ವಿಟರ್ ಖಾತೆಯಿಂದ ಶುಕ್ರವಾರ ಸರಣಿ ಟ್ವೀಟ್ ಮಾಡಿದ್ದು, 'ಕುದುರೆ ವ್ಯಾಪಾರದಲ್ಲಿ ಸಂತೋಷ ಕೂಟದ ನೇತೃತ್ವ ಇದ್ದಿದ್ದಕ್ಕಾಗಿಯೇ ಬಿ.ಎಸ್. ಯಡಿಯೂರಪ್ಪ ಅವರನ್ನು ಪದಚ್ಯುತಿಗೊಳಿಸಲಾಯಿತೆ' ಎಂದಿದೆ.

'ಅಮಿತ್ ಶಾ ಗೃಹ ಸಚಿವರೋ ಅಥವಾ ಪ್ರಜಾಪ್ರಭುತ್ವವನ್ನು ಕೊಲ್ಲುತ್ತಿರುವ ಕುದುರೆ ವ್ಯಾಪಾರದ ದಲ್ಲಾಳಿಯೊ? ಆಪರೇಷನ್ ಕಮಲ ಎಂಬ ಕೆಟ್ಟ ಕೆಲಸದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೆಸರುಗಳು ಬಹಿರಂಗವಾಗಿವೆ. ಈ ಬಗ್ಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದೆ.

ಸುಧಾಕರ್ ರಾಜೀನಾಮೆಗೆ ಆಗ್ರಹ: 'ತುಮಕೂರಿನಲ್ಲಿ ಚಿಕಿತ್ಸೆ ಸಿಗದೆ ತಾಯಿ, ಅವಳಿ ಶಿಶುಗಳು ಮೃತ ಪಟ್ಟಿರುವ ಪ್ರಕರಣಕ್ಕೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ನೇರ ಹೊಣೆ. ಇಲಾಖೆಯ ಮೇಲೆ ಹಿಡಿತವಿಲ್ಲದ ಸಚಿವರು ರಾಜೀನಾಮೆ ನೀಡಲಿ' ಎಂದು ಆಗ್ರಹಿಸಿದೆ.

'ಕಾರ್ಯಕರ್ತರಿಂದ ಹಣ ಸಂಗ್ರಹಿಸಿದರೆ ಬಿಜೆಪಿಗೇನು ಕಷ್ಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯವರು ಚುನಾವಣಾ ಬಾಂಡ್ ಹೆಸರಿನಲ್ಲಿ ಹಣ ಸಂಗ್ರಹಿಸಿದ್ದಾರೆ. ನಮಗೆ ಬಾಂಡ್ ಕೊಡುವವರಿಲ್ಲ. ಪಕ್ಷ ಸಂಘಟನೆಗೆ ನಮ್ಮ ಕಾರ್ಯಕರ್ತರಿಂದ ಹಣ ಸಂಗ್ರಹಿಸಿದರೆ ಬಿಜೆಪಿಯವರಿಗೇನು ಕಷ್ಟ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಚುನಾವಣಾ ಟಿಕೆಟ್ ಆಕಾಂಕ್ಷಿಗಳಿಂದ ನಾವು ಡಿ.ಡಿ ರೂಪದಲ್ಲಿ ಹಣ ಸಂಗ್ರಹಿಸುತ್ತೇವೆ. ಬಿಜೆಪಿಯವರು ಏನಾದರೂ ಟೀಕೆ ಮಾಡಿಕೊಳ್ಳಲಿ. ನಾವು ಆ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ' ಎಂದು ಹೇಳಿದರು.

ಕಾಂಗ್ರೆಸ್ ಕಾರ್ಯಕರ್ತರಿಂದ ಅಸಮಾಧಾನ ವ್ಯಕ್ತವಾಗುತ್ತಿರುವ ಕುರಿತು ಕೇಳಿದಾಗ, 'ನನ್ನ ಬಳಿ ಯಾರೂ ಅಸಮಾಧಾನ ವ್ಯಕ್ತಪಡಿಸಿಲ್ಲ. ಅಸಮಾಧಾನ ಇರುವವರು ಪಕ್ಷದಲ್ಲಿರುವುದು ಬೇಡ. ಪಕ್ಷ ತೊರೆದು ಹೋಗಬಹುದು. ಮಾತನಾಡುವವರು ಪಕ್ಷದ ಬಾವುಟ ಕಟ್ಟಲು ಬರುವುದಿಲ್ಲ' ಎಂದರು.

'ಕಾಂಗ್ರೆಸ್ ಪಕ್ಷದ ಬಾಗಿಲು ಮುಚ್ಚಲಿದೆ' ಎಂಬ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಡಿ.ಕೆ ಶಿವಕುಮಾರ್ ಅವರು, 'ಹಾಗಿದ್ದ ಮೇಲೆ ನಮ್ಮ ಹಾಗೂ ಜೆಡಿಎಸ್‌ನ ಶಾಸಕರನ್ನು ಕಾಡಿ ಬೇಡಿ, ಕಾಲಿಗೆ ಬಿದ್ದು ಕರೆದುಕೊಂಡು ಹೋಗಿ ಏಕೆ ಸರ್ಕಾರ ರಚಿಸಬೇಕಿತ್ತು? ತಾಕತ್ತಿದ್ದರೆ ಜನಮತದ ಆಧಾರದಲ್ಲಿ ಗೆಲ್ಲಬೇಕಿತ್ತು' ಎಂದು ಹೇಳಿದರು.


ಕೆಂಪೇಗೌಡ ಬಡಾವಣೆಯ ಕಾಮಗಾರಿಗಳ ಬಗ್ಗೆ ಎಸ್.ಆರ್.ವಿಶ್ವನಾಥ್ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದರು

'ಎಂಎಸ್‌ಇ ತೊಂದರೆಗಳ ನಿವಾರಣೆ'

ಬೆಂಗಳೂರು: ಜಾಗತಿಕ ಹೂಡಿಕೆದಾರರ ಸಮಾವೇಶದಿಂದ ₹8 ಲಕ್ಷ ಕೋಟಿ ಹೂಡಿಕೆ ಪ್ರಸ್ತಾವಗಳು ರಾಜ್ಯದಲ್ಲಿ ಕಾರ್ಯರೂಪಕ್ಕೆ ಬರುವುದರಿಂದ ಎಂಎಸ್‌ಇಗಳಿಗೆ ಹೆಚ್ಚು ಅನುಕೂಲವಾಗಲಿದೆ' ಎಂದು ಕಾಸಿಯಾ ಅಧ್ಯಕ್ಷ ಕೆ.ಎನ್. ನರಸಿಂಹಮೂರ್ತಿ ತಿಳಿಸಿದ್ದಾರೆ.

'ಹೂಡಿಕೆದಾರರೊಂದಿಗೆ ಸಂಬಂಧಗಳು ಎಂಎಸ್‌ಇಗಳಿಗೆ ಉದಯೋನ್ಮುಖ ಅವಕಾಶಗಳನ್ನು ಕಲ್ಪಿಸಲಿವೆ. ಸಣ್ಣ ಪ್ರಮಾಣದ ಉದ್ಯಮವು ಸಾಂಕ್ರಾಮಿಕ ರೋಗದ ನಂತರದ ಪರಿಣಾಮಗಳಿಂದ ಇನ್ನೂ ಸಂಪೂರ್ಣವಾಗಿ ಚೇತರಿಸಿಕೊಳ್ಳದಿರುವ ಈ ಸಮಯದಲ್ಲಿ, ಹೂಡಿಕೆದಾರರ ಸಮಾವೇಶ ವರವಾಗಿ ಬಂದಿದೆ' ಎಂದು ತಿಳಿಸಿದ್ದಾರೆ.

'ಹೂಡಿಕೆ ಪ್ರಸ್ತಾವಗಳು ಕೇವಲ ಕಾಗದದಲ್ಲಿ ಮಾತ್ರ ಉಳಿಯದಂತೆ ಖಾತ್ರಿಪಡಿಸಿಕೊಳ್ಳಬೇಕು. ಭರವಸೆ ನೀಡಿದಂತೆ ಮೂರು ತಿಂಗಳೊಳಗೆ ಎಲ್ಲಾ ಅಗತ್ಯ ಅನುಮತಿಗಳು ಮತ್ತು ಅನುಮೋದನೆಗಳನ್ನು ನೀಡಲಾಗಿದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು' ಎಂದು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಕಳೆದ 7 ತಿಂಗಳ ಅವಧಿಯಲ್ಲಿ ಮದ್ಯದ ನಶೆ ಜೋರು

ಬಿಯರ್ ಪ್ರಿಯರ ಸಂಖ್ಯೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ 7 ತಿಂಗಳ ಅವಧಿಯಲ್ಲಿ ಮದ್ಯ ಪ್ರಿಯರು ನಶೆಯಲ್ಲಿ ತೇಲಿದ್ದು, ಸರ್ಕಾರಕ್ಕೆ ₹16,948 ಕೋಟಿ ವರಮಾನ ಸಂಗ್ರಹವಾಗಿದೆ. ವಿಸ್ಕಿ, ಬ್ರಾಂದಿ,ರಮ್‌ಗಿಂತ ಬಿಯರ್ ಪ್ರಿಯರೇ ಹೆಚ್ಚಿನ ವರಮಾನ ತಂದುಕೊಟ್ಟಿದ್ದಾರೆ.

ಮದ್ಯ (ಐಎಂಎಲ್) ಮತ್ತು ಬಿಯರ್ ಮಾರಾಟದಲ್ಲಿ ಏರಿಕೆ ಕಂಡು ಬಂದಿದ್ದರೂ, ಬಿಯರ್ ಸೇವನೆ ಗಣನೀಯವಾಗಿ ಅಂದರೆ ಶೇ 59.66ರಷ್ಟು ಹೆಚ್ಚಾಗಿದೆ. ಏಪ್ರಿಲ್‌ನಿಂದ ಅಕ್ಟೋಬರ್ ಅಂತ್ಯದ ತನಕದ ಏಳು ತಿಂಗಳ ಅವಧಿಯಲ್ಲಿ ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ 80.07 ಲಕ್ಷ ಬಾಕ್ಸ್ ಬಿಯರ್ ಬಾಟಲಿಗಳು ಹೆಚ್ಚುವರಿಯಾಗಿ ಮಾರಾಟವಾಗಿವೆ. ಒಟ್ಟಾರೆ 214.28 ಲಕ್ಷ ಬಾಕ್ಸ್ ಬಿಯರ್ ಮಾರಾಟವಾಗಿದೆ.

ವಿಸ್ಕಿ, ಬ್ರಾಂದಿ ಮತ್ತು ರಮ್ ಸೇವನೆಯೂ ಶೇ 7.64 ರಷ್ಟು ಹೆಚ್ಚಾಗಿದೆ. ಒಟ್ಟಾರೆ 397.43 ಲಕ್ಷ ಬಾಕ್ಸ್ ಮದ್ಯ (ಐಎಂಎಲ್) ಮಾರಾಟವಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ 28.22 ಲಕ್ಷ ಬಾಕ್ಸ್ ಹೆಚ್ಚುವರಿ ಮದ್ಯ ಮಾರಾಟವಾಗಿದೆ.

'ಈ ವರ್ಷ ಮದುವೆ ಸೇರಿದಂತೆ ಕಾರ್ಯಕ್ರಮಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದರಿಂದ ಮದ್ಯ ಸೇವನೆ ಕೂಡ ಹೆಚ್ಚಾಗಿದೆ. ಜತೆಗೆ ಬಹುತೇಕ ಏಳು ತಿಂಗಳಿಂದ ಮಳೆ ಸುರಿಯುತ್ತಿರುವುದರಿಂದ ವಾತಾವರಣ ತಂಪಾಗಿಯೇ ಇದೆ. ಈ ಸಂದರ್ಭದಲ್ಲಿ ಮದ್ಯದ ನಶೆ ಹೆಚ್ಚಿಸಿಕೊಳ್ಳುವ ಪ್ರಯತ್ನದಲ್ಲಿ ಮದ್ಯ ಪ್ರಿಯರು ಅಬಕಾರಿ ಇಲಾಖೆಗೆ ವರಮಾನವನ್ನೂ ಹೆಚ್ಚಿಸಿದ್ದಾರೆ' ಎನ್ನುತ್ತಾರೆ ಮದ್ಯದ ಅಂಗಡಿ ಮಾಲೀಕರು.

ವಾರ್ಷಿಕ ₹29 ಸಾವಿರ ಕೋಟಿ ವರಮಾನ ಸಂಗ್ರಹಿಸುವ ಗುರಿಯನ್ನು ಅಬಕಾರಿ ಇಲಾಖೆ ಹೊಂದಿದ್ದು, ಈಗಾಗಲೇ ₹16,948 ಕೋಟಿ ಸಂಗ್ರಹವಾಗಿದೆ. ಕಳೆದ ವರ್ಷದ ಏಳು ತಿಂಗಳ ಅವಧಿಯ ವರಮಾನಕ್ಕೆ ಹೋಲಿಸಿದರೆ ₹2,333 ಕೋಟಿ ಹೆಚ್ಚುವರಿ ವರಮಾನ ಸಂಗ್ರಹವಾಗಿದೆ ಎಂದು ಅಬಕಾರಿ ಇಲಾಖೆ ಅಂಕಿ–ಅಂಶಗಳು ಹೇಳುತ್ತಿವೆ.

ಅಂಕಿ-ಅಂಶಗಳು

₹29,000 ಕೋಟಿ
2022–23ನೇ ಸಾಲಿನಲ್ಲಿ ವರಮಾನ ಗುರಿ

₹16,948 ಕೋಟಿ
ಏಳು ತಿಂಗಳಲ್ಲಿ ಸಂಗ್ರಹ

₹2,333 ಕೋಟಿ
ಕಳೆದ ವರ್ಷಕ್ಕೆ ಹೋಲಿಸಿದರೆ ಹೆಚ್ಚಳ

58.44%
ವಾರ್ಷಿಕ ಗುರಿಗೆ ಶೇಕಡವಾರು ಸಾಧನೆ

ಕೆಂಪೇಗೌಡ ಬಡಾವಣೆ ಕಾಮಗಾರಿ ವಿಳಂಬ: ವಿಶ್ವನಾಥ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ ಕಾಮಗಾರಿ ವಿಳಂಬ ಮಾಡುತ್ತಿರುವ ಗುತ್ತಿಗೆದಾರರು ಮತ್ತು ಎಂಜಿನಿಯರ್‌ಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ(ಬಿಡಿಎ) ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ತರಾಟೆಗೆ ತೆಗೆದುಕೊಂಡರು.

ಬಡಾವಣೆಯಲ್ಲಿ ನಿರ್ಮಾಣ ಆಗುತ್ತಿರುವ ರಸ್ತೆ ಸೇರಿ ಮೂಲಸೌಕರ್ಯ ಕಾಮಗಾರಿಗಳನ್ನು ಬಿಡಿಎ ಅಧಿಕಾರಿಗಳ ಜತೆ ಪರಿಶೀಲನೆ ನಡೆಸಿದ ಅವರು, 'ತ್ವರಿತವಾಗಿ ಕಾಮಗಾರಿ ಕೈಗೆತ್ತಿಕೊಳ್ಳುವಲ್ಲಿ ಗುತ್ತಿಗೆದಾರರು ವಿಫಲರಾಗಿದ್ದಾರೆ. ಎಂಜಿನಿಯರ್‌ಗಳು ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡಿಸಬೇಕು' ಎಂದು ಎಚ್ಚರಿಸಿದರು.

'ಸ್ಥಗಿತಗೊಂಡಿರುವ ಕಾಮಗಾರಿಯನ್ನು 15 ದಿನಗಳಲ್ಲಿ ಆರಂಭಿಸಬೇಕು. ಎರಡು ವಾರಗಳ ನಂತರ ಮತ್ತೊಮ್ಮೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು. ಲೋಪಗಳು ಕಂಡುಬಂದರೆ ಶಿಸ್ತುಕ್ರಮಕ್ಕೆ ಸ್ಥಳದಲ್ಲೇ ಶಿಫಾರಸು ಮಾಡಲಾಗುವುದು' ಎಂದು ಹೇಳಿದರು.

ಇದೇ ವೇಳೆ, ಬಡಾವಣೆ ನಿರ್ಮಾಣಕ್ಕೆ ಭೂಮಿ ನೀಡಿರುವ ರೈತರೊಂದಿಗೆ ವಿಶ್ವನಾಥ್ ಸಭೆ ನಡೆಸಿದರು. ರೈತರಿಗೆ ನೀಡಬೇಕಿರುವ ನಿವೇಶನ ಮತ್ತು ಪರಿಹಾರವನ್ನು ಕೂಡಲೇ ಬಿಡುಗಡೆ ಮಾಡುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ 'ನೀನೊಲಿದ ಬದುಕು' ಪುಸ್ತಕ ಬಿಡುಗಡೆ

'ತಾಳ್ಮೆ ಇದ್ದರೆ ಬದುಕು ಸುಂದರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನುಷ್ಯನಿಗೆ ಯಾವ ಯಾವ ಹಂತದಲ್ಲಿ ಏನೇನು ಕೊಡಬೇಕೋ ಅದನ್ನು ಬದುಕು ನೀಡುತ್ತದೆ. ಆದರೆ, ಅದಕ್ಕೆ ತಾಳ್ಮೆ ಇರಬೇಕು. ಎಂದೂ ಮನುಷ್ಯ ನಿರಾಶೆಯಾಗಬಾರದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಿವೃತ್ತ ಹಿರಿಯ ಐಎಎಸ್ ಅಧಿಕಾರಿ ಹಾಗೂ ಸಾಹಿತಿ ಡಾ. ಸಿ.ಸೋಮಶೇಖರ್ ಅವರ ಆತ್ಮಕಥೆ 'ನೀನೊಲಿದ ಬದುಕು' ಕೃತಿಯನ್ನು ಶುಕ್ರವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಯಾರಿಗೆ ತಾಳ್ಮೆ ಇರುತ್ತದೆ ಅವರ ಬದುಕು ಸುಂದರವಾಗಿರುತ್ತದೆ. ತಾಳ್ಮೆ ಇರದ ಮನುಷ್ಯ ಸಮಾಧಾನವಾಗಿರಲು ಸಾಧ್ಯವಿಲ್ಲ. ನಾನು ಎಂಬುದನ್ನು ಮರೆತಾಗ, ನಾವು ಎಂಬ ಭಾವ ಬಂದಾಗ ಎಲ್ಲರ ಬದುಕಿನಲ್ಲಿ ಒಲವು, ಪ್ರೀತಿ ವಿಶ್ವಾಸ ಸಿಗುತ್ತದೆ' ಎಂದರು.

'ಅಧಿಕಾರಿಗಳು, ಸಾಹಿತಿಗಳು, ಸ್ವಾಮೀಜಿಗಳು ಎಲ್ಲರಲ್ಲೂ ನಮ್ಮವ ಎನ್ನುವ ಭಾವವನ್ನು ಸೋಮಶೇಖರ್ ಹೊಂದಿದ್ದಾರೆ. ಅವರಲ್ಲಿ ಎಂದಿಗೂ ಸಕಾರಾತ್ಮಕ ಚೈತನ್ಯ ಇರುತ್ತದೆ. ಕರ್ನಾಟಕಕ್ಕೆ, ಕನ್ನಡಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಕ್ರಿಯಾಶೀಲತೆ ಮುಂದುವರಿಯಲಿ. ಅವರು ಸದಾಕಾಲ ನಗುತ್ತಾ ಇರಬೇಕು, ನಗಿಸುತ್ತಾ ಇರಬೇಕು' ಎಂದು ಆಶಿಸಿದರು.

'ಸೋಮಶೇಖರ್ ಅವರು ಮೊದಲು ಸಾಹಿತಿ, ಆಮೇಲೆ ಅಧಿಕಾರಿ; ಅವರನ್ನು ಸಾಹಿತ್ಯಾಧಿಕಾರಿ ಎನ್ನಬಹುದು. ಅವರು ಇಷ್ಟು ಬೇಗ ಆತ್ಮಕಥೆ ಬರೆಯಬಾರದಿತ್ತು. ಅವರ ಪ್ರೇರಣೆ ಇನ್ನಷ್ಟು ಬಹಳ ಇದೆ. ಬಹಳಷ್ಟು ಜನ ಇನ್ನೇನು ಹೋಗಬೇಕು ಎನ್ನುವ ಹಂತದಲ್ಲಿ ಆತ್ಮಕಥನ ಬರೆಯುತ್ತಾರೆ. ಬಹಳ ಸಂದರ್ಭದಲ್ಲಿ ಆತ್ಮಕಥೆಗಳಲ್ಲಿ ಅವರು ಬರೆದಿದ್ದಕ್ಕಿಂತ ಮುಚ್ಚಿಟ್ಟದ್ದೇ ಹೆಚ್ಚಾಗಿರುತ್ತದೆ. ಸೋಮಶೇಖರ್ ಅವರು ಇತರೆ ರಂಗದಲ್ಲಿ ಕೆಲಸ ಮಾಡಿರುವ ಬಗ್ಗೆಯೂ ಬರೆಯಬೇಕು' ಎಂದರು.

ಬಸವರಾಜ ಬೊಮ್ಮಾಯಿ, ಸಚಿವ ಸೋಮಣ್ಣ ಅವರು ಸೋಮಶೇಖರ್ ಅವರೊಂದಿಗೆ ಸ್ಥಾಪಿಸಿದ ಬಸವ ವೇದಿಕೆ ಸೇರಿ ಹಲವು ಪ್ರಸಂಗಗಳನ್ನು ಹಂಚಿಕೊಂಡರು.

ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಮೈಸೂರಿನ ಸುತ್ತೂರು ಮಠದ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ ಕಂಬಾರ, ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್, ಸುಪ್ರೀಂಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಶಿವರಾಜ ಪಾಟೀಲ್, ಸಪ್ನಾ ಬುಕ್ ಹೌಸ್ ಮಾಲೀಕ ನಿತಿನ್ ಷಾ, ಸಾಹಿತಿ ಮಲ್ಲೇಪುರಂ ಜಿ. ವೆಂಕಟೇಶ ಉಪಸ್ಥಿತರಿದ್ದರು.



ಸಿ. ಸೋಮಶೇಖರ ಅವರ 'ನೀನೊಲಿದ ಬದುಕು' ಆತ್ಮಕಥನ ಪುಸ್ತಕವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಬಿಡುಗಡೆ ಮಾಡಿದರು. ಸಪ್ನಾ ಬುಕ್ ಹೌಸ್ ಮಾಲೀಕ ನಿತಿನ್ ಶಾ, ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್, ಇಂಧನ ಸಚಿವ ಸುನಿಲ್ ಕುಮಾರ್, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗ ಮಠದ ಸಿದ್ಧಲಿಂಗ ಸ್ವಾಮೀಜಿ, ವಸತಿ ಸಚಿವ ವಿ ಸೋಮಣ್ಣ, ಸಾಹಿತಿ ಚಂದ್ರಶೇಖರ ಕಂಬಾರ ಇದ್ದರು —ಪ್ರಜಾವಾಣಿ ಚಿತ್ರ

ರಾಜಕಾರಣಕ್ಕೆ ಸೋಮಶೇಖರ್!

'ಅತ್ಯಂತ ಜನಾನುರಾಗಿಯಾಗಿರುವ ಸೋಮಶೇಖರ್ ಮನದಾಳದಲ್ಲಿ ಜನಪ್ರತಿನಿಧಿಯಾಗಿ ಕೆಲಸ ಮಾಡಬೇಕೆಂಬ ಆಕಾಂಕ್ಷೆ ಇದೆ. ವೇದಿಕೆ ಮೇಲಿರುವ ಮುಖ್ಯಮಂತ್ರಿಯವರು ಮುಂದಿನ ಚುನಾವಣೆಯಲ್ಲಿ ಅವರಿಗೆ ಈ ಅವಕಾಶ ಮಾಡಿಕೊಡಬೇಕು' ಎಂದು ವಸತಿ ಸಚಿವ ವಿ. ಸೋಮಣ್ಣ ಮನವಿ ಮಾಡಿದರು.

'ರಾಜಕೀಯಕ್ಕೆ ಬರಬೇಕೆಂಬ ಆಸೆ ಇದೆಯಲ್ವಾ, ಸೋಮಶೇಖರ್' ಎಂದು ಸೋಮಣ್ಣ ಕೇಳಿದಾಗ, ಸೋಮಶೇಖರ್ ಅವರು ತಲೆಯಾಡಿಸಿ ಹೌದು ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಭಾಷಣದಲ್ಲಿ ಇದನ್ನು ಪ್ರಸ್ತಾಪಿಸಿ, 'ಸೋಮಶೇಖರ್ ಅವರ ಆಶಯಗಳನ್ನು ಸೋಮಣ್ಣ ಅವರು ಹೇಳಿದರು. ನೋಡೋಣ, ಭಗವಂತನ ಅನುಗ್ರಹ ಇದ್ದರೆ, ಗುರುಗಳ ಕೃಪೆ ಆದರೆ ಅದನ್ನೂ ಈಡೇರಿಸುವ ದಿನ ದೂರವಿಲ್ಲ' ಎಂದರು.

ಕೆಂಪೇಗೌಡರ ಪ್ರತಿಮೆ ಅನಾವರಣಕ್ಕೆ ಮೃತ್ತಿಕೆ ಸಂಗ್ರಹಿಸಿದ ಸಚಿವರು

ಪ್ರಜಾವಾಣಿ ವಾರ್ತೆ

ಹೊಸಪೇಟೆ/ಬಾಗಲಕೋಟೆ/ಬೆಳಗಾವಿ: ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಅನಾವರಣದ ಭಾಗವಾಗಿ ನಡೆಯುತ್ತಿರುವ ಪವಿತ್ರ ಮೃತ್ತಿಕೆ ಸಂಗ್ರಹ ಕಾರ್ಯವು ನಾಲ್ವರು ಸಚಿವರ ತಂಡದಿಂದ ಶುಕ್ರವಾರ ನಾಡಿನ ಐತಿಹಾಸಿಕ ಸ್ಥಳಗಳಾದ ವಿಜಯನಗರ ಜಿಲ್ಲೆಯ ಹಂಪಿ, ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮ, ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ನಡೆಯಿತು.

ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ಉನ್ನತ ಶಿಕ್ಷಣ ಸಚಿವ ಡಾ. ಸಿ ಎನ್ ಅಶ್ವತ್ಥನಾರಾಯಣ, ಪ್ರಾಧಿಕಾರದ ಸದಸ್ಯರೂ ಆದ ಕಂದಾಯ ಸಚಿವ ಆರ್. ಅಶೋಕ, ಗೃಹ ಸಚಿವ ಆರಗ ಜ್ಞಾನೇಂದ್ರ ಮತ್ತು ಯುವಜನ, ಕ್ರೀಡಾ ಸಚಿವ ನಾರಾಯಣಗೌಡ ಅವರು ಬೆಳಿಗ್ಗೆ ಬೆಂಗಳೂರಿನಿಂದ ಹೆಲಿಕಾಪ್ಟರ್ ಏರಿ, ಹಂಪಿ, ಕೂಡಲಸಂಗಮ ಮತ್ತು ಕಿತ್ತೂರುಗಳಿಗೆ ಭೇಟಿ ನೀಡಿ ಪವಿತ್ರ ಮೃತ್ತಿಕೆ ಸಂಗ್ರಹಿಸಿಕೊಂಡು, ಸಂಜೆಯ ಹೊತ್ತಿಗೆ ಪುನಃ ರಾಜಧಾನಿಗೆ ಬಂದಿಳಿದರು.

ಪುಷ್ಕರಣಿಗಳಿಂದ ಮೃತ್ತಿಕೆ ಸಂಗ್ರಹ: ಸಚಿವರ ತಂಡ ಹಂಪಿ ಪಂಪಾಂಬಿಕೆ, ವಿರೂಪಾಕ್ಷೇಶ್ವರ ಹಾಗೂ ಭುವನೇಶ್ವರಿ ದೇವಿಗೆ ಪೂಜೆ ಸಲ್ಲಿಸಿದರು. ಹಂಪಿ ಪುಷ್ಕರಣಿಗಳಿಂದ ಸಂಗ್ರಹಿಸಿದ ಮಣ್ಣನ್ನು ಒಂಬತ್ತು ತಾಮ್ರದ ಬಿಂದಿಗೆಗಳಲ್ಲಿ ಇರಿಸಿ, ಪೂಜೆ ನೆರವೇರಿಸಿದರು. ಅನಂತರ ಜಿಲ್ಲಾಧಿಕಾರಿ ಅನಿರುದ್ಧ್ ಶ್ರವಣ್ ಪಿ. ಅವರು ಮೃತ್ತಿಕೆಯ ಬಿಂದಿಗೆಗಳನ್ನು ಸಚಿವರಿಗೆ ಹಸ್ತಾಂತರಿಸಿದರು.

ನಂತರ ಬಾಗಲಕೋಟೆಯ ಬಸವಣ್ಣನಐಕ್ಯಮಂಟಪವಿರುವಕೂಡಲ ಸಂಗಮದಿಂದ ನಾಲ್ವರು ಸಚಿವರು ಮೃತ್ತಿಕೆ ಸಂಗ್ರಹಿಸಿದರು. ಹಾಗೆಯೇ ಚನ್ನಮ್ಮನ ಕರ್ಮಭೂಮಿ ಬೆಳಗಾವಿ ಜಿಲ್ಲೆಯ ಕಿತ್ತೂರಿನಿಂದಲೂ ಮೃತ್ತಿಕೆ ಸಂಗ್ರಹಿಸಿದರು.

ಹಂಪಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರಾದ ಆರ್. ಅಶೋಕ ಹಾಗೂ ಡಾ. ಅಶ್ವತ್ಥನಾರಾಯಣ, 'ವಿಜಯನಗರ ಸಾಮ್ರಾಜ್ಯ ಹಾಗೂ ಬೆಂಗಳೂರಿನ ನಡುವೆ ಸಂಬಂಧ, ಗೌರವ ಹೆಚ್ಚಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಮೃತ್ತಿಕೆ ಸಂಗ್ರಹಿಸಲಾಗುತ್ತಿದೆ' ಎಂದರು.



ಹಂಪಿಯ ಪುಷ್ಕರಣಿಗಳಿಂದ ಸಂಗ್ರಹಿಸಿದ ಮಣ್ಣನ್ನು ತಾಮ್ರದ ಬಿಂದಿಗೆಗಳಲ್ಲಿಟ್ಟು ಹಂಪಿಯಲ್ಲಿ ಪೂಜೆ ಸಲ್ಲಿಸಿದ ನಂತರ ಜಿಲ್ಲಾಧಿಕಾರಿ ಅನಿರುದ್ಧ್ ಶ್ರವಣ್ ಪಿ. ಅವರು ಸಚಿವರಾದ ಆರಗ ಜ್ಞಾನೇಂದ್ರ, ಆರ್. ಅಶೋಕ, ಕೆ.ಸಿ. ನಾರಾಯಣಗೌಡ ಹಾಗೂ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಹಸ್ತಾಂತರಿಸಿದರು —ಪ್ರಜಾವಾಣಿ ಚಿತ್ರ

ಪ್ರಮುಖ ಸ್ಥಳಗಳಿಂದ ಮಣ್ಣು ಸಂಗ್ರಹ

'ವಿಜಯನಗರ ಸಾಮ್ರಾಜ್ಯದ ನೆಲ ಹಂಪಿ, ಬಸವಣ್ಣನವರ ಐಕ್ಯಸ್ಥಳ ಕೂಡಲಸಂಗಮ, ವೀರರಾಣಿ ಚನ್ನಮ್ಮನ ಕರ್ಮಭೂಮಿ ಕಿತ್ತೂರಿನಿಂದ ಮೃತ್ತಿಕ್ಕೆ ಸಂಗ್ರಹ ಮಾಡಲಾಗುತ್ತಿದೆ. ನಾವು ನಾಲ್ವರು ಸಚಿವರು ಸಾಂಕೇತಿಕವಾಗಿ ಪ್ರಮುಖ ಸ್ಥಳಗಳಿಂದ ಮಣ್ಣು ಸಂಗ್ರಹಿಸುತ್ತಿದ್ದೇವೆ. ರಾಜ್ಯದಲ್ಲಿನ ವಿವಿಧ ಭಾಗಗಳಿಂದ ಆ ಜಿಲ್ಲೆಯ ಜಿಲ್ಲಾಧಿಕಾರಿಗಳು ಪವಿತ್ರ ಮೃತ್ತಿಕೆ ಕಳುಹಿಸಿಕೊಡುವರು. ನ. 11ರಂದು ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡರ ಪ್ರತಿಮೆ ಅನಾವರಣದ ಸಂದರ್ಭದಲ್ಲಿ ಮೃತ್ತಿಕೆ ಇಟ್ಟು ಪೂಜೆ ಸಲ್ಲಿಸಿ, ಪ್ರತಿಮೆ ಉದ್ಘಾಟಿಸಲಾಗುವುದು' ಎಂದು ತಿಳಿಸಿದರು.

'ಪ್ರತಿಮೆ ಅನಾವರಣದೊಂದಿಗೆ ಇಡೀ ರಾಜ್ಯದ ಜನರನ್ನು ಒಗ್ಗೂಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಪ್ರತಿಮೆ ಅನಾವರಣ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ನಾಡಿನ ವಿವಿಧೆಡೆಗಳಿಂದ ಸ್ವಾಮೀಜಿಗಳೆಲ್ಲ ಪಾಲ್ಗೊಳ್ಳುವರು' ಎಂದರು.

ಜನವರಿ 7, 8ರಂದು 'ಹಂಪಿ ಉತ್ಸವ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ಬರುವ ಜನವರಿ 7, 8ರಂದು 'ಹಂಪಿ ಉತ್ಸವ' ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಅನಿರುದ್ಧ್ ಶ್ರವಣ್ ಪಿ. ತಿಳಿಸಿದರು.

ತಾಲ್ಲೂಕಿನ ಕಮಲಾಪುರದ ಕರಡಿಧಾಮದ 'ನೇಚರ್ ಕ್ಯಾಂಪ್'ನಲ್ಲಿ ಶುಕ್ರವಾರ ನಡೆದ ಉತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮುಜರಾಯಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವೆ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ, ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರೊಂದಿಗೆ ಈ ಕುರಿತು ಚರ್ಚಿಸಿದ ನಂತರ ದಿನಾಂಕ ನಿಗದಿಗೊಳಿಸಲಾಗಿದೆ ಎಂದು ಹೇಳಿದರು.

ಸ್ವಾಗತ ಮತ್ತು ಶಿಷ್ಟಾಚಾರ ಸಮಿತಿ, ಸಾರಿಗೆ ಸಮಿತಿ, ವಸತಿ ಸಮಿತಿ, ಆಹಾರ ಸಮಿತಿ, ಪ್ರಚಾರ ಮತ್ತು ಮಾಧ್ಯಮ ಸಮಿತಿ, ಜಾಹೀರಾತು ಸಮಿತಿ, ಆಹ್ವಾನ ಪತ್ರಿಕೆ, ಕರಪತ್ರ, ನೆನಪಿನ ಕಾಣಿಕೆ, ಪಾಸ್, ಪ್ರಮಾಣಪತ್ರ, ಬ್ಯಾನರ್ ಸಮಿತಿ ಸೇರಿದಂತೆ 20ಕ್ಕೂ ಹೆಚ್ಚು ಸಮಿತಿಗಳನ್ನು ರಚಿಸಲಾಗಿದೆ ಎಂದರು.

ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಡಾ. ದೇವಿಶೆಟ್ಟಿ ಹೇಳಿಕೆ

ಆರೋಗ್ಯ ಕ್ಷೇತ್ರದಲ್ಲಿ ನರ್ಸ್‌ಗಳ ಕೊರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರೋಗ್ಯ ಕ್ಷೇತ್ರದಲ್ಲಿ ನರ್ಸ್‌ಗಳ ಕೊರತೆ ಇದೆ. ಹೀಗಾಗಿ, 100 ಹಾಸಿಗೆಯ ಆಸ್ಪತ್ರೆಯಲ್ಲಿ ಪ್ರಾಯೋಗಿಕ ತರಬೇತಿಗೆ ಆದ್ಯತೆ ನೀಡುವ ನರ್ಸಿಂಗ್ ಕಾಲೇಜುಗಳನ್ನು ಆರಂಭಿಸಬೇಕು' ಎಂದು ನಾರಾಯಣ ಹೆಲ್ತ್ ಸಂಸ್ಥಾಪಕ ಮತ್ತು ಅಧ್ಯಕ್ಷ ಡಾ.ದೇವಿ ಶೆಟ್ಟಿ ಸಲಹೆ ನೀಡಿದರು.

ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಶುಕ್ರವಾರ 'ಸಾಂಕ್ರಾಮಿಕ ಕಾಯಿಲೆ ನಂತರ ಭವಿಷ್ಯದಲ್ಲಿ ಆರೋಗ್ಯ ಬಿಕ್ಕಟ್ಟು ಎದುರಿಸಲು ಯಾವ ರೀತಿ ಸಿದ್ಧತೆ ಕೈಗೊಳ್ಳಬೇಕು' ಎನ್ನುವ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ನರ್ಸ್‌ಗಳಿಗೆ ಈಗ ನೀಡುತ್ತಿರುವ ತರಬೇತಿ ಸಮರ್ಪಕವಾಗಿಲ್ಲ. ತರಬೇತಿ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತರಬೇಕಾಗಿದೆ. ಕಲಿಕೆಯ ಹಂತದಲ್ಲೇ ಸಮಗ್ರ ತರಬೇತಿ ನೀಡಬೇಕು' ಎಂದು ಹೇಳಿದರು.

'ಸರ್ಕಾರಿ ಆಸ್ಪತ್ರೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಬೇಕು. ಈಗ ಕೇವಲ ಮಲೇರಿಯಾ, ಕ್ಷಯರೋಗ, ಎಚ್‌ಐವಿಗಳ ಬಗ್ಗೆ ಮಾತ್ರ ಹೆಚ್ಚು ಗಮನಹರಿಸಲಾಗುತ್ತಿದೆ. ಆದರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಎಷ್ಟು ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗುತ್ತಿದೆ ಎನ್ನುವ ಬಗ್ಗೆ ನಿರಂತರ ನಿಗಾವಹಿಸಬೇಕು. ಆಗ ಸೌಲಭ್ಯಗಳ ಕೊರತೆಯ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ' ಎಂದು ಹೇಳಿದರು.

'ಭಾರತದಲ್ಲಿ ಕೋವಿಡ್‌ನಿಂದ ಹೆಚ್ಚು ಸಾವುಗಳು ಸಂಭವಿಸಿದ್ದರೂ ನೈಜ ಸ್ಥಿತಿಯನ್ನು ಮರೆಮಾಚಲಾಗಿದೆ ಎಂದು ಹಲವು ಅಂತರರಾಷ್ಟ್ರೀಯ ವರದಿಗಳು ಪ್ರಕಟವಾದವು. ಆದರೆ, ವಾಸ್ತವದಲ್ಲಿ ಭಾರತದಲ್ಲಿ ಕಡಿಮೆ ಸಾವುಗಳು ಸಂಭವಿಸಿವೆ. ಸಾವು ಸಂಭವಿಸುವುದನ್ನು ನಿಯಂತ್ರಿಸುವಲ್ಲಿ ಸರ್ಕಾರ ಅತ್ಯುತ್ತಮ ಕ್ರಮಗಳನ್ನು ಕೈಗೊಂಡಿದೆ' ಎಂದು ಪ್ರತಿಪಾದಿಸಿದರು.

ವರ್ಚುವಲ್ ವ್ಯವಸ್ಥೆಯ ಮೂಲಕ ಮಾತನಾಡಿದ ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ವಿಜ್ಞಾನಿ ಡಾ. ಸೌಮ್ಯಾ ಸ್ವಾಮಿನಾಥನ್, 'ಆರೋಗ್ಯ ಕ್ಷೇತ್ರದಲ್ಲಿನ ಹೂಡಿಕೆಯನ್ನು ವೆಚ್ಚ ಎಂದು ಪರಿಗಣಿಸಬಾರದು. ಕೋವಿಡ್ ಹಲವು ಪಾಠಗಳನ್ನು ಕಲಿಸಿದೆ. ಜನರು ಮಾಸ್ಕ್ ಬಳಸುವುದನ್ನು ಮುಂದುವರಿಸಬೇಕು. ಮುಂಜಾಗ್ರತೆಯೇ ಮದ್ದು ಎನ್ನುವುದನ್ನು ಅರಿತುಕೊಳ್ಳಬೇಕು' ಎಂದು ಹೇಳಿದರು.

ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಮಾತನಾಡಿ, 'ಕೋವಿಡ್ ನಂತರವೂ ಆರೋಗ್ಯ ಕ್ಷೇತ್ರದ ಸುಧಾರಣೆಗೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಐದು ಜಿಲ್ಲೆಗಳಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುತ್ತಿದೆ. ಈಗ ಕರ್ನಾಟಕದಲ್ಲಿ 800 ಜನರಿಗೆ ಒಬ್ಬ ವೈದ್ಯರಿದ್ದಾರೆ' ಎಂದು ವಿವರಿಸಿದರು.

'ಜನರಿಗೆ ಸುಲಭವಾಗಿ ಆರೋಗ್ಯ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಮತ್ತು ಖಾಸಗಿ ವಲಯ ಒಗ್ಗಟ್ಟಿನಿಂದ ಮುಂದಾಗಬೇಕು' ಎಂದು ತಿಳಿಸಿದರು.

ಪತ್ರಕರ್ತ ಶೇಖರ್ ಗುಪ್ತಾ ನಿರೂಪಿಸಿದರು.



ಗೋಷ್ಠಿಯಲ್ಲಿ ಪತ್ರಕರ್ತ ಶೇಖರ್ ಗುಪ್ತಾ, ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ನಾರಾಯಣ ಹೆಲ್ತ್ ಸಂಸ್ಥಾಪಕ ಡಾ. ದೇವಿಶೆಟ್ಟಿ ಪಾಲ್ಗೊಂಡಿದ್ದರು

ಶಿವಮೂರ್ತಿ ಶರಣರಿಗೆ ಮತ್ತೆ ಪುರುಷತ್ವ ಪರೀಕ್ಷೆ

ಚಿತ್ರದುರ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದ 2ನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ಶುಕ್ರವಾರ ಪುರುಷತ್ವ ಪರೀಕ್ಷೆಗೆ ಒಳಪಡಿಸಲಾಯಿತು.

ಜಿಲ್ಲಾ ಆಸ್ಪತ್ರೆಯ ಡಾ.ವೇಣು ಹಾಗೂ ಡಾ.ಲೀಲಾ ರಾಘವನ್ ನೇತೃತ್ವದ ವೈದ್ಯರ ತಂಡ ಆರೋಪಿಯ ಪುರುಷತ್ವ ಪರೀಕ್ಷೆ ನಡೆಸಿತು. ಗಂಟೆಗೂ ಹೆಚ್ಚು ಕಾಲ ವಿವಿಧ ಪರೀಕ್ಷೆ ನಡೆಸಿ ಕೂದಲು, ಉಗುರು ಹಾಗೂ ರಕ್ತದ ಮಾದರಿಯನ್ನು ಸಂಗ್ರಹಿಸಿತು. ಈ ಮಾದರಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಲಾಗುತ್ತದೆ ಎಂದು ಪೊಲೀಸ್ ಇಲಾಖೆಯ ಮೂಲಗಳು ಮಾಹಿತಿ ನೀಡಿವೆ.

ಲೈಂಗಿಕ ಕಿರುಕುಳ, ಅತ್ಯಾಚಾರ ಆರೋಪ ಎದುರಿಸುವ ವ್ಯಕ್ತಿ ಲೈಂಗಿಕ ಕ್ರಿಯೆ ನಡೆಸುವ ಸಾಮರ್ಥ್ಯ ಹೊಂದಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಪುರುಷತ್ವ ಪರೀಕ್ಷೆ ನಡೆಸಲಾಗುತ್ತದೆ. ಸೆ.3ರಂದು ಮೊದಲ ಬಾರಿಗೆ ಶಿವಮೂರ್ತಿ ಮುರುಘಾ ಶರಣರು ಪುರುಷತ್ವ ಪರೀಕ್ಷೆ ಎದುರಿಸಿದ್ದರು. ಈ ವರದಿ ತನಿಖಾಧಿಕಾರಿಯ ಕೈಸೇರಿದ್ದು, ದೋಷಾರೋಪ ಪಟ್ಟಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಕೆಯಾಗಲಿದೆ.

ನ್ಯಾಯಾಂಗ ಬಂಧನದಲ್ಲಿದ್ದ ಶಿವಮೂರ್ತಿ ಮುರುಘಾ ಶರಣರನ್ನು 2ನೇ ಪ್ರಕರಣದ ತನಿಖೆಯ ಉದ್ದೇಶದಿಂದ ನ.3ರಂದು ಪೊಲೀಸ್ ವಶಕ್ಕೆ ಪಡೆಯಲಾಗಿದೆ. ಡಿವೈಎಸ್‌ಪಿ ಕಚೇರಿಯಲ್ಲಿ ತನಿಖೆಗೆ ಒಳಪಡಿಸಲಾಗಿದ್ದು, ತನಿಖಾಧಿಕಾರಿ ಬಾಲಚಂದ್ರ ನಾಯ್ಕ್ ನೇತೃತ್ವದ ತಂಡ ನಿರಂತರವಾಗಿ ವಿಚಾರಣೆ ನಡೆಸುತ್ತಿದ್ದು, ಹಲವು ವಿಷಯಗಳ ಕುರಿತು ಹೇಳಿಕೆ ಪಡೆಯಲಾಗುತ್ತಿದೆ. ಆಗಾಗ ಮೌನಕ್ಕೆ ಜಾರಿದರೂ ಆರೋಪಿಯು ತನಿಖೆಗೆ ಸಹಕರಿಸುತ್ತಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೋಪಿಯ ಪೊಲೀಸ್ ಕಸ್ಟಡಿ ಅವಧಿ ಶನಿವಾರ ಅಂತ್ಯವಾಗಲಿದೆ. ಕೃತ್ಯ ನಡೆದ ಸ್ಥಳದ ಮಹಜರು ಬಾಕಿ ಇದ್ದು, ಶನಿವಾರ ಸ್ಥಳ ಮಹಜರು ನಡೆಸುವ ಸಾಧ್ಯತೆ ಇದೆ.

ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದಲ್ಲಿ ಸೆ.1ರಂದು ಶಿವಮೂರ್ತಿ ಮುರುಘಾ ಶರಣರನ್ನು ಬಂಧಿಸಲಾಗಿತ್ತು. ತನ್ನ ಇಬ್ಬರು ಪುತ್ರಿಯರು ಹಾಗೂ ಇನ್ನಿಬ್ಬರು ವಿದ್ಯಾರ್ಥಿನಿಯರ ಮೇಲೂ ಲೈಂಗಿಕ ದೌರ್ಜನ್ಯ ನಡೆದಿತ್ತು ಎಂದು ಮಹಿಳೆಯೊಬ್ಬರು ಅ. 14ರಂದು ಮೈಸೂರಿನ ನಜರಾಬಾದ್ ಪೊಲೀಸ್ ಠಾಣೆಯಲ್ಲಿ ಮತ್ತೊಂದು ದೂರು ದಾಖಲಿಸಿದ್ದರು.

ಲೈಂಗಿಕ ದೌರ್ಜನ್ಯ: ಆರೋಪಿ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸರು ವೇಶ್ಯಾಗೃಹಗಳ ಮೇಲೆ ದಾಳಿ ನಡೆಸಿದಾಗ ಸಿಕ್ಕಿ ಹಾಕಿಕೊಂಡ ಪುರುಷರನ್ನು ಗ್ರಾಹಕರು ಎಂದು ಪರಿಗಣಿಸಬಹುದು. ಆದರೆ, ಸಂತ್ರಸ್ತ ಬಾಲಕಿಯರೇನಾದರೂ ಈ ಪುರುಷ ತನ್ನೊಂದಿಗೆ ಒತ್ತಾಯಪೂರ್ವಕ ಲೈಂಗಿಕ ಕ್ರಿಯೆ ನಡೆಸಿದ್ದಾರೆ ಎಂದು ಆರೋಪಿಸಿದರೆ ಆಗ ಅಂತಹವರನ್ನು ಗ್ರಾಹಕ ಎಂದು ಪರಿಗಣಿಸಲು ಸಾಧ್ಯವಿಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನನ್ನ ವಿರುದ್ಧ ಮಹಿಳಾ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಕಾಸರಗೋಡು ಜಿಲ್ಲೆಯ ಮೊಹಮ್ಮದ್ ಷರೀಫ್ ಅಲಿಯಾಸ್ ಫಾಹೀಂ ಹಾಜಿ (45) ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೇನು?: 17 ವರ್ಷದ ಬಾಲಕಿ ಸಂಬಂಧಿಕರ ಮನೆಯಲ್ಲಿದ್ದು ವಿದ್ಯಾಭ್ಯಾಸ ಮಾಡುತ್ತಿದ್ದರು. ಆಕೆಯನ್ನು ಪರಿಚಯಿಸಿಕೊಂಡಿದ್ದ ಆರೋಪಿಗಳು ಬಾಲಕಿಯ ಜೊತೆ ಲೈಂಗಿಕ ಕ್ರಿಯೆ ನಡೆಸಿ ಅದನ್ನು ವಿಡಿಯೊ ರೆಕಾರ್ಡ್ ಮಾಡಿಕೊಂಡು ಬೆದರಿಕೆ ಹಾಕುತ್ತಿದ್ದರು. ಅರ್ಜಿದಾರರಿಂದ ತಪ್ಪಿಸಿಕೊಂಡಿದ್ದ ಸಂತ್ರಸ್ತ ಬಾಲಕಿ ಪೋಷಕರಿಗೆ ಈ ಅಂಶವನ್ನು ತಿಳಿಸಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ದೂರು ದಾಖಲಿಸಿಕೊಂಡಿದ್ದ ಪೊಲೀಸರು ಅರ್ಜಿದಾರ ಸೇರಿದಂತೆ ಇತರೆ ಆರೋಪಿಗಳ ವಿರುದ್ಧ ಮಾನವ ಕಳ್ಳಸಾಗಣೆ ನಿಯಂತ್ರಣ ಕಾಯ್ದೆ, ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಸಿಕೊಂಡು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಬಾಲ್ಯ ವಿವಾಹ: ಆರೋಪಿಗಳಿಗೆ ಷರತ್ತುಬದ್ಧ ಜಾಮೀನು

ಬೆಂಗಳೂರು: ತುಮಕೂರು ಜಿಲ್ಲೆಯ ಜಕ್ಕೇನಹಳ್ಳಿ ಗ್ರಾಮದ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಬಾಲ್ಯ ವಿವಾಹ ನಡೆಸಿದ ಆರೋಪ ಎದುರಿಸುತ್ತಿದ್ದ ಐವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದೆ.

ಈ ಸಂಬಂಧ ತುಮಕೂರಿನ ಲಕ್ಷ್ಮಮ್ಮ, ಲಲಿತಾ ಕುಮಾರಿ, ಕಲಾವತಿ, ಕಮಲಮ್ಮ, ಸಾವಿತ್ರಮ್ಮ ಮತ್ತು ಬಡ್ಡಿ ಈರಣ್ಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ರಾಜೇಂದ್ರ ಬದಾಮಿಕರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ಪ್ರಕರಣದ ಪ್ರಮುಖ ಆರೋಪಿಯೂ ಆದ ವರ ಈಗ ಮೃತಪಟ್ಟಿದ್ದಾನೆ ಮತ್ತು ವಧು ನಾಗರತ್ನಮ್ಮ ಅವರ ದಿನಾಂಕವನ್ನು ತನಿಖಾಧಿಕಾರಿ ಖಚಿತಪಡಿಸಿಲ್ಲ. ಅಂತೆಯೇ ನಾಗರತ್ನಮ್ಮನನ್ನು ಮದುವೆಯಾಗಿದ್ದ ಎಂಬ ವಾದವನ್ನು ರುಜುವಾತುಪಡಿಸಲು ಯಾವುದೇ ಸಾಕ್ಷಿ ಇಲ್ಲ' ಎಂಬ ಕಾರಣದೊಂದಿಗೆ ನ್ಯಾಯಪೀಠ ಎಲ್ಲ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿದೆ.

ಪ್ರಕರಣವೇನು?: 'ನಾಗರತ್ನಮ್ಮನಿಗೆ 2016ರ ನವೆಂಬರ್ 20ರಂದು ಮದುವೆ ಮಾಡಿಸಲಾಗಿದೆ. ಈ ದಿನಾಂಕದಂದು ಆಕೆಗೆ 17 ವರ್ಷವಾಗಿತ್ತು' ಎಂದು ಆರೋಪಿಸಿ ನಾಗರತ್ನಮ್ಮ ಅವರ ಸಂಬಂಧಿ ದೂರು ಸಲ್ಲಿಸಿದ್ದರು. ಇದರನ್ವಯ ಬಾಲ್ಯವಿವಾಹ ತಡೆ ಕಾಯ್ದೆ-2006ರ ಕಲಂ 9 ಮತ್ತು 10ರ ಅನುಸಾರ ಐವರು ಆರೋಪಿಗಳ ವಿರುದ್ಧ, 'ಅರ್ಜಿದಾರರು ಮದುವೆಗೆ ಪ್ರಚೋದನೆ ನೀಡಿ ಮದುವೆ ಮಾಡಿದ್ದಾರೆ' ಎಂದು ದೋಷಾರೋಪ ಹೊರಿಸಲಾಗಿತ್ತು. ಮಧುಗಿರಿಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಆರೋಪಿಗಳಿಗೆ ಜಾಮೀನು ನಿರಾಕರಿಸಿದ್ದರು.

ಕ್ರಿಕೆಟ್ ಬೆಟ್ಟಿಂಗ್: ₹ 1 ಲಕ್ಷ ನಗದು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ವೆಂಟಿ-20 ವಿಶ್ವಕಪ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ₹ 1 ಲಕ್ಷ ನಗದು ಜಪ್ತಿ ಮಾಡಿದ್ದಾರೆ.

'ಸಿಟಿ ಮಾರ್ಕೆಟ್ ಬಳಿಯ ಎ.ಎಸ್. ಚಾರ್ ಸ್ಟ್ರೀಟ್‌ನ ಪಾದಚಾರಿ ಮಾರ್ಗದಲ್ಲಿ ನಿಂತಿದ್ದ ಆರೋಪಿ, ಕ್ರಿಕೆಟ್ ಪಂದ್ಯಗಳ ಸೋಲು-ಗೆಲುವು ಲೆಕ್ಕಾಚಾರದಲ್ಲಿ ಜನರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದ. ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಕೃತ್ಯದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿದ್ದು, ಅವರ ಪತ್ತೆಗೆ ತನಿಖೆ ಮುಂದುವರಿದಿದೆ. ಸದ್ಯಕ್ಕೆ ಆರೋಪಿ ಹೆಸರು ಬಹಿರಂಗಪಡಿಸಲಾಗದು' ಎಂದರು.

ಕರ್ನಾಟಕ– ಮಹಾರಾಷ್ಟ್ರ ರಾಜ್ಯಪಾಲರ ನೇತೃತ್ವದಲ್ಲಿ ಸಮನ್ವಯ ಸಭೆ ಯಶಸ್ವಿ

ಕನ್ನಡ– ಮರಾಠಿಯಲ್ಲಿ ಫಲಕ ಹಾಕಲು ಸಹಮತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಗಡಿಭಾಗದ ಪ್ರಮುಖ ಧಾರ್ಮಿಕ ಕೇಂದ್ರಗಳು, ಪ್ರವಾಸಿ ತಾಣಗಳಲ್ಲಿ ಕನ್ನಡ ಹಾಗೂ ಮರಾಠಿ ಎರಡರಲ್ಲೂ ಫಲಕ ಹಾಕಬೇಕು ಎಂಬುದೂ ಸೇರಿದಂತೆ ವಿವಿಧ ವಿಷಯಗಳಲ್ಲಿ ಸಮನ್ವಯ ಸಾಧಿಸಲು ಕೊಲ್ಹಾಪುರದ ಸಭೆ ಯಶಸ್ವಿಯಾಯಿತು.

ಕರ್ನಾಟಕ ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಾಗೂ ಮಹಾರಾಷ್ಟ್ರ ರಾಜ್ಯಪಾಲ ಭಗತ್‌ಸಿಂಗ್ ಕೋಶಿಯಾರಿ ಅವರ ನೇತೃತ್ವದಲ್ಲಿ ಶುಕ್ರವಾರ ನಡೆದ 'ಸಮನ್ವಯ' ಸಭೆಯಲ್ಲಿ ಈ ಕುರಿತು ಚರ್ಚಿಸಲಾಯಿತು.

ಕೊಲ್ಹಾಪುರದ ಮಹಾಲಕ್ಷ್ಮಿ ದೇವಸ್ಥಾನಕ್ಕೆ ರಾಜ್ಯದ ಭಕ್ತರು ಹೆಚ್ಚು ಹೋಗುತ್ತಾರೆ. ಅದೇ ರೀತಿ ಸವದತ್ತಿಯ ಯಲ್ಲಮ್ಮನ ಗುಡ್ಡಕ್ಕೆ ಮಹಾರಾಷ್ಟ್ರದ ಭಕ್ತರೇ ಹೆಚ್ಚು. ಎರಡೂ ಕ್ಷೇತ್ರಗಳಲ್ಲಿ ಯಾತ್ರಿ ನಿವಾಸಕ್ಕೆ ಜಾಗ ನೀಡಲು ಒಪ್ಪಿಗೆ ಸೂಚಿಸಲಾಯಿತು. ಮಹಾರಾಷ್ಟ್ರದಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಬೇಕು ಎಂಬುದಕ್ಕೂ ಒಪ್ಪಿಗೆ ಸೂಚಿಸಲಾಯಿತು.

ಕೊಲೆ, ಸುಲಿಗೆ, ಭ್ರೂಣಹತ್ಯೆ, ಬಾಲ್ಯವಿವಾಹ, ಅಕ್ರಮ ಮದ್ಯ ಸಾಗಣೆ ಸೇರಿದಂತೆ ಎಲ್ಲ ರೀತಿಯ ಅಪರಾಧ ಕೃತ್ಯಗಳನ್ನು ಭೇದಿಸಲು ಪರಸ್ಪರ ನೆರವಾಗಬೇಕು. ಮಹಾರಾಷ್ಟ್ರದ ಜಲಾಶಯಗಳಿಂದ ನೀರು ಹರಿಸುವ ಪೂರ್ವದಲ್ಲಿ ಗಡಿ ಭಾಗದ ಎಲ್ಲ ಜಿಲ್ಲೆಗಳಿಗೂ ಮಾಹಿತಿ ಹಂಚಿಕೊಳ್ಳಬೇಕು ಎಂಬುದಕ್ಕೂ ಭಗತ್‌ಸಿಂಗ್ ಕೋಶಿಯಾರಿ ಅವರು ಒಪ್ಪಿಗೆ ಸೂಚಿಸಿದರು.

ಮಹಾರಾಷ್ಟ್ರಕ್ಕೆ ಕರ್ನಾಟಕದ ಆನೆಗಳ ದಾಳಿಯಿಂದ ಆನೆ- ಮಾನವ ಸಂಘರ್ಷ ಹೆಚ್ಚಿದೆ. ಇದರ ನಿಯಂತ್ರಣಕ್ಕೆ ಕ್ರಮ ವಹಿಸಬೇಕು. ಕರ್ನಾಟಕದಲ್ಲಿ ಕೋವಿಡ್‌ನಿಂದ ಮೃತಪಟ್ಟಮಹಾರಾಷ್ಟ್ರದವರಿಗೆ ಪರಿಹಾರ ನೀಡಲು ಅನುಕೂಲ ಮಾಡಿಕೊಡಬೇಕು ಎಂದೂ ಮಹಾರಾಷ್ಟ್ರದ ಅಧಿಕಾರಿಗಳು ಕೋರಿದರು. ಇದಕ್ಕೆ ರಾಜ್ಯದ ಅಧಿಕಾರಿಗಳು ಒಪ್ಪಿಗೆ ನೀಡಿದರು.

ಬೆಳಗಾವಿ, ವಿಜಯಪುರ, ಕಲಬುರಗಿ, ಬೀದರ್ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜತೆಗೆ ಮಹಾರಾಷ್ಟ್ರದ ಐದು ಜಿಲ್ಲೆಗಳ ಅಧಿಕಾರಿಗಳು ಇದ್ದರು.

ಮುತಾಲಿಕ್‌ಗೆ ಜೀವ ಬೆದರಿಕೆ

ಹುಕ್ಕೇರಿ (ಬೆಳಗಾವಿ ಜಿಲ್ಲೆ): 'ಅಪರಿಚಿತರು ಎರಡು ದಿನಗಳಿಂದ ಫೋನ್ ಕರೆ ಮಾಡಿ ಜೀವ ಬೆದರಿಕೆ ಹಾಕಿದ್ದಾರೆ' ಎಂದು ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ ಮುತಾಲಿಕ್ ಹುಕ್ಕೇರಿ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ದೂರು ದಾಖಲಿಸಿದ್ದಾರೆ.

ಟಿಪ್ಪರ್–ಆಟೊ ಅಪಘಾತ: 7 ಮಹಿಳೆಯರು ಸಾವು

ಚಿಟಗುಪ್ಪ/ಬೀದರ್: ಚಿಟಗುಪ್ಪ ತಾಲ್ಲೂಕಿನ ಬೆಮಳಖೇಡಾ ಗ್ರಾಮದ ಸರ್ಕಾರಿ ಶಾಲೆ ಎದುರು ಶುಕ್ರವಾರ ಸಂಜೆ 6ರ ಸುಮಾರಿಗೆ ಟಿಪ್ಪರ್ ಮತ್ತು ಆಟೊ ನಡುವೆ ಭೀಕರ ಅಪಘಾತ ಸಂಭವಿಸಿ, ಆಟೊದಲ್ಲಿದ್ದ ಏಳು ಮಹಿಳೆಯರು ಮೃತಪಟ್ಟಿದ್ದಾರೆ.

ಚಿಟಗುಪ್ಪ ತಾಲ್ಲೂಕಿನ ಉಡುಬನಳ್ಳಿ ಗ್ರಾಮದ ಪ್ರಭಾವತಿ ದೇವೇಂದ್ರ (36), ಯಾದಮ್ಮ ಅಷ್ಮಿತ (40), ಗುಂಡಮ್ಮಾ ನರಸಿಂಗ (60), ಜಗಮ್ಮಾ ಪ್ರಭು (34), ರುಕ್ಮಿಣಿಬಾಯಿ ಅಮೃತ (60), ಈಶ್ವರಮ್ಮ ಬಕ್ಕಪ್ಪ (55) ಮತ್ತು ಪಾರ್ವತಿ ಮಾರುತಿ (42) ಮೃತರು. ಎಲ್ಲರೂ ಕೃಷಿ ಕಾರ್ಮಿಕರಾಗಿದ್ದು, ಕೆಲಸ ಮುಗಿಸಿಕೊಂಡು ಮನೆಗೆ ಮರಳುವಾಗ ಈ ಅವಘಡ ಸಂಭವಿಸಿದೆ.

ಆಟೊ ಚಾಲಕ ಉಡಬನಳ್ಳಿಯ ಜಗನ್ನಾಥ ಸಿದ್ದಪ್ಪ ನಾಟೇಕಾರ (39) ಮತ್ತು ಟಿಪ್ಪರ್ ಚಾಲಕ ಅಶೋಕ ರಾಜಪ್ಪ ಸೇರಿ 11 ಮಂದಿಗೆ ಗಾಯಗಳಾಗಿವೆ ಎಂದು ಬೆಮಳಖೇಡಾ ಠಾಣೆ ಪೊಲೀಸರು ತಿಳಿಸಿದ್ದಾರೆ.

ಶಾಲೆಯಲ್ಲಿ ಕುಸಿದು ಬಿದ್ದು ವಿದ್ಯಾರ್ಥಿನಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಗಮ್ಮನಗುಡಿ ಠಾಣೆ ವ್ಯಾಪ್ತಿಯಲ್ಲಿರುವ ಆರ್.ಡಿ. ಇಂಟರ್‌ನ್ಯಾಷನಲ್ ಶಾಲೆಯ ವಿದ್ಯಾರ್ಥಿ ನಿಶಿತಾ (9) ಅನುಮಾನಾಸ್ಪದ ರೀತಿಯಲ್ಲಿ ಶುಕ್ರವಾರ ಮೃತಪಟ್ಟಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀ ಸರು ತನಿಖೆ ಮುಂದುವರಿಸಿದ್ದಾರೆ.

'4ನೇ ತರಗತಿಯಲ್ಲಿ ಓದುತ್ತಿದ್ದ ನಿಶಿತಾ, ಶುಕ್ರವಾರ ತರಗತಿಗೆ ಬಂದಿದ್ದಳು. ಮಧ್ಯಾಹ್ನ 1.30ರ ಸುಮಾರಿಗೆ ಏಕಾಏಕಿ ತರಗತಿಯಲ್ಲೇ ಕುಸಿದು ಬಿದ್ದು, ಪ್ರಜ್ಞೆ ಕಳೆದುಕೊಂಡಿದ್ದಳು. ಶಾಲೆಯ ಶಿಕ್ಷಕರೇ ನಿಶಿತಾ ಅವಳನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ್ದ ವೈದ್ಯರು, ಮೃತಪಟ್ಟಿರುವುದಾಗಿ ಹೇಳಿದರು' ಎಂದು ಪೊಲೀಸರು ತಿಳಿಸಿದರು.

'ಜಾಲಹಳ್ಳಿ ರಾಮಚಂದ್ರಾಪುರದ ದೊಡ್ಡಚೆನ್ನಪ್ಪ ಲೇಔಟ್ ನಿವಾಸಿ ನಾಗೇಂದ್ರ- ಸರಸ್ವತಿ ದಂಪತಿ ಮಗಳಾಗಿದ್ದ ನಿಶಿತಾ ಸಾವಿನಲ್ಲಿ ಅನುಮಾನವಿದೆ. ತಂದೆ ನೀಡಿರುವ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ಶಿಕ್ಷಕರೊಬ್ಬರು ಬಾಲಕಿಗೆ ಕಿರುಕುಳ ನೀಡಿದ್ದ ಬಗ್ಗೆ ಮಾಹಿತಿಯೂ ಇದೆ. ವಿಚಾರಣೆ ಬಳಿಕ ಸತ್ಯಾಂಶ ತಿಳಿಯಬೇಕಿದೆ' ಎಂದೂ ಪೊಲೀಸರು ಹೇಳಿದರು.

ಪ್ರತ್ಯೇಕ ಪ್ರಕರಣ: 13 ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ₹ 6 ಲಕ್ಷ ಮೌಲ್ಯದ 13 ವಾಹನ ಜಪ್ತಿ ಮಾಡಿದ್ದಾರೆ.

'ಜೆ.ಸಿ. ನಗರ ಹಾಗೂ ಗೋವಿಂದರಾಜನಗರ ಠಾಣೆ ಪೊಲೀಸರು ಪ್ರತ್ಯೇಕ ಕಾರ್ಯಾಚರಣೆ ನಡೆಸಿದ್ದರು. ಪಟ್ಟೇಗಾರಪಾಳ್ಯದ ನಿಹಾಲ್ ರಾಜ್ ಅಲಿಯಾಸ್ ರಾಜು (20), ಉಲ್ಲಾಳ ಉಪನಗರದ ಪಿ. ಅನಂತ್ ಅಲಿಯಾಸ್ ತಮಿಳ್ (18) ಸೇರಿ ಮೂವರನ್ನು ಬಂಧಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

'ಅಶೋಕನಗರ, ಬಾಣಸವಾಡಿ, ಕೆ.ಆರ್.ಪುರ, ಮಾಗಡಿ ರಸ್ತೆ, ಬ್ಯಾಟರಾಯನಪುರ, ಸುಬ್ರಮಣ್ಯನಗರ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ವಾಹನಗಳು ಕದ್ದಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿದರು.

ಅಪರಾಧ ಸುದ್ದಿ

ಮುಜರಾಯಿ ಇಲಾಖೆಗೆ ಸೇರಿದ ದೇಗುಲ ಸಮಿತಿ ವಿರುದ್ಧ ತಹಶೀಲ್ದಾರ್‌ಗೆ ದೂರು

ಪರಿಶಿಷ್ಟರಿಗೆ ಕಲ್ಯಾಣ ಮಂಟಪ ನಿರಾಕರಣೆ

ಪ್ರಜಾವಾಣಿ ವಾರ್ತೆ

ಗುಡಿಬಂಡೆ (ಚಿಕ್ಕಬಳ್ಳಾಪುರ ಜಿಲ್ಲೆ): ಮುಜರಾಯಿ ಇಲಾಖೆಗೆ ಸೇರಿದ ಪಟ್ಟಣದ ಲಕ್ಷ್ಮಿವೆಂಕಟರಮಣಸ್ವಾಮಿ ದೇವಾಲಯದ ಕಲ್ಯಾಣ ಮಂಟಪವನ್ನು ಪರಿಶಿಷ್ಟ ಜಾತಿಯವರ ವಿವಾಹಕ್ಕೆ ನೀಡಲು ನಿರಾಕರಿಸಿರುವುದು ಗೊತ್ತಾಗಿದೆ.

ತಾಲ್ಲೂಕಿನ ಬ್ರಾಹ್ಮಣರಹಳ್ಳಿಯ ಪರಿಶಿಷ್ಟ ಜಾತಿಗೆ ಸೇರಿದ ವೆಂಕಟರಾಯಪ್ಪ ಅವರ ಪುತ್ರಿ ವೆಂಕಟಲಕ್ಷ್ಮಿ ಮತ್ತು ಬಾಗೇಪಲ್ಲಿಯ ಮಹೇಶ್ ಎಂಬುವರ ವಿವಾಹ ನ. 3ರಂದು ನಿಶ್ಚಯವಾಗಿತ್ತು. ವಿವಾಹಕ್ಕೂ 15 ದಿನ ಮುಂಚೆಯೇ ವಧುವಿನ ಸಹೋದರ ಆವುಲಕೊಂಡಪ್ಪ ದೇವಾಲಯ ಸಮಿತಿಯ ಕಾರ್ಯದರ್ಶಿ ಮಾಚಾವಲಹಳ್ಳಿ ವೆಂಕಟರಾಯಪ್ಪ ಅವರ ಬಳಿ ಬಂದು, 'ನನ್ನ ತಂಗಿಯ ವಿವಾಹವಿದ್ದು ದೇಗುಲದ ಕಲ್ಯಾಣ ಮಂಟಪವನ್ನು ಬಾಡಿಗೆಗೆ ನೀಡಿ' ಎಂದು ಕೋರಿದ್ದರು.

3ರಂದು ಬೇರೊಂದು ವಿವಾಹಕ್ಕೆ ಕಲ್ಯಾಣ ಮಂಟಪವನ್ನು ಬಾಡಿಗೆಗೆ ನೀಡಲಾಗಿದೆ ಎಂದು ವೆಂಕಟರಾಯಪ್ಪ ತಿಳಿಸಿದ್ದರು. 3ರಂದು ವಧು, ವರ ಹಾಗೂ ಅವರ ಸಂಬಂಧಿಕರು ದೇವಾಲಯದ ಮುಂಭಾಗ ಮದುವೆ ಮಾಡಿಕೊಳ್ಳಲು ಬಂದಿದ್ದರು. ಆಗ ದೇವಾಲಯ ಮತ್ತು ಕಲ್ಯಾಣ ಮಂಟಪಕ್ಕೆ ಬೀಗ ಹಾಕಲಾಗಿತ್ತು. ಯಾವುದೇ ಮದುವೆ ಸಮಾರಂಭ ನಡೆಯುತ್ತಿರಲಿಲ್ಲ. ವಧು-ವರ ಪರಿಶಿಷ್ಟ ಸಮುದಾಯಕ್ಕೆ ಸೇರಿದವರು ಎಂಬ ಹಿನ್ನೆಲೆಯಲ್ಲಿಯೇ ವೆಂಕಟರಾಯಪ್ಪ ಕಲ್ಯಾಣ ಮಂಟಪ ನೀಡಲು ನಿರಾಕರಿಸಿದ್ದಾರೆ ಎನ್ನಲಾಗಿದೆ.

'ನಾವು ಪರಿಶಿಷ್ಟ ಜಾತಿಗೆ ಸೇರಿದ ಕಾರಣದಿಂದ ನಮಗೆ ಕಲ್ಯಾಣ ಮಂಟಪವನ್ನು ಬಾಡಿಗೆಗೆ ನೀಡಲು ನಿರಾಕರಿಸಲಾಗಿದೆ. 3ರಂದು ಯಾವುದೇ ವಿವಾಹ ಇರಲಿಲ್ಲ. ಹೀಗಿದ್ದರೂ ನಮಗೆ ಸುಳ್ಳು ಹೇಳಿದ್ದಾರೆ. ದೇವಾಲಯ ಸಮಿತಿ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಆವುಲಕೊಂಡಪ್ಪ ಅವರು ಗುಡಿಬಂಡೆ ತಹಶೀಲ್ದಾರ್‌ಗೆ ಲಿಖಿತವಾಗಿ ದೂರು ಸಲ್ಲಿಸಿದ್ದಾರೆ.

ಈ ಘಟನೆಗೆ ಆಕ್ರೋಶ ವ್ಯಕ್ತಪಡಿಸಿ ದಲಿತ ಸಂಘರ್ಷ ಸಮಿತಿ ಮುಖಂಡರು ಶುಕ್ರವಾರ ತಹಶೀಲ್ದಾರ್ ಕಚೇರಿ ಮುಂಭಾಗ ಪ್ರತಿಭಟಿಸಿದರು.

'ದೇವಾಲಯ ಮುಜರಾಯಿ ಇಲಾಖೆಗೆ ಸೇರಿದ್ದರೂ ಜಾತಿ ಆಧಾರದಲ್ಲಿ ಕಲ್ಯಾಣ ಮಂಟಪವನ್ನು ನಿರಾಕರಿಸಲಾಗಿದೆ. ದೇಗುಲ ಆಡಳಿತ ಮಂಡಳಿಯನ್ನು ರದ್ದು ಮಾಡಬೇಕು. ಆಡಳಿತಾಧಿಕಾರಿ ನೇಮಿಸಬೇಕು' ಎಂದು ದಲಿತ ಸಂಘರ್ಷ ಸಮಿತಿ ಮುಖಂಡಜಿ.ವಿ.ಗಂಗಪ್ಪಆಗ್ರಹಿಸಿದರು.

'ಈ ವಿಚಾರದಲ್ಲಿ ದೂರು ಬಂದಿದೆ. ದೇವಾಲಯಕ್ಕೆ ಸರ್ಕಾರದಿಂದ ಧರ್ಮದರ್ಶಿ ಮಂಡಳಿ ನೇಮಕವಾಗಿಲ್ಲ. ಗಣ್ಯರು ಸೇರಿ ದೇವಾಲಯದ ಅಭಿವೃದ್ಧಿ ಸಮಿತಿ ರಚಿಸಿಕೊಂಡಿದ್ದಾರೆ. ಕಾರ್ಯದರ್ಶಿ ಮಾಚಾವಲಹಳ್ಳಿ ವೆಂಕಟರಾಯಪ್ಪ ಅವರಿಗೆ ಈ ಬಗ್ಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ಅವರಿಂದ ಮಾಹಿತಿ ಬಂದ ನಂತರ, ತನಿಖೆ ಮಾಡಿ ಕ್ರಮ ಕೈಗೊಳ್ಳಲಾಗುವುದು' ಎಂದು ತಹಶೀಲ್ದಾರ್ ಸಿಗ್ಬತ್ ಉಲ್ಲಾ 'ಪ್ರಜಾವಾಣಿ'ಗೆ ತಿಳಿಸಿದರು.




ಗುಡಿಬಂಡೆ ಪಟ್ಟಣದ ಲಕ್ಷ್ಮಿವೆಂಕಟರಮಣಸ್ವಾಮಿ ದೇವಾಲಯದ ಮುಂಭಾಗ ಪರಿಶಿಷ್ಟ ಜಾತಿಯ ವೆಂಕಟಲಕ್ಷ್ಮಿ ಮತ್ತು ಮಹೇಶ್ ವಿವಾಹ ನಡೆದ ಕ್ಷಣ

ಸೇ ನೋ.. ಟು ಟೂ ಫಿಂಗರ್ ಟೆಸ್ಟಿಂಗ್

ಚೈತ್ರಿಕಾ ನಾಯ್ಕ ಹರ್ಗಿ

ಆಫೀಸ್‌ನಲ್ಲಿ ಬಾಸ್‌ನಿಂದ ಅತ್ಯಾಚಾರಕ್ಕೆ ಒಳಗಾದ ಸಾರಿಕಾ (ಹೆಸರು ಬದಲಿಸಲಾಗಿದೆ) ಸೀದಾ ಏರಿದ್ದು ಪೊಲೀಸ್ ಠಾಣೆಯ ಮೆಟ್ಟಿಲು. ಸಂಬಂಧಪಟ್ಟ ಆರೋಪಿ ವಿರುದ್ಧ ದೂರು ದಾಖಲಿಸುವಾಗ ಮತ್ತದೇ ಮುಜುಗರಕ್ಕೆ ಈಡುಮಾಡುವ ಪ್ರಶ್ನೆಗಳ ಸುರಿಮಳೆ. ಇವನ್ನೆಲ್ಲ ಸಾವರಿಸಿಕೊಂಡು ತನಗಾದ ಅನ್ಯಾಯದ ವಿರುದ್ಧ ದನಿ ಎತ್ತಿ, ಪ್ರಕರಣ ದಾಖಲಿಸಿದವಳಿಗೆ ಆಸ್ಪತ್ರೆಯಲ್ಲಿ ಎದುರಾಗಿದ್ದು 'ಟೂ ಫಿಂಗರ್ ಟೆಸ್ಟಿಂಗ್' ಎನ್ನುವ ದೈಹಿಕ ಹಾಗೂ ಮಾನಸಿಕವಾಗಿ ಘಾಸಿ ಉಂಟುಮಾಡುವ ಪರೀಕ್ಷೆ.

ಅತ್ಯಾಚಾರ ಪ್ರಕರಣದ ಸಂತ್ರಸ್ತೆ ಇಂಥ 'ಪರೀಕ್ಷೆ'ಯಿಂದ ಮಾನಸಿಕ ಆಘಾತಕ್ಕೆ ಒಳಗಾಗುತ್ತಾರೆ. ಇದೊಂದು ಹೀನ ಬಗೆಯ ಕಾನೂನುಬಾಹಿರ ಪರೀಕ್ಷೆ ಎಂದು ಆಗಲೇ ಹಲವು ದೇಶಗಳು ಒಪ್ಪಿಕೊಂಡಿವೆ. ಈ ಪರೀಕ್ಷೆ ತೀರಾ ಅವೈಜ್ಞಾನಿಕವಾಗಿದ್ದು, ಇದನ್ನು ತಡೆಯಬೇಕೆಂಬ ಕೂಗು ನಮ್ಮ ದೇಶದಲ್ಲೂ ಗಟ್ಟಿಯಾಗಿತ್ತು.



ಈಗ ಸುಪ್ರೀಂ ಕೋರ್ಟ್, 'ಈ ಪರೀಕ್ಷೆ ತೀರಾ ಅನಾಗರಿಕ ಹಾಗೂ ಸಂವೇದನಾರಹಿತ' ಎಂದು ಮತ್ತೆ ಚಾಟಿ ಬೀಸಿದೆ. ಹಿಂದೆಯೂ ನ್ಯಾಯಾಲಯ, ಇದನ್ನು ನಿಷೇಧಿಸುವಂತೆ ತೀರ್ಪು ನೀಡಿತ್ತು. ಆದರೆ, ನಮ್ಮ ದೇಶದ ಜನಸಂಖ್ಯೆ ಎಷ್ಟು ದೊಡ್ಡದಿದೆಯೋ, ಅದರ ಮರೆವು ಅಷ್ಟೆ ದೊಡ್ಡದಿದೆ. ಅದರಲ್ಲಿಯೂ ಹೆಣ್ಣುಮಕ್ಕಳ ವಿಚಾರದಲ್ಲಿ ಆಡಳಿತಗಾರರಿಗೂ, ಕಾನೂನುಪಾಲಕರಿಗೂ ಸದಾ ಜಾಣ ಮರೆವು. ಇದು ಅವರ ಸಂವೇದನಾಶೀಲತೆಯ ಕೊರತೆಯನ್ನು ತೋರಿಸುತ್ತದೆ.

ಮಹಿಳಾ ಹಕ್ಕುಗಳು ಮತ್ತು ಸಮಾನತೆ ಕುರಿತು ನ್ಯಾಯಾಲಯಗಳು ಏನು ಹೇಳುತ್ತವೆಯೊ ಅವು ಕಾನೂನು ಪುಸ್ತಕದಲ್ಲಿ ಸೇರ್ಪಡೆಯಾಗುವಷ್ಟು ವೇಗದಲ್ಲಿ ಜಾರಿಗೆ ಬರುವುದಿಲ್ಲ. ಜನರು ಪಿತೃಪ್ರಧಾನ ವ್ಯವಸ್ಥೆಯ ಆಲೋಚನೆಗಳಿಂದ ಮುಕ್ತರಾಗಲು, ಮಹಿಳಾ ಘನತೆಯನ್ನು ಎತ್ತಿ ತೋರುವ ಕಾನೂನುಗಳನ್ನು ಒಪ್ಪಿಕೊಳ್ಳಲು ಸಮಯವೇ ಹಿಡಿಯುತ್ತದೆ.

ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಮಹಿಳೆ ಮತ್ತು ಮಕ್ಕಳ ಮೇಲೆ ನಡೆಸುವ ಟೂ ಫಿಂಗರ್ ಟೆಸ್ಟಿಂಗ್ ಕೂಡ ಇದಕ್ಕೊಂದು ಉದಾಹರಣೆ.

ಏನಿದು ಟೂ ಫಿಂಗರ್ ಟೆಸ್ಟಿಂಗ್?

ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸಾಕ್ಷ್ಯಕ್ಕಾಗಿ ಯೋನಿಯ ಸ್ನಾಯುಗಳ ಸಡಿಲತೆಯನ್ನು ಅರಿಯಲು ಸಂತ್ರಸ್ತೆಯ ಗುಪ್ತಾಂಗದೊಳಗೆ ಬೆರಳುಗಳನ್ನು ಹಾಕಿ 'ಕನ್ಯಾಪೊರೆ'ಯನ್ನು ಪರೀಕ್ಷಿಸುವುದನ್ನು 'ಟೂ ಫಿಂಗರ್ ಟೆಸ್ಟ್' ಎನ್ನುತ್ತಾರೆ.

ಸುಪ್ರೀಂಕೋರ್ಟ್ ಏನು ಹೇಳುತ್ತೆ?

ಸಂವೇದನಾಶೀಲತೆಯ ಕೊರತೆ ಹಾಗೂ ಪಿತೃಪ್ರಧಾನ ಆಲೋಚನೆಗಳಿಂದ ಈಗಲೂ ನಡೆಯುತ್ತಿರುವ 'ಟೂ ಫಿಂಗರ್ ಟೆಸ್ಟಿಂಗ್'ಗೆ ಸುಪ್ರೀಂ ಕೋರ್ಟ್ ನ್ಯಾ.ಡಿ.ವೈ. ಚಂದ್ರಚೂಡ್ ಮತ್ತು ನ್ಯಾ.ಹಿಮಾ ಕೊಹ್ಲಿ ಅವರನ್ನು ಒಳಗೊಂಡ ನ್ಯಾಯಪೀಠ ಇದೊಂದು ಕಾನೂನುಬಾಹಿರ ಟೆಸ್ಟಿಂಗ್ ಎಂಬುದನ್ನು ಮತ್ತೊಮ್ಮೆ ಗಟ್ಟಿಯಾಗಿ ಪುನರುಚ್ಚರಿಸಿದೆ.

ಹೆಣ್ಣುಮಕ್ಕಳ ಘನತೆಗೆ ಪೆಟ್ಟು ತರುವಂತಹ, ಲಿಂಗಭೇದವನ್ನು ಪ್ರತಿಪಾದಿಸುವ ಈ ಪರೀಕ್ಷೆಗೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ. ಜತೆಗೆ ಕಾರ್ಯಾಂಗದ ಹೊಣೆಗೇಡಿತನಕ್ಕೆ ಚುರುಕು ಮುಟ್ಟಿಸಿದೆ. ಯಾರೇ ಈ ಪರೀಕ್ಷೆ ನಡೆಸಿದರೂ ದುರ್ವರ್ತನೆ ಆರೋಪದಡಿ ಅವರನ್ನು ದೋಷಿ ಎಂದು ಪರಿಗಣಿಸಿ, ಶಿಕ್ಷಾರ್ಹ ಪ್ರಕರಣವಾಗಿಸಬೇಕು ಎಂದು ತಾಕೀತು ಮಾಡಿರುವುದು ಸರಿಯಾಗಿದೆ.

ಈ ನಿಷೇಧ ಇದೇ ಮೊದಲಲ್ಲ

ಮಹಿಳೆಯರ ಆತ್ಮಗೌರವಕ್ಕೆ ಧಕ್ಕೆ ಉಂಟುಮಾಡುವ ಈ ಟೂ ಫಿಂಗರ್ ಟೆಸ್ಟಿಂಗ್‌ಗೆ ಸುಪ್ರೀಂಕೋರ್ಟ್ 2013ರಲ್ಲಿಯೇ ನಿಷೇಧ ಹೇರಿತ್ತು. ಆದಾಗ್ಯೂ ಕಾರ್ಯಾಂಗ, ವೈದ್ಯರು ಮತ್ತು ಜನರ ಸಂವೇದನೆ ಕೊರತೆಯಿಂದ ಚಾಲ್ತಿಯಲ್ಲಿದ್ದ ಟೂ ಫಿಂಗರ್ ಟೆಸ್ಟ್‌ಗಳು ನಾಗರಿಕತೆಯನ್ನು ಅಣಕಿಸುವಂತಿವೆ.

ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಆ ಕ್ಷಣಕ್ಕೆ ದಾಖಲಾಗುವ ದೂರುಗಳ ಸಂಖ್ಯೆಗಿಂತ, ಘಟನೆ ನಡೆದ ಕೆಲ ದಿನಗಳು, ಕೆಲವೊಮ್ಮೆ ವರ್ಷಗಳ ನಂತರ ದಾಖಲಾಗುವ ದೂರುಗಳ ಸಂಖ್ಯೆ ಹೆಚ್ಚಿದೆ. ಇದಕ್ಕೆ ಕಾರಣ ಹೆಣ್ಣಿನ ಹಿಂಜರಿಕೆ ಮತ್ತು ಆಕೆಯನ್ನು ತಪ್ಪಿತಸ್ಥಳಾಗಿ ನೋಡುವ ವ್ಯವಸ್ಥೆ. ಪ್ರಕರಣ ನಡೆದ ಕೆಲ ಗಂಟೆಗಳಲ್ಲಿ ದಾಖಲಾದರೂ ಮೂತ್ರ ವಿಸರ್ಜನೆ, ಸ್ನಾನ ಮಾಡುವುದರಿಂದ ಸಾಕ್ಷ್ಯಗಳು ಸ್ವಾಬ್ ಟೆಸ್ಟ್‌ಗೂ ಸಿಗದಂತೆ ನೈಸರ್ಗಿಕವಾಗಿ ನಾಶವಾಗುತ್ತವೆ. ಆದ್ದರಿಂದ ಇಂಥ ಪ್ರಕರಣದಲ್ಲಿ ದೌರ್ಜನ್ಯಕ್ಕೊಳಗಾದವರ ಹೇಳಿಕೆ ತುಂಬ ಮುಖ್ಯ. ಪೋಕ್ಸೊ ಕಾಯ್ದೆ ಕೂಡ ಇದನ್ನೆ ಹೇಳುತ್ತದೆ.

ಲೈಂಗಿಕ ಸ್ವಾತಂತ್ರ್ಯಕ್ಕೆ ಧಕ್ಕೆ

ಅತಿ ಸೂಕ್ಷ್ಮ ಎನಿಸುವ ಅತ್ಯಾಚಾರ ಪ್ರಕರಣಗಳಲ್ಲಿ ಟೂ ಫಿಂಗರ್ ಟೆಸ್ಟಿಂಗ್ ನಡೆಸುವುದು ಹೆಣ್ಣಿನ ಲೈಂಗಿಕ ಸ್ವಾತಂತ್ರ್ಯವನ್ನೇ ಪ್ರಶ್ನಿಸುವ ಮತ್ತು ಚಾರಿತ್ರ್ಯವಧೆಗೆ ಕಾರಣವಾಗುವ ದುರ್ಮಾರ್ಗವಾಗಿಯೇ ಕಾಣುತ್ತದೆ. ಲೈಂಗಿಕ ದೌರ್ಜನ್ಯ ಪ್ರಕರಣ ಕೇವಲ ಚಿಕ್ಕ ಮಕ್ಕಳ ಮೇಲೆ ನಡೆಯುತ್ತವೆ ಎನ್ನುವಂತೆ ಇಲ್ಲ. ಲೈಂಗಿಕವಾಗಿ ಸಕ್ರಿಯವಾಗಿರುವ ಮಹಿಳೆಯರೂ, ಜತೆಗೆ ವಯೋವೃದ್ಧೆಯರ ಮೇಲೂ ಅತ್ಯಾಚಾರ ನಡೆದ ಸಾಕಷ್ಟು ಉದಾಹರಣೆಗಳಿವೆ. ಹೀಗಿರುವಾಗ ಕನ್ಯಾಪೊರೆಯನ್ನು ಪರೀಕ್ಷಿಸುವ ಧೋರಣೆಯೇ ಸರಿಯಲ್ಲ.

ದೌರ್ಜನ್ಯಕ್ಕೊಳಗಾದವರ ಮೇಲೆ ನಡೆಸುವ ಈ ಪರೀಕ್ಷೆ ಮಹಿಳೆಯ ಮೇಲೆ ಮಾನಸಿಕ ಮತ್ತು ದೈಹಿಕವಾಗಿ ನಡೆಸುವ ಮತ್ತೊಂದು ಆಕ್ರಮಣಕಾರಿ ಕ್ರಿಯೆ. ಇದನ್ನು ಸುಪ್ರೀಂ ಕೋರ್ಟ್ ಸಹ ತನ್ನ ಆದೇಶದಲ್ಲಿ ಹೇಳಿದೆ. ಲೈಂಗಿಕ ದೌರ್ಜನ್ಯ, ಅತ್ಯಾಚಾರ ಪ್ರಕರಣಗಳನ್ನು ಸುದ್ದಿ ಮಾಡುವಾಗ, ತನಿಖೆ ನಡೆಸುವಾಗ, ವಿಚಾರಣೆ ನಡೆಸುವಾಗ ಕಾನೂನು ಪಾಲನೆ ಜತೆ ಸಂವೇದನೆಯಿಂದ ವರ್ತಿಸುವುದು ಬಹಳ ಮುಖ್ಯ.

> ಅತಿ ಸೂಕ್ಷ್ಮ ಎನಿಸುವ ಅತ್ಯಾಚಾರ ಪ್ರಕರಣಗಳಲ್ಲಿ 'ಟೂ ಫಿಂಗರ್ ಟೆಸ್ಟಿಂಗ್' ನಡೆಸುವುದು ಹೆಣ್ಣಿನ ಲೈಂಗಿಕ ಸ್ವಾತಂತ್ರ್ಯವನ್ನೇ ಪ್ರಶ್ನಿಸುವ ಮತ್ತು ಚಾರಿತ್ರ್ಯವಧೆಗೆ ಕಾರಣವಾಗುವ ದುರ್ಮಾರ್ಗವಾಗಿಯೇ ಕಾಣುತ್ತದೆ.



ಪರೀಕ್ಷೆಯೇ ಅವೈಜ್ಞಾನಿಕ

ಹೆಣ್ಣುಮಕ್ಕಳಲ್ಲಿ ಕ್ರೀಡೆ, ಜಿಮ್, ಸೈಕ್ಲಿಂಗ್ ಸೇರಿ ದೈನಂದಿನ ಚಟುವಟಿಕೆ ವೇಳೆ ಕನ್ಯಾಪೊರೆ ಹಾನಿಯಾಗುವ ಸಂದರ್ಭಗಳಿರುತ್ತವೆ. ಹಾಗಾಗಿ ಈ ಪರೀಕ್ಷೆಯೇ ಅವೈಜ್ಞಾನಿಕ. ಇದೇ ಕಾರಣಕ್ಕಾಗಿ ಈ ಟೆಸ್ಟಿಂಗ್ ಅನ್ನು ಸಾಕ್ಷ್ಯವೆಂದು ಪರಿಗಣಿಸುವುದು ಕೂಡ ತಪ್ಪಾಗುತ್ತದೆ.

ಹೆಣ್ಣಿನ ಆತ್ಮಗೌರವವನ್ನು ಕುಗ್ಗಿಸುವ ಲೈಂಗಿಕ ಸ್ವಾತಂತ್ರ್ಯವನ್ನು ಪ್ರಶ್ನಿಸುವ ಈ ಪರೀಕ್ಷೆ ಪಿತೃಪ್ರಧಾನ ಆಲೋಚನೆಯಿಂದ ರೂಪುಗೊಂಡಿದೆಯಷ್ಟೆ.

ಡಾ. ಎಚ್.ಎಸ್. ಅನುಪಮಾ, ವೈದ್ಯೆ

ಆತಂಕದ ಚಕ್ರವ್ಯೂಹದಿಂದ ಹೊರಬರುವುದು ಹೇಗೆ?



• ನನ್ನ ವಯಸ್ಸು 44, ಪತ್ನಿಯದು 39. ಮದುವೆಯಾಗಿ ಹನ್ನೆರಡು ವರ್ಷವಾಗಿದೆ. ನನ್ನ ಸಮಸ್ಯೆ, ಸಂಭೋಗದಲ್ಲಿ ತೊಡಗುತ್ತಿದ್ದಂತೆ ವೀರ್ಯ ಸ್ಖಲನವಾಗುತ್ತದೆ. ಇದರಿಂದಾಗಿ ಪತ್ನಿಯನ್ನು ತೃಪ್ತಿಪಡಿಸಲಾಗದೆ ಖಿನ್ನತೆಗೆ ಒಳಗಾಗಿದ್ದೇನೆ. ಈ ಸಮಸ್ಯೆಯಿಂದ ಹೊರಬರುವ ಪರಿಹಾರ ತಿಳಿಸಿ?

ಹೆಸರು ಊರು ತಿಳಿಸಿಲ್ಲ.

ಇದು ಸಮಸ್ಯೆಯಲ್ಲ. ಪದೇಪದೇ ಆದ ಇಂತಹ ಅನುಭವದಿಂದಾಗಿ ನೀವು ಸಿಲುಕಿರುವ ಚಕ್ರವ್ಯೂಹ. ಮಲಗುವ ಕೋಣೆಯೊಳಗೆ ಹೋಗುವಷ್ಟರಲ್ಲಿಯೇ ನಿಮ್ಮಲ್ಲಿ ಸೋಲಿನ ಭಯ ಹಿಂಜರಿಕೆಗಳು ಆವರಿಸಿಕೊಳ್ಳುತ್ತವೆ. ಇದೇ ಮನಸ್ಥಿತಿಯಲ್ಲಿದ್ದಾಗ ಪತ್ನಿಯ ಜೊತೆಗೆ ಮಾನಸಿಕ ಸಂಪರ್ಕವನ್ನು ಕಳೆದುಕೊಳ್ಳುತ್ತೀರಿ. ಆತಂಕ್ಕಕ್ಕೆ ಒಳಗಾಗಿರುವ ದೇಹ ಮನಸ್ಸುಗಳು ನಿಮ್ಮ ಹಿಡಿತವನ್ನು ಮೀರಿದಾಗ ಶೀಘ್ರಸ್ಖಲನವಾಗುತ್ತದೆ. ಹೀಗೆ ಹಳೆಯ ಅನುಭವ ಪುನರಾವರ್ತನೆಯಾಗಿ ಮತ್ತೆ ಸೋಲಿನ ಭಯವನ್ನು ಹೆಚ್ಚಿಸುತ್ತವೆ. ಇದು ನಿಮ್ಮ ಕಹಿ ಅನುಭವದ ಚಕ್ರವ್ಯೂಹವಿರಬೇಕಲ್ಲವೇ?

ಇದನ್ನು ಹಂತಹಂತವಾಗಿ ನಿಭಾಯಿಸಲು ಕಲಿಯಬಹುದು. ಮೊದಲನೆಯದಾಗಿ ಮುಂದಿನ ಒಂದು ತಿಂಗಳು ಸಂಭೋಗ ಮಾಡುವುದನ್ನು ನಿಲ್ಲಿಸಿ ಪತ್ನಿಯ ಸಾಮಿಪ್ಯ ಸುಖವನ್ನು ಆನಂದಿಸಿ. ಇದರ ಕುರಿತ ಪತ್ನಿಯ ಜೊತೆ ಮಾತನಾಡಿ ಅವರ ಸಹಾಯ ಸಹಕಾರವನ್ನು ಪಡೆದುಕೊಳ್ಳಿ. ಸಂಭೋಗದ ಉದ್ದೇಶವಿಲ್ಲದೆ ಇಬ್ಬರೂ ಸ್ಪರ್ಶಸುಖವನ್ನು ಆನಂದಿಸುತ್ತಾ ಮಾನಸಿಕವಾಗಿ ಹತ್ತಿರವಾದಾಗ ನಿಮ್ಮ ದೇಹ ಹಗುರಾಗುವುದನ್ನು ಕಲಿಯುತ್ತದೆ. ಮುನ್ನಲಿವಿನಲ್ಲಿ ಉದ್ರೇಕವಾಗಿದ್ದರೂ ಒಂದು ತಿಂಗಳು ಸಂಭೋಗವನ್ನು ಮಾಡಬೇಡಿ. ತೀವ್ರ ಲೈಂಗಿಕ ಒತ್ತಡವಿದ್ದರೆ ಇಬ್ಬರೂ ಹಸ್ತಮೈಥುನದಿಂದ ಸುಖಿಸಬಹುದು.



ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

ಎರಡನೆಯ ಹಂತದಲ್ಲಿ ನಿಮ್ಮ ಹಳೆಯ ಅನುಭವಗಳನ್ನು ವಿಶ್ಲೇಷಣೆ ಮಾಡಿಕೊಳ್ಳಿ. ಪತ್ನಿಯ ಹತ್ತಿರ ಹೋಗುವ ನಿರೀಕ್ಷೆಯ ನಿಮ್ಮಲ್ಲಿ ಆತಂಕ ಹಿಂಜರಿಕೆಗಳ ಸೂಚನೆ ನೀಡುವುದನ್ನು ಗಮನಿಸಿ. ಆತಂಕದಿಂದ ಓಡಿಹೋಗದೆ ನಿಮ್ಮ ದೇಹದ ಯಾವ್ಯಾವ ಭಾಗಗಳು ಬಿಗಿಯಾಗುತ್ತಿವೆ ಎಂದು ಗಮನಿಸಿ. ನಿಧಾನವಾಗಿ ಉಸಿರಾಡುತ್ತಾ ದೇಹವನ್ನು ಸಡಿಲಬಿಡುವ ಅಭ್ಯಾಸ ಮಾಡಿಕೊಳ್ಳಿ. ಹಾಗೆಯೇ ಹಳೆಯ ಸೋಲುಗಳು ನಿಮ್ಮಲ್ಲಿ ಮೂಡಿಸಿರುವ ಹತಾಶೆ ಕೀಳರಿಮೆಗಳನ್ನು ಗಮನಿಸಿ. ತಕ್ಷಣಕ್ಕೆ ಯಾವುದೇ ಪರಿಹಾರ ಹುಡುಕುವ ಪ್ರಯತ್ನ ಮಾಡದೆ ನಿಮ್ಮ ಅನುಭವದ ಆಳಕ್ಕೆ ಹೋಗಲು ಪ್ರಯತ್ನಿಸಿ. ನಿಮ್ಮ ಕುರಿತಾಗಿ ನಿಮಗೆ ಹೊಸಹೊಸ ತಿಳಿವಳಿಕೆ ಮೂಡುತ್ತದೆ. ನಿಮ್ಮ ಎಲ್ಲಾ ಅನುಭವಗಳನ್ನು ಒಪ್ಪಿಕೊಳ್ಳುತ್ತಲೇ ಹೊಸದಾರಿಗಳನ್ನು ಹುಡುಕುವ ಪ್ರಯತ್ನ ಮಾಡಿ.

ಮೂರನೆಯದಾಗಿ ಪತ್ನಿಯ ಜೊತೆಗೆ ನಿಮ್ಮ ಸಂಬಂಧವನ್ನು ಹೆಚ್ಚು ಆತ್ಮೀಯವಾಗಿ ಮಾಡಿಕೊಳ್ಳುವುದು ಹೇಗೆ ಎಂದು ಚರ್ಚೆಮಾಡಿ. ಸಂಬಂಧಗಳು ಯಾಂತ್ರಿಕವಾಗಿದ್ದಾಗ ಸೋಲಿನ ಭಯ ಹೆಚ್ಚಾಗಿ ಕಾಡುತ್ತದೆ. ಶೀಘ್ರಸ್ಖಲನ ದಿಂದಾಗಿ ಇಬ್ಬರಲ್ಲೂ ಇರುವ ಬೇಸರ ಹತಾಶೆಗಳನ್ನು ಮುಕ್ತವಾಗಿ ಹಂಚಿಕೊಳ್ಳಿ. ನಂತರ ಇಬ್ಬರೂ ಸೇರಿ ಪರಿಹಾರಗಳನ್ನು ಹುಡುಕುವ ಪ್ರಯತ್ನ ಮಾಡಿ. ಲೈಂಗಿಕತೆ ಎಂದರೆ ಇಬ್ಬರೂ ಹಂಚಿಕೊಂಡು ಸುಖಪಡುವುದು.

ಕೊನೆಯದಾಗಿ ಒಂದು ತಿಂಗಳ ನಂತರ ಮತ್ತೆ ನೀವಿಬ್ಬರೂ(ಪತಿ-ಪತ್ನಿಯರು)ಸೇರಲು ನಿರ್ಧರಿಸಿದಾಗ ನಿಮ್ಮ ಹಳೆಯ ಹಿಂಜರಿಕೆ ಭಯಗಳು ಮತ್ತೆ ಹಿಂದಿರುಗುವ ಸಾಧ್ಯತೆಗಳಿರುತ್ತವೆ ಎಂದು ನೆನಪಿಡಿ. ಹಾಗಾಗಿ ನಿಮ್ಮ ದೇಹವನ್ನು ಆಗಾಗ ಗಮನಿಸುತ್ತಾ ಸಡಿಲಬಿಡುವ ಅಭ್ಯಾಸ ಮಾಡಿಕೊಳ್ಳಿ. ಆತುರವಿಲ್ಲದೆ ಪತ್ನಿಯ ಜೊತೆಗೆ ಇರುವ ಪ್ರತಿಕ್ಷಣವನ್ನೂ ಆನಂದಿಸುತ್ತಾ ಮುಂದುವರೆಯಿರಿ. ಸ್ಖಲನದ ಒತ್ತಡವಿದ್ದಾಗಲೂ ಪತ್ನಿಯ ಸಾಂಗತ್ಯವನ್ನು ಸುಖಿಸುತ್ತಲೇ ದೇಹವನ್ನು ಸಡಿಲಬಿಡಿ. ಹಾಗೊಮ್ಮೆ ಹಳೆಯ ಅನುಭವ ಪುನರಾವರ್ತನೆ ಯಾದರೆ ಪತ್ನಿಯಿಂದ ದೂರಹೋಗದೆ ಅವರಿಗೆ ಬೇರೆ ರೀತಿಯಲ್ಲಿ ತೃಪ್ತಿ ನೀಡುವುದು ಸಾಧ್ಯವೇ ಎಂದು ಕೇಳಿ.

ಹೀಗೆ ಚಕ್ರವ್ಯೂಹದಿಂದ ಬಿಡಿಸಿಕೊಳ್ಳಲು ನಾಲ್ಕಾರು ತಿಂಗಳ ಸಮಯ ಬೇಕಾಗಬಹುದು. ನಿಧಾನವಾಗಿ ಪ್ರಯತ್ನಿಸಿ. ಮಧ್ಯೆಮಧ್ಯೆ ಹಳೆಯ ಅನುಭವಗಳು ಆಗುವುದು ಸಹಜ ಎಂದು ನೆನಪಿಡಿ.

ಏನಾದ್ರೂ ಕೇಳ್ಬೋದು.... ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಚಳಿಗಾಲಕ್ಕೆ ಚರ್ಮದ ಆರೈಕೆ



ಸಾಂದರ್ಭಿಕ ಚಿತ್ರ

ಚಳಿಗಾಲದಲ್ಲಿ ದೇಹದ ತ್ವಚೆ ಬಿರಿಯಲು ಶುರುವಾಗುತ್ತದೆ. ಕ್ರಮೇಣ ಕಾಂತಿಹೀನವಾಗುತ್ತದೆ. ಪೌಷ್ಟಿಕ ಆಹಾರದ ಜೊತೆಗೆ, ನಿಯಮಿತವಾದ ಅಭ್ಯಂಜನದಂತಹ ಆರೈಕೆಯಿಂದ ಚರ್ಮದ ಆರೋಗ್ಯ ಕಾಪಾಡಿಕೊಳ್ಳಬಹುದು.

ಖುತ ರಾಘವಿ

ಸೌಂದರ್ಯ

ಚಳಿಗಾಲ ಬಂದಾಯ್ತು. ಚರ್ಮವನ್ನು ನಾಜೂಕಾಗಿ ನೋಡಿಕೊಳ್ಳದೇ ಹೋದರೆ ಚಳಿಗೆ ಬಿರುಕು ಬಿಟ್ಟ ಅನುಭವ ಆಗುತ್ತದೆ. ಚರ್ಮ ಹೊಳಪಾಗಿ, ನುಣುಪಾಗಿದ್ದಷ್ಟು ಅಂದ ಹೆಚ್ಚುತ್ತದೆ. ಸೂಕ್ಷ್ಮ ಅಂಗವೆನಿಸಿಕೊಂಡ ಚರ್ಮದ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಕೆಲವು ಮನೆಮದ್ದುಗಳು ಉಪಯೋಗಕಾರಿ.

ಬಿಸಿ ನೀರಿನ ಸೇವನೆ

ಬಿಸಿ ಅಥವಾ ಉಗುರು ಬೆಚ್ಚಗಿನ ನೀರನ್ನು ಬೆಳಿಗ್ಗೆ ಖಾಲಿ ಹೊಟ್ಟೆಗೆ ಕುಡಿಯುವ ಅಭ್ಯಾಸ ಇಟ್ಟುಕೊಳ್ಳಿ. ಇದರಿಂದ ರಕ್ತದ ಸಂಚಾರ ಸುಗಮವಾಗಿ ನಡೆಯುತ್ತದೆ. ಸಾಧ್ಯವಾದಷ್ಟು ಬಿಸಿ ಅಥವಾ ಬೆಚ್ಚಗಿನ ನೀರನ್ನು ಆಗಾಗ್ಗೆ ಕುಡಿಯುವ ಅಭ್ಯಾಸ ರೂಢಿಸಿಕೊಳ್ಳಿ. ನಿತ್ಯ ಕನಿಷ್ಠ 6ರಿಂದ 8 ಲೋಟ ಬಿಸಿ ನೀರು ಕುಡಿಯಿರಿ. ಮುಖದ ಕಾಂತಿಗೆ ನೀರು ಸೇವನೆ ಅವಶ್ಯ. ಯಾವುದೇ ರಾಸಾಯನಿಕವಿಲ್ಲದ ಶುದ್ಧ ನೀರು ಚರ್ಮದ ಕಾಂತಿಯನ್ನು ಹೆಚ್ಚು ಮಾಡುವುದಲ್ಲದೇ, ಆರೋಗ್ಯಯುತವಾಗಿ ಇಡುವುದರಲ್ಲಿ ಸಹಕರಿಸುತ್ತದೆ.

ಪ್ರೋಟಿನ್‌ಯುಕ್ತ ಆಹಾರ

ಪ್ರೊಟೀನ್, ವಿಟಮಿನ್ ಹೇರಳವಾಗಿರುವ ತರಕಾರಿ, ಸೊಪ್ಪು, ಮೀನಿನ ಖಾದ್ಯ ಸೇವನೆಯಿಂದ ಚರ್ಮವು ಹೊಳಪಿನಿಂದ ಕೂಡಿರುತ್ತದೆ. ಸರಿಯಾದ ಸಮಯಕ್ಕೆ, ಸರಿಯಾದ ಪ್ರಮಾಣದಲ್ಲಿ ಊಟ ಹಾಗೂ ನಿದ್ದೆಯನ್ನು ಮಾಡುವುದು ಅವಶ್ಯಕ. ಇದು ಕೂಡ ಚರ್ಮ ಕಾಂತಿಯುಕ್ತವಾಗಿರಲು ಸಹಕರಿಸುತ್ತದೆ. ಸಂಸ್ಕರಿಸಿಟ್ಟ ಹಣ್ಣಿನ ರಸದ ಸೇವನೆ, ಹಾಲಿನ ಉತ್ಪನ್ನಗಳು, ಕೇಕ್, ಪೇಸ್ಟ್ರಿ, ಕರಿದ ಪದಾರ್ಥಗಳು, ಜಂಕ್ ಫುಡ್ ಹಾಗೂ ಸಂಸ್ಕರಿತ ಹಿಟ್ಟಿನ ಸೇವನೆಯಿಂದ ಸಂಪೂರ್ಣವಾಗಿ ದೂರವಿರಿ.

ಅರಿಶಿನ ಹೆಚ್ಚು ಬಳಸಿ

ಚಳಿಗಾಲದಲ್ಲಿ ಅರಿಶಿನ ಬಳಕೆ ಹೆಚ್ಚಿರಲಿ. ಜೇನು ತುಪ್ಪ, ಹಾಲು (ಕೆನೆಭರಿತ) ಹಾಗೂ ಅರಿಶಿನವನ್ನು ಬೆರೆಸಿದ ಮಿಶ್ರಣವನ್ನು ವಾರದಲ್ಲಿ ಒಮ್ಮೆ ಮುಖ ಹಾಗೂ ಕುತ್ತಿಗೆ ಸುತ್ತ ಹಚ್ಚಿ. ಇದು ಮೊಡವೆಯಿಂದ ಉಂಟಾದ ಕಲೆಯನ್ನು ನಿವಾರಣೆ ಮಾಡುತ್ತದೆ. ಜತೆಗೆ ಬಿಸಿಲಿನಿಂದ ಮುಖದ ಕಾಂತಿ ಕ್ಷೀಣಿಸಿದ್ದರೆ ಅದನ್ನು ನಿವಾರಿಸುವಲ್ಲಿ ಸಹಾಯ ಮಾಡುತ್ತದೆ. ಆದಷ್ಟು ಅರಿಶಿನಪುಡಿಗಿಂತಲೂ ಅರಿಶಿನ ಕೊಂಬಿನ ಬಳಕೆ ಮಾಡಿ. ಅದನ್ನು ಶುದ್ಧವಾದ ಕಲ್ಲಿನ ಮೇಲೆ ತೇಯ್ದು ಹಚ್ಚಿಕೊಳ್ಳುವುದು ಉತ್ತಮ.

ನೈಸರ್ಗಿಕ ಬಾಡಿಲೋಷನ್ ಹಚ್ಚಿ

ತಂಪಾದ ವಾತಾವರಣಕ್ಕೆ ಚರ್ಮವನ್ನು ಒಡ್ಡುವುದರಿಂದ ಚರ್ಮದಲ್ಲಿನ ತೇವಾಂಶ ಕಡಿಮೆಯಾಗುವುದಲ್ಲದೇ ಬಿರುಕಿನ ಅನುಭವ ಆಗುತ್ತದೆ. ಹಾಗಾಗಿ ಮನೆಯಲ್ಲಿ ನೈಸರ್ಗಿಕವಾದ ಮಾಯಿಶ್ಚರೈಸರ್ ತಯಾರಿಸಿಕೊಳ್ಳಿ. ಶಿಯಾ ಬಟರ್, ಕೊಬ್ಬರಿ ಎಣ್ಣೆ, ಬಾದಾಮಿ ಎಣ್ಣೆ ಹಾಗೂ ಅಲೋವೆರಾ ಮಿಶ್ರಣ ಮಾಡಿದ ಬಾಡಿಲೋಷನ್ ಬಳಕೆಯಿಂದ ಚರ್ಮ ತೇವಾಂಶಯುಕ್ತವಾಗಿರುವಂತೆ ಮಾಡುತ್ತದೆ. ಮೃದುವಾಗಿರುತ್ತದೆ.



ಅಭ್ಯಂಜನ ಆರೋಗ್ಯ ಪೂರ್ಣ

ದೀಪಾವಳಿಗಷ್ಟೆ ಅಲ್ಲದೇ ಚಳಿಗಾಲದಲ್ಲಿಯೂ ಎಣ್ಣೆಯ ಅಭ್ಯಂಜನ ಸ್ನಾನ ಆರೋಗ್ಯ ಪೂರ್ಣ. ಸ್ನಾನ ಮಾಡುವ 10 ರಿಂದ 30 ನಿಮಿಷಗಳ ಮುನ್ನ ಮೈಗೆ ಎಣ್ಣೆ ಹಚ್ಚಿಕೊಳ್ಳಿ. ಕೊಬ್ಬರಿ, ಎಳ್ಳೆಣ್ಣೆ, ಆಲಿವ್, ಬಾದಾಮಿ ಎಣ್ಣೆ ಯಾವುದಾದರೂ ಬಳಸಬಹುದು. ಅತಿಯಾದ ಒಣ ಚರ್ಮ ಇದ್ದವರು ಹರಳೆಣ್ಣೆ ಬಳಸಬಹುದು. ಶೀತಪ್ರಕೃತಿಯಿದ್ದವರು ಎಣ್ಣೆಯನ್ನು ಹದವಾಗಿ ಬಿಸಿ ಮಾಡಿ ಹಚ್ಚಿಕೊಳ್ಳಿ. ಒಣಚರ್ಮದ ಸಮಸ್ಯೆಯಿಂದ ಮುಕ್ತರಾಗಬಹುದು.

ಚಳಿಗಾಲಕ್ಕೆ ಫೇಸ್‌ಪ್ಯಾಕ್‌ಗಳು

- **ಬಾಳೆಹಣ್ಣಿನ ಫೇಸ್ ಪ್ಯಾಕ್:** ಅತಿಯಾದ ಒಣ ಚರ್ಮದವರಿಗೆ ಇದು ಸೂಕ್ತ. ಕಳಿತ ಬಾಳೆಹಣ್ಣಿಗೆ, ಎರಡು ಚಮಚ, ಹಾಲು, ಒಂದು ಚಮಚ ಜೇನುತುಪ್ಪ, ಅರ್ಧ ಚಮದ ನಿಂಬೆಹಣ್ಣಿನ ರಸವನ್ನು ಸೇರಿಸಿ ಮಿಶ್ರಣ ಮಾಡಿ. ವಾರಕ್ಕೊಮ್ಮೆ ಈ ಮಿಶ್ರಣವನ್ನು ಹಚ್ಚಿ. ಅರ್ಧಗಂಟೆ ಬಿಟ್ಟು ಶುದ್ಧ ನೀರಿನಲ್ಲಿ ಮುಖ ತೊಳೆಯಿರಿ.
- **ಬಾದಾಮಿ ಎಣ್ಣೆಯ ಪ್ಯಾಕ್:** ಚಳಿಗಾಲದಲ್ಲಿ ಬಾದಾಮಿ ಎಣ್ಣೆಯನ್ನು ಸೇವಿಸುವುದು ಹಾಗೂ ಅದನ್ನು ಚರ್ಮಕ್ಕೆ ಹಚ್ಚಿಕೊಳ್ಳುವುದರಿಂದ ಅನೇಕ ಲಾಭಗಳಿವೆ. ರಾತ್ರಿ ಮಲಗುವ ಮುನ್ನ ಬಾದಾಮಿ ಎಣ್ಣೆಯನ್ನು ತೆಳುವಾಗಿ ಮುಖ ಹಾಗೂ ಕುತ್ತಿಗೆಗೆ ಹಚ್ಚಿ ಬಿಡಿ. ಬೆಳಿಗ್ಗೆ ಎದ್ದು ಮುಖ ತೊಳೆದುಕೊಳ್ಳಿ. ಮುಖದ ಕಾಂತಿಯನ್ನು ಹೆಚ್ಚಿಸುವಲ್ಲಿ ಸಹಾಯ ಮಾಡುತ್ತದೆ.
- **ಮೊಟ್ಟೆಯ ಬಿಳಿಭಾಗ ಹಾಗೂ ಜೇನು:** ಒಂದು ಹಸಿ ಮೊಟ್ಟೆಯ ಬಿಳಿ ಭಾಗಕ್ಕೆ(ಎಗ್‌ವೈಟ್) ಅರ್ಧ ಚಮಚದ ಜೇನುತುಪ್ಪ ಸೇರಿಸಿ. ಅದನ್ನು ಮುಖಕ್ಕೆ ಹಚ್ಚಿ. ಇದು ಚರ್ಮವನ್ನು ಮೃದು ಮಾಡುವುದಲ್ಲದೇ, ಹೊಳಪು ನೀಡುತ್ತದೆ.

ಹೊಸ ರುಚಿಯ ಮೊಟ್ಟೆ ಖಾದ್ಯಗಳು

ನಳಪಾಕ


ಮೊಟ್ಟೆಯಿಂದ ಆಮ್ಲೆಟ್, ಎಗ್‌ಬುರ್ಜಿ, ಎಗ್‌ರೈಸ್‌ನಂತಹ ಖಾದ್ಯಗಳ ಬಗ್ಗೆ ಗೊತ್ತೇ ಇರುತ್ತದೆ. ಆದರೆ, ಮೊಟ್ಟೆಯಿಂದ ದೋಸೆ, ಮ್ಯಾಗಿ, ಒಂದಷ್ಟು ಕುರುಕಲು ತಿಂಡಿ ಮಾಡಬಹುದು ಗೊತ್ತಾ ? ಅಂಥ ವಿಶೇಷವಾದ ಮೊಟ್ಟೆ ಖಾದ್ಯದ ರೆಸಿಪಿಗಳನ್ನು ಇಲ್ಲಿ ತಿಳಿಸಿದ್ದಾರೆ ದೀಪಕ್ ಎನ್.

ಸ್ನ್ಯಾಕ್ಸ್

ಬೇಕಾದ ಸಾಮಗ್ರಿಗಳು: ಎರಡು ತುರಿದ ಆಲೂಗಡ್ಡೆ, ಒಂದು ಮೊಟ್ಟೆ, ಎರಡು ಚಮಚ ಗೋಧಿ ಹಿಟ್ಟು, ಅರ್ಧ ಚಮಚ ಮೆಣಸಿನ ಪುಡಿ, ಕಾಲು ಚಮಚ ಖಾರದಪುಡಿ, ಕಾಲು ಚಮಚ ಅರಿಶಿಣ ಪುಡಿ, ಅರ್ಧ ಚಮಚ ಗರಂ ಮಸಾಲ, ಕೊತ್ತಂಬರಿ ಸೊಪ್ಪು, ಬೇಕೆನಿಸಿದರೆ ಈರುಳ್ಳಿ, ಮೆಣಸಿನಕಾಯಿ, ರುಚಿಗೆ ತಕ್ಕಷ್ಟು ಉಪ್ಪು.



ಮಾಡುವ ವಿಧಾನ: ಪಾತ್ರೆಯಲ್ಲಿ ತುರಿದ ಆಲೂಗಡ್ಡೆ, ಒಂದು ಮೊಟ್ಟೆ, ಗೋಧಿ ಇಟ್ಟು, ಮೆಣಸಿನ ಪುಡಿ, ಖಾರದಪುಡಿ, ಗರಂ ಮಸಾಲಾ, ಅರಿಶಿನ ಪುಡಿ, ಕೊತ್ತಂಬರಿ ಸೊಪ್ಪು ಹಾಕಿಕೊಳ್ಳಬೇಕು ಇದಕ್ಕೆ ನೀರಿನ ಅಗತ್ಯ ಇರುವುದಿಲ್ಲ ರುಚಿಗೆ ತಕ್ಕಷ್ಟು ಉಪ್ಪು –ಖಾರ ಸೇರಿಸಿ ಮಿಶ್ರಣ ಮಾಡಬೇಕು. ವಡೆ ತರ ಪ್ರೆಸ್ ಮಾಡಿಕೊಂಡು ದೋಸೆ ತಾವಾದ ಮೇಲೆ ಎಣ್ಣೆಯೊಂದಿಗೆ ಫ್ರೈ ಮಾಡಬೇಕು. ಕೆಂಪು ಬಣ್ಣಕ್ಕೆ ತಿರುಗದ ತಕ್ಷಣ ತೆಗೆದುಕೊಳ್ಳಬೇಕು. ಇಲ್ಲಿಗೆ ಮೊಟ್ಟೆ ಸ್ನ್ಯಾಕ್ಸ್ ಸಿದ್ದವಾಗಿದೆ. ಟಮೊಟೊ ಕೆಚಪ್ ಜೊತೆ ಮೊಟ್ಟೆ ಸ್ನ್ಯಾಕ್ ತಿನ್ನುವುದಕ್ಕೆ ಬಲು ರುಚಿಕರ.



ದೋಸೆ

ಬೇಕಾಗುವ ಸಾಮಗ್ರಿಗಳು: 1 ಕಪ್ ದೋಸೆ ಹಿಟ್ಟು, 2 ಮೊಟ್ಟೆ, ಅರ್ಧ ಚಮಚ ಖಾರದ ಪುಡಿ, ಅರ್ಧ ಚಮಚ ಮೆಣಸು ಪುಡಿ, ಹೆಚ್ಚಿಕೊಂಡ ಈರುಳ್ಳಿ, ಅರ್ಧ ಕಪ್ ಕೊತ್ತಂಬರಿ ಸೊಪ್ಪು, 3 ಚಮಚ ಬೆಣ್ಣೆ, ರುಚಿಗೆ ತಕ್ಕಷ್ಟು ಉಪ್ಪು, ಅಗತ್ಯಕ್ಕೆ ತಕ್ಕಷ್ಟು ಎಣ್ಣೆ.

ಮಾಡುವ ವಿಧಾನ: ಹಂಚನ್ನು ಚೆನ್ನಾಗಿ ಬಿಸಿ ಮಾಡಿಕೊಳ್ಳಬೇಕು. ದೋಸೆ ಹಿಟ್ಟನ್ನು ಹಂಚಿನ ಮೇಲೆ ಹಾಕುವ ಮುನ್ನ ಉರಿಯನ್ನು ಕಡಿಮೆ ಇಟ್ಟುಕೊಳ್ಳಬೇಕು. ಬಳಿಕ ಬೇಕಾದ ಗಾತ್ರದಲ್ಲಿ ದೋಸೆ ಹಾಕಿ. ಅದರ ಮೇಲೆ ಹೆಚ್ಚಿಕೊಂಡ ಈರುಳ್ಳಿ, ಕೊತ್ತಂಬರಿ ಸೊಪ್ಪು, ಖಾರದ ಪುಡಿ, ಮೆಣಸಿನ ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಉದುರಿಸಿ ಒಂದು ಮೊಟ್ಟೆ ಹೊಡೆದು ಚೆನ್ನಾಗಿ ಮಿಶ್ರಣ ಮಾಡಿ. ಬೆಣ್ಣೆ ಅಥವಾ ಎಣ್ಣೆ ಹಾಕಿ ಗರಿಗರಿಯಾಗಿ ಬೇಯಿಸಿ. ಎರಡೂ ಕಡೆ ಚೆನ್ನಾಗಿ ಬೆಂದ ಮೇಲೆ ತೆಗೆಯಿರಿ. ಇದು ಚಟ್ನಿ ಜೊತೆ ತಿನ್ನಲು ರುಚಿಕರವಾಗಿರುತ್ತದೆ.

ಮ್ಯಾಗಿ



ಬೇಕಾದ ಸಾಮಗ್ರಿಗಳು: ಒಂದು ಮ್ಯಾಗಿ ಪ್ಯಾಕೆಟ್, ಎರಡು ಮೊಟ್ಟೆ, ಹೆಚ್ಚಿದ ಟೊಮೆಟೊ, ಈರುಳ್ಳಿ, ಕ್ಯಾರೆಟ್, ಕರಿಬೇವು, ಮ್ಯಾಗಿ ಮಸಾಲ ಪೌಡರ್, ಕೊತ್ತಂಬರಿ ಸೊಪ್ಪು, ಅರ್ಧ ಕಪ್ ಶುಂಠಿ -ಬೆಳ್ಳುಳ್ಳಿ ಪೇಸ್ಟ್, ಒಂದು ಚಮಚ ಅರಿಶಿಣ, ಒಂದು ಚಮಚ ಖಾರದಪುಡಿ, ರುಚಿಗೆ ತಕ್ಕಷ್ಟು ಉಪ್ಪು ಹಾಗೂ ಒಗ್ಗರಣೆಗೆ ಬೇಕಾದಷ್ಟು ಎಣ್ಣೆ.

ಮಾಡುವ ವಿಧಾನ: ಪಾತ್ರ ಎಲ್ಲಿ ನೀರನ್ನು ಕಾಯಿಸಿಕೊಳ್ಳಬೇಕು ನೀರು ಚೆನ್ನಾಗಿ ಬಿಸಿಯಾದ ಬಳಿಕ ಮ್ಯಾಗಿಯನ್ನು ಪುಡಿ ಮಾಡಿಕೊಂಡು ಹಾಕಿಕೊಳ್ಳಬೇಕು. ಮ್ಯಾಗಿ ಅರ್ಧ ಭಾಗ ಬೆಂದ ಮೇಲೆ ಅರ್ಧ ಪ್ಯಾಕೆಟ್ ಮ್ಯಾಗಿ ಪೌಡರ್ ಹಾಕಿಕೊಂಡು ಚೆನ್ನಾಗಿ ಬೇಯುವಂತೆ ನೋಡಿಕೊಳ್ಳಬೇಕು. ಜತೆಗೆ ಪಕ್ಕದಲ್ಲಿ ಮತ್ತೊಂದು ಪಾತ್ರೆಯಲ್ಲಿ ಒಗ್ಗರಣೆ ತಯಾರಿ ಮಾಡಿಕೊಳ್ಳಬೇಕು. ಎರಡು ಚಮಚ ಎಣ್ಣೆ ಹೆಚ್ಚಿದ ಈರುಳ್ಳಿ, ಟೊಮೆಟೊ, ಕ್ಯಾರೆಟ್, ಬೀನ್ಸ್ ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಕರಿಬೇವು ಬೇಕೆನಿಸಿದರೆ ಕ್ಯಾಪ್ಸಿಕಂ, ಬಟಾಣಿ ಹಾಕಿಕೊಳ್ಳಬಹುದು. ಜತೆಗೆ ರುಚಿಗೆ ತಕ್ಕಷ್ಟು ಉಪ್ಪು ಅದೇ ಬನಾಲಿಯಲ್ಲಿ ಮೊಟ್ಟೆಯನ್ನು ಹುರಿದುಕೊಳ್ಳಬೇಕು. ಬಳಿಕ ಒಗ್ಗರಣೆಯೊಂದಿಗೆ ಚೆನ್ನಾಗಿ ಮಿಶ್ರಣ ಮಾಡಬೇಕು. ಬೇಯಿಸಿದ ಮ್ಯಾಗಿಯನ್ನು ಒಗ್ಗರಣೆಯೊಂದಿಗೆ ಸೇರಿಸಿ ಮಿಶ್ರಣ ಮಾಡಬೇಕು ಈಗ ಮೊಟ್ಟೆ ಮ್ಯಾಗಿ ತಿನ್ನಲು ಸಿದ್ಧವಾಗಿದೆ.

ಆರಗ, ಚರಂತಿಮಠ ಸೇರಿ ಆರು ಮಂದಿಗೆ ಬದಲಿ ನಿವೇಶನ ಹಂಚಿಕೆ ಪ್ರಕರಣ • ಸುಪ್ರೀಂಕೋರ್ಟ್‌ಗೆ ಪ್ರಮಾಣ ಪತ್ರ

ಆದೇಶ ಉಲ್ಲಂಘನೆ: ಲೋಪ ಒಪ್ಪಿಕೊಂಡ ಬಿಡಿಎ

• ಮಂಜುನಾಥ್ ಹೆಬ್ಬಾರ್

ನವದೆಹಲಿ: ಗೃಹ ಸಚಿವ ಆರಗ ಜ್ಞಾನೇಂದ್ರ, ಬಿಜೆಪಿ ಶಾಸಕ ವೀರಣ್ಣ ಚರಂತಿಮಠ, ಬಿಜೆಪಿ ಮುಖಂಡ ಬಸವರಾಜ ಪಾಟೀಲ ಸೇಡಂ ಸೇರಿ ದಂತೆ 6 ಮಂದಿಗೆ ಬದಲಿ ನಿವೇಶನ ಹಂಚಿಕೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದು, ಬದಲಿ ನಿವೇಶನ ಹಂಚಿಕೆಯಲ್ಲಿ ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘನೆ ಆಗಿರುವುದನ್ನು ಒಪ್ಪಿಕೊಂಡಿದೆ.

ಬೆಂಗಳೂರಿನಲ್ಲಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ ರಾಜಕಾರಣಿಗಳಿಗೆ ಕಾನೂನುಬಾಹಿರವಾಗಿ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿದ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದ ಸುಪ್ರೀಂ ಕೋರ್ಟ್, ಈ ಬದಲಿ ನಿವೇಶನಗಳನ್ನು ಕಾನೂನು ಪ್ರಕ್ರಿಯೆ ಅನುಸಾರ ವಾಪಸ್ ಪಡೆಯುವಂತೆ ಪ್ರಾಧಿಕಾರಕ್ಕೆ ಅ. 11ರಂದು ನಿರ್ದೇಶನ ನೀಡಿತ್ತು. ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ಸಮಿತಿ ನೀಡಿರುವ ವರದಿಯನ್ನು ಪರಿಗಣಿಸಿ ಈ ಸೂಚನೆ ನೀಡಿತ್ತು.

'ಸುಪ್ರೀಂಕೋರ್ಟ್ 2021ರ ಅಕ್ಟೋಬರ್‌ನಲ್ಲಿ ನೀಡಿರುವ ಆದೇಶ ವನ್ನು ಉಲ್ಲಂಘಿಸಿ ಪ್ರಾಧಿಕಾರವು ಆರ್‌ಎಂವಿ ಎರಡನೇ ಹಂತದಲ್ಲಿ ರಾಜಕಾರಣಿಗಳಿಗೆ ಪರ್ಯಾಯ ನಿವೇಶನಗಳನ್ನು ಹಂಚಿಕೆ ಮಾಡಿದೆ. ಇದು 1984ರ ನಿವೇಶನ ಹಂಚಿಕೆ ನಿಯಮದ ಸೆಕ್ಷನ್ 11 ಎ ರ ಉಲ್ಲಂಘನೆ' ಎಂದು ಸಮಿತಿ ವರದಿ ಸಲ್ಲಿಸಿತ್ತು. 'ಒಂದು ನಿವೇಶನದ ಹಂಚಿಕೆ ಪತ್ರವನ್ನು ಈಗಾಗಲೇ ರದ್ದುಪಡಿಸಲಾಗಿದ್ದು, ಉಳಿದ 5 ನಿವೇಶನಗಳನ್ನು ವಾಪಸ್ ಪಡೆಯಲು ನೋಟಿಸ್ ನೀಡಲಾಗಿದೆ' ಎಂದು ಬಿಡಿಎ ಆಯುಕ್ತ ಜಿ.ಕುಮಾರ್ ನಾಯ್ಕ್ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಬದಲಿ ನಿವೇಶನ: ಹಂಚಿಕೆ ಆಗಿದ್ದು ಹೇಗೆ?

ಗೌತಮ್ ಚಂದ್ ಜೈನ್: ಬನಶಂಕರಿ ಎರಡನೇ ಹಂತದಲ್ಲಿರುವ ನಿವೇಶನ ಸಂಖ್ಯೆ 1796 ಅನ್ನು ಪ್ರಾಧಿಕಾರವು ಶಾಂತಮಣಿ ಎಂಬುವರಿಗೆ ಹಂಚಿಕೆ ಮಾಡಿತ್ತು. ಅವರು ಅದನ್ನು 1984ರಲ್ಲಿ ಸುಲೋಚನಾ ದೇವಿ ಜಿಂದಾಲ್ ಎಂಬುವವರಿಗೆ ಮಾರಿದ್ದರು. ಬಳಿಕ ಅವರು ಗೌತಮ್ ಚಂದ್ ಜೈನ್ ಅವರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದರು. ಜೈನ್ ಅವರು ಬದಲಿ ನಿವೇಶನಕ್ಕಾಗಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದರು. ಜೈನ್ ಅವರಿಗೆ ಯಾವುದೇ ಕ್ರಯಪತ್ರ ಹಾಗೂ ಸ್ವಾಧೀನ ಪ್ರಮಾಣಪತ್ರ ಮಾಡಿಕೊಟ್ಟಿಲ್ಲ. ಅವರಿಗೆ ಹಂಚಿಕೆ ಪ್ರಮಾಣಪತ್ರವನ್ನಷ್ಟೇ ಪ್ರಾಧಿಕಾರ ನೀಡಿದೆ ಎಂದು ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರ್ ಸಮಿತಿಯ ವರದಿಯಲ್ಲಿ (ಜೆಸಿಸಿ ಸಮಿತಿ) ಉಲ್ಲೇಖಿಸಿದೆ. ಈ ಹಂಚಿಕೆ ಪ್ರಮಾಣಪತ್ರವನ್ನು ಅಕ್ಟೋಬರ್ 18ರಂದು ರದ್ದುಪಡಿಸಲಾಗಿದೆ. ಈ ಬಗ್ಗೆ ಜೈನ್ ಅವರಿಗೆ ಮಾಹಿತಿ ನೀಡಲಾಗಿದೆ.

ಆರಗ ಜ್ಞಾನೇಂದ್ರ: ಆರಗ ಜ್ಞಾನೇಂದ್ರ ಅವರಿಗೆ ಎಚ್‌ಎಸ್‌ಆರ್ ಬಡಾವಣೆಯ ಸೆಕ್ಟರ್ 3ರಲ್ಲಿ 50 ಡಿ ಸಂಖ್ಯೆಯ ನಿವೇಶನ ನೀಡಲಾಗಿತ್ತು. ಇದಕ್ಕೆ 2007ರಲ್ಲಿ ಕ್ರಯಪತ್ರ ಮಾಡಿಕೊಡಲಾಗಿತ್ತು. 2009ರಲ್ಲಿ ಈ ಕ್ರಯಪತ್ರವನ್ನು ರದ್ದುಪಡಿಸಲಾಗಿತ್ತು. ಎಸ್.ಎ.ಮಧುಮತಿ ಎಂಬುವರಿಗೆ ಈ ನಿವೇಶನವನ್ನು ಹಂಚಿಕೆ ಮಾಡಿದ್ದರಿಂದ ಆರಗ ಅವರ ಕ್ರಯಪತ್ರವನ್ನು ರದ್ದುಪಡಿಸಲಾಗಿತ್ತು. ಸ್ಥಳ ಸಮಸ್ಯೆಯ ಬಳಿಕ ಮಧುಮತಿ ಅವರ ಕ್ರಯಪತ್ರವನ್ನು ರದ್ದುಗೊಳಿಸಿ ಉತ್ತರದ ನಿವೇಶನದ ರೂಪದಲ್ಲಿ ದೊಡ್ಡನಾಗಯ್ಯ ಎಂಬುವರಿಗೆ ಇದನ್ನು ಹಂಚಿಕೆ ಮಾಡಲಾಗಿತ್ತು. ಜ್ಞಾನೇಂದ್ರ ಅವರಿಗೆ ಎಚ್‌ಎಸ್‌ಆರ್ ಸೆಕ್ಟರ್ ಮೂರರ 110/ಬಿ ನಿವೇಶನಕ್ಕೆ 2009ರಲ್ಲಿ ಕ್ರಯಪತ್ರ ಮಾಡಿಕೊಡಲಾಗಿತ್ತು. ಪ್ರಾಧಿಕಾರವು 2021ರ ಡಿಸೆಂಬರ್ 8ರಂದು ಈ ಹಂಚಿಕೆಯನ್ನು ರದ್ದು ಮಾಡಿತ್ತು. ಬದಲಿಯಾಗಿ ಆರ್‌ಎಂವಿ ಎರಡನೇ ಹಂತದ ನಿವೇಶನ ಸಂಖ್ಯೆ 2 ಅನ್ನು ನೀಡಲಾಗಿತ್ತು. ಅದಕ್ಕೆ ಡಿಸೆಂಬರ್ 9ರಂದು ಸ್ವಾಧೀನ ಪ್ರಮಾಣಪತ್ರ ಮಾಡಿಕೊಡಲಾಗಿತ್ತು.


ಈ ಹಂಚಿಕೆಯು ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆ ಎಂದು ಸಮಿತಿ ವರದಿ ನೀಡಿದೆ. ಈ ನಿವೇಶನವನ್ನು ಮರಳಿಸುವಂತೆ ಆರಗ ಅವರಿಗೆ ಅಕ್ಟೋಬರ್ 18ರಂದು ಪ್ರಾಧಿಕಾರ ನೋಟಿಸ್ ನೀಡಿದೆ.



ಬಸವರಾಜ ಪಾಟೀಲ ಸೇಡಂ: ಸೇಡಂ ಅವರಿಗೆ ಎಚ್‌ಎಸ್‌ಆರ್ ಸೆಕ್ಟರ್ 3ರಲ್ಲಿ ನಿವೇಶನ ಸಂಖ್ಯೆ 1100 ಅನ್ನು ನೀಡಲಾಗಿತ್ತು. ಈ ಹಂಚಿಕೆಯನ್ನು 2011ರಲ್ಲಿ ರದ್ದುಪಡಿಸಲಾಗಿತ್ತು. ಸೇಡಂ ಅವರಿಗೆ ಆರ್‌ಎಂವಿ ಎರಡನೇ ಹಂತದಲ್ಲಿ (ನಿವೇಶನ ಸಂಖ್ಯೆ1) 2001ರಲ್ಲಿ ಬದಲಿ ನಿವೇಶನ ನೀಡಿತ್ತು. ಬಳಿಕ ಅವರಿಗೆ ನಿವೇಶನ 6ನ್ನು ಹಂಚಿಕೆ ಮಾಡಲಾಗಿತ್ತು. ಈ ಹಂಚಿಕೆಯನ್ನು 2022ರ ಏಪ್ರಿಲ್ 19ರಂದು ರದ್ದುಪಡಿಸಲಾಗಿತ್ತು. ಈಗ ಆ ನಿವೇಶನ ಸೇಡಂ ಅವರ ಸ್ವಾಧೀನದಲ್ಲಿ ಇಲ್ಲ. ಅವರಿಗೆ ಅದೇ ಬಡಾವಣೆಯಲ್ಲಿ ನಿವೇಶನ ಸಂಖ್ಯೆ 8 ಅನ್ನು ಏಪ್ರಿಲ್ 19ರಂದು ನೀಡಲಾಗಿತ್ತು. ಈ ನಿವೇಶನ ಮರಳಿಸುವಂತೆ ಅಕ್ಟೋಬರ್ 18ರಂದು ನೋಟಿಸ್ ನೀಡಲಾಗಿದೆ.



ವೀರಣ್ಣ ಚರಂತಿಮಠ: ಚರಂತಿಮಠ ಅವರಿಗೆ ಎಚ್‌ಎಸ್‌ಆರ್ ಸೆಕ್ಟರ್ 3ರಲ್ಲಿ 2400 ಅಡಿಯ ನಿವೇಶನ (ನಿವೇಶನ ಸಂಖ್ಯೆ 46/ಬಿ) ಹಂಚಿಕೆ ಮಾಡಲಾಗಿತ್ತು ಎಂದು ಜೆಸಿಸಿ ಸಮಿತಿ ವರದಿಯಲ್ಲಿ ಉಲ್ಲೇಖಿಸಲಾಗಿದೆ. ದಾಖಲೆಗಳ ಪ್ರಕಾರ, ಈ ಹಂಚಿಕೆಯನ್ನು ರದ್ದುಪಡಿಸಿ ಜಿ.ಎನ್.ನರಸಿಂಹಮೂರ್ತಿ ಹಾಗೂ ಇತರರಿಗೆ 2013ರಲ್ಲಿ ಕ್ರಯಪತ್ರ ಮಾಡಿಕೊಡಲಾಗಿತ್ತು. ಚರಂತಿಮಠ ಅವರಿಗೆ ಆರ್‌ಎಂವಿ ಎರಡನೇ ಹಂತದಲ್ಲಿ ಬದಲಿ ನಿವೇಶನವನ್ನು (ನಿವೇಶನ ಸಂಖ್ಯೆ 3) 2011ರ ಏಪ್ರಿಲ್ 4ರಂದು ಹಂಚಿಕೆ ಮಾಡಲಾಗಿತ್ತು. ಸ್ವಾಧೀನ ಪ್ರಮಾಣಪತ್ರವನ್ನು ಏಪ್ರಿಲ್ 20ರಂದು ನೀಡಲಾಗಿತ್ತು. ಈ ಹಂಚಿಕೆಯನ್ನು ಪ್ರಾಧಿಕಾರವು 2022ರ ಫೆಬ್ರುವರಿ 3ರಂದು ರದ್ದುಪಡಿಸಿತು. ಅದರ ಎಲ್ಲ ದಾಖಲೆಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ್ದಾರೆ.



ಅದೇ ಬಡಾವಣೆಯಲ್ಲಿ ಅದೇ ಅಳತೆಯ ನಿವೇಶನವನ್ನು (ಸಂಖ್ಯೆ 5) ಈ ವರ್ಷ ಫೆಬ್ರುವರಿ 3ರಂದು ಹಂಚಿಕೆ ಮಾಡಲಾಗಿದೆ ಎಂದು ಜೆಸಿಸಿ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ನಿವೇಶನ ಮರಳಿಸುವಂತೆ ಅಕ್ಟೋಬರ್ 18ರಂದು ನೋಟಿಸ್ ನೀಡಲಾಗಿದೆ. ಈ ನಿವೇಶನ ಹಂಚಿಕೆಯು ಸುಪ್ರೀಂ ಕೋರ್ಟ್‌ನ ಆದೇಶದ ಉಲ್ಲಂಘನೆ. ಒಂದು ವೇಳೆ, ಅವರು ನಿವೇಶನ ಮರಳಿಸದಿದ್ದರೆ ಅಗತ್ಯ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಆಯುಕ್ತರು ತಿಳಿಸಿದ್ದಾರೆ.

ಡಾ.ಎಂ.ನಾಗರಾಜ್: ನಾಗರಾಜ್ ಅವರಿಗೆ ಬನಶಂಕರಿ ಆರನೇ ಹಂತದ 10ನೇ ಬ್ಲಾಕ್‌ನಲ್ಲಿ 2400 ಅಡಿಯ (ನಿವೇಶನ ಸಂಖ್ಯೆ 960) ಜಿ ಕೆಟಗರಿ ನಿವೇಶನ ಹಂಚಿಕೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಹಂಚಿಕೆ ಪ್ರಮಾಣಪತ್ರವನ್ನಷ್ಟೇ ನೀಡಲಾಗಿತ್ತು. ಅವರಿಗೆ ಕ್ರಯಪತ್ರ ಮಾಡಿಕೊಟ್ಟಿಲ್ಲ. ಆದರೂ, ಈ ನಿವೇಶನವು 10 ವರ್ಷಕ್ಕೂ ಅಧಿಕ ಕಾಲ ಅವರ ಸ್ವಾಧೀನದಲ್ಲಿತ್ತು. ಜತೆಗೆ, ಅವರಿಗೆ ಆರ್‌ಎಂವಿ ಎರಡನೇ ಹಂತದಲ್ಲಿ ಬದಲಿ ನಿವೇಶನ (ಸಂಖ್ಯೆ 17) ನೀಡಲಾಗಿತ್ತು ಎಂದು ಜೆಸಿಸಿ ವರದಿ ಹೇಳಿದೆ.

ಬಿಡಿಎ ದಾಖಲೆಗಳ ಪ್ರಕಾರ, ನಾಗರಾಜ್ ಅವರಿಗೆ 10ನೇ ಬ್ಲಾಕ್‌ನಲ್ಲಿ 2009ರಲ್ಲಿ ನಿವೇಶನ ಹಂಚಿಕೆ ಮಾಡಲಾಗಿತ್ತು. ಕ್ರಯಪತ್ರ ಮಾಡಿಕೊಟ್ಟಿರಲಿಲ್ಲ. ಹಂಚಿಕೆ ಸೂಚನಾ ಪತ್ರವನ್ನು 2011ರಲ್ಲಿ ರದ್ದುಪಡಿಸಲಾಗಿತ್ತು. ಈ ನಿವೇಶನವನ್ನು ಬಿ.ಮಹೇಶ್ ಕುಮಾರ್ ಎಂಬುವರಿಗೆ 2019ರಲ್ಲಿ ಹಂಚಿಕೆ ಮಾಡಲಾಗಿತ್ತು.

ನಾಗರಾಜ್ ಅವರಿಗೆ ಆರ್‌ಎಂವಿ ಬಡಾವಣೆಯಲ್ಲಿ ನಿವೇಶನ ಸಂಖ್ಯೆ 5 ಅನ್ನು 2011ರ ಏಪ್ರಿಲ್‌ನಲ್ಲಿ ನೀಡಲಾಗಿತ್ತು. ಈ ಹಂಚಿಕೆಯನ್ನು 2022ರ ಏಪ್ರಿಲ್ 8ರಂದು ರದ್ದುಪಡಿಸಲಾಗಿತ್ತು. ಅವರು ಈ ನಿವೇಶನವನ್ನು ಮರಳಿಸಿದ್ದಾರೆ. ಅವರಿಗೆ ಬದಲಿ ನಿವೇಶನವನ್ನು (ಸಂಖ್ಯೆ 9) ಏಪ್ರಿಲ್ 8ರಂದು ನೀಡಲಾಗಿತ್ತು. ನಿವೇಶನ ಮರಳಿಸುವಂತೆ ಅಕ್ಟೋಬರ್ 18ರಂದು ನೋಟಿಸ್ ನೀಡಲಾಗಿದೆ. ಮರಳಿಸದಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿ.ಕುಮಾರ್ ನಾಯ್ಕ್ ತಿಳಿಸಿದ್ದಾರೆ.

ಬಿ.ರಾಮಪ್ಪ ಮತ್ತು ಆರ್.ಇಶಾ: ಇವರಿಗೆ ಎಚ್‌ಎಸ್‌ಆರ್ ಬಡಾವಣೆಯ ಸೆಕ್ಟರ್ 6ರಲ್ಲಿ 2400 ಅಡಿಯ (ನಿವೇಶನ ಸಂಖ್ಯೆ 682) ಅನ್ನು 2009ರಲ್ಲಿ ಹಂಚಿಕೆ ಮಾಡಲಾಗಿತ್ತು ಎಂದು ದಾಖಲೆಗಳಲ್ಲಿ ಇದೆ. ಆದರೆ, ಎಂಜಿನಿಯರಿಂಗ್ ವಿಭಾಗ ಹಾಗೂ ನಗರ ಯೋಜನಾ ವಿಭಾಗಗಳಲ್ಲಿ ಪರಿಶೀಲನೆ ನಡೆಸಿದಾಗ, ಆ ಸಂಖ್ಯೆಯ ನಿವೇಶನವೇ ಇಲ್ಲ. ಈ ಬಡಾವಣೆಯಲ್ಲಿರುವ ಕೊನೆಯ ನಿವೇಶನದ ಸಂಖ್ಯೆ 630. ಹೀಗಾಗಿ, ಈ ಹಂಚಿಕೆಯನ್ನು 2022ರ ಜನವರಿ 19ರಂದು ರದ್ದುಪಡಿಸಲಾಗಿತ್ತು. ಅವರಿಗೆ ಆರ್‌ಎಂವಿ ಎರಡನೇ ಹಂತದಲ್ಲಿ ನಿವೇಶನ ಸಂಖ್ಯೆ 11ಕ್ಕೆ 2022ರ ಜನವರಿ 19ರಂದು ಕ್ರಯಪತ್ರ ಮಾಡಿಕೊಡಲಾಗಿತ್ತು. ಈ ನಿವೇಶನ ಮರಳಿಸುವಂತೆ ಅವರಿಗೆ ನೋಟಿಸ್ ನೀಡಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

ಸಿಇಟಿ: ಕಾಲೇಜು ಪ್ರವೇಶಕ್ಕೆ 7ರವರೆಗೆ ಅವಕಾಶ

ಬೆಂಗಳೂರು: ಮೊದಲ ಸುತ್ತಿನಲ್ಲಿ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಸೀಟು ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆಯಲು ನ.7ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಸೀಟು ಹಂಚಿಕೆಯಾದ ಅಭ್ಯರ್ಥಿಗಳು ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಕೋರ್ಸ್, ಕಾಲೇಜು ಆಯ್ಕೆ ಮಾಡಿಕೊಳ್ಳಲು ನ.6ರವರೆಗೆ ಸಮಯ ನಿಗದಿಪಡಿಸಲಾಗಿದೆ. ಆಯ್ಕೆ ನಂತರ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ನ.7 ರವರೆಗೆ ಅವಕಾಶವಿದೆ.

ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ನ.11ರಂದು ಪ್ರಕಟಿಸಲಾಗುತ್ತದೆ. ಅಭ್ಯರ್ಥಿಗಳು ಇಚ್ಛೆ ಆಯ್ಕೆ ದಾಖಲಿಸಲು ನ.6ರವರೆಗೆ ಸಮಯ ನೀಡಲಾಗಿದೆ. 7ರಂದು ಅಣಕು ಸೀಟು ಹಂಚಿಕೆ ಪ್ರಕಟಿಸಲಾಗುವುದು. ಆ ದಿನವೇ ಆಯ್ಕೆಗಳನ್ನು ಬದಲಿಸಬಹುದು ಎಂದು ಕೆಇಎ ಪ್ರಕಟಣೆ ತಿಳಿಸಿದೆ.

ಮಧ್ಯವರ್ತಿಗಳ ಬಳಿ ₹ 9.72 ಲಕ್ಷ ನಗದು ಪತ್ತೆ

ಬೆಂಗಳೂರು: ಲೋಕಾಯುಕ್ತ ಪೊಲೀಸರು ಗುರುವಾರ ದಾಳಿ ನಡೆಸಿದ 21 ಉಪ ನೋಂದಣಿ ಕಚೇರಿಗಳ ಪೈಕಿ 14 ಉಪ ನೋಂದಣಿ ಕಚೇರಿಗಳ ಒಳಗಿದ್ದ ಮಧ್ಯವರ್ತಿಗಳ ಬಳಿ ಒಟ್ಟು ₹ 9.72 ಲಕ್ಷ ಅಕ್ರಮ ನಗದು ಪತ್ತೆಯಾಗಿದ್ದು, ವಶಕ್ಕೆ ಪಡೆಯಲಾಗಿದೆ.

ಬೆಂಗಳೂರು ನಗರ ವ್ಯಾಪ್ತಿಯ 14, ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯ ಐದು ಮತ್ತು ರಾಮನಗರ ಜಿಲ್ಲೆಯ ರಾಮನಗರ ಹಾಗೂ ಕನಕಪುರ ಉಪನೋಂದಣಿ ಕಚೇರಿಗಳ ಮೇಲೆ ಗುರುವಾರ ದಾಳಿ ನಡೆದಿತ್ತು. ಪೊಲೀಸರು ತಡರಾತ್ರಿವರೆಗೂ ಶೋಧ ನಡೆಸಿದ್ದರು. ವರ್ತೂರು ಉಪ ನೋಂದಣಿ ಕಚೇರಿಯಲ್ಲಿ ₹ 3.17 ಲಕ್ಷ, ಬನಶಂಕರಿ ಕಚೇರಿಯಲ್ಲಿ ₹ 1.18 ಲಕ್ಷ, ಹೊಸಕೋಟೆ ಕಚೇರಿಯಲ್ಲಿ ₹ 1.04 ಲಕ್ಷ, ಆನೇಕಲ್ ಕಚೇರಿಯಲ್ಲಿ ₹ 95,630, ಬೇಗೂರು ಕಚೇರಿಯಲ್ಲಿ ₹ 93,406, ಕೆಂಗೇರಿಯಲ್ಲಿ ₹ 42,000 ನಗದು ಮಧ್ಯವರ್ತಿಗಳ ಬಳಿ ಪತ್ತೆಯಾಗಿದೆ ಎಂದು ಲೋಕಾಯುಕ್ತ ಬಿ.ಎಸ್. ಪಾಟೀಲ ತಿಳಿಸಿದ್ದಾರೆ.

ಬೊಮ್ಮನಹಳ್ಳಿ, ಬಸವನಗುಡಿ, ಕಾಚರಕನಹಳ್ಳಿ, ಬಾಣಸವಾಡಿ, ದೊಮ್ಮಲೂರು, ದೇವನಹಳ್ಳಿ, ದೊಡ್ಡಬಳ್ಳಾಪುರ, ಜಿಗಣಿ ಮತ್ತು ಕನಕಪುರ ಉಪನೋಂದಣಿ ಕಚೇರಿಗಳಲ್ಲೂ ಮಧ್ಯವರ್ತಿಗಳ ಬಳಿ ಅಲ್ಪ ಪ್ರಮಾಣದ ನಗದು ಪತ್ತೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ. 'ಈ ಎಲ್ಲ ಕಚೇರಿಗಳಲ್ಲೂ ಅಧಿಕಾರಿಗಳು ಮತ್ತು ಸಿಬ್ಬಂದಿಯ ಹಾಜರಾತಿ ಕಡತ, ನೋಂದಣಿಯಾಗಿರುವ ದಾಖಲೆಗಳು, ನೋಂದಣಿಗೆ ಬಾಕಿ ಇದ್ದ ದಾಖಲೆಗಳು, ವಿತರಣೆಯಾದ ದಾಖಲೆಗಳ ವಿವರ, ಚಲನ್‌ಗಳು, ನಗದು ಘೋಷಣಾ ರಿಜಿಸ್ಟರ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಮಧ್ಯವರ್ತಿಗಳನ್ನು ಮತ್ತಷ್ಟು ವಿಚಾರಣೆ ನಡೆಸಿದ ಬಳಿಕ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ತಿಳಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಮಹಮದೀಯ ಕಾಯ್ದೆ:ಪೋಕ್ಸೊ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಮದೀಯ ಕಾನೂನಿನ ಪ್ರಕಾರ 15 ವರ್ಷ ತುಂಬಿದ ಬಾಲಕಿಯನ್ನು ಪ್ರೌಢವಯಸ್ಕಳು ಎಂದು ಪರಿಗಣಿಸಬೇಕು' ಎಂಬ ವಾದಾಂಶವನ್ನು ಮಾನ್ಯ ಮಾಡಿರುವ ಹೈಕೋರ್ಟ್,ಅಪ್ರಾಪ್ತ ಪತ್ನಿಯ ಗರ್ಭಧಾರಣೆಗೆ ಕಾರಣವಾದ ಆರೋಪದಡಿ ಮುಸ್ಲಿಂ ಯುವಕನ ವಿರುದ್ಧ ದಾಖಲಾಗಿದ್ದ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆಯಡಿಯ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸಿದೆ.

ಈ ಸಂಬಂಧ ಉಭಯ ಪಕ್ಷಗಾರರು, 'ನಾವು ವ್ಯಾಜ್ಯ ಬಗೆಹರಿಸಿಕೊಂಡಿದ್ದೇವೆ' ಎಂದು ಸಲ್ಲಿಸಿದ ಜಂಟಿ ಮೆಮೊ (ಜ್ಞಾಪನಾ ಪತ್ರ) ಅನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪರಿಗಣಿಸಿದೆ.

ನಗರದ ಗಂಗೊಂಡನಹಳ್ಳಿಯ ಸಿದ್ದಿಖಿ ಮಸೀದಿ ಬಳಿ ವಾಸವಿರುವ ಮೊಹಮದ್ ವಸೀಂ ಸಂತ್ರಸ್ತೆಯ ಜೊತೆ 2021ರ ಅಕ್ಟೋಬರ್ 10ರಂದು ವಿವಾಹವಾಗಿದ್ದರು. ಸಂತ್ರಸ್ತೆ ಬಿಜಿಎಸ್ ಗ್ಲೋಬಲ್ ಆಸ್ಪತ್ರೆಗೆ ಚಿಕಿತ್ಸೆಗೆಂದು ಬಂದಾಗ ವೈದ್ಯರು, 'ಈಕೆಯ ವಯಸ್ಸು ಇಂದಿಗೆ 17 ವರ್ಷ ಎರಡು ತಿಂಗಳಾಗಿದೆ ಮತ್ತು ಗರ್ಭಿಣಿಯಾಗಿದ್ದಾಳೆ' ಎಂಬುದನ್ನು ಪತ್ತೆ ಹಚ್ಚಿದ್ದರು.

ಈ ಸಂಬಂಧ ಚಂದ್ರಾ ಲೇಔಟ್ ಠಾಣೆ ಪೊಲೀಸರು ಪತಿ–ಪತ್ನಿ ಸೇರಿದಂತೆ ಉಭಯ ಕುಟುಂಬಗಳ ನಾಲ್ವರು ಸದಸ್ಯರ ವಿರುದ್ಧ ಸ್ವಯಂ ಪ್ರೇರಿತ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು. ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 376, ಪೋಕ್ಸೊ ಕಾಯ್ದೆ–2012ರ ಕಲಂ 9 ಮತ್ತು 11 ಹಾಗೂ ಬಾಲ್ಯ ವಿವಾಹ ತಡೆ ಕಾಯ್ದೆ –2006ರ ಕಲಂ 9 ಮತ್ತು 11ರ ಅನುಸಾರ ತನಿಖೆ ನಡೆಸಿ ಸಿಟಿ ಸಿವಿಲ್ ಮತ್ತು ಸೆಷನ್ಸ್‌ನ ತ್ವರಿತ ವಿಲೇವಾರಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣ ರದ್ದು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದ ಅರ್ಜಿದಾರರ ಪರ ವಕೀಲರು ವಾದ ಮಂಡನೆ ವೇಳೆ ಉಲ್ಲೇಖಿಸಿದ ಮೊಹಮದ್ ಸಮೀಮ್ V/S ಹರಿಯಾಣ ರಾಜ್ಯ ಸರ್ಕಾರ ಹಾಗೂ ಫಿಜಾ ಮತ್ತು ಇತರರು V/S ದೆಹಲಿ ಸರ್ಕಾರದ ಮಧ್ಯದ ಪ್ರಕರಣದಲ್ಲಿ ಹೈಕೋರ್ಟ್ ನೀಡಿರುವ ತೀರ್ಪನ್ನು ಮಾನ್ಯ ಮಾಡಿರುವ ನ್ಯಾಯಪೀಠ ವಿಚಾರಣಾ ನ್ಯಾಯಾಲಯದಲ್ಲಿನ ಪ್ರಕರಣವನ್ನು ರದ್ದುಪಡಿಸಿ ಆದೇಶಿಸಿದೆ.

'ಕೆಜಿಎಫ್– 2' ಹಾಡು ಬಳಕೆ: ರಾಹುಲ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಭಾರತ ಜೋಡೊ ಯಾತ್ರೆಯಲ್ಲಿ 'ಕೆಜಿಎಫ್–2' ಸಿನಿಮಾ ಹಾಡು ಬಳಸಿ ಕೃತಿಚೌರ್ಯ ಆರೋಪದಡಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸೇರಿ ಮೂವರ ವಿರುದ್ಧ ಯಶವಂತಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಎಂಆರ್‌ಟಿ ಮ್ಯೂಸಿಕ್ ಆಡಿಯೊ ಕಂಪನಿ ಪಾಲುದಾರ ಎಂ.ನವೀನ್‌ಕುಮಾರ್ ದೂರು ನೀಡಿದ್ದಾರೆ. ಕೃತಿಚೌರ್ಯ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ರಾಹುಲ್‌ಗಾಂಧಿ, ಜೈರಾಮ್ ರಮೇಶ್, ಸುಪ್ರಿಯಾ ಶ್ರೀನಾತೆ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.


ಚಿರತೆ ಸೆರೆ-ಜನರ ನಿಟ್ಟುಸಿರು

ಕೆ.ಆರ್.ನಗರ: ಪಟ್ಟಣದ ಮುಳ್ಳೂರು ರಸ್ತೆಯಲ್ಲಿ ಶುಕ್ರವಾರ ಅರಣ್ಯ ಇಲಾಖೆ ಅಧಿಕಾರಿ ಸೇರಿದಂತೆ ನಾಲ್ವರ ಮೇಲೆ ಎಗರಿ ಗಾಯಗೊಳಿಸಿ ಆತಂಕ ಸೃಷ್ಟಿಸಿದ್ದ ಚಿರತೆಯನ್ನು ಜಂಟಿ ಕಾರ್ಯಾಚರಣೆ ನಡೆಸಿ ಸೆರೆ ಹಿಡಿಯಲಾಯಿತು.

ಗಾಯಗೊಂಡಿರುವ ಉಪ ವಲಯ ಅರಣ್ಯಾಧಿಕಾರಿ ಮಂಜುನಾಥ್, ಕನಕ ನಗರ ನಿವಾಸಿಗಳಾದ ವೆಂಕಟೇಶ್, ಕರಿಗೌಡ, ಪರಶಿವ ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೂರ್ನಾಲ್ಕು ದಿನಗಳಿಂದ ಅಲ್ಲಲ್ಲಿ ಕಾಣಿಸಿಕೊಂಡಿದ್ದ ಚಿರತೆ ಆತಂಕ ಸೃಷ್ಟಿಸಿತ್ತು. ಗುರುವಾರ ರಾತ್ರಿ 10ಗಂಟೆಯವರೆಗೂ ಕಾಲೇಜು ಸುತ್ತ ಜಾಲಾಡಿದ್ದರೂ ಸುಳಿವು ಸಿಕ್ಕಿರಲಿಲ್ಲ.

ಪಟ್ಟಣದ ಮುಳ್ಳೂರು ರಸ್ತೆಯ ರಾಜ್ ಪ್ರಕಾಶ್ ಶಾಲೆ ಬಳಿ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಕಾಣಿಸಿಕೊಂಡಿತ್ತು. 'ಅರಣ್ಯ ಇಲಾಖೆ, ಅಗ್ನಿಶಾಮಕ ಸಿಬ್ಬಂದಿ ಹಾಗೂ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಚಿರತೆಯನ್ನು ಸೆರೆ ಹಿಡಿಯಲಾಗಿದೆ. ಬಂಡೀಪುರ ಕಾಡಿಗೆ ಬಿಡುತ್ತೇವೆ' ಎಂದು ವಲಯ ಅರಣ್ಯಾಧಿಕಾರಿ ರಶ್ಮಿ ತಿಳಿಸಿದ್ದಾರೆ.



ಸೆರೆ ಸಿಕ್ಕ ಚಿರತೆ.

ಏಕಪಕ್ಷೀಯ ನಿರ್ಧಾರ: ರೂಪ ಖಂಡನೆ

ಹಾಸನ: 'ಒಪ್ಪಿಗೆ ಇಲ್ಲದಿದ್ದರೂ ನನ್ನ ಪದ್ಯವನ್ನು ಪಠ್ಯಕ್ಕೆ ಬಳಸಿರುವ ಸರ್ಕಾರದ ಏಕಪಕ್ಷೀಯ ಹಾಗೂ ಆಗ್ರಹಪೂರ್ವಕವಾದ ನಡೆಯು ತೀವ್ರ ಜಿಗುಪ್ಸೆ ಹುಟ್ಟಿಸಿದೆ. ಇದು ಖಂಡನೀಯ' ಎಂದು ಲೇಖಕಿ ರೂಪ ಹಾಸನ ಹೇಳಿದ್ದಾರೆ.

'ಪದ್ಯ ಬಳಕೆಗೆ ಅನುಮತಿ ಬಯಸಿ ಆ.16ರಂದು ಕರ್ನಾಟಕ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರಿಂದ ಪತ್ರ ಬಂದಿತ್ತು. ಅನುಮತಿ ನಿರಾಕರಿಸಿ ಆ.26ರಂದು ಮರುಪತ್ರ ಬರೆದಿದ್ದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಊಟಿ: ಜನವಸತಿ ಬಳಿ ಹುಲಿ ಪ್ರತ್ಯಕ್ಷ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ): ನೆರೆಯ ತಮಿಳುನಾಡಿನ ಪ್ರಸಿದ್ಧ ಪ್ರವಾಸಿ ತಾಣ ಊಟಿಯಲ್ಲಿರುವ ಹಿಂದೂಸ್ತಾನ್ ಫೋಟೊ ಫಿಲ್ಮ್ಸ್ ಬಳಿ ಹುಲಿಯೊಂದು ಹಸುವನ್ನು ಬೇಟೆಯಾಡಿದೆ.

ಇಲ್ಲಿಂದ ಕೂಗಳತೆ ದೂರದಲ್ಲಿರುವ ಇಂದುನಗರ ಎಂಬ ಜನವಸತಿ ಪ್ರದೇಶದಲ್ಲಿ ಹುಲಿಯು ಹಸುವಿನ ಕಳೇಬರದ ಬಳಿ ನಿಂತಿರುವ ದೃಶ್ಯವನ್ನು ಸ್ಥಳೀಯ ನಿವಾಸಿಗಳು ಗುರುವಾರ ಬೆಳಿಗ್ಗೆ ಸೆರೆ ಹಿಡಿದಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಹುಲಿಯು ಬುಧವಾರ ಹುಲ್ಲುಗಾವಲಿನಲ್ಲಿ ಮೇಯುತ್ತಿದ್ದ ಹಸುವನ್ನು ಬೇಟೆಯಾಡಿರಬಹುದು ಎಂದು ಶಂಕಿಸಲಾಗಿದೆ. ಫೋಟೊ ಫಿಲ್ಮ್ಸ್ ಪ್ರದೇಶ ಪ್ರವಾಸಿ ತಾಣವಾಗಿದ್ದು, ಸಾವಿರಾರು ಪ್ರವಾಸಿಗರು ಪ್ರತಿ ದಿನ ಭೇಟಿ ನೀಡುತ್ತಾರೆ. 'ಕರ್ನಾಟಕ ಸೇರಿದಂತೆ ವಿವಿಧೆಡೆಯಿಂದ ಊಟಿಗೆ ಬರುವವರು ಎಚ್ಚರಿಕೆ ವಹಿಸಬೇಕು' ಎಂದು ಸ್ಥಳೀಯರು ಕೋರಿದ್ದಾರೆ.

ಊಟಿಯ ಬಹುತೇಕ ಪ್ರವಾಸಿತಾಣಗಳು ಅರಣ್ಯಕ್ಕೆ ಹೊಂದಿಕೊಂಡಿವೆ. ಆದ್ದರಿಂದ, ಕಾಡೆಮ್ಮೆ, ಚಿರತೆ, ಆನೆಗಳು ಆಗಾಗ್ಗೆ ಪ್ರವಾಸಿ ತಾಣದ ವಸತಿ ಪ್ರದೇಶದ ಬಳಿ ಕಾಣಿಸಿಕೊಳ್ಳುತ್ತಿರುತ್ತವೆ. ಆದರೆ, ಹುಲಿ ಕಾಣಿಸಿಕೊಂಡಿರಲಿಲ್ಲ. ಇದೇ ವರ್ಷದ ಜುಲೈನಲ್ಲಿ ಈ ಭಾಗದಲ್ಲಿ ಹುಲಿ ಕಾಣಿಸಿಕೊಂಡಿದ್ದು ವರದಿಯಾಗಿತ್ತು. ಆದರೆ, ಬೇಟೆಯಾಡಿದ ಪ್ರಕರಣ ವರದಿಯಾಗಿರಲಿಲ್ಲ.

'ಆ ಹುಲಿಯನ್ನು ಸೆರೆಹಿಡಿಯಬೇಕು; ನಮ್ಮಲ್ಲಿ ಮನೆ ಮಾಡಿರುವ ಆತಂಕ ನಿವಾರಿಸಬೇಕು' ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ. ಅರಣ್ಯ ಇಲಾಖೆಯು ಹುಲಿಯ ಚಲನ ವಲನಗಳ ಮೇಲೆ ನಿಗಾ ಇಟ್ಟಿದ್ದು, ಅದಕ್ಕಾಗಿ ವಿಶೇಷ ತಂಡವನ್ನು ರಚಿಸಿದೆ' ಎಂದು ಮೂಲಗಳು ತಿಳಿಸಿವೆ.



ಹಸುವಿನ ಕಳೇಬರದ ಪಕ್ಕ ನಿಂತಿರುವ ಹುಲಿ (ವಿಡಿಯೊ ಚಿತ್ರ)

ಕೋಳ್ಯೂರು ರಾಮಚಂದ್ರ ರಾಯರಿಗೆ ಶೇಣಿ ಪ್ರಶಸ್ತಿ



ರಾಮಚಂದ್ರರಾಯ

ಮಂಗಳೂರು: ಶೇಣಿ ಗೋಪಾಲಕೃಷ್ಣ ಭಟ್ ಚಾರಿಟಬಲ್ ಟ್ರಸ್ಟ್ ನೀಡುವ 2022ನೇ ಸಾಲಿನ ಶೇಣಿ ಪ್ರಶಸ್ತಿಗೆ ಯಕ್ಷಗಾನದ ಕಲಾವಿದ ಕೋಳ್ಯೂರು ರಾಮಚಂದ್ರರಾಯರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ₹30 ಸಾವಿರ ಗೌರವಧನ ವನ್ನು ಹೊಂದಿದೆ ಎಂದು ಟ್ರಸ್ಟ್‌ನ ಉಪಾಧ್ಯಕ್ಷ ಕೂಡ್ಲು ಮಹಾಬಲ ಶೆಟ್ಟಿ ತಿಳಿಸಿದರು.

ಉರ್ವ ಕೆನರಾ ಹೈಸ್ಕೂಲ್‌ನಲ್ಲಿ ಇದೇ 13ರಂದು ಸಂಜೆ 4ಕ್ಕೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಗುಜರಾತ್ ವಿಧಾನಸಭೆ ಚುನಾವಣೆ: ಈ 10 ವಿಷಯಗಳು ನಿರ್ಣಾಯಕ

ಒಂದೆಡೆ ತವರು ರಾಜ್ಯದ ಮೇಲೆ ಪ್ರಧಾನಿ ಮೋದಿ ಅವರು ಹೊಂದಿರುವ ಪ್ರಭಾವ ಹಾಗೂ ಹಣದುಬ್ಬರ, ನಿರುದ್ಯೋಗದ ಬಗ್ಗೆ ಜನರಲ್ಲಿ ಬೆಳೆಯುತ್ತಿರುವ ಅತೃಪ್ತಿ ಸೇರಿದಂತೆ ಹಲವು ಹತ್ತು ವಿಚಾರಗಳು ಈ ಸಲದ ಗುಜರಾತ್ ವಿಧಾನಸಭಾ ಚುನಾವಣೆಯ ಮೇಲೆ ಪರಿಣಾಮ ಬೀರಲಿವೆ.

1 ನರೇಂದ್ರ ಮೋದಿ: 2001ರಿಂದ 2014ರವರೆಗೆ ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರು, ರಾಜ್ಯದಲ್ಲಿ ಈಗಲೂ ಅಪಾರ ಬೆಂಬಲಿಗರನ್ನು ಹೊಂದಿದ್ದಾರೆ. ಎಂಟು ವರ್ಷಗಳಿಂದ ಪ್ರಧಾನಿ ಹುದ್ದೆಯಲ್ಲಿರುವ ಅವರು ಈಗಲೂ ಪಕ್ಷದ ‘ಟ್ರಂಪ್‌ಕಾರ್ಡ್’. ಬರುವ ಚುನಾವಣೆಯಲ್ಲೂ ‘ಮೋದಿ ಅಲೆ’ಯೇ ನಿರ್ಣಾಯಕ ಪಾತ್ರ ವಹಿಸಲಿದೆ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

2 ಬಿಲ್ಕಿಸ್ ಬಾನು ಪ್ರಕರಣ: ಗುಜರಾತ್ ಅನ್ನು ಸಂಘ ಪರಿವಾರದ ಹಿಂದುತ್ವದ ಪ್ರಯೋಗಾಲಯ ಎಂದು ಪರಿಗಣಿಸಲಾಗಿದೆ. ಬಿಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಪ್ರಕರಣದ ಅಪರಾಧಿಗಳನ್ನು ಬಿಡುಗಡೆ ಮಾಡಿದ ಪ್ರಕರಣವು ಬಹುಸಂಖ್ಯಾತರು ಹಾಗೂ ಅಲ್ಪಸಂಖ್ಯಾತರ ಮೇಲೆ ಬೇರೆ ಬೇರೆ ಪರಿಣಾಮ ಬೀರಲಿದೆ. ಬಿಲ್ಕಿಸ್ ಬಾನು ಅವರಿಗೆ ನ್ಯಾಯ ಬೇಕು ಎಂದು ಅಲ್ಪಸಂಖ್ಯಾತರು ಆಗ್ರಹಿಸಿದ್ದರೆ, ಬಹುಸಂಖ್ಯಾತರು ಈ ವಿಷಯವನ್ನು ನಿರ್ಲಕ್ಷಿಸಿದಂತೆ ತೋರುತ್ತದೆ

3 ಆಡಳಿತ ವಿರೋಧಿ ಅಲೆ: 1998ರಿಂದ ಆರಂಭಿಸಿ ಒಟ್ಟು 24 ವರ್ಷಗಳಿಂದ ಗುಜರಾತ್‌ನಲ್ಲಿ ಅಧಿಕಾರದಲ್ಲಿರುವ ಬಿಜೆಪಿಯ ಬಗ್ಗೆ ಸಮಾಜದ ಕೆಲವು ವರ್ಗಗಳಲ್ಲಿ ಅತೃಪ್ತಿ ಬೆಳೆಯುತ್ತಿದೆ ಎಂಬುದು ವಿಶ್ಲೇಷಕರ ಅಭಿಪ್ರಾಯ. ಬಿಜೆಪಿ ಇಷ್ಟು ವರ್ಷಗಳಿಂದ ಅಧಿಕಾರದಲ್ಲಿದ್ದರೂ, ಹಣದುಬ್ಬರ, ನಿರುದ್ಯೋಗ, ಜನಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳು ಇನ್ನೂ ಬಗೆಹರಿದಿಲ್ಲ ಎನ್ನುತ್ತಾರೆ ವಿಶ್ಲೇಷಕ ಹರಿ ದೇಸಾಯಿ.

4 ಮೋರ್ಬಿ ಸೇತುವೆ ಕುಸಿತ: 135 ಜನರ ಸಾವಿಗೆ ಕಾರಣವಾದ ಮೋರ್ಬಿ ಸೇತುವೆ ಕುಸಿತ ಪ್ರಕರಣವು ಸರ್ಕಾರಿ ಅಧಿಕಾರಿಗಳು ಹಾಗೂ ಶ್ರೀಮಂತ ಉದ್ಯಮಿಗಳ ನಡುವಿನ ಸಂಬಂಧವನ್ನು ಮುನ್ನೆಲೆಗೆ ತಂದಿದೆ. ಮುಂದಿನ ಸರ್ಕಾರವನ್ನು ಆಯ್ಕೆ ಮಾಡಲು ಮತಗಟ್ಟೆಗೆ ಹೋಗುವ ಜನರ ಮನಸ್ಸಿನಲ್ಲಿ ಈ ವಿಷಯ ಆಳವಾಗಿ ನಾಟಿದೆ.

5 ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಪರೀಕ್ಷೆ ಮುಂದೂಡಿಕೆ: ಸರ್ಕಾರಿ ಉದ್ಯೋಗ ಪಡೆಯುವ ಉತ್ಸಾಹದಿಂದ ಕಠಿಣ ಅಭ್ಯಾಸದಲ್ಲಿ ತೊಡಗಿದ್ದ ಯುವಜನರ ಆಕಾಂಕ್ಷೆಯನ್ನು, ನಿರಂತರವಾಗಿ ನಡೆದ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಸರ್ಕಾರಿ ನೇಮಕಾತಿ ಪರೀಕ್ಷೆ ಮುಂದೂಡಿಕೆ ಘಟನೆಗಳು ಗಾಸಿಗೊಳಿಸಿವೆ. ಇವು ಅವರಲ್ಲಿ ಅಸಮಾಧಾನ ಮೂಡಿಸಿವೆ.

6 ಮೂಲಸೌಕರ್ಯ ಕೊರತೆ: ಕುಗ್ರಾಮಗಳಲ್ಲಿ ಶಾಲಾ ಕೊಠಡಿಗಳಿದ್ದರೂ ಅಲ್ಲಿ ಶಿಕ್ಷಕರ ಅಭಾವವಿರುತ್ತದೆ. ಒಂದು ವೇಳೆ ಶಿಕ್ಷಕರಿದ್ದರೂ, ತರಗತಿ ಕೋಣೆಗಳು ಇರುವುದಿಲ್ಲ. ಈ ಭಾಗಗಳಲ್ಲಿ ಶಿಕ್ಷಣ ಬಡವಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ವೈದ್ಯರ ತೀವ್ರ ಕೊರತೆಯಿದ್ದು, ಗ್ರಾಮೀಣ ಭಾಗದ ಆರೋಗ್ಯ ಸೇವೆಗಳಿಗೆ ಅಡ್ಡಿಯಾಗಿದೆ.



7 ರೈತರ ಸಮಸ್ಯೆಗಳು: ಕಳೆದ 10 ವರ್ಷಗಳಿಂದ ಬೆಳೆ ಹಾನಿಗೆ ಪರಿಹಾರ ನೀಡಿಲ್ಲ ಎಂದು ಆರೋಪಿಸಿ ರಾಜ್ಯದ ಹಲವು ಭಾಗಗಳಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ.

8 ಕೆಟ್ಟ ರಸ್ತೆಗಳು: ಒಂದು ಕಾಲದಲ್ಲಿ ಗುಜರಾತ್ ಎಂದರೆ ಗುಣಮಟ್ಟದ ರಸ್ತೆಗಳಿಗೆ ಹೆಸರಾಗಿತ್ತು. ಆದರೆ, ಕಳೆದ ಐದಾರು ವರ್ಷಗಳಿಂದ ರಾಜ್ಯ ಸರ್ಕಾರವಾಗಲೀ, ಸ್ಥಳೀಯ ಪಾಲಿಕೆಗಳಾಗಲೀ ಉತ್ತಮ ರಸ್ತೆಗಳನ್ನು ನಿರ್ಮಿಸುತ್ತಿಲ್ಲ. ರಸ್ತೆಗಳ ನಿರ್ವಹಣೆಯನ್ನೂ ಮಾಡುತ್ತಿಲ್ಲ. ರಸ್ತೆಗುಂಡಿ ವಿಚಾರವು ರಾಜ್ಯದ ಎಲ್ಲೆಡೆ ಸಾಮಾನ್ಯ ಸಂಗತಿಯಾಗಿಬಿಟ್ಟಿದೆ.

9 ದುಬಾರಿ ವಿದ್ಯುತ್ ದರ: ದೇಶದಲ್ಲಿ ಅತಿಹೆಚ್ಚು ವಿದ್ಯುತ್ ದರ ವಿಧಿಸುವ ರಾಜ್ಯಗಳಲ್ಲಿ ಗುಜರಾತ್ ಕೂಡಾ ಒಂದು. ದರ ಇಳಿಸುವಂತೆ ದಕ್ಷಿಣ ಗುಜರಾತ್ ಛೇಂಬರ್ ಆಫ್ ಕಾಮರ್ಸ್ ಇತ್ತೀಚೆಗೆ ಸರ್ಕಾರಕ್ಕೆ ಮನವಿ ಮಾಡಿತ್ತು. ಮಹಾರಾಷ್ಟ್ರ ಹಾಗೂ ತೆಲಂಗಾಣದಲ್ಲಿ ಪ್ರತಿ ಯೂನಿಟ್‌ಗೆ ₹4 ದರ ಇದ್ದು, ತಾವು ಇಲ್ಲಿ ₹7.50 ನೀಡುತ್ತಿದ್ದೇವೆ ಎಂದು ಸಂಸ್ಥೆ ಅಳಲು ತೋಡಿಕೊಂಡಿತ್ತು.

10 ಭೂಸ್ವಾಧೀನ: ಸರ್ಕಾರದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ತಮ್ಮ ಜಮೀನು ನೀಡಿರುವ ರೈತರು ಅತೃಪ್ತರಾಗಿದ್ದಾರೆ. ಅಹಮದಾಬಾದ್–ಮುಂಬೈ ಮಾರ್ಗದ ಹೈಸ್ಪೀಡ್ ಬುಲೆಟ್ ರೈಲು ಯೋಜನೆ ಭೂಸ್ವಾಧೀನಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ.

ಆಧಾರ: ಪಿಟಿಐ

ಗುಜರಾತ್ ವಿಧಾನಸಭಾ ಚುನಾವಣೆ • ಮಾಜಿ ಸುದ್ದಿ ನಿರೂಪಕನ ಮುಂದಾಳತ್ವದಲ್ಲಿ ಎಎಪಿ ಸ್ಪರ್ಧೆ

ಈಸುದಾನ್ ಎಎಪಿ ಸಿ.ಎಂ ಅಭ್ಯರ್ಥಿ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಜನಪ್ರಿಯ ಸುದ್ದಿ ನಿರೂಪಕರಾಗಿದ್ದ ಈಸುದಾನ್ ಗಢವಿ ಅವರನ್ನು ಎಎಪಿ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಿದೆ. ವರ್ಷದ ಹಿಂದೆಯಷ್ಟೇ ಪಕ್ಷಕ್ಕೆ ಸೇರಿದ್ದ ಗಢವಿ ಅವರ ನೇತೃತ್ವದಲ್ಲಿ ಚುನಾವಣೆ ಎದುರಿಸುವುದಾಗಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಶುಕ್ರವಾರ ಇಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಅವರು ಈ ನಿರ್ಧಾರ ಪ್ರಕಟಿಸಿದ್ದಾರೆ. ಇತರೆ ಹಿಂದುಳಿದ ವರ್ಗ ಮತ್ತು ರೈತ ಕುಟುಂಬಕ್ಕೆ ಸೇರಿದ ಗಢವಿ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಿದರೆ, ಗುಜರಾತ್‌ನ ಗ್ರಾಮೀಣ ಪ್ರದೇಶದ ಮತದಾರರನ್ನು ಸೆಳೆಯುವುದು ಸಾಧ್ಯವಾಗುತ್ತದೆ ಎಂದು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

40 ವರ್ಷದ ಗಢವಿ ಅವರು ಮಹಾತ್ಮ ಗಾಂಧಿ ಅವರು ಸ್ಥಾಪಿಸಿದ್ದ ಗುಜರಾತ್ ವಿದ್ಯಾಪೀಠದಲ್ಲಿ ಪತ್ರಿಕೋದ್ಯಮ ಪದವಿ ಪಡೆದಿದ್ದಾರೆ. 17 ವರ್ಷದ ಹಿಂದೆ ಗುಜರಾತ್ ಟಿ.ವಿ.ಯಲ್ಲಿ ಸುದ್ದಿ ನಿರೂಪಕರಾಗಿ ವೃತ್ತಿ ಆರಂಭಿಸಿದ್ದರು. ನಂತರದ ವರ್ಷಗಳಲ್ಲಿ ವಿಟಿವಿ ಟಿ.ವಿ. ಸೇರಿದ ಅವರು, ಅಲ್ಲಿ ಆರಂಭಿಸಲಾದ ‘ಮಹಾ ಮಂಥನ’ ಕಾರ್ಯಕ್ರಮದ ನಿರೂಪಕರಾದರು. ಈ ಕಾರ್ಯಕ್ರಮವು ಗಢವಿ ಅವರಿಗೆ ಹೆಚ್ಚು ಜನಪ್ರಿಯತೆ ತಂದುಕೊಟ್ಟಿತು.

ಕೃಷಿ ಸಮಸ್ಯೆಗಳ ಕುರಿತು ಚರ್ಚೆ ಮತ್ತು ಸಂವಾದ ನಡೆಯುತ್ತಿದ್ದ ‘ಮಹಾ ಮಂಥನ’ ಕಾರ್ಯಕ್ರಮವು ಗಢವಿ ಅವರ ಆಕ್ರಮಣಕಾರಿ ನಿರೂಪಣೆಯಿಂದಲೇ ಗುಜರಾತ್‌ನ ಮನೆಮಾತಾಗಿತ್ತು. ಗಢವಿ ಅವರಿಗಿರುವ ಈ ಜನಪ್ರಿಯತೆ ಪಕ್ಷಕ್ಕೆ ಅನುಕೂಲವಾಗಲಿದೆ ಎಂದು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎನ್ನಲಾಗಿದೆ.

ಎಎಪಿಯ ಈ ನಡೆಯು ಕಾಂಗ್ರೆಸ್‌ಗೆ ಹೊಡೆತ ನೀಡಲಿದೆ. ರಾಜ್ಯದಲ್ಲಿ ಕಾಂಗ್ರೆಸ್‌ನ ಗಟ್ಟಿ ನೆಲೆ ಇರುವುದು ಗ್ರಾಮೀಣ ಪ್ರದೇಶದಲ್ಲಿ. ಆ ಮತದಾರರನ್ನು ಗುರಿಯಾಗಿಸಿಕೊಂಡೇ ಗಢವಿ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಎಎಪಿ ಘೋಷಿಸಿದೆ. ಇದರಿಂದ ಕಾಂಗ್ರೆಸ್‌ಗೆ ಹಿನ್ನಡೆಯಾಗಲಿದೆ ಎಂದು ವಿಶ್ಲೇಷಿಸಲಾಗಿದೆ.



‘ಕೇಜ್ರಿವಾಲ್ ಸ್ಫೂರ್ತಿ’

‘ಪತ್ರಕರ್ತನಾಗಿದ್ದಾಗ ನಾನು ಸದಾ ಜನರ ಸಮಸ್ಯೆಗಳ ಕುರಿತು ದನಿ ಎತ್ತಿದ್ದೇನೆ. ರೈತರು, ನಿರುದ್ಯೋಗಿಗಳು, ಮಹಿಳೆಯರು, ಕೂಲಿ ಕಾರ್ಮಿಕರು ಮತ್ತು ಸಣ್ಣ ವ್ಯಾಪಾರಿಗಳಿಗಾಗಿ ಹೋರಾಡಿದ್ದೇನೆ. ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಸಹ ಜನರ ಸೇವೆ ಮಾಡುವ ಉದ್ದೇಶದಿಂದ ಸರ್ಕಾರಿ ಉದ್ಯೋಗಕ್ಕೆ ರಾಜೀನಾಮೆ ನೀಡಿ, ರಾಜಕೀಯಕ್ಕೆ ಬಂದವರು. ನಾನು ಸಹ ಗುಜರಾತ್ ಜನರ ಕಷ್ಟಗಳನ್ನು ನೋಡಿದ್ದೇನೆ. ಈ ವ್ಯವಸ್ಥೆಯನ್ನು ಸರಿಪಡಿಸಬೇಕು. ನಮ್ಮಂತವರು ರಾಜಕೀಯಕ್ಕೆ ಬರಬೇಕು. ಇದಕ್ಕೆ ಅರವಿಂದ ಕೇಜ್ರಿವಾಲ್ ಅವರೇ ನನಗೆ ಸ್ಫೂರ್ತಿ’ ಎಂದು ಈಸುದಾನ್ ಗಢವಿ ಹೇಳಿದ್ದಾರೆ.

1 ಲಕ್ಷ ಉದ್ಯೋಗ: ಪ್ರಿಯಾಂಕಾ ಭರವಸೆ

ಕಂಗಡಾ (ಹಿಮಾಚಲ ಪ್ರದೇಶ) (ಪಿಟಿಐ): ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, 1 ಲಕ್ಷ ಸರ್ಕಾರಿ ಉದ್ಯೋಗ ನೀಡುತ್ತೇವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಶುಕ್ರವಾರ ಇಲ್ಲಿ ಹೇಳಿದ್ದಾರೆ.



ಪ್ರಿಯಾಂಕಾ ಗಾಂಧಿ

ಶುಕ್ರವಾರ ಇಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಪ್ರಿಯಾಂಕಾ ಅವರು, ಹಲವು ಆಶ್ವಾಸನೆಗಳನ್ನು ನೀಡಿದರು. ರಾಜ್ಯದ ಪ್ರತಿ ಮಹಿಳೆಗೂ ₹1,500 ಆರ್ಥಿಕ ನೆರವನ್ನು ನೀಡುವುದಾಗಿ ಅವರು ಘೋಷಿಸಿದರು.

ಬಿಜೆಪಿ ಸರ್ಕಾರದ ದುರಾಡಳಿತದಿಂದ ರಾಜ್ಯದ ಖಜಾನೆ ಬರಿದಾಗಿದೆ. ಸಾಲ ಹೆಚ್ಚಾಗಿದೆ. ಹೀಗಾಗಿಯೇ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿಲ್ಲ. ಇದರಿಂದ ರಾಜ್ಯದಲ್ಲಿ 63,000ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ನಾವು ಅಧಿಕಾರಕ್ಕೆ ಬಂದರೆ 1 ಲಕ್ಷ ನೇಮಕಾತಿಯನ್ನು ನಡೆಸುತ್ತೇವೆ ಎಂದು ಅವರು ಹೇಳಿದರು.

ಛತ್ತೀಸಗಡದಲ್ಲಿ ಕಾಂಗ್ರೆಸ್ ಸರ್ಕಾರವು ಮೂರು ವರ್ಷದಲ್ಲಿ ಒಟ್ಟು 1.30 ಲಕ್ಷ ನೇಮಕಾತಿಗಳನ್ನು ನಡೆಸಿದೆ. ನಮ್ಮದೇ ಪಕ್ಷದ ಸರ್ಕಾರವಿರುವ ರಾಜಸ್ಥಾನದಲ್ಲಿ 1 ಲಕ್ಷ ಹುದ್ದೆಗಳಿಗೆ ನೇಮಕಾತಿ ನಡೆಸಲಾಗಿದೆ. ಹೀಗಾಗಿಯೇ ಈ ಎರಡೂ ರಾಜ್ಯಗಳಲ್ಲಿ ನಿರುದ್ಯೋಗದ ಪ್ರಮಾಣ ಕಡಿಮೆ ಇದೆ. ಹಿಮಾಚಲ ಪ್ರದೇಶದಲ್ಲೂ ಅಂತಹದ್ದೇ ವಾತಾವರಣ ನಿರ್ಮಿಸುತ್ತೇವೆ ಎಂದು ಪ್ರಿಯಾಂಕಾ ಹೇಳಿದ್ದಾರೆ.



ಹಿಮಾಚಲ ಪ್ರದೇಶದ ಕಂಗಡಾ ಜಿಲ್ಲೆಯಲ್ಲಿ ಶುಕ್ರವಾರ ಉತ್ತರ ಪ್ರದೇಶ ಮುಖ್ಯಮಂತ್ರಿ ಹಾಗೂ ಬಿಜೆಪಿ ನಾಯಕ ಯೋಗಿ ಆದಿತ್ಯನಾಥ ಅವರು ಪಕ್ಷದ ಅಭ್ಯರ್ಥಿ ಸಂಜಯ್ ಗುಲೇರಿಯಾ ಅವರ ಪರವಾಗಿ ಪ್ರಚಾರ ನಡೆಸಿದರು

–ಪಿಟಿಐ ಚಿತ್ರ

ನುಡಿ–ಕಿಡಿ

ಕಾಂಗ್ರೆಸ್ ರಾಜ–ರಾಣಿಯರ ಪಕ್ಷ. ಹಿಮಾಚಲ ಪ್ರದೇಶ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷೆ ಇರುವ ಏಳು–ಎಂಟು ನಾಯಕರಿದ್ದಾರೆ. ಆದರೆ, ವಾಸ್ತವದಲ್ಲಿ ಒಬ್ಬರಿಗೂ ಆ ಹುದ್ದೆ ಸಿಗುವುದಿಲ್ಲ

ಅಮಿತ್ ಶಾ, ಕೇಂದ್ರ ಗೃಹ ಸಚಿವ ಮತ್ತು ಬಿಜೆಪಿ ನಾಯಕ

ನಮ್ಮಲ್ಲಿ ಏಳೆಂಟು ಮಂದಿ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಗಳಾಗಲು ಪೈಪೋಟಿ ನಡೆಸುತ್ತಿದ್ದಾರೆ ಎಂಬುದು, ನಮ್ಮಲ್ಲಿ ಸಮರ್ಥರ ಸಂಖ್ಯೆ ಹೆಚ್ಚು ಇದೆ ಎಂಬುದನ್ನು ಸೂಚಿಸುತ್ತದೆ. ಇದು ಒಳ್ಳೆಯದೇ ಅಲ್ಲವೆ?

ಸುಧೀರ್ ಶರ್ಮಾ, ಹಿಮಾಚಲ ಪ್ರದೇಶ ಕಾಂಗ್ರೆಸ್ ನಾಯಕ

₹10 ಲಕ್ಷ ಕೋಟಿ ಸೆಳೆದ ‘ಜಿಮ್’

ಒಂದನೇ ಪುಟದಿಂದ...

‘ನಿಮ್ಮ (ಉದ್ಯಮಿಗಳು) ಸವಾಲುಗಳು ನಮ್ಮ (ಸರ್ಕಾರ) ಸವಾಲುಗಳೂ ಆಗಿವೆ. ನಿಮ್ಮ ಸಮಸ್ಯೆ ನಮ್ಮ ಸಮಸ್ಯೆಯೂ ಆಗಿದೆ ಎಂದು ಭಾವಿಸಿ, ತ್ವರಿತಗತಿಯಲ್ಲಿ ಅವುಗಳನ್ನು ಬಗೆಹರಿಸಲು ಕೆಲಸ ಮಾಡುತ್ತೇವೆ’ ಎಂದು ಉದ್ಯಮಿಗಳಿಗೆ ಮುಖ್ಯಮಂತ್ರಿ ಭರವಸೆ ನೀಡಿದರು.

‘ಹೊಸ ಹೂಡಿಕೆಗಳು ಎಷ್ಟಾಗಬಹುದು ಎಂಬುದು ಇನ್ನು ಮೂರು ತಿಂಗಳಲ್ಲಿ ಗೊತ್ತಾಗಲಿದೆ. ಈಗಾಗಲೇ ಶೇ 29 ರಷ್ಟು ಹೂಡಿಕೆ ನಿಶ್ಚಿತವಾಗಿದೆ. 3 ತಿಂಗಳಲ್ಲಿ ಬಂಡವಾಳ ಹೂಡಿಕೆಯ ಎಲ್ಲ ಒಪ್ಪಂದಗಳ ಅನುಷ್ಠಾನ ಪ್ರಕ್ರಿಯೆ ಪ್ರಾರಂಭವಾಗಬೇಕು. ಇದರಿಂದ ರಾಜ್ಯದ ಆರ್ಥಿಕ ಬೆಳವಣಿಗೆ ಮತ್ತೊಂದು ಸ್ತರಕ್ಕೆ ಏರಲಿದೆ. ಹೂಡಿಕೆದಾರರ ಸಮಾವೇಶದ ಬಳಿಕ ರಾಜ್ಯದಲ್ಲಿ ಉದ್ಯಮ ಕ್ಷೇತ್ರದ ಬೆಳವಣಿಗೆ 120 ಕಿ.ಮೀ ವೇಗದಲ್ಲಿ ಸಾಗಲಿದೆ. ದೇಶಕ್ಕೆ ಕೊಡುಗೆಯಾಗಿ ಒಂದು ಟ್ರಿಲಿಯನ್ ಆರ್ಥಿಕತೆ ನೀಡುವುದು ನಮ್ಮ ಸಂಕಲ್ಪ. ಇದಕ್ಕಾಗಿ ಯೋಜನೆ ರೂಪಿಸಿದ್ದೇವೆ’ ಎಂದು ಹೇಳಿದರು.

ಮುಂದಿನ ಜಾಗತಿಕ ಹೂಡಿಕೆದಾರರ ಸಮಾವೇಶ 2025 ಜನವರಿಯಲ್ಲಿ ನಡೆಯಲಿದೆ ಎಂದು ಸಚಿವ ನಿರಾಣಿ ತಿಳಿಸಿದರು. ಇಂಧನ ಸಚಿವ ವಿ.ಸುನಿಲ್ ಕುಮಾರ್, ಕೇಂದ್ರ ಸಚಿವ ಭಗವಂತ ಖೂಬಾ, ಉದ್ಯಮಿಗಳಾದ ವಿನೀತ್ ಮಿತ್ತಲ್, ಉಲ್ಲಾಸ್ ಕಾಮತ್ ಅವರೂ ಮಾತನಾಡಿದರು.

ಸಿ.ಎಂ ಹೇಳಿದ್ದೇನು?

- ಹೂಡಿಕೆ ಎಷ್ಟಾಗಬಹುದು ಎಂದು ಮೂರು ತಿಂಗಳಲ್ಲಿ ತಿಳಿಯಲಿದೆ
- ದೇಶಕ್ಕೆ ಒಂದು ಟ್ರಿಲಿಯನ್ ಆರ್ಥಿಕತೆ ನೀಡುವುದು ನಮ್ಮ ಸಂಕಲ್ಪ

ನವೀನ್ ಕುಮಾರ್ ಜಿಂದಾಲ್: ಎಫ್‌ಐಆರ್ ವರ್ಗಾಯಿಸಲು ಸೂಚನೆ

ನವದೆಹಲಿ (ಪಿಟಿಐ): ಪ್ರವಾದಿ ಮಹಮ್ಮದ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಬಿಜೆಪಿಯ ಉಚ್ಚಾಟಿತ ಮುಖಂಡ ನವೀನ್ ಕುಮಾರ್ ಜಿಂದಾಲ್ ಅವರ ವಿರುದ್ಧ ದೇಶದಾದ್ಯಂತ ದಾಖಲಾಗಿರುವ ಎಲ್ಲ ಎಫ್‌ಐಆರ್‌ಗಳನ್ನು ದೆಹಲಿ ಪೊಲೀಸರಿಗೆ ವರ್ಗಾಯಿಸುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಎಂ.ಎಂ. ಸುಂದ್ರೇಶ್ ಅವರಿದ್ದ ಪೀಠ, ದೆಹಲಿ ಪೊಲೀಸರು ತನಿಖೆ ಮುಕ್ತಾಯಗೊಳ್ಳುವವರೆಗೆ ನವೀನ್ ಕುಮಾರ್ ಜಿಂದಾಲ್ ಅವರಿಗೆ ಮಧ್ಯಂತರ ರಕ್ಷಣೆಯನ್ನೂ ವಿಸ್ತರಿಸಿದೆ.

ಪ್ರವಾದಿಯವರನ್ನು ಅವಹೇಳನ ಮಾಡಿದ ಆರೋಪಗಳ ಸಂಬಂಧ ಜಿಂದಾಲ್ ತಮ್ಮ ವಿರುದ್ಧ ದಾಖಲಾಗಿರುವ ಎಲ್ಲ ಎಫ್‌ಐಆರ್‌ಗಳ ರದ್ದತಿ ಕೋರಿ ದೆಹಲಿ ಹೈಕೋರ್ಟ್ ಮೊರೆ ಹೋಗಲು ಪೀಠ ಅನುಮತಿಸಿತು. ಅಲ್ಲದೆ, ಭವಿಷ್ಯದಲ್ಲಿ ಈ ವಿಚಾರ ಸಂಬಂಧ ದಾಖಲಾಗುವ ಎಫ್‌ಐಆರ್‌ಗಳನ್ನೂ ತನಿಖೆಗಾಗಿ ದೆಹಲಿ ಪೊಲೀಸರಿಗೆ ವರ್ಗಾಯಿಸುವುದಾಗಿ ಪೀಠ ಹೇಳಿತು.

ಮೊರ್ಬಿ ತೂಗುಸೇತುವೆ ದುರಂತ ಪುರಸಭೆ ಮುಖ್ಯಾಧಿಕಾರಿ ಅಮಾನತು

ಮೊರ್ಬಿ(ಪಿಟಿಐ): 135 ಜನರ ಜೀವ ಬಲಿ ತೆಗೆದುಕೊಂಡ ತೂಗು ಸೇತುವೆ ಕುಸಿತ ದುರಂತದ ಸಂಬಂಧ ಮೊರ್ಬಿ ಪುರಸಭೆಯ ಮುಖ್ಯ ಅಧಿಕಾರಿ ಸಂದೀಪ್ ಸಿನ್ಹ ಜಾಲ ಅವರನ್ನು ಗುಜರಾತ್ ರಾಜ್ಯ ಸರ್ಕಾರ ಅಮಾನತುಗೊಳಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.



ಸಂದೀಪ್‌ಸಿನ್ಹ ಜಾಲ ಅವರನ್ನು ರಾಜ್ಯ ನಗರಾಭಿವೃದ್ಧಿ ಇಲಾಖೆ ಅಮಾನತುಗೊಳಿಸಿದೆ. ಮುಂದಿನ ಆದೇಶದವರೆಗೆ ಸ್ಥಾನಿಕ ಹೆಚ್ಚುವರಿ ಜಿಲ್ಲಾಧಿಕಾರಿ ಅವರು ಪುರಸಭೆಯ ಪ್ರಭಾರ ಮುಖ್ಯಾಧಿಕಾರಿಯಾಗಿ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ ಎಂದು ಮೊರ್ಬಿ ಜಿಲ್ಲಾಧಿಕಾರಿ ಜಿ.ಟಿ. ಪಾಂಡ್ಯ ತಿಳಿಸಿದರು.


ಬ್ರಿಟಿಷರ ಕಾಲದಲ್ಲಿ ಮೊರ್ಬಿ ಪಟ್ಟಣದಲ್ಲಿ ಮಚ್ಚು ನದಿಗೆ ನಿರ್ಮಿಸಿದ್ದ 19ನೇ ಶತಮಾನದ ತೂಗುಸೇತುವೆ ಅ.30ರಂದು ಸಂಜೆ ಕುಸಿದು ಬಿದ್ದಿತ್ತು. ದುರಂತದಲ್ಲಿ ಮಹಿಳೆಯರು, ಮಕ್ಕಳು ಮೃತಪಟ್ಟಿದ್ದರು. ಈ ಸೇತುವೆ ದುರಸ್ತಿ ಮತ್ತು ನಿರ್ವಹಣೆಯ ಗುತ್ತಿಗೆಯನ್ನು ಒರೆವಾ ಸಮೂಹ ಕಂಪನಿಗೆ 15 ವರ್ಷಗಳ ಅವಧಿಗೆ ಪುರಸಭೆಯು ನೀಡಿತ್ತು. 230 ಮೀಟರ್ ಉದ್ದದ ಈ ಸೇತುವೆಯ ನವೀಕರಣ ನಿಮಿತ್ತ ಆರು ತಿಂಗಳಿನಿಂದ ನಾಗರಿಕರ ಓಡಾಟ ನಿರ್ಬಂಧಿಸಲಾಗಿತ್ತು.

ಪ್ರಜಾವಾಣಿ@75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ.
ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

ವಿದ್ಯಾರ್ಥಿಗಳು ಓದಲಿ...



‘ಪಿಯುಸಿ ನಾನು 1969ರಲ್ಲಿ ಬೆಂಗಳೂರಿಗೆ ಬಂದ ದಿನಗಳಿಂದಲೂ. ಸುಮಾರು 53 ವರ್ಷಗಳಿಂದ ‘ಪ್ರಜಾವಾಣಿ’ ಓದುತ್ತಿದ್ದೇನೆ. ಪತ್ರಿಕೆಯ ವಸ್ತುನಿಷ್ಠ ವರದಿ, ಅದರ ಭಾಷೆ, ಪುಟ ವಿನ್ಯಾಸ, ಮುದ್ರಣ, ಕಾಗದದ ಗುಣಮಟ್ಟ ಎಲ್ಲವೂ ಇಷ್ಟವಾಗಿದೆ. ಬೇರೆ ಯಾವುದೇ ಪತ್ರಿಕೆ ಓದಿದರೂ ಆ ದಿನ ‘ಪ್ರಜಾವಾಣಿ’ ಓದದಿದ್ದರೆ ಮನಸ್ಸು ಚಡಪಡಿಸುತ್ತದೆ. ಮುದ್ರಿತ ಪತ್ರಿಕೆಯ ಓದಿನ ಸುಖವ ತಂತಜ್ಞಾನದ ಮಾಧ್ಯಮ ಕೊಡಲಾರದು.

ಕನ್ನಡ ಕಾವ್ಯ, ಕಥೆ, ಪ್ರಬಂಧ, ವಿಚಾರದ ಬೆಳವಣಿಗೆಗೆ ಅದರ ಕೊಡುಗೆ ತುಂಬಾ ಇದೆ. ನನ್ನ ಕತೆಗಳು ಪ್ರಜಾವಾಣಿ, ಮಯೂರ, ಸುಧಾ ಪತ್ರಿಕೆಗಳಲ್ಲಿ ಪ್ರಕಟವಾಗಲು ಶುರುವಾದಾಗಲೇ ನನಗೆ ಬರೆಯುವ ಆತ್ಮವಿಶ್ವಾಸ ಬಂದಿದ್ದು. ನಾನು ಪತ್ರಿಕೆಯ ಸಂಪಾದಕೀಯ ಪುಟವನ್ನು ತಪ್ಪದೆ ಓದುತ್ತೇನೆ. ವಿದ್ಯಾರ್ಥಿಗಳು ಹಾಗೂ ಕನ್ನಡ ಕಲಿಯುವವರು ಈ ಪತ್ರಿಕೆಯನ್ನು ತಪ್ಪದೆ ಓದಿದರೆ ಅವರ ಕನ್ನಡ ಭಾಷೆ ಸುಧಾರಿಸುತ್ತದೆ. ಪತ್ರಿಕೆ ಅಮೃತ ವರ್ಷ ಆಚರಿಸುತ್ತಿರುವುದು ಸಂತೋಷ ತಂದಿದೆ. ಪತ್ರಿಕಾ ಬಳಗಕ್ಕೆ, ಕೊಂಡು ಓದುತ್ತಿರುವ ಓದುಗರಿಗೆ ಅಭಿನಂದನೆಗಳು.

ಕರೀಗೌಡ ಬೀಚನಹಳ್ಳಿ, ಬೆಂಗಳೂರು

‘ದಲಿತ, ಪ್ರಗತಿಪರ ಹೋರಾಟಗಳಿಗೆ ದನಿ’

ನನ್ನ ಮತ್ತು ಆತ್ಮೀಯ ಪ್ರಜಾವಾಣಿಯ ಸಂಬಂಧ 40 ವರ್ಷಗಳದು. ಪ್ರಾಥಮಿಕ ಶಾಲೆಯಲ್ಲಿದ್ದಾಗ ಫ್ಯಾಂಟಮ್ ನಂತಹ ಕಾರ್ಟೂನ್ ಓದುತ್ತ, ಶಾಲೆಯಲ್ಲಿ ಶೀರ್ಷಿಕೆಯನ್ನು ಓದುವವನಾಗಿ ತದನಂತರ ವೈಚಾರಿಕ, ವೈಜ್ಞಾನಿಕ ಮತ್ತು ಛೂಬಾಣದಂತಹ ಹರಿತ ವಿಡಂಬಣಾತ್ಮಕ ವಿಚಾರಗಳಿಂದ ಪ್ರಭಾವಿತನಾಗಿ ಪ್ರೌಢಾವಸ್ಥೆಯಲ್ಲಿ ಪ್ರಜಾವಾಣಿಯ ಅಭಿಮತ ಪ್ರಗತಿಪರ ಲೇಖನಗಳಿಂದ ನನ್ನ ಮನೋಭಾವವನ್ನು ರೂಪಿಸಿಕೊಂಡವನಾಗಿ ‘ಪ್ರಜಾವಾಣಿ’ಗೆ ಚಿರಋಣಿ. 70ರ ದಶಕದಲ್ಲಿ ರೈತ, ದಲಿತ ಮತ್ತು ಪ್ರಗತಿಪರ ಹೋರಾಟಗಳಿಗೆ ಧ್ವನಿಯಾದ ಪ್ರಜಾವಾಣಿ ಸಾವಿರಾರು ಶಿಕ್ಷಕರಲ್ಲಿ ಪ್ರಗತಿಪರ ಚಿಂತನೆ ರೂಪಿಸಿದೆ. ನಮ್ಮ ವಿದ್ಯಾರ್ಥಿಗಳಿಗೂ ರವಾನೆಯಾಗಿವೆ. ಇದು, ಒಂದು ತಲೆಮಾರನ್ನೇ ವಸ್ತುನಿಷ್ಠ, ವೈಚಾರಿಕ ಮತ್ತು ವೈಜ್ಞಾನಿಕ ವಿಚಾರಗಳಿಂದ ಪಕ್ವಗೊಳಿಸಿದ ಪತ್ರಿಕೆ. ‘ಪ್ರಜಾವಾಣಿ’ಯು ಶತಮಾನೋತ್ಸವ ಆಚರಣೆಯನ್ನು ದಾಟಿ ಯುಗಯುಗಗಾಂತರದ ಪತ್ರಿಕೆಯಾಗಲಿ ಎಂದು ಹಾರೈಕೆ.

ಪ್ರೊ.ಎಸ್.ಭೈರೇಗೌಡ, ನಿವೃತ್ತ ಪ್ರಾಂಶುಪಾಲ ಬೆಂಗಳೂರು

‘ಅಚ್ಚುಮೆಚ್ಚಿನ ಪತ್ರಿಕೆ’



‘ಪ್ರಜಾವಾಣಿ’ ನಮ್ಮ ಕುಟುಂಬದವರೆಲ್ಲರ ಅಚ್ಚುಮೆಚ್ಚಿನ ದಿನಪತ್ರಿಕೆ. ಶಿವಮೊಗ್ಗದಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ್ದ ತಂದೆ ಹೊನ್ನಾಳಿ ರಾಘವೇಂದ್ರಾಚಾರ್ ಅವರು ತಮ್ಮ ಜೀವಿತಾವಧಿ ಪೂರ್ತಿ ಪ್ರಜಾವಾಣಿ ಬಿಟ್ಟು ಬೇರೆ ಪತ್ರಿಕೆ ಓದದ ‘ವ್ರತಾಚರಣೆ’ ನಡೆಸಿದವರು. ಇದು ಅವರ ವೈಯಕ್ತಿಕ ಆಯ್ಕೆ ಹಾಗೂ ಅಭಿಪ್ರಾಯಕ್ಕೆ ಸಂಭಂದಿಸಿದ ವಿಚಾರವಾಗಿತ್ತೇ ವಿನಹ ನಮಗೆ ಮೆಚ್ಚಿನ ಪ್ರಜಾವಾಣಿ ಜೊತೆಗೆ ಇತರ ಪತ್ರಿಕೆಗಳನ್ನು ಓದುವ ಹಾಗೂ ನಮ್ಮದೇ ಆದ ಅಭಿಪ್ರಾಯಗಳನ್ನು ಹೊಂದುವ ಸ್ವಾತಂತ್ರಕ್ಕೆ ಎಂದೂ ಅಡ್ಡಬರಲಿಲ್ಲ.

86 ವಯಸ್ಸಿನ ತಾಯಿ ಶಾಂತಾಬಾಯಿ ಅವರಿಗೆ ಇಂದಿಗೂ ಬೆಳಗಿನ ದೇವತಾ ಸ್ತೋತ್ರಗಳ ಜೊತೆಗೆ ಪ್ರಜಾವಾಣಿ ‘ಪಾರಾಯಣ’ ಅಗದೆ ಮನಶ್ಶಾಂತಿ ಇಲ್ಲ. ಕೆಲ ವರ್ಷಗಳ ಹಿಂದೆ ಪ್ರ.ವಾ. ಯಲ್ಲಿ ‘ಕನ್ನಡ ನಾಡಿನ ಅಪೂರ್ವ ಸಹೋದರರು’ ಎಂದು ಗುರುತಿಸಲ್ಪಟ್ಟಿದ್ದು ಇಂದಿಗೂ ನಮ್ಮ ಕುಟುಂಬದ ಹೆಮ್ಮೆ. ಪತ್ರಿಕೆಯ ಅಮೃತ ಮಹೋತ್ಸವದ ಸಂದರ್ಭ ನಮ್ಮೆಲ್ಲರಿಗೂ ತುಂಬಾ ಖುಷಿ ತಂದಿದೆ.

ಎಂ.ಶ್ರೀಪಾದ, ನಿವೃತ್ತ ಪ್ರಾಂಶುಪಾಲರು, ಎಸ್‌ಎಂಎಸ್ ಕಾಲೇಜು, ಬ್ರಹ್ಮಾವರ.

‘ಭಾಷಾಶೈಲಿ, ಸೊಗಡು ಅದ್ಭುತ’



1965ರಿಂದ ನಾನು ‘ಪ್ರಜಾವಾಣಿ’ಯನ್ನು ನಿತ್ಯವೂ ಓದುತ್ತಿದ್ದೇನೆ. ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಮನೆಗೆ ಬರುತ್ತಿದ್ದ ಒಂದೇ ಪತ್ರಿಕೆ ‘ಪ್ರಜಾವಾಣಿ’. ಪತ್ರಿಕೆಯು ಸದಾ ವಾರ್ತೆಗಳ ತಲೆಬರಹ (ಶೀರ್ಷಿಕೆ) ಮತ್ತು ವರದಿಯಲ್ಲಿ ವಿಶೇಷತೆ ಕಾಪಾಡಿಕೊಂಡು ಬಂದಿದೆ. ಸಾಮಾನ್ಯವಾಗಿ ನಾನು ದೂರದರ್ಶನದ ಮೂಲಕ ವಾರ್ತೆಗಳನ್ನು ತಿಳಿಯುತ್ತೇನೆ. ಬೆಳಿಗ್ಗೆ ಹಲವು ಪತ್ರಿಕೆಗಳ ಮೇಲೆ ಕಣ್ಣಾಡಿಸುತ್ತೇನೆ. ಆದರೆ, ಮಧ್ಯಾಹ್ನದ ಹೊತ್ತು ಪ್ರಜಾವಾಣಿ ಓದುತ್ತೇನೆ.

ವಿಶೇಷವಾಗಿ ನಾನು ತಿಳಿದುಕೊಂಡಿರುವ ವಿಷಯಗಳಿರಬಹುದು. ಅದನ್ನು ವರದಿ ಮಾಡುವ ರೀತಿ ಮತ್ತು ವಿಸ್ತಾರವಾಗಿ ಅಥವಾ ಸಂಕ್ಷಿಪ್ತವಾಗಿ ಮಾಹಿತಿ ಕೊಡುವ ವಿಶೇಷ ಕಲೆ ಪ್ರಜಾವಾಣಿಗೆ ಇದೆ. ಸಂಪಾದಕೀಯ, ವಿಶೇಷ ಲೇಖನಗಳು, ಸಮೀಕ್ಷೆಗಳು, ತನಿಖಾ ವರದಿ, ವಿಶ್ಲೇಷಣಾತ್ಮಕ ಲೇಖನಗಳು, ಪುರವಣಿಗಳಲ್ಲಿ ಪ್ರಕಟವಾಗುವ ವಿಶೇಷ ಲೇಖನಗಳು ಅಧಿಕೃತ ಮಾಹಿತಿ, ಮಾರ್ಗದರ್ಶನದ ಕಣಜವಾಗಿದ್ದು, ಕುತೂಹಲದಿಂದ ಓದಿಸಿಕೊಂಡು ಹೋಗುತ್ತವೆ. ಬಳಸುವ ಭಾಷಾ ಶೈಲಿ ಮತ್ತು ಸೊಗಡು ಕೂಡಾ ಅದ್ಭುತವಾಗಿದೆ.

ಪ್ರಜಾವಾಣಿಯಲ್ಲಿ ನಾನು ಪ್ರತಿ ದಿನ ಕಣ್ಣಾಡಿಸುವ ಮತ್ತೊಂದು ಅಂಕಣ ಬರಹ ಅಂದರೆ ‘25 ವರ್ಷಗಳ ಹಿಂದೆ’ ಮತ್ತು ‘50 ವರ್ಷಗಳ ಹಿಂದೆ’. ಇವುಗಳನ್ನು ಓದಿ ನಾನು ಹಿಂದಿನ ವಾರ್ತೆಗಳನ್ನು ಅವಲೋಕನ ಮಾಡಿ ಸ್ಮರಣೆ ಮಾಡಿಕೊಳ್ಳುತ್ತೇನೆ.

ಡಿ.ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿಗಳು, ಧರ್ಮಸ್ಥಳ

‘ಸಾಹಿತ್ಯದ ಲಾಲಿತ್ಯ...’



ವಿದ್ಯಾರ್ಥಿ ದೆಸೆಯಿಂದಲೂ ಓದಲು ಆತುರ ಹುಟ್ಟಿಸಿ ಬೆಳಿಗ್ಗೆ ಕಾತುರದಿಂದ ಕಾಯುವಂತೆ ಮಾಡಿದ್ದು ‘ಪ್ರಜಾವಾಣಿ’. ಓದಿನ ದಾಹಕ್ಕೆ ಬರವಣಿಗೆಯ ತಾಲೀಮು ಹಚ್ಚಿಸಿದ ಪ್ರಜಾವಾಣಿಗೆ ನಾನು ಅಭಾರಿ. ವೈವಿಧ್ಯಮಯ ಉತ್ಕೃಷ್ಟ ಪುರವಣಿಗಳು ಹೊಸ ಓದಿಗೆ ಪೂರಕವಾದವು. ರೂಪಾತ್ಮಕ ಸಾಹಿತ್ಯದ ಲಾಲಿತ್ಯವನ್ನು ಉಣಬಡಿಸುವ ಮೂಲಕ ಮನ ಮನೆಯ ಜೀವನಾಡಿಯಾಯಿತು. ಎಲ್ಲ ಹಂತದ ವಯೋಮಾನಕ್ಕೂ ತಕ್ಕುದಾದ ಪತ್ರಿಕೆ ಎಂದರೆ ಪ್ರಜಾವಾಣಿ. ಸ್ವಾತಂತ್ರ್ಯದ ಅಮೃತ ಮಹೋತ್ಸವದೊಂದಿಗೆ ಪ್ರಜಾವಾಣಿಯೂ ಅಮೃತದಂತಹ ಜ್ಞಾನ ನೀಡುತ್ತಿರುವುದು ಸ್ತುತ್ಯಾರ್ಹ. ಇನ್ನಷ್ಟು ಜನಮನದ ವಿಶ್ವಾಸ ಗಳಿಸಲಿ ಎಂಬ ಆಶಯ ನನ್ನದು.

ಆರ್.ಬಿ.ಗುರುಬಸವರಾಜ, ಶಿಕ್ಷಕರು, ಹೂವಿನಹಡಗಲಿ

2014ರ ಇಪಿಎಸ್ ಯೋಜನೆ ಎತ್ತಿಹಿಡಿದ ಸುಪ್ರೀಂ ಕೋರ್ಟ್

ಒಂದನೇ ಪುಟದಿಂದ...

ಗರಿಷ್ಠ ಸಂಬಳ ಮಿತಿ ₹15 ಸಾವಿರ ಮೀರಿದರೆ ಶೇ 1.16ರಷ್ಟು ಕೊಡುಗೆ ನೀಡಬೇಕೆಂಬ ಷರತ್ತನ್ನು ಅಮಾನ್ಯಗೊಳಿಸಿದೆ.

ಮಿತಿ ದಾಟಿದ ಗರಿಷ್ಠ ಸಂಬಳದ ಮೇಲೆ ಹೆಚ್ಚುವರಿ ಕೊಡುಗೆ ನೀಡಬೇಕೆಂಬ ಷರತ್ತನ್ನು ‘ಅಲ್ಟ್ರಾ ವೈರಸ್’ ಎಂದು ವ್ಯಾಖ್ಯಾನಿಸಿ, ರದ್ದುಪಡಿಸಿದ ಪೀಠವು, ಪಿಂಚಣಿ ನಿಧಿ ಹೊಂದಿಸಲು ಸಂಬಂಧಿಸಿದವರಿಗೆ ತೀರ್ಪಿನ ಈ ಭಾಗವನ್ನು ಆರು ತಿಂಗಳ ಅವಧಿಗೆ ಅಮಾನತಿನಲ್ಲಿರಿಸಲಾಗುವುದು ಎಂದು ಹೇಳಿದೆ.

ತಿದ್ದುಪಡಿ ಇಪಿಎಸ್ ಯೋಜನೆಯನ್ನು ರದ್ದುಪಡಿಸಿ ಕೇರಳ, ರಾಜಸ್ಥಾನ ಮತ್ತು ದೆಹಲಿಯ ಹೈಕೋರ್ಟ್ ತೀರ್ಪು ನೀಡಿದ್ದವು. ಇದನ್ನು ಪ್ರಶ್ನಿಸಿ ಉದ್ಯೋಗಿಗಳ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಮತ್ತು ಕೇಂದ್ರ ಸರ್ಕಾರ ವಿಶೇಷ ಮೇಲ್ಮನವಿ ಅರ್ಜಿಯನ್ನು (ಎಸ್‌ಎಲ್‌ಪಿ) ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದವು.

ವಿಎಚ್‌ಪಿಯಿಂದ ‘ಹಿತ ಚಿಂತನ’ ಅಭಿಯಾನ ನಾಳೆಯಿಂದ

ಮಂಗಳೂರು: ವಿಶ್ವ ಹಿಂದೂ ಪರಿಷತ್ ಸ್ಥಾಪನೆಗೊಂಡು 2024ಕ್ಕೆ 60 ವರ್ಷ ತುಂಬುತ್ತಿದ್ದು, ಈ ಸಲುವಾಗಿ ಇದೇ 6ರಿಂದ 20ರವರೆಗೆ ದೇಶದಾದ್ಯಂತ ‘ಹಿತ ಚಿಂತನ ಅಭಿಯಾನ’ವನ್ನು ಸಂಘಟನೆಯು ಏರ್ಪಡಿಸಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾಹಿತಿ ನೀಡಿದ ವಿಶ್ವ ಹಿಂದೂ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಾಧ್ಯಕ್ಷ ಪ್ರೊ.ಎಂ.ಬಿ. ಪುರಾಣಿಕ್, ‘ಅಭಿಯಾನದ ಮೂಲಕ ಗ್ರಾಮ ಗ್ರಾಮಗಳ ಪ್ರತಿಯೊಂದು ಜಾತಿ, ಮತಗಳ ಜನರನ್ನು ತಲುಪಿ ಹಿಂದೂ ಸಮಾಜದ ಏಳಿಗೆ ಹಾಗೂ ರಾಷ್ಟ್ರ ಹಿತದ ಕಾರ್ಯಕ್ಕೆ ಪ್ರೇರೇಪಿಸಲಿದ್ದೇವೆ. ದೇಶಾದ್ಯಂತ 1.5 ಲಕ್ಷ ಗ್ರಾಮಗಳಲ್ಲಿ 1 ಕೋಟಿ ಹಿತಚಿಂತಕರನ್ನು ಹಾಗೂ ರಾಜ್ಯದಲ್ಲಿ 5 ಲಕ್ಷ ಹಿತಚಿಂತಕರನ್ನು ಜೋಡಿಸುವ ಗುರಿ ಇದೆ’ ಎಂದರು.

‘ಎಲ್ಲ ಕ್ಷೇತ್ರ, ವರ್ಗದವರನ್ನು ಸಂಪರ್ಕಿಸುತ್ತೇವೆ. ವಿಶ್ವ ಹಿಂದೂ ಪರಿಷತ್‌ನ ಕಾರ್ಯಗಳ ಮಾಹಿತಿ ನೀಡುತ್ತೇವೆ. ಮತಾಂತರ ಹಾಗೂ ಲವ್ ಜಿಹಾದ್ ತಡೆಯಲು ಮತ್ತು ‘ಘರ್ ವಾಪಸಿ’ಗೆ ಮನಪರಿವರ್ತನೆ ಮಾಡುವುದಕ್ಕೆ ಸಂಘಟನೆಯ ಬದ್ಧತೆಯನ್ನು ವಿವರಿಸುತ್ತೇವೆ’ ಎಂದರು.

ತುಳಸಿ ಮದುವೆಯ ದಿನ

• ಎಸ್. ಸೂರ್ಯಪ್ರಕಾಶ ಪಂಡಿತ್

ನಮ್ಮ ಪರಂಪರೆಯ ವೈಶಿಷ್ಟ್ಯಗಳು ಹತ್ತುಹಲವು. ಜೀವನವನ್ನು ಸತ್ಯ ಶಿವ ಸುಂದರಗಳಲ್ಲಿ ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ತವಕ ಇಲ್ಲಿಯ ಎಲ್ಲ ಚಟುವಟಿಕೆಗಳಲ್ಲೂ ಕಾಣಬಹುದಾಗಿದೆ. ಪ್ರತಿನಿತ್ಯವೂ ನಮ್ಮ ಪಾಲಿಗೆ ಹಬ್ಬವೇ – ಎಂಬ ನಿತ್ಯೋತ್ಸವದ ಕಲ್ಪನೆಯೂ ಇಲ್ಲಿ ಹರಳುಗಟ್ಟಿದೆ. ಹೀಗಾಗಿಯೇ ಯಾವುದೋ ಒಂದು ನಿರ್ದಿಷ್ಟ ದಿನವೇ ‘ಹಬ್ಬ’ ಆಗಬೇಕಿಲ್ಲ; ದಿನವೂ ಹಬ್ಬವೇ! ಗೊತ್ತಾದ ದಿನದಂದು ಹಬ್ಬ ಆಚರಿಸಲು ಸಾಧ್ಯವಾಗಲಿಲ್ಲ ಎಂದೂ ಕೊರಗಬೇಕಿಲ್ಲ; ಅದೇ ಹಬ್ಬದ ಎಲ್ಲ ಆಚರಣೆಗಳನ್ನೂ ಇನ್ನೊಂದು ದಿನ ಮಾಡಲೂ ಅವಕಾಶ ಇರುತ್ತದೆಯೆನ್ನಿ! ಇದು ಕೇವಲ ಹಬ್ಬಗಳ ವಿಷಯದಲ್ಲಿ ಮಾತ್ರ ಸಲ್ಲುವ ವಿವರ ಅಲ್ಲ; ನಮ್ಮ ಎಲ್ಲ ಆಚರಣೆಗಳಿಗೂ ಸಲ್ಲುತ್ತದೆ.

ಈಗಷ್ಟೆ ದೀಪಾವಳಿ ಮುಗಿದಿದೆ. ದೀಪಾವಳಿ ಒಂದು ದಿನದ ಹಬ್ಬವಲ್ಲ; ಹಲವು ದಿನಗಳ ಸಂಭ್ರಮ. ಆದರೆ ಆಗ ಕಾರಣಾಂತರಗಳಿಂದ ಹಬ್ಬ ಆಚರಿಸದವರಿಗೂ ಈ ಸಂಭ್ರಮವನ್ನು ಒದಗಿಸುವುದು ಹೇಗೆ? ಇನ್ನೊಂದು ದಿನ, ಮತ್ತೊಂದು ಹಬ್ಬದ ನೆಪದಲ್ಲಿ, ದೀಪಾವಳಿಯನ್ನು ಆಚರಿಸಿದರೆ ಆಯಿತು; ಆಗ ಆ ಹಬ್ಬವೂ ಆದಂತಾಯಿತು, ಈ ಹಬ್ಬವೂ ಆದಂತಾಯಿತು. ‘ಉತ್ಥಾನ ದ್ವಾದಶಿ’ಯನ್ನು ‘ಕಿರುದೀಪಾವಳಿ’ಯನ್ನಾಗಿಯೂ ಆಚರಿಸುವುದರ ಹಿಂದೆ ಪ್ರಾಯಶಃ ಇಂಥದೊಂದು ಚಿಂತನೆ ಇರಬಹುದು ಎನಿಸುತ್ತದೆ. ಉತ್ಥಾನ ದ್ವಾದಶಿಯನ್ನು ’ತುಳಸೀಮದುವೆ‘ ಎಂದೂ ಕರೆಯುವುದುಂಟು.

ಈ ತುಳಸೀಕಲ್ಯಾಣದ ಆಚರಣೆಗೆ ಹಲವು ಆಯಾಮಗಳಿವೆ. ಈ ಹಬ್ಬದ ಮಾಸವಾದ ಕಾರ್ತಿಕಮಾಸವೇ ಅತ್ಯಂತ ಪವಿತ್ರವಾದುದು; ಜ್ಞಾನದಾಯಕವಾದುದು ಎಂಬ ಒಕ್ಕಣೆಗಳನ್ನು ನಮ್ಮ ಶಾಸ್ತ್ರಗಳಲ್ಲಿ ನೋಡಬಹುದು. ‘ಉತ್ಥಾನದ್ವಾದಶಿ’ ಎಂಬುದರ ಹಿನ್ನೆಲೆಯನ್ನು ಮನನ ಮಾಡಿದರೆ ಈ ಮಾತಿನ ಸ್ವಾರಸ್ಯ ತಿಳಿಯಬಹುದು.

ಮಹಾವಿಷ್ಣುವು ನಾಲ್ಕು ತಿಂಗಳು ನಿದ್ರೆಯಲ್ಲಿರುತ್ತಾನೆ ಎಂಬ ಕಲ್ಪನೆಯಿದೆ. ನಿದ್ರೆ ಎಂದರೆ ಅದು ನಾವು ಮಾಡುವಂಥ ನಿದ್ರೆಯ ರೀತಿಯದಲ್ಲ; ಅದು ಯೋಗನಿದ್ರೆ. ಇದಕ್ಕೆ ಹಲವು ರೀತಿಯ ಅರ್ಥಗಳಿವೆ. ಅವನ ನಿದ್ರೆ ಕೇವಲ ಒಂದು ನರ್ತನದ ಭಂಗಿಯಂತೆ. ಅಷ್ಟೇಕೆ, ಇಡಿಯ ಸೃಷ್ಟಿಯೇ ಅವನಿಗೆ ಒಂದು ಲೀಲೆ, ಕ್ರೀಡೆ. ದೇವರ ನಿದ್ರೆ ನಮ್ಮ ನಿದ್ರೆಯಂತೆ ಮೈ ಮರೆಯುವ ನಿದ್ರೆಯಲ್ಲ, ಅದು ಸದಾ ಎಚ್ಚರವಾಗಿರುವ ನಿದ್ರೆಯ ಮುದ್ರೆ. ಹೀಗೆ ಲೀಲಾಸ್ವರೂಪನಾದ ಮಹಾವಿಷ್ಣುವು ನಿದ್ರೆಯಿಂದ ಏಳುವ ದಿನವೇ ಉತ್ಥಾನದ್ವಾದಶೀ. ‘ಉತ್ಥಾನ’ – ಎಂದರೆ ನಿದ್ರೆಯಿಂದ ಏಳುವುದು ಎಂದು ಅರ್ಥ.

ತುಳಸಿ ಪೂಜೆ ಇಂದು

ಉತ್ಥಾನದ್ವಾದಶಿಯಂದು ತುಳಸಿಗೂ ವಿಶೇಷ ಪೂಜೆಗಳು ನಡೆಯುತ್ತವೆ. ತುಳಸೀಗಿಡದೊಂದಿಗೆ ನೆಲ್ಲಿ ಗಿಡದ ಕೊಂಬೆಗಳನ್ನೂ ನೆಟ್ಟು, ಒಟ್ಟಾಗಿ ಎರಡನ್ನೂ ಪೂಜಿಸಲಾಗುತ್ತದೆ. ಮಹಾವಿಷ್ಣುವಿಗೂ ತುಳಸಿಮಾತೆಗೂ ಮದುವೆಯನ್ನು ನೆರವೇರಿಸಿ ಸಂಭ್ರಮಿಸುತ್ತೇವೆ. ಈ ವಿವಾಹಮಹೋತ್ಸವದಲ್ಲೂ ಸ್ವಾರಸ್ಯ ಉಂಟು. ವಿಷ್ಣು ಇಂದು ನಿದ್ರೆಯಿಂದ ಏಳುವ ದಿನ; ಅವನು ಎದ್ದ ದಿನವೇ ಮದುವೆಯನ್ನೂ ಮಾಡಿಕೊಳ್ಳುತ್ತಾನೆ! ದೇವರ ನಿದ್ರೆಯನ್ನಾಗಲೀ, ದೇವರ ಮದುವೆಯನ್ನಾಗಲೀ ನಮ್ಮ ನಿದ್ರೆ–ಮದುವೆಗಳೊಂದಿಗೆ ಸಮೀಕರಿಸಿಕೊಂಡು ಅವಕ್ಕೆ ಸೀಮಿತ ಅರ್ಥವನ್ನು ಕಲ್ಪಿಸಿಕೊಳ್ಳುವುದು ಸಲ್ಲದು. ಈ ವಿವರಗಳೆಲ್ಲ ಸಂಕೇತಗಳು ಎಂಬುದನ್ನು ನಾವು ಮೊದಲಿಗೆ ಅರ್ಥಮಾಡಿಕೊಳ್ಳಬೇಕಾಗುತ್ತದೆ. ತುಳಸಿಯ ವಿವಾಹ ಎನ್ನುವುದು ಸೃಷ್ಟಿಯ ನಿರಂತರತೆಗೂ ಜೀವನದ ಸುಖ–ಸಮೃದ್ಧಿಗೂ ಶಿವ–ಶಕ್ತಿಯರ ಅಖಂಡತೆಗೂ ಸಂಕೇತ. ತುಳಸಿಯು ಹುಟ್ಟಿದ್ದು ಸಮುದ್ರಮಥನದ ಸಂದರ್ಭದಲ್ಲಿ; ಅಮೃತ ಒದಗಿದಾಗ ಮಹಾವಿಷ್ಣುವಿಗೆ ಆನಂದವಾಯಿತಂತೆ; ಆ ಅಮೃತಕಳಶದಲ್ಲಿ ಅವನ ಆನಂದಬಾಷ್ಪಗಳು ಬಿದ್ದುವಂತೆ. ಅವೇ ‘ತುಳಸಿ’ಯಾಗಿ ಚಿಗುರಿದವು. ಅಮೃತಕ್ಕೂ ವಿಷ್ಣುವಿಗೂ ಆನಂದಕ್ಕೂ ತುಳಸಿಗೂ ಸಮುದ್ರಮಥನಕ್ಕೂ ಇರುವ ನಂಟನ್ನು ಗಮನಿಸಬೇಕು; ಈ ಸಂಬಂಧಸೂತ್ರವನ್ನು ನಮ್ಮ ಅರಿವಿನ ಕಡೆಗೋಲಿನಲ್ಲಿ ಮಥಿಸಿದಷ್ಟೂ ಜೀವನಕ್ಕೆ ಬೇಕಾದ ಆನಂದದ ಅಮೃತ ದಕ್ಕುವುದು ದಿಟ.



ತಾಯಿ ಮತ್ತು ಅವಳಿ ಶಿಶು ಮರಣ ಪ್ರಕರಣ: ತುಮಕೂರು ಜಿಲ್ಲಾಸ್ಪತ್ರೆಯ ಪರಿಶೀಲನೆ

ಮಕ್ಕಳ ರಕ್ಷಣಾ ಆಯೋಗ ಭೇಟಿ

ಪ್ರಜಾವಾಣಿ ವಾರ್ತೆ

ತುಮಕೂರು: ಚಿಕಿತ್ಸೆ ಸಿಗದೆ ತಾಯಿ ಮತ್ತು ಅವಳಿ ಶಿಶುಗಳು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಜಿಲ್ಲಾ ಆಸ್ಪತ್ರೆಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣಗೌಡ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದರು.

ಆರೋಗ್ಯ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡ ಅವರು ವೈದ್ಯರು, ಸಿಬ್ಬಂದಿ, ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಮತ್ತೆ ಇಂತಹ ಘಟನೆ ನಡೆಯದಂತೆ ನೋಡಿಕೊಳ್ಳಬೇಕು. ವೈದ್ಯರು ಹಾಗೂ ಪ್ರಮುಖರ ಜತೆಗೆ ವಾರಕ್ಕೆ ಒಮ್ಮೆ ಸಭೆ ನಡೆಸಿ ಆಸ್ಪತ್ರೆ ಆಡಳಿತ ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವಂತೆ ಜಿಲ್ಲಾ ವೈದ್ಯಾಧಿಕಾರಿಗೆ ಸೂಚಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಘಟನೆ ಕುರಿತು ಮಕ್ಕಳ ಹಕ್ಕುಗಳ ರಾಷ್ಟ್ರೀಯ ಆಯೋಗಕ್ಕೂ ಮಾಹಿತಿ ನೀಡಲಾಗಿದೆ. ಆಸ್ಪತ್ರೆಗೆ ಬಂದ ಗರ್ಭಿಣಿಗೆ ವೈದ್ಯರು ಚಿಕಿತ್ಸೆ ನೀಡದೆ ಇಡೀ ಸಮಾಜ ತಲೆತಗ್ಗಿಸುವಂತಾಗಿದೆ' ಎಂದು ವಿಷಾದಿಸಿದರು.

ಗುರುವಾರ ರಾತ್ರಿ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಆಸ್ಪತ್ರೆಗೆ ಭೇಟಿ ನೀಡಿ, ಅಧಿಕಾರಿಗಳ ಜತೆ ತುರ್ತುಸಭೆ ನಡೆಸಿದರು.

ನಗರದಲ್ಲೇ ಶವ ಸಂಸ್ಕಾರ: ಮೃತ ಮಹಿಳೆ ಕಸ್ತೂರಿ ಶವದ ಮರಣೋತ್ತರ ಪರೀಕ್ಷೆಯನ್ನು ಜಿಲ್ಲಾ ಆಸ್ಪತ್ರೆಯಲ್ಲಿ ಮಾಡ ಲಾಯಿತು. ತಮಿಳುನಾಡಿನಿಂದ ಬಂದಿದ್ದ ಅವರ ಸಂಬಂಧಿಕರು ನಗರದಲ್ಲೇ ಶವ ಸಂಸ್ಕಾರ ನೆರವೇರಿಸಿದರು. ನಗರದ ಬಾಲಕಿಯರ ಬಾಲಮಂದಿರದಲ್ಲಿ ಬಾಲಕಿಗೆ ಆಶ್ರಯ ನೀಡಲಾಗಿದೆ.

ಸಾಕ್ಷಿ ಹೇಳಿದ್ದ ಮಹಿಳೆಗೆ ಬೆದರಿಕೆ

ಗರ್ಭಿಣಿಯನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದ ಭಾರತಿನಗರದ ಸರೋಜಮ್ಮ ಅವರಿಗೆ ಪೊಲೀಸರ ಮೂಲಕ ಬೆದರಿಸುವ ಕೆಲಸ ನಡೆದಿದೆ.

'ಯಾರಿಗೂ ಯಾವುದೇ ಹೇಳಿಕೆ ನೀಡಬಾರದು. ತನಿಖೆಗೆ ಬರುವ ತಂಡಕ್ಕೂ ಮಾಹಿತಿ ಕೊಡಬಾರದು. ನನಗೆ ಏನೂ ಗೊತ್ತಿಲ್ಲ ಎಂದಷ್ಟೇ ಹೇಳಬೇಕು. ಏನಾದರೂ ಹೇಳಿದರೆ ನೀನೇ ಹೆರಿಗೆ ಮಾಡಿಸಿ, ಕೊಲೆ ಮಾಡಿದ್ದೀಯಾ ಎಂದು ನಿನ್ನ ವಿರುದ್ಧವೇ ಪ್ರಕರಣ ದಾಖಲಿಸಲಾಗುವುದು' ಎಂದು ಕೆಲವು ಪೊಲೀಸರ ಮೂಲಕ ಒತ್ತಡ ಹಾಕಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ಆರೋಗ್ಯ ತುರ್ತುಸ್ಥಿತಿಯಲ್ಲಿ ದಾಖಲೆ ಬೇಡ: ಸುಧಾಕರ್

ಒಂದನೇ ಪುಟದಿಂದ

'ನತದೃಷ್ಟ ಹೆಣ್ಣುಮಗಳನ್ನು ಬಾಲಕಿಯರ ಮಂದಿರಕ್ಕೆ ದಾಖಲಿಸಲಾಗಿದೆ. ಸರ್ಕಾರದಿಂದಲೇ ಬಾಲಕಿಗೆ ₹ 5 ಲಕ್ಷ ನಿಶ್ಚಿತ ಠೇವಣಿ ಇರಿಸಲು ಕ್ರಮಕೈಗೊಳ್ಳಲಾಗಿದೆ. ಹಾಗೆಯೇ, ಆಕೆಯ ಶೈಕ್ಷಣಿಕ ಭವಿಷ್ಯವನ್ನೂ ರೂಪಿಸಲಾಗುವುದು' ಎಂದರು.

'ಈ ಘಟನೆಯಲ್ಲಿ ಅಮಾನವೀಯವಾಗಿ ನಡೆದುಕೊಂಡ ವೈದ್ಯರು, ಸಿಬ್ಬಂದಿಗೆ ಹಾಗೂ ಜಿಲ್ಲಾ ಸರ್ಜನ್ ಅವರಿಗೆ, ಆಡಳಿತ ವೈಫಲ್ಯ ಎಂದು ಪರಿಗಣಿಸಿ ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ಕರ್ತವ್ಯದಲ್ಲಿರುವ ವೈದ್ಯರಿಗೆ ಪ್ರಕರಣದ ಗಂಭೀರತೆ ಬಗ್ಗೆಯೂ ತಿಳಿಸಲಾಗಿದೆ. ಅವರಿಗೂ ಷೋಕಾಸ್ ನೋಟಿಸ್ ನೀಡಿ 24 ಗಂಟೆಯೊಳಗೆ ಉತ್ತರ ನೀಡಲು ಸೂಚಿಸಲಾಗಿದೆ' ಎಂದು ತಿಳಿಸಿದರು.

ಕರಾಳ ಘಟನೆ: 'ಎಲ್ಲ ಸೌಲಭ್ಯಗಳು ಇದ್ದರೂ, ಆರೋಗ್ಯ ಸಿಬ್ಬಂದಿಯಿಂದಾಗಿ ಸರ್ಕಾರಕ್ಕೆ ಮುಜುಗರವಾಗಿದೆ. ಇದು ಇಡೀ ಮಾನವ ಸಂಕುಲಕ್ಕೆ ಕರಾಳ ದಿನ. ಇದಕ್ಕಾಗಿ ನಾನು ಬಹಳ ವಿಷಾದ ಮತ್ತು ಸಹಾನುಭೂತಿ ವ್ಯಕ್ತಪಡಿಸುತ್ತೇನೆ' ಎಂದರು.

> **ತುಮಕೂರಿನಲ್ಲಿ ನಡೆದಿರುವ ಘಟನೆ ಮರುಕಳಿಸಿದರೆ ಸಂಬಂಧಪಟ್ಟ ಅಧಿಕಾರಿ, ನೌಕರರನ್ನು ವಜಾ ಮಾಡುವ ಜತೆಗೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು**
> **ಡಿ.ರಂದೀಪ್,**
> ಆರೋಗ್ಯ ಇಲಾಖೆಯ ಆಯುಕ್ತ

'ಗರ್ಭಿಣಿ ಯಾವುದೇ ರಾಜ್ಯದವರಾಗಿದ್ದರೂ, ದಾಖಲೆ ಇಲ್ಲದಿದ್ದರೂ ಆಸ್ಪತ್ರೆಗೆ ಬಂದಾಗ ಚಿಕಿತ್ಸೆ ನೀಡಿ ಹೆರಿಗೆ ಮಾಡಿಸಬೇಕಿತ್ತು. ಮಾನವೀಯತೆಯಿಂದ ನಡೆದುಕೊಳ್ಳಬೇಕಿತ್ತು. ಇಲ್ಲಿ ದಾಖಲೆ ಮುಖ್ಯವಲ್ಲ, ಜೀವ ಮುಖ್ಯ. ಕೆಲವರಿಂದ ಆದ ಈ ಘಟನೆಯಿಂದ ಇಡೀ ವ್ಯವಸ್ಥೆಗೆ ಕೆಟ್ಟ ಹೆಸರು ಬಂದಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ರಾಜೀನಾಮೆ ಕೇಳಲು ನೈತಿಕತೆ ಇದೆಯೇ' 'ಸಾವಿನ ಮನೆಯಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಸಿದ್ದರಾಮಯ್ಯ ಅವರ ಕೀಳು ಮಟ್ಟದ ರಾಜಕಾರಣ ಜನತೆಗೆ ಹೊಸತೇನಲ್ಲ' ಎಂದು ಸುಧಾಕರ್ ಕಿಡಿಕಾರಿದ್ದಾರೆ.

'2015ರಲ್ಲಿ ರಾಜ್ಯದಲ್ಲಿ 5,109 ನವಜಾತ ಶಿಶುಗಳು, 519 ಬಾಣಂತಿಯರು ಸಾವಿಗೀಡಾಗಿದ್ದಾರೆ ಎಂದು ಅಂಕಿ-ಅಂಶಗಳು ತಿಳಿಸುತ್ತವೆ. ಆಗ ನೀವು ಆರೋಗ್ಯ ಸಚಿವರ ರಾಜೀನಾಮೆ ಪಡೆದುಕೊಂಡಿದ್ದೀರಾ, ನೀವು ನೈತಿಕ ಹೊಣೆ ಹೊತ್ತಿದ್ದೀರಾ' ಎಂದು ಪ್ರಶ್ನಿಸಿದ್ದಾರೆ.

'ಪ್ರಜಾವಾಣಿ' ವರದಿ ಆಧರಿಸಿ ಲೋಕಾಯುಕ್ತ ಪ್ರಕರಣ ದಾಖಲು

ಒಂದನೇ ಪುಟದಿಂದ

ಪ್ರಕರಣದ ಕುರಿತು ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಲೋಕಾಯುಕ್ತದ ತುಮಕೂರು ಎಸ್‌ಪಿಗೆ ನಿರ್ದೇಶನ ನೀಡಲಾಗಿದೆ. ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕೈಗೊಂಡಿರುವ ಕ್ರಮಗಳ ಕುರಿತು ಪ್ರತಿಕ್ರಿಯೆ ನೀಡುವಂತೆ ಪ್ರತಿವಾದಿಗಳಿಗೆ ಸೂಚಿಸಲಾಗಿದೆ. ಡಿಸೆಂಬರ್ 12ಕ್ಕೆ ಮುಂದಿನ ವಿಚಾರಣೆ ನಡೆಯಲಿದೆ.

ತಾಯಿ ಮೃತಪಟ್ಟಿರುವುದರಿಂದ ಅನಾಥವಾಗಿರುವ ಆರು ವರ್ಷದ ಹೆಣ್ಣು ಮಗುವಿನ ವಸತಿ, ಜೀವನೋಪಾಯ ಮತ್ತು ಶಿಕ್ಷಣಕ್ಕೆ ಸರ್ಕಾರದ ಯೋಜನೆಗಳ ಅಡಿಯಲ್ಲಿ ಕೈಗೊಂಡಿರುವ ಕ್ರಮಗಳ ಕುರಿತು ವರದಿ ನೀಡುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತುಮಕೂರು ಜಿಲ್ಲಾ ಉಪ ನಿರ್ದೇಶಕರಿಗೆ ಲೋಕಾಯುಕ್ತರು ನಿರ್ದೇಶನ ನೀಡಿದ್ದಾರೆ.

ಇಮ್ರಾನ್ ಹತ್ಯೆ ಯತ್ನ: ಜಂಟಿ ತನಿಖೆಗೆ ಸಲಹೆ

ಇಸ್ಲಾಮಾಬಾದ್ (ಪಿಟಿಐ): ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಹತ್ಯೆ ಯತ್ನದ ಪ್ರಕರಣದ ತನಿಖೆಗೆ ಜಂಟಿ ತಂಡವನ್ನು ರಚಿಸಬೇಕು ಎಂದು ಪಾಕ್‌ನ ಒಕ್ಕೂಟ ಸರ್ಕಾರದ ಒಳಾಡಳಿತ ಸಚಿವಾಲಯವು ಪಂಜಾಬ್ ಪ್ರಾಂತ್ಯದ ಸರ್ಕಾರಕ್ಕೆ ಕೋರಿದೆ.

ಇನ್ನೊಂದೆಡೆ, ಹತ್ಯೆ ಯತ್ನವನ್ನು ಖಂಡಿಸಿ ಖಾನ್ ಅವರ ಬೆಂಬಲಿಗರು ದೇಶದ ವಿವಿಧೆಡೆ ರಸ್ತೆ ತಡೆ ಪ್ರತಿಭಟನೆ ನಡೆಸಿದ್ದಾರೆ. ಅವಧಿಪೂರ್ವ ಚುನಾವಣೆ ಬೇಡಿಕೆ ಈಡೇರುವವರೆಗೂ ಪ್ರತಿಭಟನೆ ಮುಂದುವರಿಯಲಿದೆ ಎಂದು ಪ್ರತಿಭಟನಾಕಾರರು ತಿಳಿಸಿದ್ದಾರೆ.

ಪಂಜಾಬ್ ಪ್ರಾಂತ್ಯದಲ್ಲಿ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹರೀಕ್ ಇ ಇನ್ಸಾಫ್ (ಪಿಟಿಐ) ಪಕ್ಷ ಅಧಿಕಾರದಲ್ಲಿದ್ದರೆ, ಪ್ರಧಾನಿ ಶೆಹಬಾಜ್ ಶರೀಫ್ ಅವರ ಮುಸ್ಲಿಂ ಲೀಗ್ ನವಾಜ್ (ಪಿಎಂಎಲ್-ಎನ್) ನೇತೃತ್ವದ ಮೈತ್ರಿಕೂಟ ಒಕ್ಕೂಟದ ಸರ್ಕಾರದ ನೇತೃತ್ವವಹಿಸಿದೆ.

ಜಂಟಿ ತನಿಖೆ ಕುರಿತು ಒಕ್ಕೂಟ ಸರ್ಕಾರ ಪಂಜಾಬ್ ಪ್ರಾಂತ್ಯದ ಸರ್ಕಾರಕ್ಕೆ ಪತ್ರ ಬರೆದಿದೆ. ಇದಕ್ಕೂ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಾರ್ತಾ ಸಚಿವ ಮರಿಯುಮ್ ಔರಂಗಜೇಬ್, 'ವಿಶ್ವಾಸಾರ್ಹ, ಪಾರದರ್ಶಕ ತನಿಖೆಗಾಗಿ ಜಂಟಿ ತಂಡ ರಚನೆ ಅಗತ್ಯ' ಎಂದು ಹೇಳಿದರು.

ಅಧಿಕಾರಿಗಳ ಅಮಾನತು: ಇಮ್ರಾನ್ ಖಾನ್ ಮೇಲಿನ ದಾಳಿ ಹಿನ್ನೆಲೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಇತರೆ ಅಧಿಕಾರಿಗಳನ್ನು ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿ ಚೌಧರಿ ಪರ್ವೇಜ್ ಎಲಾಹಿ ಅಮಾನತು ಮಾಡಿದ್ದಾರೆ.

ಶಂಕಿತ ದಾಳಿಕೋರನ ತಪ್ಪೊಪ್ಪಿಗೆ ಕುರಿತ ವಿಡಿಯೊ ಹೇಳಿಕೆ ಹಿಂದೆಯೇ ಈ ಕ್ರಮ ಕೈಗೊಂಡಿದ್ದಾರೆ. ಸಂಬಂಧಿತ ಪೊಲೀಸ್ ಠಾಣೆಯ ಸಿಬ್ಬಂದಿಯ ಎಲ್ಲರ ಮೊಬೈಲ್ ಅನ್ನು ಪ್ರಯೋಗಾಲಯ ಪರಿಶೀಲನೆಗೆ ಒಳಪಡಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಇಬ್ಬರು ಶಂಕಿತರ ಬಂಧನ: ಹತ್ಯೆ ಯತ್ನಕ್ಕೆ ಸಂಬಂಧಿಸಿದಂತೆ ಪೊಲೀಸರು ಇನ್ನೂ ಇಬ್ಬರು ಶಂಕಿತರನ್ನು ಬಂಧಿಸಿದ್ದಾರೆ.



ಇಮ್ರಾನ್ ಖಾನ್ ಹತ್ಯೆ ಯತ್ನಯನ್ನು ಖಂಡಿಸಿ ಅವರ ಬೆಂಬಲಿಗರು ಶುಕ್ರವಾರ ಕ್ವೆಟ್ಟಾ ಸೇರಿದಂತೆ ವಿವಿಧೆಡೆ ರಸ್ತೆ ತಡೆ ಪ್ರತಿಭಟನೆ ನಡೆಸಿದರು —ಎಎಫ್‌ಪಿ ಚಿತ್ರ

'ನಾಲ್ಕು ಬಾರಿ ಗುಂಡಿನ ದಾಳಿ'

ಲಾಹೋರ್ (ಪಿಟಿಐ): 'ದುಷ್ಕರ್ಮಿಗಳು ತಮ್ಮ ಬಲಗಾಲಿಗೆ ನಾಲ್ಕು ಬಾರಿ ಗುಂಡು ಹಾರಿಸಿದ್ದಾರೆ' ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಶುಕ್ರವಾರ ತಿಳಿಸಿದರು.

ಹತ್ಯೆ ಯತ್ನ ನಡೆದ ನಂತರ ಮೊದಲ ಬಾರಿಗೆ ದೇಶವನ್ನು ಉದ್ದೇಶಿಸಿ ಆಸ್ಪತ್ರೆಯಿಂದಲೇ ಮಾತನಾಡಿದ ಅವರು, 'ಹತ್ಯೆಯ ಸಂಚಿನ ಬಗ್ಗೆ ನನಗೆ ಮೊದಲೇ ಅರಿವಿತ್ತು' ಎಂದು ತಿಳಿಸಿದರು.

'ದಾಳಿಯ ವಿವರವನ್ನು ನಂತರ ನೀಡುತ್ತೇನೆ. ವಾಜೀರಾಬಾದ್‌ನಲ್ಲಿ ನನ್ನನ್ನು ಕೊಲ್ಲಲು ಅವರು ಯೋಜಿಸಿದ್ದರು ಎಂಬುದು ದಾಳಿಯ ಹಿಂದಿನ ದಿನವೇ ತಿಳಿದಿತ್ತು' ಎಂದು ತಿಳಿಸಿದ್ದಾರೆ. 'ಖಾನ್ ಅವರ ಬಲಗಾಲಿನ ಮೂಳೆಗೆ ಹಾನಿಯಾಗಿದೆ' ಎಂದು ವೈದ್ಯ ಡಾ.ಫೈಸಲ್ ಸುಲ್ತಾನ್ ತಿಳಿಸಿದ್ದಾರೆ.

ಇಸ್ರೇಲ್ ಆಡಳಿತ: ನೇತನ್ಯಾಹು ನೇತೃತ್ವದ ಮೈತ್ರಿಕೂಟ ಸಜ್ಜು

ಜೆರುಸಲೇಂ (ಪಿಟಿಐ): ಇಸ್ರೇಲ್‌ನ ಸಾರ್ವತ್ರಿಕ ಚುನಾವಣೆಯಲ್ಲಿ ಮಾಜಿ ಪ್ರಧಾನಿ ಬೆಂಜಮಿನ್ ನೇತನ್ಯಾಹು ನೇತೃತ್ವದ ಮೈತ್ರಿಕೂಟ ಬಹುಮತ ಪಡೆದಿದೆ. ಈ ಮೂಲಕ ದೇಶದಲ್ಲಿ ಮೂಡಿದ್ದ ರಾಜಕೀಯ ಅನಿಶ್ಚಿತತೆ ಅಂತ್ಯಗೊಂಡಿದೆ.

120 ಸದಸ್ಯ ಬಲದ ಸಂಸತ್ತಿನಲ್ಲಿ ಮೈತ್ರಿಕೂಟವು 64 ಸ್ಥಾನ ಗೆದ್ದುಕೊಂಡಿದೆ. ಅಲ್ಪಾವಧಿಯ ಅಂತರದ ಬಳಿಕ ನೇತನ್ಯಾಹು ಅವರು ಪ್ರಧಾನಿಯಾಗಿ ಅಧಿಕಾರಕ್ಕೆ ಮರಳು ವುದು ಖಚಿತವಾಗಿದೆ.ಇವರು ಹಿಂದೆ, 1996 ರಿಂದ 1999 ಮತ್ತು 2020ರಲ್ಲೂ ಪ್ರಧಾನಿಯಾಗಿದ್ದರು.

ನೇತನ್ಯಾಹು ನೇತೃತ್ವದ ಲಿಕುಡ್ ಪಾರ್ಟಿ 32 ಸ್ಥಾನ ಗೆದ್ದಿದ್ದರೆ, ನಿರ್ಗಮಿತ ಪ್ರಧಾನಿ ಯಾಯಿರ್ ಲ್ಯಾಪಿಡ್ ನೇತೃತ್ವದ ಯೆಷ್ ಅಟಿಡ್ 24 ಸ್ಥಾನ ಗೆದ್ದಿದೆ. ಬಲಪಂಥೀಯ ರಿಲಿಜೀಯಸ್ ಜಿಯೊನಿಸಂ ಪಾರ್ಟಿ 14 ಸ್ಥಾನ ಗೆದ್ದು, ಅನಿರೀಕ್ಷಿತ ಫಲಿತಾಂಶ ನೀಡಿದೆ.

ಮೈತ್ರಿಕೂಟದ ಇತರೆ ಭಾಗಿದಾರ ಪಕ್ಷಗಳಾದ ಶಾಸ್ ಮತ್ತು ಯುನೈಟೆಡ್ ತೊರ್ಹಾ ಜುದೈಸಂ ಕ್ರಮವಾಗಿ 11 ಮತ್ತು 7 ಸ್ಥಾನ ಗೆದ್ದಿವೆ. ಉಳಿದಂತೆ ನ್ಯಾಷನಲ್ ಯೂನಿಟಿ 12 ಮತ್ತು ಲೀಬರ್ಮನ್ ಪಕ್ಷ 6 ಸ್ಥಾನ ಗೆದ್ದಿದೆ.

2019ರಲ್ಲಿ ಪ್ರಧಾನಿ ನೇತನ್ಯಾಹು ವಿರುದ್ಧ ಲಂಚ, ವಂಚನೆ ಆರೋಪ ಕೇಳಿಬಂದಿತ್ತು. ಆ ನಂತರ ಇಲ್ಲಿಯವರೆಗೆ ಇಸ್ರೇಲ್‌ನಲ್ಲಿ ರಾಜಕೀಯ ಅನಿಶ್ಚಿತತೆ ಮೂಡಿತ್ತು.

ಚಂದ್ರಶೇಖರ್ ಸಾವು: ಎಲ್ಲ ಆಯಾಮದಲ್ಲೂ ತನಿಖೆ– ಎಡಿಜಿಪಿ

ದಾವಣಗೆರೆ: 'ಚಂದ್ರಶೇಖರ್ ಸಂಶಯಾಸ್ಪದ ಸಾವಿನ ಕುರಿತು ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಾಗುತ್ತಿದೆ. ಈ ಹಂತದಲ್ಲಿ ಯಾವುದೇ ಮಾಹಿತಿ ಬಹಿರಂಗಪಡಿಸುವುದು ಸೂಕ್ತವಲ್ಲ' ಎಂದು ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಹೇಳಿದರು.

'ಕುಟುಂಬದ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುತ್ತಿದ್ದೇವೆ. ಸಾಕ್ಷ್ಯಗಳ ಸಂಗ್ರಹಿಸಲಾಗುತ್ತಿದೆ. ಎರಡು ದಿನಗಳಲ್ಲಿ ಎಫ್‌ಎಸ್‌ಎಲ್ ವರದಿ ಬರಲಿದೆ' ಎಂದು ಅವರು ಹೊನ್ನಾಳಿಯಲ್ಲಿರುವ ರೇಣುಕಾಚಾರ್ಯ ಅವರ ನಿವಾಸಕ್ಕೆ ಭೇಟಿ ನೀಡಿದ ನಂತರ ಸುದ್ದಿಗಾರರಿಗೆ ತಿಳಿಸಿದರು.

ದೂರು: 'ಚಂದ್ರಶೇಖರ್ ಮೃತದೇಹವು ತುಂಗಾ ಮೇಲ್ದಂಡೆ ಕಾಲುವೆಯಲ್ಲಿ ಮುಳುಗಿದ್ದ ಕಾರಿನ ಹಿಂಬದಿ ಸೀಟ್‌ನಲ್ಲಿ ಕೈಕಾಲು ಕಟ್ಟಿಹಾಕಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಕಿವಿಗಳ ಮೇಲೆ ಗಾಯಗಳೂ ಪತ್ತೆಯಾಗಿದ್ದು, ತಲೆಗೆ ಬಲವಾಗಿ ಹೊಡೆದು ಕೊಲೆ ಮಾಡಿರುವ ಶಂಕೆ ಇದೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಚಂದ್ರಶೇಖರ್ ಅವರ ತಂದೆ ಎಂ.ಪಿ. ರಮೇಶ್ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

'ರಾಜ್ಯದ ಪೊಲೀಸರಿಂದಲೇ ತನಿಖೆ' (ಹೊಸಪೇಟೆ ವರದಿ):'ಚಂದ್ರಶೇಖರ್ ಸಾವಿನ ಬಗ್ಗೆ ರಾಜ್ಯ ಪೊಲೀಸರೇ ತನಿಖೆ ನಡೆಸುವರು' ಎಂದು ಗೃಹಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಸಕಾರಾತ್ಮಕ ಮನೋಭಾವ ನಿಮ್ಮದಾಗಬೇಕೆಂದು ಬಯಸಿದ್ದರೆ, ವರ್ತಮಾನದಲ್ಲಿ ಬದುಕುವುದನ್ನು ರೂಢಿಸಿಕೊಳ್ಳಿ. –ಶಿವ್ ಖೇರಾ

ತಾಯಿ, ಅವಳಿ ಹಸುಗೂಸು ಸಾವು ರಾಜ್ಯ ತಲೆ ತಗ್ಗಿಸುವಂಥ ದುರಂತ

ಮಗುವೊಂದರ ಆಗಮನಕ್ಕೆ ಎದುರು ನೋಡುತ್ತಾ ಹೆರಿಗೆ ಬೇನೆಗೆ ಒಳಗಾಗಿದ್ದ ತುಂಬು ಗರ್ಭಿಣಿಯೊಬ್ಬರಿಗೆ ಸೂಕ್ತ ಆರೈಕೆ ನೀಡಿ, ಸಂತೈಸಿ ಹೆರಿಗೆ ಮಾಡಿಸಬೇಕಾಗಿದ್ದ ತುಮಕೂರಿನ ಸರ್ಕಾರಿ ಆಸ್ಪತ್ರೆಯ ವೈದ್ಯೆ ಮತ್ತು ಶುಶ್ರೂಷಕಿಯರು ಚಿಕಿತ್ಸೆ ನೀಡಲು ನಿರಾಕರಿಸಿದ ಕಾರಣಕ್ಕೆ ಅವಳಿ ಹಸುಗೂಸುಗಳ ಜತೆಗೆ ತಾಯಿಯೂ ಮರಣ ಹೊಂದಿದ ಹೃದಯವಿದ್ರಾವಕ ಪ್ರಕರಣ ಕರ್ನಾಟಕವೇ ತಲೆ ತಗ್ಗಿಸುವಂಥ ದುರಂತ. ಆಧಾರ್ ಕಾರ್ಡ್, ತಾಯಿ ಕಾರ್ಡ್ ಇಲ್ಲ ಎಂಬ ನೆವ ಹೇಳಿ ಅನಾಥ ತಾಯಿಯನ್ನು ಸಾಗಹಾಕಿದ್ದಲ್ಲದೇ, ಕಣ್ಣುಬಿಡುವ ಮೊದಲೇ ಹಸುಗೂಸುಗಳು ಸಾಯುವಂತೆ ಮಾಡಿದ್ದು ವ್ಯವಸ್ಥೆಯ ಕ್ರೌರ್ಯಕ್ಕೆ ಹಿಡಿದ ಕನ್ನಡಿ. ಈ ವೈಫಲ್ಯದ ಹೊಣೆಯನ್ನು ಇಲಾಖೆಯ ಮುಖ್ಯಸ್ಥರು ಹೊರಬೇಕು, ಮುಂದೆ ಹೀಗಾಗದಂತೆ ನೋಡಿಕೊಳ್ಳುವ ಖಚಿತ ಮಾತು ಕೊಡಬೇಕು. ನೋವು–ನರಳಿಕೆಯಿಂದ ಆಸ್ಪತ್ರೆಗೆ ಬರುವವರಿಗೆ ಮಮತೆಯಿಂದ ಉಪಚರಿಸಿ, ನೋವು ಶಮನ ಮಾಡುವುದು ವೈದ್ಯರು, ಶುಶ್ರೂಷಕರಿಗೆ ಕಲಿಸುವ ಮೊದಲ ಪಾಠ. ಅದರಲ್ಲೂ ತುಂಬು ಗರ್ಭಿಣಿ ನೋವಿನಿಂದ ನರಳುತ್ತಾ ಆಸ್ಪತ್ರೆಗೆ ಬಂದಾಗ, ಕರ್ತವ್ಯದಲ್ಲಿದ್ದ ಮಹಿಳಾ ವೈದ್ಯರು, ಶುಶ್ರೂಷಕಿಯರು ತಾವೂ ಇಂತಹ ಹಿಗ್ಗಿನ ನೋವನ್ನು ಅನುಭವಿಸಿರುತ್ತೇವೆ ಅಥವಾ ಮುಂದಾದರೂ ಅನುಭವಕ್ಕೆ ಬರಲಿದೆ ಎಂಬ ಭಾವನೆಯಿಂದಲಾದರೂ ಸಂತೈಸಬೇಕಾಗಿತ್ತು. ಗರ್ಭಿಣಿಯನ್ನು ಕರೆತಂದವರು ಪರಿಪರಿಯಾಗಿ ಬೇಡಿಕೊಂಡರೂ ಆಸ್ಪತ್ರೆಯ ಮಹಿಳಾ ಸಿಬ್ಬಂದಿಯ ಮನ ಕರಗಲಿಲ್ಲ ಎಂಬುದು ಈ ವ್ಯವಸ್ಥೆ ಎಷ್ಟು ಕ್ರೌರ್ಯದತ್ತ, ಅಮಾನುಷದತ್ತ ಸಾಗಿದೆ ಎಂಬುದಕ್ಕೆ ಸಾಕ್ಷಿಯಾಗುವಂತಿದೆ. ತಾವು ಹೆಣ್ಣೆಂಬುದನ್ನು ಮರೆತು ಅನಾಥ ಮಹಿಳೆಯನ್ನು ನಿರ್ದಯವಾಗಿ, ನಿಕೃಷ್ಟವಾಗಿ ನಡೆಸಿಕೊಂಡ ಈ ಮಹಿಳಾ ಸಿಬ್ಬಂದಿಯು ಆರೋಗ್ಯ ಸೇವೆಯಲ್ಲಿ ಮುಂದುವರಿಯಲು ಅರ್ಹರಲ್ಲ.



ಆಸ್ಪತ್ರೆಗೆ ಬರುವ ರೋಗಿಗಳಿಗೆ, ಗರ್ಭಿಣಿಯರಿಗೆ, ವೃದ್ಧರಿಗೆ ಸೂಕ್ತ ಆರೈಕೆ ಮತ್ತು ಸಾಂತ್ವನ ಸಿಗುವಂತೆ ಮಾಡಬೇಕಾದುದು ಸರ್ಕಾರದ ಹೊಣೆಗಾರಿಕೆ

ಎಲ್ಲರಿಗೂ ಸಕಾಲಕ್ಕೆ ಆರೋಗ್ಯ ಸೇವೆ ಸಿಗಬೇಕು ಎಂಬ ಕಾರಣಕ್ಕೆ ‘ಆರೋಗ್ಯ ಕರ್ನಾಟಕ’ ಯೋಜನೆ ಜಾರಿಗೆ ತರಲಾಗಿತ್ತು. ಇದನ್ನೇ ಮತ್ತಷ್ಟು ಪರಿಷ್ಕರಿಸಿದ ಕೇಂದ್ರ ಸರ್ಕಾರ ‘ಆಯುಷ್ಮಾನ್ ಭಾರತ’ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ದುಬಾರಿ ದರ ತೆತ್ತು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಸಾಧ್ಯವಾಗದೇ ಇರುವವರಿಗೆ ಉತ್ತಮ ಚಿಕಿತ್ಸೆ ನೀಡುವುದು ಇದರ ಉದ್ದೇಶ. ದುಡ್ಡಿಲ್ಲದ ಕಾರಣಕ್ಕೆ ಜೀವವೇ ಹೋಗಬಾರದು ಎಂಬುದು ಸರ್ಕಾರದ ಆಶಯ. ಅದಕ್ಕಾಗಿ, ಆಯುಷ್ಮಾನ್ ಕಾರ್ಡ್ ರೂಪಿಸಲಾಗಿದೆ. ಕಾರ್ಡ್ ಇಲ್ಲದ ಕಾರಣಕ್ಕೆ, ಅನಾಥ ಮಹಿಳೆ, ಹೆತ್ತಕೂಸುಗಳೊಂದಿಗೆ ದಾರುಣವಾಗಿ ಮೃತಪಟ್ಟಿರುವುದು ಕರುಳು ಕಿತ್ತುಬರುವ ವ್ಯಥೆಯ ಪ್ರಕರಣ. ‘ರಾಜ್ಯವು ದೇಶದಲ್ಲೇ ಅತ್ಯುತ್ತಮ ಆರೋಗ್ಯ ವ್ಯವಸ್ಥೆ ಹೊಂದಿದೆ’ ಎಂದು ಕರ್ನಾಟಕ ಸರ್ಕಾರ ಪದೇ ಪದೇ ಹೇಳಿಕೊಳ್ಳುತ್ತದೆ. ಆರೋಗ್ಯ ಸೇವೆಗಳಿಗೆ ಕರ್ನಾಟಕ ಸೂಕ್ತ ತಾಣ ಎಂದು ಕೊಚ್ಚಿಕೊಳ್ಳುತ್ತದೆ. ಪಾಕಿಸ್ತಾನ, ಅಫ್ಘಾನಿಸ್ತಾನ, ಶ್ರೀಲಂಕಾದ ರೋಗಿಗಳು ಇಲ್ಲಿಗೆ ಬಂದು ಚಿಕಿತ್ಸೆ ಪಡೆದು ಹೋಗುತ್ತಾರೆ ಎಂಬಷ್ಟರಮಟ್ಟಿಗೆ ಕರ್ನಾಟಕ ಪ್ರಖ್ಯಾತಿ ಪಡೆದಿದೆ. ಇನ್ನೊಂದೆಡೆ, ಅನಾಥ ತಾಯಿಯ ವಿಚಾರದಲ್ಲಿ ಕೆಟ್ಟ ನಿರ್ಲಕ್ಷ್ಯ ತೋರುವಂಥ ಸ್ಥಿತಿಯೂ ಇದೆ. ಸರ್ಕಾರಿ ಆಸ್ಪತ್ರೆಗಳ ಸ್ಥಿತಿ ಸುಧಾರಣೆಯಾಗಬೇಕು ಎಂಬ ಬೇಡಿಕೆ ಹೊಸತಲ್ಲ. ಕೋವಿಡ್ ತಂದಿತ್ತ ಆರೋಗ್ಯ ಬಿಕ್ಕಟ್ಟು ಆಳುವ ಸರ್ಕಾರಕ್ಕೆ ಪಾಠವಾಗಬೇಕಾಗಿತ್ತು. ಆಗಲೂ ಕೆಲವರು ಹೀಗೆಯೇ ಹಾಸಿಗೆ, ಆಮ್ಲಜನಕ ಸಿಗದೆ ಸತ್ತೇಹೋದರು. ಕೋವಿಡ್‌ನಿಂದ ಸರ್ಕಾರ ಪಾಠ ಕಲಿತಂತೆ ಕಾಣಿಸುತ್ತಿಲ್ಲ. ಇಲಾಖೆಯ ದಯನೀಯ ಸ್ಥಿತಿಗೆ ಅದನ್ನು ಆವರಿಸಿಕೊಂಡಿರುವ ಭ್ರಷ್ಟಾಚಾರವೂ ಒಂದು ಪ್ರಮುಖ ಕಾರಣ. ಇದನ್ನು ಮೊದಲು ನಿವಾರಿಸಬೇಕಿದೆ. ಆಸ್ಪತ್ರೆಗೆ ಬರುವ ರೋಗಿಗಳಿಗೆ, ಗರ್ಭಿಣಿಯರಿಗೆ, ವೃದ್ಧರಿಗೆ ಸೂಕ್ತ ಆರೈಕೆ ಮತ್ತು ಸಾಂತ್ವನ ಸಿಗುವಂತೆ ಮಾಡಬೇಕಾದುದು ಸರ್ಕಾರದ ಹೊಣೆಗಾರಿಕೆ. ನಾಡಿಗೆ ನಾಡೇ ನಾಚಿಕೆಯಿಂದ ತಲೆತಗ್ಗಿಸುವಂತಹ ಪ್ರಕರಣ ಬೆಳಕಿಗೆ ಬಂದ ಮೇಲಾದರೂ ಸರ್ಕಾರ ಎಚ್ಚೆತ್ತುಕೊಳ್ಳಲಿ. ಈ ಪ್ರಕರಣದ ಕುರಿತು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಆರೋಗ್ಯ ವ್ಯವಸ್ಥೆಯ ನ್ಯೂನತೆಗಳನ್ನು ಸರಿಪಡಿಸಿ, ಆರೋಗ್ಯ ಕೇಂದ್ರಗಳನ್ನು ಬಲಪಡಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನೂ ಕೈಗೊಳ್ಳುವ ಇಚ್ಛಾಶಕ್ತಿಯನ್ನು ಸರ್ಕಾರ ತೋರಬೇಕು.

ದಿನದ ಟ್ವೀಟ್

ನಷ್ಟ ಅನುಭವಿಸುತ್ತಿರುವುದೇಕೆ?



ವಿಮಾನ ನಿಲ್ದಾಣಗಳು ಮೀನು ಮಾರುಕಟ್ಟೆಯಷ್ಟು ಜನಜಂಗುಳಿಯಿಂದ ಕೂಡಿದ್ದರೂ ಇಂಡಿಗೊ ಕಂಪನಿ ನಷ್ಟ ಅನುಭವಿಸುತ್ತಿರುವುದು ಏಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ದೀಪಕ್ ಶೆಣೈ, ಲೇಖಕ ಹಾಗೂ ಕ್ಯಾಪಿಟಲ್‌ಮೈಂಡ್ ಕಂಪನಿಯ ಸಿಇಒ

ಗಮನವೆಲ್ಲ ಬಿಕ್ಕಟ್ಟಿನ ಮೇಲೆ



ಆಂತರಿಕ ಹಾಗೂ ಜಾಗತಿಕ ಬಿಕ್ಕಟ್ಟು ಇಲ್ಲದ ವರ್ಷವೇ ಇಲ್ಲ. ಆದರೆ ನಾವು ಬಿಕ್ಕಟ್ಟಿನ ಮೇಲೆ ಮಾತ್ರ ಗಮನ ಕೇಂದ್ರೀಕರಿಸುತ್ತೇವೆ, ಆಗಿರುವ ಪ್ರಗತಿಯ ಮೇಲೆ ಅಲ್ಲ. ಏಕೆಂದರೆ, ಮಾರ್ಗನ್ ಹೌಸೆಲ್ ಹೇಳಿರುವಂತೆ ಪ್ರಗತಿಯು ಬಹಳ ನಿಧಾನವಾಗಿ ಗಮನಕ್ಕೆ ಬರುವಂತೆ ಆಗಿರುತ್ತದೆ, ಹಿಂಜರಿತವು ಅಲಕ್ಷಿಸಲು ಸಾಧ್ಯವಾಗದಷ್ಟು ವೇಗವಾಗಿ ಆಗುತ್ತದೆ.

ಡಿ. ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ



ತುಮಕೂರು ಜಿಲ್ಲಾ ಆಸ್ಪತ್ರೆಯ ವೈದ್ಯೆ, ಸಿಬ್ಬಂದಿಯ ನಿರ್ಲಕ್ಷ್ಯದಿಂದ ಗರ್ಭಿಣಿ ಮತ್ತು ಅವಳಿ ಶಿಶುಗಳು ದಾರುಣ ಸಾವಿಗೀಡಾಗಿರುವುದು ಅತ್ಯಂತ ನೋವಿನ ಸಂಗತಿ. ವೈದ್ಯೆಯ ಅಸೂಕ್ಷ್ಮತೆ, ಅಮಾನವೀಯತೆಯ ಕಾರಣಕ್ಕೆ ಮೂರು ಜೀವಗಳು ಬಲಿಯಾಗಿವೆ. ನಮ್ಮ ರಾಜ್ಯದಲ್ಲಿ ಆರೋಗ್ಯ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎನ್ನುವುದಕ್ಕೆ ಇದು ಸಾಕ್ಷಿ.

ಅನಿತಾ ಕುಮಾರಸ್ವಾಮಿ, ಜೆಡಿಎಸ್ ಶಾಸಕಿ

25 ವರ್ಷಗಳ ಹಿಂದೆ

ಬುಧವಾರ, 5-11-1997

• ಶರಣಾಗಲು ವೀರಪ್ಪನ್‌ಗೆ ಮತ್ತೊಂದು ಅವಕಾಶ

ಚೆನ್ನೈ, ನ.4– ‘ವೀರಪ್ಪನ್ ಬಂಧನಕ್ಕೆ ಜಂಟಿ ಕಾರ್ಯಾಚರಣೆ ನಡೆಸಲು ಕರ್ನಾಟಕ ಹಾಗೂ ತಮಿಳುನಾಡು ನಿರ್ಧರಿಸಿದ್ದರೂ ಆತನ ಶರಣಾಗತಿಗೆ ಇನ್ನೂ ಕಾಲ ಮಿಂಚಿಲ್ಲ’ ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ. ಕರುಣಾನಿಧಿ ಹೇಳಿದ್ದಾರೆ.

ಉಭಯ ರಾಜ್ಯಗಳ ಜಂಟಿ ಪಡೆಯ ಕಾರ್ಯಾಚರಣೆಗೆ ಸಕಲ ಸಿದ್ಧತೆಗಳು ನಡೆಯುತ್ತಿದ್ದು ಕಾರ್ಯಾಚರಣೆ ಸದ್ಯದಲ್ಲೇ ಆರಂಭವಾಗಲಿದೆ. ಆದರೂ ವೀರಪ್ಪನ್ ಶರಣಾಗಲು ಬಯಸಿದರೆ ಮತ್ತೊಂದು ಅವಕಾಶ ಕೊಡಲಾಗುವುದು ಎಂದು ಕರುಣಾನಿಧಿ ಅವರು ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

ಕಳೆದ ಆಗಸ್ಟ್‌ನಲ್ಲಿ ತಮಿಳುನಾಡು ಹಾಗೂ ಕರ್ನಾಟಕ ಸೂಚಿಸಿದ 8 ಅಂಶಗಳ ಸೂತ್ರವನ್ನು ಒಪ್ಪಿಕೊಂಡು ಶರಣಾಗಲು ವೀರಪ್ಪನ್‌ಗೆ ಈಗಲೂ ಕಾಲ ಮಿಂಚಿಲ್ಲ. ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಆತನ ಶರಣಾಗತಿಗೆ ಒಪ್ಪಿರುವುದರ ಹಿಂದಿನ ಉದ್ದೇಶವನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

• ಗೌಡರ ‘ಅನುಗ್ರಹ’ಕ್ಕೆ ನೂಕುನುಗ್ಗಲು

ಬೆಂಗಳೂರು, ನ. 4– ರಾಜ್ಯ ಮಂತ್ರಿಮಂಡಲ ಪುನರ್‌ರಚನೆ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡರ ಭೇಟಿಗಾಗಿ ಕಳೆದ ಎರಡು ದಿನಗಳಿಂದ ‘ಅನುಗ್ರಹ’ದಲ್ಲಿ ಸಚಿವರು ಮತ್ತು ಶಾಸಕರ ‘ನೂಕುನುಗ್ಗಲು’ ವಾತಾವರಣ ಏರ್ಪಟ್ಟಿದೆ.

ಪ್ರಧಾನಿ ಪಟ್ಟ ಹೋದ ಮೇಲೆ ಬೆಂಗಳೂರಿಗೆ ಬಂದಾಗ ಆರಂಭದಲ್ಲಿ ಒಂದೆರಡು ಬಾರಿ ಬಿಟ್ಟರೆ, ತಮ್ಮನ್ನು ನೋಡಲು ಸಚಿವರು, ಶಾಸಕರು, ಪಕ್ಷದ ಹಿರಿಯರು ಬಾರದೆ ನಿರ್ಲಕ್ಷ್ಯ ಭಾವನೆ ತಾಳಿದ್ದಾರೆಂಬ ಅಭಿಪ್ರಾಯ ಗೌಡರಲ್ಲಿ ಮೂಡಿತ್ತು. ಆದರೆ ಅದರಲ್ಲೂ ಸಂಪುಟ ಪುನರ್‌ರಚನೆ ಆಗಲಿದೆ ಎಂಬ ವದಂತಿ ದಟ್ಟವಾಗುತ್ತಿದ್ದಂತೆಯೇ ಗೌಡರನ್ನು ಭೇಟಿ ಮಾಡುವವರ ಸಂಖ್ಯೆ ಹೆಚ್ಚಾಗಿದೆ.

ಮಾಜಿ ಪ್ರಧಾನಿಗಳು ತಮ್ಮ ಪುತ್ರ, ಸಚಿವ ಎಚ್‌.ಡಿ. ರೇವಣ್ಣನವರ ಅಧಿಕೃತ ನಿವಾಸ ‘ಅನುಗ್ರಹ’ದಲ್ಲಿ ಮೊಕ್ಕಾಂ ಮಾಡಿದ್ದಾರೆ. ತಾವು ಮುಖ್ಯಮಂತ್ರಿಯಾಗಿದ್ದಾಗ ಹೊಂದಿದ್ದ ಈ ಗೃಹವನ್ನು ಅವರ ಮಗ ಉಳಿಸಿಕೊಂಡಿದ್ದಾರೆ.

• ತಮಿಳುನಾಡಿನಲ್ಲಿ ಮಳೆಗೆ 85 ಬಲಿ

ಚೆನ್ನೈ, ನ. 4 (ಪಿಟಿಐ)– ಕಳೆದ ಎರಡು ದಿನಗಳಿಂದ ಇಲ್ಲಿ ಭಾರಿ ಮಳೆ ಬೀಳುತ್ತಿದ್ದು, ಪ್ರಸಕ್ತ ಮುಂಗಾರು ಅವಧಿಯಲ್ಲಿ ತಮಿಳುನಾಡಿನಲ್ಲಿ ಮಳೆಯಿಂದಾಗಿ ಸತ್ತವರ ಸಂಖ್ಯೆ 85ಕ್ಕೆ ಏರಿದೆ.

ಮಳೆಯಲ್ಲಿ ಸತ್ತವರ ಸಂಖ್ಯೆ ಹೆಚ್ಚಿದ್ದರೂ ಯಾವುದೇ ರೀತಿಯ ಬೆಳೆ ಹಾನಿ ಆಗಿಲ್ಲ ಎಂದು ಅಧಿಕೃತ ಮೂಲಗಳು ಹೇಳಿವೆ. ಬಹುತೇಕ ಸಾವುಗಳು ಗುಡುಗು, ಸಿಡಿಲು ಬಡಿದು ಮತ್ತು ಗೋಡೆ ಕುಸಿತದಿಂದ ಸಂಭವಿಸಿವೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತದ ಪರಿಣಾಮವಾಗಿ ತಮಿಳುನಾಡಿನ ಬಹುತೇಕ ಪ್ರದೇಶಗಳಲ್ಲಿ ಕೆಲ ದಿನಗಳಿಂದ ಭಾರಿ ಮಳೆ ಸುರಿಯುತ್ತಿದೆ.

ಸಿನಿಮಾಮಂದಿಗೆ ಇರಬೇಕಾದ ಸಾಮಾಜಿಕ ಜವಾಬ್ದಾರಿಗೆ ನಿದರ್ಶನದಂತಿದೆ ಪುನೀತ್‌ರ ‘ಗಂಧದಗುಡಿ’

ಪ್ರೀತಿ–ಕೃತಜ್ಞತೆಯ ಮರು ಸಂದಾಯ



ಪಡಸಾಲೆ

ರಘುನಾಥ ಚ.ಹ.

‘ಜಾತ್ರೆಗೆ ಬಂದವರು ಜಾತ್ರೆ ಮುಗಿಸಿ ಹೊರಡುವಾಗ, ತಾವು ನಲಿದು, ಉಂಡು ಹೋದ ನೆಲದ ಮೇಲೆ ಎಲ್ಲೆಲ್ಲೂ ತಮ್ಮ ಉಚ್ಛಿಷ್ಟವನ್ನು ಚೆಲ್ಲಿ ಹೋದರೆ ಹೇಗಾದೀತು? ನಾವೇ ಅಲ್ಲಿಗೆ ತಿರುಗಿ ಬಾರದಿದ್ದರೇನಾಯಿತು? ಅಲ್ಲಿಗೆ ಬರುವ ನಮ್ಮ ಮಕ್ಕಳು ಏನಂದುಕೊಂಡಾರು? ಅಷ್ಟನ್ನಾದರೂ ಯೋಚಿಸುವ ಬುದ್ಧಿ ಈ ದೇಶವನ್ನು ನಡೆಸುವ ಹಿರಿಯರಿಗೆ ಇಲ್ಲದೆ ಹೋದರೆ ಹೇಗೆ?’ – ಶಿವರಾಮ ಕಾರಂತರು ತಮ್ಮ ‘ಹುಚ್ಚು ಮನಸಿನ ಹತ್ತು ಮುಖಗಳು’ ಆತ್ಮಕಥೆಯ ಮುನ್ನುಡಿಯಲ್ಲಿ ಎತ್ತುವ ಪ್ರಶ್ನೆಗಳಿವು. ಈ ಪ್ರಶ್ನೆಗಳನ್ನು ತಮಗೆ ತಾವೇ ಕೇಳಿಕೊಂಡಂತೆ– ‘ನಾವು ಭೂಮಿಗೆ ಬಂದ ದಿನ ನಮ್ಮ ಸುತ್ತಣ ಬದುಕು ಇದ್ದುದಕ್ಕಿಂತ ಒಂದಿಷ್ಟು ಹೆಚ್ಚು ಚಂದವಾಗುವಂತೆ ಮಾಡಿ ಇಲ್ಲಿಂದ ಹೊರಡಬೇಕು ಎಂಬ ಭಾವನೆ ನನ್ನ ಬದುಕನ್ನು ನಡೆಸಿದ ಸೂತ್ರ’ ಎನ್ನುತ್ತಾರೆ. ಬದುಕಿನ ಕುರಿತ ಈ ಪ್ರಾಂಜಲ ತಿಳಿವಳಿಕೆಯೇ ಪುನೀತ್ ರಾಜ್‌ಕುಮಾರ್ ಅವರ ‘ಗಂಧದಗುಡಿ’ ಡಾಕ್ಯುಡ್ರಾಮಾವನ್ನೂ ರೂಪಿಸಿದಂತಿದೆ.


ಕಲಾವಿದನೊಬ್ಬ ತನ್ನನ್ನು ಜನ ಯಾವ ರೀತಿ ನೆನಪಿಸಿಕೊಳ್ಳಬೇಕು ಎಂದು ಯೋಚಿಸಿ, ತನಗೆ ತಾನೇ ರೂಪಿಸಿಕೊಂಡ ‘ದೃಶ್ಯ ಶ್ರದ್ಧಾಂಜಲಿ’ ರೂಪದಲ್ಲಿದೆ ಈ ‘ಗಂಧದಗುಡಿ’. ಪುನೀತ್‌ರ ಕೊನೆಯ ಸಿನಿಮಾ ಇದಕ್ಕಿಂತ ಅತ್ಯುತ್ತಮವಾದುದಾಗಿರಲು ಸಾಧ್ಯವಿಲ್ಲ ಎನ್ನುವಂತಿದೆ ಈ ಡಾಕ್ಯುಡ್ರಾಮಾ. ಸಿನಿಮಾ ಮತ್ತು ಸಾಕ್ಷ್ಯಚಿತ್ರದ ನಡುವಣ ವ್ಯತ್ಯಾಸ ತೆಳುವಾಗಿರುವ ದಿನಗಳಲ್ಲಿ ‘ಗಂಧದಗುಡಿ’ಯನ್ನು ಸಿನಿಮಾದಂತೆಯೇ ನೋಡಬಹುದು. ಈ ಸಿನಿಮಾಕ್ಕೆ ಪುನೀತ್‌ರ ಸಾವಿನ ಭಾವುಕ ಆವರಣ ಇರುವಂತೆಯೇ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಮಹತ್ವವೂ ಇದೆ. ಕಥೆಯ ಶೀರ್ಷಿಕೆ ಮತ್ತು ಕಥನದಲ್ಲಿನ ಪರಿಮಳವನ್ನು ಕಥಾನಾಯಕನ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆಯೂ ಸಹೃದಯರ ಅನುಭವಕ್ಕೆ ತರುವಲ್ಲಿ ‘ಗಂಧದಗುಡಿ’ಯ ಯಶಸ್ಸಿದೆ.

ನೆಲದ ಮೇಲೆ ತಮ್ಮ ಉಚ್ಛಿಷ್ಟವನ್ನು ಚೆಲ್ಲಿ ನಾಳೆಯ ಪೀಳಿಗೆಯ ಬದುಕನ್ನು ಹೈರಾಣಾಗಿಸಬಾರದೆನ್ನುವ ಜನಪದರ ತಿಳಿವಳಿಕೆಯನ್ನೇ ‘ಗಂಧದಗುಡಿ’ ಇಂದಿನ ತಲೆಮಾರಿಗೆ ಮನದಟ್ಟು ಮಾಡಿಸುವ ಪ್ರಯತ್ನದಂತಿದೆ. ವ್ಯಾಪಾರಿ ಚಿತ್ರಗಳ ನಾಯಕನೊಬ್ಬನ ಈ ನಡವಳಿಕೆ, ಸಿನಿಮಾಮಂದಿಗೆ ಇರಬೇಕಾದ ಸಾಮಾಜಿಕ ಜವಾಬ್ದಾರಿಗೆ ಉದಾಹರಣೆಯಂತಿದೆ.

ನಾಗರಹೊಳೆ, ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ ಹುಲಿ ಸಂರಕ್ಷಿತ ಪ್ರದೇಶ, ನೇತ್ರಾಣಿ, ಕಾಳಿ ನದಿ, ಹಂಪಿಯ ಬೆಟ್ಟಸಾಲು ಮತ್ತು ತುಂಗಭದ್ರಾ, ಕರಡಿಧಾಮದ ಕುರುಚಲು ಕಾಡು– ಇವೆಲ್ಲವೂ ಪ್ರಾಕೃತಿಕವಾಗಿ ಕರ್ನಾಟಕದ ಬಹುತ್ವವನ್ನು ಸೂಚಿಸುತ್ತವೆ. ಆನೆ, ಹುಲಿ, ಕರಡಿ, ಕಪ್ಪೆ, ಮಂಗ, ಕಾಳಿಂಗ, ಜಲಚರಗಳನ್ನೊಳಗೊಂಡ ಜೀವವೈವಿಧ್ಯವೂ ಬಹುತ್ವದ ಸ್ವರೂಪವೇ ಆಗಿದೆ. ಸಾಮಾಜಿಕ ಬಹುತ್ವದ ಮತ್ತೊಂದು ಆಯಾಮವೂ ಸಿನಿಮಾದಲ್ಲಿದೆ. ಕಾಡಿನ ದೇವತೆ ಮಾಸ್ತಮ್ಮ, ಸೋಲಿಗ ಸಮುದಾಯದ ಅರಣ್ಯ ರಕ್ಷಕರು, ಕಾಡಿನ ನಡುವಿನ ಶಾಲಾ ಮಕ್ಕಳು, ತಾವು ಜತನಗೊಳಿಸಿದ ಕುರಿಗಳನ್ನು ಹೊತ್ತೊಯ್ಯುವ ತೋಳಗಳನ್ನು ಬಂಧುಗಳೆಂದು ಕಾಣುವ ಕುರಿಗಾಹಿಗಳು– ಇವರೆಲ್ಲ ಕನ್ನಡನಾಡಿನ ಬಹುತ್ವದ ಪ್ರತಿನಿಧಿಗಳಾಗಿ ಸಿನಿಮಾದ ಚೆಲುವು ಹೆಚ್ಚಿಸಿದ್ದಾರೆ. ಸಿನಿಮಾದ ಕೊನೆಯಲ್ಲಿ ಅನುರಣಗೊಳ್ಳುವ ‘ವಿಶ್ವಮಾನವ ತತ್ವ’ ಹೇರಿಕೆಯಾಗದೆ, ಹೇಳಿಕೆಯಾಗಿ ಉಳಿಯದೆ, ಚಿತ್ರದ ಆತ್ಮದ ಅಭಿವ್ಯಕ್ತಿಯಷ್ಟು ಸಹಜವಾಗಿದೆ.

ಪರಿಸರ ಹಾಗೂ ಪುನೀತ್ ಇಲ್ಲಿ ಬೇರೆ ಬೇರೆಯಾಗಿ ಕಾಣುವುದಿಲ್ಲ. ತಿಳಿಜಲದಂತೆಯೇ ಪುನೀತ್ ಕಾಣಿಸುತ್ತಾರೆ. ಪರಿಸರದ ಬಗೆಗಿನ ಬೆರಗು ಹಾಗೂ ಕಾಳಜಿ ಚಪ್ಪಾಳೆ ಗಿಟ್ಟಿಸಿಕೊಳ್ಳುವ ತಂತ್ರವಾಗಿ ಕಾಣಿಸದೆ, ಹೃದಯ ಸಂವಾದವಾಗಿದೆ. ಶಾಲಾಮಕ್ಕಳೆದುರು ಹಾಡುವ ‘ಎಲ್ಲಾದರು ಇರು ಎಂತಾದರು ಇರು’ ಗೀತೆ ಎದೆಯಾಳದ ದನಿಯಾಗಿ ಕಾಣಿಸುತ್ತದೆ. ಆನೆಯನ್ನು ಮುಟ್ಟಿದ ಪುಳಕವನ್ನು ಅನುಭವಿಸುವಷ್ಟೇ ಸಹಜವಾಗಿ, ಆನೆಯನ್ನು ಪಳಗಿಸುವ ಪ್ರಕ್ರಿಯೆಯಲ್ಲಿನ ಹಿಂಸೆಗೆ ಮರುಗುವ ಜೀವ ಇಲ್ಲಿದೆ. ಕಪಟವಿಲ್ಲದ ನಗು ಎದೆಗೆ ತಾಕುತ್ತದೆ.

‘ಗಂಧದಗುಡಿ’ ಸಿನಿಮಾವೊಂದನ್ನು ಕಾಳಜಿಯೊಂದರ ಮುಂದುವರಿಕೆಯ ರೂಪದಲ್ಲೂ ಗುರ್ತಿಸಬಹುದು. ವಿಜಯ್ ನಿರ್ದೇಶನದ, ರಾಜ್‌ಕುಮಾರ್ ಕಥಾನಾಯಕನಾಗಿದ್ದ ‘ಗಂಧದಗುಡಿ’ ತೆರೆಕಂಡದ್ದು 1973ರಲ್ಲಿ. ಆ ಸಿನಿಮಾದ ಎರಡನೇ ಭಾಗ ‘ಗಂಧದಗುಡಿ – ಭಾಗ 2’, ವಿಜಯ್ ನಿರ್ದೇಶನದಲ್ಲೇ ಶಿವರಾಜ್‌ಕುಮಾರ್ ನಾಯಕತ್ವದಲ್ಲಿ 1994ರಲ್ಲಿ ತೆರೆ ಕಂಡಿತ್ತು. ಅಪ್ಪ–ಅಣ್ಣನ ಹಾದಿಯಲ್ಲಿ ಅಪ್ಪು ಕೂಡ ನಡೆದಿದ್ದಾರೆ. ಒಂದೇ ಶೀರ್ಷಿಕೆ ಹಾಗೂ ಕಥನದ ಮೂರು ಸಿನಿಮಾಗಳಲ್ಲಿ ಕುಟುಂಬವೊಂದರ ಮೂವರು ಕಲಾವಿದರು ಕಾಣಿಸಿಕೊಂಡಿರುವ ಏಕೈಕ ಉದಾಹರಣೆ ‘ಗಂಧದಗುಡಿ’. ರಾಜ್ ಅವರ ‘ಗಂಧದಗುಡಿ’ ಅರಣ್ಯ ಸಂರಕ್ಷಣೆಯ ಕಥೆಯನ್ನೊಳಗೊಂಡ ಭಾರತದ ಮೊದಲ ಸಿನಿಮಾ. ಅಪ್ಪನ ‘ಗಂಧದಗುಡಿ’ಗೆ ಐವತ್ತು ವರ್ಷಗಳು ತುಂಬುತ್ತಿರುವ ಸಂದರ್ಭದಲ್ಲಿ, ಮಗನ ‘ಗಂಧದಗುಡಿ’ ರೂಪುಗೊಂಡಿದೆ. ಕಾಲದ ಓಟದಲ್ಲಿ ಹಳೆಯ ಕಥೆ ತನ್ನ ನಾಟಕೀಯತೆಯನ್ನು ಬಿಟ್ಟುಕೊಟ್ಟು, ವಾಸ್ತವದ ರೂಪ ಪಡೆದುಕೊಂಡಿದೆ.



ಹಳೆಯ ಜನಪ್ರಿಯ ಸಿನಿಮಾಗಳ ಶೀರ್ಷಿಕೆಗಳನ್ನು ವರ್ತಮಾನದಲ್ಲಿ ಬಳಸಿ ರೂಪುಗೊಂಡ ಸಿನಿಮಾಗಳ ಅನೇಕ ಉದಾಹರಣೆಗಳನ್ನು ಕನ್ನಡ ಚಿತ್ರರಂಗ ಕಂಡಿದೆ. ಆದರೆ, ಮೂಲಕೃತಿಯ ಘನತೆಗೆ ಚ್ಯುತಿಬರದಂತೆ ರೂಪುಗೊಂಡ ಉದಾಹರಣೆ ‘ಗಂಧದಗುಡಿ’ ಒಂದೇ. ಅಷ್ಟೇ ಅಲ್ಲ, ಮೂಲಕೃತಿಯ ಘನತೆಯನ್ನು ಮತ್ತಷ್ಟು ಎತ್ತರಕ್ಕೆ ಒಯ್ಯುವ ಪ್ರಯತ್ನದಂತೆಯೂ ಈ ಕಲಾಕೃತಿ ಕಾಣಿಸುತ್ತದೆ. ಅಪ್ಪನನ್ನು ಮಗ ಮೀರಿಸಬೇಕೆಂದು ಭಾರತೀಯ ಕುಟುಂಬ ಪದ್ಧತಿ ಬಯಸುತ್ತದೆ. ‘ಗಂಧದಗುಡಿ’ಯ ಮಟ್ಟಿಗೆ ಪುನೀತ್ ಹದಿನಾರಾಣೆ ‘ಅಪ್ಪನ ಮಗ.’

‘ಗಂಧದಗುಡಿ’ ಚಿತ್ರವನ್ನು ಪುನೀತ್ ಆತ್ಮಕಥನದ ರೂಪದಲ್ಲೂ ನೋಡಬಹುದು. ಪುನೀತ್ ಸಿನಿಮಾಯಾನ, ಗಾಜನೂರು, ರಾಜ್‌ಕುಮಾರ್, ದೊಡ್ಡಾಲದ ಮರ– ಇವುಗಳೆಲ್ಲ ಆತ್ಮಕಥನದ ತುಣುಕುಗಳಂತೆಯೇ ಇವೆ.

ರಾಜ್‌ಕುಮಾರ್ ಅವರ ‘ಗಂಧದಗುಡಿ’ ತೆರೆಕಂಡ ನಂತರದ ಈ ಐವತ್ತು ವರ್ಷಗಳಲ್ಲಿ ಸಿನಿಮಾರಂಗ ಸಾಕಷ್ಟು ಬದಲಾವಣೆ ಕಂಡಿದೆ. ಅರಣ್ಯ ರಕ್ಷಣೆಯ ಕುರಿತ ಕಾಳಜಿಯ ಸಿನಿಮಾ ನಿರ್ಮಾತೃಗಳ ಜಾಗದಲ್ಲೀಗ ಕಾಡಿನ ಲೂಟಿಗಾರರನ್ನು ವೀರನ ಪೋಷಾಕಿನಲ್ಲಿ ಚಿತ್ರಿಸುವ ತಲೆಮಾರನ್ನು ಕಾಣುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಮನುಷ್ಯನ ಒಳ್ಳೆಯತನದ ಬಗ್ಗೆ ನಂಬಿಕೆ ಮೂಡಿಸುವ ಪ್ರಯತ್ನದಂತೆ ‘ಗಂಧದಗುಡಿ’ ಕಾಣಿಸುತ್ತದೆ. ಇಂಥದೊಂದು ಒಳ್ಳೆಯ ಸಿನಿಮಾ ರೂಪುಗೊಳ್ಳುವಲ್ಲಿ ಪುನೀತ್ ಅವರಂತೆಯೇ ನಿರ್ದೇಶಕ ಅಮೋಘವರ್ಷ ಅವರಿಗೂ ಮೆಚ್ಚುಗೆ ಸಲ್ಲಬೇಕು. ಪ್ರಕೃತಿಯನ್ನು ಶೋಧಿಸಲು ಹೊರಟ ನಟನ ವ್ಯಕ್ತಿತ್ವದ ಶೋಧ ನಡೆಸುವ ಅವರ ಹಂಬಲ ಸಾಕಷ್ಟು ಪರಿಣಾಮಕಾರಿಯಾಗಿ ಸಿನಿಮಾದಲ್ಲಿ ಕಾಣಿಸುತ್ತದೆ. ಪುನೀತ್ ಅನುಪಸ್ಥಿತಿಯಲ್ಲಿ ‘ಗಂಧದಗುಡಿ’ಯನ್ನು ಆಸ್ಥೆಯಿಂದ ತೆರೆಗೆ ತಂದಿರುವ ಅಶ್ವಿನಿ ಅವರೂ ಅಭಿನಂದನಾರ್ಹರು. ಅತಿರೇಕಗಳಿಗೆ ಅವಕಾಶವಿದ್ದರೂ, ಸಿನಿಮಾದ ಘನತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಅಶ್ವಿನಿ ಅವರು ಕಿಂಚಿತ್ತೂ ರಾಜಿಯಾಗಿಲ್ಲ.

‘ಗಂಧದಗುಡಿ’ಯ ಕೆಲವು ದೃಶ್ಯಗಳು ಮತ್ತಷ್ಟು ಸೂಕ್ಷ್ಮಗೊಳ್ಳುವ, ಮಾತುಗಳು ಮಾಗಬೇಕಾದ ಸಾಧ್ಯತೆಗಳು ಅಲ್ಲಲ್ಲಿ ಕಾಣಿಸುತ್ತವೆ. ಆದರೆ, ಅವುಗಳು ಸಾಧ್ಯತೆಗಳೇ ಹೊರತು, ಚಿತ್ರದ ಸೌಂದರ್ಯವನ್ನೇನೂ ಮಸುಕಾಗಿಸುವುದಿಲ್ಲ. ತೊಂಬತ್ತು ವರ್ಷಗಳ ಕನ್ನಡ ಸಿನಿಮಾ ಪರಂಪರೆಗೆ ‘ಗಂಧದಗುಡಿ’ ನಿಸ್ಸಂದೇಹವಾಗಿ ಒಂದು ಅಪೂರ್ವ ಸೇರ್ಪಡೆ. ಈ ಸಿನಿಮಾ ಕರ್ನಾಟಕದ ಪರಿಸರ ಹಾಗೂ ಜೀವವೈವಿಧ್ಯದ ಬಗ್ಗೆಯಷ್ಟೇ ಹೆಮ್ಮೆ ಮೂಡಿಸುವುದಿಲ್ಲ, ಕಥಾನಾಯಕನ ಕುರಿತೂ ಹೆಮ್ಮೆ ಮೂಡಿಸುತ್ತದೆ. ಮನುಷ್ಯನ ಒಳ್ಳೆಯತನದ ಬಗ್ಗೆ ಮಾತನಾಡುತ್ತದೆ. ಮನುಷ್ಯ ಪ್ರಕೃತಿಯ ಕೂಸೆನ್ನುವುದನ್ನು ಒತ್ತಿಹೇಳುತ್ತದೆ. ‘ಮರಳಿ ಮಣ್ಣಿಗೆ’ ಎನ್ನುವ ಶಾಶ್ವತಸತ್ಯವನ್ನು ನೆನಪಿಸುವ ಕೆಲಸ ಮಾಡುತ್ತದೆ.

ಕನ್ನಡಿಗರ ಪ್ರೀತಿ, ಕಣ್ಣೀರು ಮತ್ತು ಕೃತಜ್ಞತೆಗೆ ಪುನೀತ್ ಪಾತ್ರರಾದ ಪ್ರಮಾಣದಲ್ಲಿ, ಮತ್ತೊಬ್ಬ ಭಾಗ್ಯವಂತನನ್ನು ಕರ್ನಾಟಕ ಕಂಡಿರುವುದು ವಿರಳ. ಆ ಪ್ರೀತಿ, ಕಣ್ಣೀರು, ಕೃತಜ್ಞತೆಯನ್ನು ಕಿಂಚಿತ್ತಾದರೂ ಮರಳಿಸಲು ಪುನೀತ್ ಪ್ರಯತ್ನಿಸುತ್ತಿದ್ದಾರೇನೋ ಎನ್ನುವ ಭಾವವನ್ನು ‘ಗಂಧದಗುಡಿ’ ಉಂಟುಮಾಡುತ್ತದೆ.

ಚುರುಮುರಿ



ದೇವರ ಚಿತ್ತ

• ಕೆ.ವಿ.ರಾಜಲಕ್ಷ್ಮಿ

‘ಮಾನವೀಯತೆ ಅನ್ನೋದು ಮರೆಯಾಗ್ತಿದೆ, ತುರ್ತು ಪರಿಸ್ಥಿತೀಲಿ ಚಿಕಿತ್ಸೆ ಕೊಡೋಕ್ಕೂ ನಿಯಮಾವಳಿ ನೋಡ್ತಾ ಕೂತ್ರೆ ಪ್ರಾಣ ಉಳಿಯುತ್ಯೆ? ಮೊನ್ನೆ ಸೇತುವೆ ಮುರಿದು ಒಂದಷ್ಟು ಬಲಿ- ಎಲ್ಲಕ್ಕೂ ದೇವರ ಚಿತ್ತ ಅನ್ನೋಕೆ ಬರೋಲ್ಲ’ ಅತ್ತೆ ಕಿಡಿಕಾರಿದರು.

ವಾಕ್ ಮುಗಿಸಿ ಬಂದ ಕಂಠಿ, ನೇರ ಆರಾಮ ಕುರ್ಚಿಯಲ್ಲಿ ಕುಳಿತು ‘ನಿನ್ನೆ ಬ್ಯಾಂಕಿಗೆ ಹೋಗಿದ್ದೆ, ಕನ್ನಡ ಕಳೆದುಹೋಗಿದೆ, ಜಾಲರಿ ಹಾಕಿ ಹುಡುಕಬೇಕು. ನಮ್ಮ ಧಾರಾಳತನ ಅತಿಯಾಯ್ತೆನೋ. ಕೊನೇಪಕ್ಷ ಭಾಷೆ ವಿಷಯದಲ್ಲಿ ಸ್ವಲ್ಪ ಕಠಿಣವಾಗಿರಬೇಕು’ ತಲೆ ಕೆರೆದುಕೊಂಡ.

‘ಕನ್ನಡ ಕಲಿಯೋದು ಅಂದ್ರೆ ಕಹಿ ಕಷಾಯ ಕುಡಿಯೋದು ಅನ್ನೋ ಹಾಗೆ ಆಡ್ತಾನೆ! ಹತ್ತು ವರ್ಷದಿಂದ ಇಲ್ಲೇ ಇದ್ದಾರೆ ಕನ್ನಡದಲ್ಲಿ ಮಾತಾಡೋಕ್ಕೆ ಬರೋಲ್ಲ. ಕನ್ನಡ ವಿಷಯದಲ್ಲಿ ವೀಕು, ಪರೀಕ್ಷೇಲಿ ಎರಡಂಕಿ ದಾಟಿಲ್ಲ’ ಅತ್ತೆಯಿಂದ ತಮ್ಮ ಹೊಸ ಸ್ಟೂಡೆಂಟಿನ ಗುಣಗಾನ.

‘ನೀವೂ ಸರಿ, ಮೊನ್ನೆ ಪಕ್ಕದ್ಮನೆ ಪಂಕಜನ ಮೊಮ್ಮಗನಿಗೆ ತರಕಾರಿ ಹೆಸರು ಇಂಗ್ಲಿಷ್‌ನಲ್ಲಿ ಕೇಳಿ, ಕನ್ನಡದಲ್ಲಿ ಗುರುತಿಸೋಕ್ಕೆ ಹೇಳ್ತಿದ್ದೆ. ಡ್ರಮ್ ಸ್ಟಿಕ್ ಅಂದರೆ ತಮಟೆ ಕಡ್ಡಿ ಅನ್ಬೇಕ? ಡ್ರಮ್ ಅಂದ್ರ ತಮಟೆ, ಸ್ಟಿಕ್ ಅಂದ್ರ ಕಡ್ಡಿ ಅನ್ನೋ ಸಮರ್ಥನೆ ಬೇರೆ!’ ನುಗ್ಗೆಕಾಯಿಗೆ ಬಂದ ಗತಿ ನೋಡಿ ನನ್ನವಳ ಒಗ್ಗರಣೆ.

‘ಅಯ್ಯೋ ಅದು ವಾಸಿ, ನಮ್ಮ ಪುಟ್ಟಿಯ ಹೊಸ ಗೆಳತಿ ಮನೆಗೆ ಬಂದಾಗ ಅವಳ ಭಾಷೆ ಗಮನಿಸಿ ‘ನೀವು ಉತ್ತರ ಕರ್ನಾಟಕದವರೇ?’ ಅಂತ ಕೇಳಿದ್ದಕ್ಕೆ ‘ಅಲ್ಲ ನಾರ್ತ್ ಕರ್ನಾಟಕ’ ಅಂದ್ಲು. ಕಪಾಳಮೋಕ್ಷ ಆದಂತಾಯ್ತು’ ನನ್ನ ಪಾಲೂ ಸೇರಿಸಿದೆ.

‘ಅರೆ, ಬಂದ ವಿಷಯ ಹೇಳೋಕ್ಕೆ ಮರೆತೆ. ನಮ್ಮ ಆಫೀಸಲ್ಲಿ ಕನ್ನಡೇತರರಿಗೆ ಕನ್ನಡ ಕಲಿಸುವ ಯೋಜನೆ, ಪಾಠ ಹೇಳ್ಕೊಡೋಕ್ಕೆ ನಿಮ್ಮತ್ತೆಯವರ ಹೆಸರು ಅಂತಿಮಗೊಳಿಸಲಾಗಿದೆ’ ಎಂದು ಆಹ್ವಾನಪತ್ರ ಕೊಟ್ಟ.

‘ಪಿಕಪ್– ಡ್ರಾಪ್ ವಿತ್ ಗೌರವಧನ, ಅಜ್ಜೀ, ಹೊಡೆದೆ ಚಾನ್ಸು’ ಪತ್ರದ ಮೇಲೆ ಕಣ್ಣಾಡಿಸಿದ ಪುಟ್ಟಿ ಕೇಕೆ ಹಾಕಿದಳು.

‘ಇದನ್ನೇ ದೇವರ ಚಿತ್ತ ಅನ್ನೋದು’ ಎನ್ನುತ್ತಾ ನನ್ನವಳು ಹೊಗೆಯಾಡುವ ಕಾಫಿ ತಂದಳು.

ಸಂಗತ

ಬದುಕು ಬಲು ದುಬಾರಿ- ದುಸ್ತರ

ಎಷ್ಟು ಎತ್ತರೆತ್ತರ ಶಿಕ್ಷಣ ಪಡೆಯುವೆವೊ ಅಷ್ಟಷ್ಟು ಅವಿದ್ಯಾವಂತ, ಅಮಾನವೀಯ ವರ್ತನೆ ನಮ್ಮದಾಗುತ್ತದೆ ಎಂಬುದಕ್ಕೆ ತುಮಕೂರಿನ ಪ್ರಕರಣವೇ ಸಾಕ್ಷಿ

ತಾಯಿ ಕಾರ್ಡ್, ಆಧಾರ್ ಕಾರ್ಡ್ ಇಲ್ಲ ಎಂಬ ಕಾರಣಕ್ಕೆ ತುಮಕೂರು ಜಿಲ್ಲಾ ಆಸ್ಪತ್ರೆ ಸಿಬ್ಬಂದಿಯು ಚಿಕಿತ್ಸೆ ನೀಡಲು ನಿರಾಕರಿಸಿದ ಕಾರಣ, ಹೆರಿಗೆ ನೋವಿನಿಂದ ಬಳಲುತ್ತಿದ್ದ ಮಹಿಳೆ ತೀವ್ರ ರಕ್ತಸ್ರಾವದಿಂದ ಮೃತಪಟ್ಟು, ಸಕಾಲಕ್ಕೆ ಚಿಕಿತ್ಸೆ ಸಿಗದೆ ಆಕೆಯ ಅವಳಿ ಶಿಶುಗಳು ಕೂಡ ಮೃತಪಟ್ಟು, ಆ ಮಹಿಳೆಯ ಆರು ವರ್ಷದ ಮಗಳು ಅನಾಥೆಯಾದ ಸುದ್ದಿಯನ್ನು (ಪ್ರ.ವಾ., ನ. 4) ಓದಿ ಎದೆಯೊಡೆದಂತಾಯಿತು.

ಈ ಹೊತ್ತಿನ ಪರಿಸ್ಥಿತಿ ಹೇಗಿದೆಯೆಂದರೆ, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಐ.ಡಿ. ಕಾರ್ಡ್ ಇಲ್ಲದಿದ್ದರೆ ಹುಟ್ಟುವ ಹಾಗೂ ಇಲ್ಲ, ಸಾಯುವ ಹಾಗೂ ಇಲ್ಲ. ಮಸಣದಲ್ಲಿ ಮೊದಲು ಕೇಳುವುದೆಂದರೆ ‘ಆಧಾರ್ ಕೊಡಿ!’ ಮನುಷ್ಯರಾಗಿ ಹುಟ್ಟುವುದಕ್ಕಿಂತ ಗಿಡ ಮರ ಹುಲ್ಲು ಕಲ್ಲು ಆಗಿ ಹುಟ್ಟುವುದೇ ಲೇಸು- ಮತ್ತೆ ಜನುಮ ಇದ್ದರೆ ನಾನಂತೂ ಅದೇ ಆಗಿ ಹುಟ್ಟಬಯಸುವೆ! ಎಷ್ಟು ಎತ್ತರೆತ್ತರ ಶಿಕ್ಷಣ ಪಡೆಯುವೆವೊ ಅಷ್ಟಷ್ಟು ಅವಿದ್ಯಾವಂತ, ಅಮಾನವೀಯ ವರ್ತನೆ ನಮ್ಮದಾಗುತ್ತದೆ ಎಂಬುದಕ್ಕೆ ಈ ಪ್ರಕರಣವೇ ಸಾಕ್ಷಿ. ಅಲ್ಲಿನ ವೈದ್ಯರು, ಸಿಬ್ಬಂದಿ ಎಲ್ಲರೂ ಮಹಿಳೆಯರಾಗಿದ್ದರೂ ಕಷ್ಟದಲ್ಲಿದ್ದ ಮಹಿಳೆಗೆ ನೆರವಾಗದಿದ್ದನ್ನು ನೋಡಿದರೆ, ಇವರು ಯಾವ ಮಟ್ಟದ ವೈದ್ಯಕೀಯ ಶಿಕ್ಷಣ ಪಡೆದಿರಬಹುದು ಎಂದು ನಮ್ಮ ಶಿಕ್ಷಣದ ಮಟ್ಟದ ಬಗ್ಗೆ ಯೋಚಿಸುವ ಸಂದರ್ಭ ಇದಾಗಿದೆ.

ಈ ದಿನಗಳ ಪರಿಸ್ಥಿತಿ ಹೇಗಿದೆ ಎಂದರೆ, ನೂರೆಂಟು ಕಾರ್ಡುಗಳನ್ನು ಸದಾ ನೇತುಹಾಕಿಕೊಂಡು ಓಡಾಡಬೇಕು. ಐದಾರು ಫೋಟೊಗಳನ್ನು ಸದಾ ಪರ್ಸ್ ಅಥವಾ ಜೇಬಿನಲ್ಲಿ ಇಟ್ಟುಕೊಂಡಿರಬೇಕು. ಪ್ರತಿಯೊಬ್ಬ ಮನುಷ್ಯನೂ ಇವರ ಕಣ್ಣಿಗೆ ವಂಚಕನ ಹಾಗೇ ಕಾಣುವನೋ ಹೇಗೆ? ಎಟಿಎಂನಿಂದ ಹಣ ತೆಗೆದರೆ ಐನೂರರ ನೋಟುಗಳು. ಚಿಲ್ಲರೆ ಕೊಡಿ ಎಂದು ಬ್ಯಾಂಕ್ ಸಿಬ್ಬಂದಿಗೆ ಕೇಳಿದರೆ ‘ಇಲ್ಲ’ ಎನ್ನುವ ಉತ್ತರ. ಬ್ಯಾಂಕ್‌ನ ಸಿಬ್ಬಂದಿಯ ಆಲಸ್ಯ- ಉದ್ಧಟತನ ನೋಡಿ ಗಾಬರಿ ಆಗುತ್ತದೆ. ಪ್ರತಿಷ್ಠಿತ ಬ್ಯಾಂಕ್‌ಗಳು ಸಾವಿರ ರೂಪಾಯಿಗೆ ಚಿಲ್ಲರೆ ಕೊಡಲಾರದಷ್ಟು ಬಡವಾಗಿವೆಯೇ? ಅಂಚೆ ಕಚೇರಿಗೆ ಹೋದರೆ ಅರ್ಜಿ ಸಂಪೂರ್ಣ ಹಿಂದಿಯಲ್ಲಿರುತ್ತದೆ. ‘ನನಗೆ ಹಿಂದಿ ಬರುವುದಿಲ್ಲ’ ಎಂದರೆ ‘ನಾನು ನೆರವಾಗುವೆ... ಇಲ್ಲಿಲ್ಲಿ ಹೀಗೆ ಹೀಗೆ ಬರೆಯಿರಿ, ನಮಗೆ ಇದೇ ಫಾರಂ ಈಗೀಗ ಬರುವುದು’ ಎಂದು ಸಿಬ್ಬಂದಿ ಹೇಳುತ್ತಾರೆ. ಬ್ಯಾಂಕ್‌ಗೆ ಹೋದರಂತೂ ಅವರು ನಿರರ್ಗಳವಾಗಿ ಹಿಂದಿಯಲ್ಲಿ ಮಾತನಾಡಿ, ನಾವು ಹರಕು ಮುರುಕು ಹಿಂದಿಯಲ್ಲಿ ಮಾತನಾಡಿ ಕೆಲಸ ಪೂರೈಸಿಕೊಂಡು ಬರಬೇಕು– ಹಾಗೆ ಮಾಡುವರು! ರಾಜ್ಯ ಸರ್ಕಾರದ ಕಚೇರಿಗೆ ಹೋದರೆ ಒಂದೋ ಅವರು ಸೀಟಿನಲ್ಲಿ ಇರುವುದಿಲ್ಲ. ಪತ್ರ- ಇಮೇಲ್ ಕಳಿಸಿದರೆ ಒಂದು ಸಾಲಿನ ಉತ್ತರವೂ ಬರುವುದಿಲ್ಲ! ವ್ಯವಸ್ಥೆ ಅನ್ನುವುದು ಇದೆಯೇ? ಯಾವ ಮಟ್ಟಕ್ಕೆ ಹೋಗಿದೆ? ಅನುಮಾನವಾಗುತ್ತಿದೆ.

ಅಭಿವೃದ್ಧಿ ಅಂದರೆ ರಸ್ತೆ, ಸೇತುವೆಗಳು, ಮುಗಿಲು ಮುಟ್ಟುವ ಕಟ್ಟಡ, ಟವರ್‌ಗಳು ಮತ್ತು ಹೆಜ್ಜೆ ಹೆಜ್ಜೆಗೂ ದಲ್ಲಾಳಿಗಳು- ಕಮಿಷನ್- ಲಂಚ, ಕೊರಳ ಸುತ್ತ ಮಾಲೆಯಂತೆ ಹಾಕಿಕೊಂಡಿರುವ ಕಾರ್ಡುಗಳು. ಮಾತೆತ್ತಿದರೆ ಮೊಬೈಲು- ಒಟಿಪಿ- ಕೋಡು- ಸ್ಕ್ಯಾನು... ಇವುಗಳ ನಡುವೆ ಅನಾಥನಂತಿರುವ ಮನುಷ್ಯ! ಬದುಕು ಬಲು ದುಬಾರಿ-ದುಸ್ತರ!

ಸವಿತಾ ನಾಗಭೂಷಣ, ಶಿವಮೊಗ್ಗ

ಪರವಾನಗಿ ಇದೆಯಲ್ಲ!

ನವೆಂಬರ್ 4ರ ಬೆಳಿಗ್ಗೆ ನನಗೆ ಅಪರಿಚಿತರೊಬ್ಬರ ಫೋನ್ ಕರೆ ಬರುತ್ತದೆ. ಆ ಕಡೆಯಿಂದ ‘ಗುಡ್ ಮಾರ್ನಿಂಗ್’ ಧ್ವನಿ ಕೇಳುತ್ತದೆ. ನನಗೆ ತಿರುಗಿ ‘ಗುಡ್ ಮಾರ್ನಿಂಗ್’ ಅನ್ನುವುದಕ್ಕೆ ನಾಲಗೆಯೇ ಹೊರಡುವುದಿಲ್ಲ. ‘ಪ್ರಜಾವಾಣಿ’ ಮುಖಪುಟದ ತಾಯಿ, ಅವಳಿ ಶಿಶುಗಳ ಸಾವಿನ ಸುದ್ದಿ ನನ್ನನ್ನು ಅಷ್ಟೊಂದು ಕಂಗೆಡಿಸಿಬಿಟ್ಟಿತ್ತು! ಇದನ್ನು ಓದಿದ ಮೇಲೆ ನಾನು ಬಹಳ ಹೊತ್ತು ತಲೆ ತಗ್ಗಿಸಿದೆ.

ಸರ್ಕಾರಿ ಕರ್ತವ್ಯನಿರತರು ಅದರಲ್ಲೂ ವೈದ್ಯರು ಹೀಗೆ ವರ್ತಿಸುತ್ತಾರೆ ಎಂದರೆ ಯೋಚಿಸುವಾಗ ಕಣ್ಣು ಕತ್ತಲೆ ಬಂದಂತಾಗುತ್ತದೆ. ಅವರಲ್ಲಿ ಹೋಗಿ ‘ಹೀಗೆ ಯಾಕೆ ಮಾಡಿದಿರಿ?’ ಎಂದು ಕೇಳಿದರೆ ‘ಅದು ದೇವರ ಇಚ್ಛೆ’ ಅನ್ನುವ ಸಾಧ್ಯತೆಯೂ ಇದೆ! ಅಂದಹಾಗೆ ಇವರ ಮೇಲೆ ‘ಶೀಘ್ರ’ ಕ್ರಮ ತೆಗೆದುಕೊಂಡಿದ್ದಾರೆ. ‘ಅಮಾನತು’ ಎಂಬುದಕ್ಕೆ ಅರ್ಥ ಇದ್ದರೆ ತಾನೇ? ಅಂತಹ ವೈದ್ಯರ ಕೈಯಲ್ಲಿ ತಮ್ಮ ವೃತ್ತಿ ಮುಂದುವರಿಸುವುದಕ್ಕೆ ಅಗತ್ಯವಾದ ಪರವಾನಗಿ ಇನ್ನೂ ಇದೆಯಲ್ಲ.

ಪ್ರಕಾಶ್ ಶೆಟ್ಟಿ, ಬೆಂಗಳೂರು



ಕಾರ್ಡುಗಳ ಉಪದ್ರವ

ಬಡವರು ಮತ್ತು ಕಡುಬಡವರಿಗೆ ಸರ್ಕಾರ ರೂಪಿಸಿರುವ ನೆರವಿನ ಯೋಜನೆಗಳು ವಾಸ್ತವದಲ್ಲಿ ಮಾನವೀಯ ಕಾಳಜಿಯುಳ್ಳವುಗಳಾಗಿಲ್ಲ ಎಂಬುದನ್ನು ತುಮಕೂರಿನ ಪ್ರಕರಣ ಎತ್ತಿ ತೋರಿಸುತ್ತಿದೆ. ಸರ್ಕಾರದ ವಿವಿಧ ನೆರವಿನ ಯೋಜನೆಗಳ ಲಾಭ ಪಡೆಯಲು ಇರುವ ‘ಕಾರ್ಡ್ ಪದ್ಧತಿ’ಯಿಂದಾಗಿ ಪ್ರತಿನಿತ್ಯ ಬಡಜನ ವಿವಿಧ ಇಲಾಖೆಗಳ ಕಚೇರಿಗಳ ಬಳಿ ದೀನರಂತೆ ಜಮಾಯಿಸುವುದು ನಡೆದೇ ಇದೆ. ಪಡಿತರ ಪಡೆಯಲು ಕಾರ್ಡು, ನರೇಗಾ ಕೆಲಸಕ್ಕಾಗಿ ಕಾರ್ಡು, ಶುಲ್ಕವಿಲ್ಲದೆ ಮಕ್ಕಳನ್ನು ಶಾಲೆಗೆ ಸೇರಿಸಲು ಕಾರ್ಡು, ಆಸ್ಪತ್ರೆಗಾಗಿ ಕಾರ್ಡು, ಕಾರ್ಮಿಕ ಸವಲತ್ತು ಪಡೆಯಲು ಕಾರ್ಡು, ಸಾಲ ಪಡೆಯುವ ಅರ್ಹತೆಯ ಕಾರ್ಡು, ಇವುಗಳ ಜೊತೆಗೆ ರೇಷನ್ ಕಾರ್ಡಿಗೆ ಆಧಾರ್ ಕಾರ್ಡಿನ ಲಿಂಕು... ಇವೆಲ್ಲವೂ ಬಡವರಿಗೆ ದೊಡ್ಡ ಉಪದ್ರವಗಳಾಗಿರುವ ಸತ್ಯ ಯಾರಿಗೂ ಕಾಣದಂತಹದ್ದೇ?

ಅಯ್ಯಪ್ಪ ಹೂಗಾರ್, ಮೈಸೂರು

ವಾಚಕರ ವಾಣಿ

ಜನ ತಿಳಿಯಬಯಸುವುದು ಏನೆಂದರೆ...

ಚುನಾವಣೆ ಸಮೀಪಿಸಿದಾಗ ರಾಜಕಾರಣಿಗಳ ಪಕ್ಷಾಂತರದ ಭರಾಟೆ ಬಲು ಜೋರು. ಪ್ರಜಾಪ್ರಭುತ್ವದಲ್ಲಿ ನಿಸ್ಸಂದೇಹವಾಗಿ ಅವರು ಆ ವಿಚಾರದಲ್ಲಿ ಸ್ವತಂತ್ರರು. ಆದರೆ ಜನ ಇಷ್ಟನ್ನು ಮಾತ್ರ ತಿಳಿಯಬಯಸುತ್ತಾರೆ. ‘ನೀವು ತ್ಯಜಿಸುತ್ತಿರುವ ಪಕ್ಷದಲ್ಲಿ ನೀವು ಗುರುತಿಸಿರುವ ಯಾವ್ಯಾವ ನ್ಯೂನತೆಗಳಿವೆ? ಸೇರುತ್ತಿರುವ ಪಕ್ಷದಲ್ಲಿ ನಿಮಗೆ ಮನವರಿಕೆಯಾದ ಜನಸ್ನೇಹಿ ಧೋರಣೆ, ಸಿದ್ಧಾಂತಗಳು ಯಾವುವು? ನೀವು ಸೇರ್ಪಡೆಯಾಗುವ ಪಕ್ಷದಲ್ಲಿ ನಿಮಗೆ ಮೊದಮೊದಲಿಗಾದರೂ ಅಧಿಕಾರ ಸ್ಥಾನಗಳಿಗೆ ಹಂಬಲಿಸದ ಆತ್ಮವಿಶ್ವಾಸವಿದೆಯೇ ಮತ್ತು ಆ ಕುರಿತು ಭರವಸೆ ನೀಡುವಿರಾ?’

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಕನ್ನಡ ರಾಜ್ಯೋತ್ಸವವೇ ಸೂಕ್ತ

ಕನ್ನಡ ರಾಜ್ಯೋತ್ಸವದ ಬದಲಿಗೆ ಕರ್ನಾಟಕ ರಾಜ್ಯೋತ್ಸವ ಎಂದು ಹೆಸರಿಸಬೇಕೆಂದು ಕೆಲವರು ಅಭಿಪ್ರಾಯ ಪಡುತ್ತಿರುವುದು ಸೂಕ್ತವಲ್ಲ. ಕರ್ನಾಟಕವು ಕನ್ನಡಿಗರ ನಾಡು. ಕನ್ನಡವೆಂಬುದು ನಮ್ಮ ಕರುಳಿನ ಭಾಷೆ. ಇಲ್ಲಿ ವಿವಿಧ ಉಪಭಾಷೆ, ಸೋದರ ಭಾಷೆಗಳು ಇದ್ದರೂ ಆಡಳಿತ ಭಾಷೆ ಕನ್ನಡಕ್ಕೆ ಮಹತ್ವ ಇರಬೇಕು.

ರಾಜ್ಯವೆಲ್ಲಾ ಕರ್ನಾಟಕ ರಾಜ್ಯೋತ್ಸವ ಆಚರಿಸಿ ಕನ್ನಡಿಗರು ಮಾತ್ರ ಕನ್ನಡೋತ್ಸವ ಆಚರಿಸಲು ಕನ್ನಡಿಗರೇನು ಹೊರಗಿನಿಂದ ಬಂದು ಇಲ್ಲಿ ಸೇರಿರುವವರಲ್ಲ! ಕನ್ನಡ ಭಾಷೆ ಕರುಳಿನಿಂದ ಹಬ್ಬಿ ಬಳ್ಳಿಯಂತೆ ಬೆಳೆದಿದೆ. ಹಾಗಾಗಿ ನಮ್ಮ ಕನ್ನಡ ಭಾಷೆಗೆ ಕನ್ನಡ ರಾಜ್ಯೋತ್ಸವವೇ ಸೂಕ್ತ.

ಆರ್.ವೆಂಕಟರಾಜು, ಬೆಂಗಳೂರು

ಮೊಬೈಲ್ ಹಾವಳಿ: ಬೇಕು ಸೂಚನಾ ಫಲಕ

ಇತ್ತೀಚಿನ ದಿನಗಳಲ್ಲಿ ಯಾವುದೇ ಬಸ್ಸು ಹತ್ತಿದರೆ ಸಾಕು, ಅಬ್ಬರದ ಹಾಡು ಅಥವಾ ವಿಕಟ ನಗೆ, ಜೋರು ಮಾತುಗಳು ಮೊಬೈಲ್‌ನಿಂದ ಕೇಳಿಬರುತ್ತಿರುತ್ತವೆ. ಇದರಿಂದ ಸಹಪ್ರಯಾಣಿಕರಿಗೆ ಕಿರಿಕಿರಿ ಆಗುತ್ತದೆ ಎಂಬ ಕನಿಷ್ಠ ಅರಿವೂ ಇಲ್ಲದವರಿಗೆ ಹೇಗೆ ತಿಳಿಹೇಳುವುದು? ಹಾಗಾಗಿ ಬಸ್‌ಗಳಲ್ಲಿ ಮೊಬೈಲ್ ಸದ್ದಿನ ಕಿರಿಕಿರಿ ನಿಯಂತ್ರಿಸುವ ಕುರಿತು ಸೂಚನಾ ಫಲಕ ಅಳವಡಿಸುವ ಕಾರ್ಯವಾಗಬೇಕು. ಸಹಪ್ರಯಾಣಿಕರಿಗೆ ತೊಂದರೆಯಾಗದಂತೆ ಫೋನ್ ಬಳಸುವುದನ್ನು ಕಲಿಸುವ ಕೆಲಸ ಆಗಬೇಕು.

ಡಾ. ಹನುಮಂತ ಪೂಜಾರ, ಗದಗ

ಕಲಿಯಲಿ ಮಾನವೀಯತೆಯ ಪಾಠ

ಹೆಲ್ಮೆಟ್ ಧರಿಸಿಲ್ಲ ಎಂಬ ಕಾರಣಕ್ಕೆ ದಂಡ ಪಾವತಿಸಲೇಬೇಕೆಂದು ಎಎಸ್‌ಐ ಪಟ್ಟು ಹಿಡಿದದ್ದರಿಂದ ಅದಕ್ಕೆ ಬೇಕಾದ ಹಣ ತರಲು ಪತಿ ಎಟಿಎಂಗೆ ತೆರಳಿದಾಗ ಪತ್ನಿ ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದ ಹಸುಗೂಸು ಸಿಗ್ನಲ್‌ನಲ್ಲೇ ತುಂತುರು ಮಳೆಯಲ್ಲಿ ನೆನೆಯುತ್ತಾ ಪರದಾಡಿದ ಪ್ರಕರಣ (ಪ್ರ.ವಾ., ನ. 4) ನಮ್ಮ ಪೊಲೀಸ್ ವ್ಯವಸ್ಥೆಯ ನಿಜಮುಖವನ್ನು ಬಿಚ್ಚಿಟ್ಟಿದೆ. ಸಿಗ್ನಲ್‌ನಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾ ಇರುವುದಿಲ್ಲವೇ? ಅದರಲ್ಲಿ ವಾಹನದ ಸಂಖ್ಯೆ ನಮೂದಾಗುವುದಿಲ್ಲವೇ? ಹಾಗಿದ್ದಾಗ ಈ ರೀತಿಯ ಕಿರುಕುಳ ಕೊಡಲು ಎಎಸ್‌ಐಗೆ ಹೇಗೆ ಮನಸ್ಸು ಬಂತು?

ಹೆಲ್ಮೆಟ್ ಧರಿಸದಿದ್ದುದಕ್ಕೆ ದಂಡ ಕಟ್ಟಿಸಿಕೊಳ್ಳುವುದು ಸರಿ. ಆದರೆ ತಕ್ಷಣವೇ ಅದನ್ನು ಕಟ್ಟಿಸಿಕೊಳ್ಳುವ ತರಾತುರಿ ಏನಿತ್ತು? ಹಸುಗೂಸನ್ನು ಮಳೆಯಲ್ಲೇ ನೆನೆಸಿಯಾದರೂ ದಂಡ ವಸೂಲಿ ಮಾಡಬೇಕೆನ್ನುವ ಹಟಮಾರಿ ಧೋರಣೆ ಏಕೆ ಬೇಕಿತ್ತು? ಇದು ಮಾನವೀಯತೆಯನ್ನೇ ಮರೆತಾದರೂ ಕರ್ತವ್ಯವನ್ನು ಮಾಡಬೇಕೆಂಬ ಅತಿರೇಕದ ವರ್ತನೆ. ಪೊಲೀಸ್ ತರಬೇತಿ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಮಾನವೀಯತೆಯ ಪಾಠವನ್ನೂ ಕಲಿಸಿದ್ದರೆ ಒಳ್ಳೆಯದಿತ್ತೇನೊ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಉತ್ತೇಜನ?!

ನಮಗೆ ನಾಡು-ನುಡಿಯ ಬಗ್ಗೆ
ಎಷ್ಟೊಂದು ಅಭಿಮಾನ!
ಮೊನ್ನೆ, ಅಲ್ಲೊಂದು
ಕನ್ನಡ ರಾಜ್ಯೋತ್ಸವ
ಸಮಾರಂಭದಲ್ಲಿ
ಭಾಗವಹಿಸಿದ್ದವರು
ಧ್ವನಿವರ್ಧಕದವನೂ ಸೇರಿ
ಹತ್ತೇ ಜನ!

ಮ.ಗು.ಬಸವಣ್ಣ
ಸುತ್ತೂರು, ಮೈಸೂರು

ಮೂಢನಂಬಿಕೆಗೆ ಇಲ್ಲವೇ ಪರಿಹಾರ?

ಚನ್ನಪಟ್ಟಣದಲ್ಲಿ ವ್ಯಕ್ತಿಯೊಬ್ಬ ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಮಗು ಮತ್ತು ಪತ್ನಿಯನ್ನು ಮನೆಯಿಂದ ಹೊರಕ್ಕೆ ಕಳುಹಿಸಿರುವ ಸುದ್ದಿ (ಪ್ರ.ವಾ., ನ. 4) ಓದಿ ಅತೀವ ಬೇಸರವಾಯಿತು. ಇಂತಹವುಗಳ ಬಗ್ಗೆ ಹಿಂದೆ ಕತೆ, ಕಾದಂಬರಿಗಳಲ್ಲಿ ತುಂಬಾ ಓದುತ್ತಿದ್ದೆವು.

ಆದರೆ ಈ ಮುಂದುವರಿದ ಕಾಲಘಟ್ಟದಲ್ಲೂ ಈ ಮೂಢನಂಬಿಕೆ ಹೀಗೆಯೇ ಮುಂದುವರಿಯುತ್ತಿದೆಯೇ? ಇದಕ್ಕೆ ಪರಿಹಾರವೇ ಇಲ್ಲವೆ? ತಿಳಿದವರು ಖಂಡಿತಾ ತಿಳಿಸಿಕೊಡಬೇಕು. ಏಕೆಂದರೆ ಇದು ಬಹುಜನರ ಕಣ್ಣೊರೆಸುವ ತಂಪು ವಸ್ತ್ರವಾಗಬಲ್ಲದು.

ಎ.ಬಿ.ಮಾಲತಿ, ಮೈಸೂರು

ಧ್ಯಾನ ಬೇಕು: ಯಾರಿಗೆ?

ಶಾಲೆಗಳಲ್ಲಿ ಮಕ್ಕಳಿಗೆ ಧ್ಯಾನ ಮಾಡಿಸಲು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಸೂಚನೆ ನೀಡಿದ್ದಾರೆ. ಅರಳುವ ಹೂವುಗಳನ್ನು ಮಕ್ಕಳ ಮನಸ್ಸು ಮತ್ತು ನಗೆಯಲ್ಲಿ ಕಾಣಬಹುದು. ಅವರ ಮನಸ್ಸೇ ಧ್ಯಾನದಂತೆ ಇರುತ್ತದೆ. ಆಟ– ಪಾಠಗಳೇ ಯೋಗಾಸನದಂತೆ ಇರುತ್ತವೆ. ಅಂಥ ನಿರ್ಮಲ ಮನಸ್ಸಿನ ಮಕ್ಕಳಿಗೇಕೆ ಧ್ಯಾನ?

ಅವರಿಗೆ ಪಾಠ ಮಾಡುವ ಶಿಕ್ಷಕರು ಮತ್ತು ಪೋಷಕರು ಧ್ಯಾನಾಸಕ್ತರಾಗಿ ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ಶ್ರಮಿಸುವ ದಿಕ್ಕಿನಲ್ಲಿ ಸಚಿವರು ಶಾಲೆಗಳಲ್ಲಿ ಸೂಕ್ತ ಮೂಲಸೌಕರ್ಯ ಒದಗಿಸುವ ಬಗ್ಗೆ ಧ್ಯಾನಿಸಲಿ.

ನಂಜನಹಳ್ಳಿ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

‘ಮೀಸಲಾತಿ ಹೆಚ್ಚಳದೊಂದಿಗೆ ಉದ್ಯೋಗದ ಖಾತರಿಯೂ ಬೇಕು’

● ವಿ.ಎಸ್. ಸುಬ್ರಹ್ಮಣ್ಯ

ಎಸ್.ಸಿ ಮೀಸಲಾತಿಯನ್ನು ಶೇಕಡ 15ರಿಂದ 17ಕ್ಕೆ ಮತ್ತು ಎಸ್.ಟಿ ಮೀಸಲಾತಿಯನ್ನು ಶೇ 3ರಿಂದ 7ಕ್ಕೆ ಹೆಚ್ಚಿಸಿ ಸುಗ್ರೀವಾಜ್ಞೆ ಹೊರಡಿಸಿದೆ. ಈ ಹೆಚ್ಚಳ ತಕ್ಷಣ ಅನುಷ್ಠಾನಕ್ಕೆ ಬರಬಹುದೆ? ಇತರ ಸಮುದಾಯಗಳ ಮೀಸಲಾತಿ ಬೇಡಿಕೆ ಈಡೇರಿಸಲು ಸಾಧ್ಯವೆ? ಯಾವ ಪ್ರವರ್ಗದ ಮೀಸಲಾತಿ ಕಡಿತ ಮಾಡಬೇಕು ಎಂಬ ಪ್ರಶ್ನೆಗಳಿಗೆ ಮೀಸಲಾತಿ ಹೆಚ್ಚಳ ಕುರಿತು ಅಧ್ಯಯನ ನಡೆಸಿದ್ದ ಆಯೋಗದ ಮುಖ್ಯಸ್ಥರಾಗಿದ್ದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅವರು ಉತ್ತರಿಸಿದ್ದಾರೆ



ಪ್ರಜಾವಾಣಿ ಸಂದರ್ಶನ

ಎಚ್.ಎನ್. ನಾಗಮೋಹನ್ ದಾಸ್,
ನಿವೃತ್ತ ನ್ಯಾಯಮೂರ್ತಿ

● **ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ) ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ರಾಜ್ಯ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳು ಕಾನೂನಾತ್ಮಕವಾಗಿ ಸರಿ ಇವೆಯೆ?**

ಕಾರ್ಯಕಾರಿ ಆದೇಶವೊಂದರ ಮೂಲಕವೂ ಅನುಷ್ಠಾನಕ್ಕೆ ತರಬಹುದಿತ್ತು. ವಿಧಾನಮಂಡಲದಲ್ಲಿ ಮಸೂದೆ ಮಂಡಿಸಿ, ಅಂಗೀಕರಿಸಿ ಅದಕ್ಕೆ ರಾಷ್ಟ್ರಪತಿಯವರ ಅಂಕಿತ ಪಡೆದು ಅನುಷ್ಠಾನಕ್ಕೆ ತರುವ ಮಾರ್ಗವೂ ಇತ್ತು. ರಾಷ್ಟ್ರಪತಿ ಅವರ ಅಂಕಿತ ಪಡೆದ ಮಸೂದೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಸಂಸತ್ತಿನಲ್ಲಿ ಮಂಡಿಸಿ, ಒಪ್ಪಿಗೆ ಪಡೆದು ಅದನ್ನು ಸಂವಿಧಾನದ ಒಂಬತ್ತನೇ ಪರಿಚ್ಛೇದಕ್ಕೆ ಸೇರಿಸಿ ಸಂರಕ್ಷಿಸಿಕೊಳ್ಳಲೂ ಬಹುದಿತ್ತು. ಸದ್ಯದ ಪರಿಸ್ಥಿತಿಯಲ್ಲಿ ಕಾರ್ಯಕಾರಿ ಆದೇಶ, ಮಸೂದೆ ಎಲ್ಲವನ್ನೂ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು. ಸಂವಿಧಾನದ ಒಂಬತ್ತನೆ ಪರಿಚ್ಛೇದದಲ್ಲಿ ಸೇರಿಸಿದರೂ ವಿನಾಯ್ತಿ ಇಲ್ಲ. ‘ಒಂಬತ್ತನೆ ಪರಿಚ್ಛೇದದಲ್ಲಿ ಸೇರಿಸಲಾಗಿದೆ ಎಂಬ ಏಕೈಕ ಕಾರಣಕ್ಕಾಗಿ ನ್ಯಾಯಾಂಗ ಪರಿಶೀಲನೆಯಿಂದ ಹೊರಗಿಡಲು ಸಾಧ್ಯವಿಲ್ಲ. ಆಗಲೂ, ಅದು ಸಾಂವಿಧಾನಿಕವೆ ಅಥವಾ ಅಸಾಂವಿಧಾನಿಕವೆ ಎಂಬುದನ್ನು ನ್ಯಾಯಾಲಯ ಪರಿಶೀಲನೆಗೆ ಒಳಪಡಿಸಬಹುದು’ ಎಂದು ಐ.ಆರ್. ಕೊಯ್ಲೊ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದ ಅಧ್ಯಯನ ವರದಿಯನ್ನು ಸರ್ಕಾರವು ಸರ್ವಪಕ್ಷಗಳ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆದಿದೆ. ಸಂಪುಟದ ಒಪ್ಪಿಗೆಯನ್ನೂ ಪಡೆದು ಸುಗ್ರೀವಾಜ್ಞೆ ಮೂಲಕ ಮೀಸಲಾತಿ ಹೆಚ್ಚಳ ಅನುಷ್ಠಾನಗೊಳಿಸುವ ಕ್ರಮ ಸರಿಯಾಗಿಯೇ ಇದೆ.

● **ಮೀಸಲಾತಿ ಪ್ರಮಾಣದ ಹೆಚ್ಚಳದ ಅನುಕೂಲ ಜನರಿಗೆ ನಿಜವಾಗಿಯೂ ತಲುಪಬೇಕಾದರೆ ಮಾಡಬೇಕಿರುವ ಕೆಲಸಗಳೇನು?**

ಎಸ್.ಸಿ ಮೀಸಲಾತಿಯನ್ನು ಶೇಕಡ 17ಕ್ಕೆ ಮತ್ತು ಎಸ್.ಟಿ ಮೀಸಲಾತಿಯನ್ನು ಶೇಕಡ 7ಕ್ಕೆ ಹೆಚ್ಚಿಸಿದರೆ ಸಾಲದು. ಅದರ ಫಲಿತಾಂಶ ಜನರಿಗೆ ತಲುಪಬೇಕಾದರೆ ರಾಜ್ಯ ಸರ್ಕಾರದ ವಿವಿಧ ಹಂತಗಳಲ್ಲಿ ಖಾಲಿ ಇರುವ 2.5 ಲಕ್ಷ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ಹೂಡಿಕೆ ಹಿಂತೆಗೆತದ ಹೆಸರಿನಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗುತ್ತಿದೆ. ಅಲ್ಲಿ ಇದ್ದ ಮೀಸಲಾತಿಯೇ ಕೈತಪ್ಪಿ ಹೋಗುತ್ತಿದೆ. ಅದು ನಿಲ್ಲಬೇಕು. ಗುತ್ತಿಗೆ ನೌಕರಿ ಮತ್ತು ಹೊರಗುತ್ತಿಗೆ ವ್ಯವಸ್ಥೆಗಳು ನಿಲ್ಲಬೇಕು.

● **ಸುಪ್ರೀಂ ಕೋರ್ಟ್ ವಿಧಿಸಿರುವ ಶೇಕಡ 50ರ ಮಿತಿಗಿಂತಲೂ ಹೆಚ್ಚು ಮೀಸಲಾತಿಯನ್ನು ನೀಡಲು ನಿಜವಾಗಿಯೂ ಸಾಧ್ಯವಿದೆಯೆ?**

‘ಮೀಸಲಾತಿ ನೀಡಬೇಕು’ ಎಂಬ ಅಂಶ ಮಾತ್ರ ನಮ್ಮ ಸಂವಿಧಾನದಲ್ಲಿದೆ. ಎಷ್ಟು ಪ್ರಮಾಣದ ಮೀಸಲಾತಿ ಎಂದು ಹೇಳಿಲ್ಲ. ಬಾಲಾಜಿ ಮತ್ತು ಕರ್ನಾಟಕ ಸರ್ಕಾರದ ನಡುವಣ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವು ಒಟ್ಟು ಮೀಸಲಾತಿ ಪ್ರಮಾಣ ಶೇಕಡ 50ರಷ್ಟನ್ನು ಮೀರಬಾರದು ಎಂದು ಹೇಳಿತ್ತು. 1992ರಲ್ಲಿ ಇಂದಿರಾ ಸಾಹ್ನಿ ಪ್ರಕರಣದಲ್ಲಿ ಒಂಬತ್ತು ನ್ಯಾಯಮೂರ್ತಿಗಳ ಪೀಠವು 1992ರಲ್ಲಿ ಅದನ್ನು ಮತ್ತೆ ಎತ್ತಿ ಹಿಡಿಯಿತು. ‘ವಿಶೇಷ ಸಂದರ್ಭಗಳಲ್ಲಿ ಒಟ್ಟು ಮೀಸಲಾತಿ ಪ್ರಮಾಣ ಶೇ 50ರಷ್ಟನ್ನು ಮೀರಬಹುದು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈಗಾಗಲೇ ಒಂಬತ್ತು ರಾಜ್ಯಗಳಲ್ಲಿ ಒಟ್ಟು ಮೀಸಲಾತಿ ಪ್ರಮಾಣ ಶೇ 50ರಷ್ಟನ್ನು ಮೀರಿದೆ. ಆರ್ಥಿಕವಾಗಿ ದುರ್ಬಲವಾಗಿರುವ ಜನರಿಗೆ ಶೇ 10ರಷ್ಟು ಮೀಸಲಾತಿ ಒದಗಿಸುವುದರೊಂದಿಗೆ ಕೇಂದ್ರ ಸರ್ಕಾರದ ಒಟ್ಟು ಮೀಸಲಾತಿ ಪ್ರಮಾಣವೂ ಶೇ 59.5ರಷ್ಟಾಗಿದೆ. ಕೇಂದ್ರ ಸರ್ಕಾರ ಮತ್ತು ಇತರ ಒಂಬತ್ತು ರಾಜ್ಯಗಳು ಶೇ 50ಕ್ಕಿಂತ ಹೆಚ್ಚಿನ ಮೀಸಲಾತಿ ಕೊಡಲು ಸಾಧ್ಯವಾಗುವುದಾದರೆ ಕರ್ನಾಟಕ ಏಕೆ ಕೊಡಬಾರದು?

● **ಮೀಸಲಾತಿ ಹೆಚ್ಚಿಸಲು ಪೂರಕವಾಗಿರುವ ವಿಶೇಷ ಸನ್ನಿವೇಶಗಳು ಯಾವುವು?**

ವಿಶೇಷ ಸನ್ನಿವೇಶಗಳು ಯಾವುವು ಎನ್ನುವುದನ್ನು ಈವರೆಗೆ ಯಾವ ತೀರ್ಪಿನಲ್ಲೂ ವಿವರಿಸಿಲ್ಲ. ನಮ್ಮ ಆಯೋಗವು ಅನೇಕ ತೀರ್ಪುಗಳನ್ನು ಅಧ್ಯಯನ ಮಾಡಿ, ಅವುಗಳ ಆಧಾರದ ಮೇಲೆ ವಿಶೇಷ ಸನ್ನಿವೇಶಗಳು ಎಂದರೆ ಏನು ಎಂಬುದನ್ನು ವರದಿಯಲ್ಲಿ ಹೇಳಿದ್ದೇವೆ. ಜನಸಂಖ್ಯೆ ಹೆಚ್ಚಳ ಮೊದಲನೆಯದು. 1947ರ ಜನಸಂಖ್ಯೆಗೆ ಹೋಲಿಸಿದರೆ ಈಗ ಎಲ್ಲ ಜಾತಿಗಳ ಜನಸಂಖ್ಯೆಯೂ ಹೆಚ್ಚಳವಾಗಿದೆ. ಎಸ್.ಸಿ ಮತ್ತು ಎಸ್.ಟಿಗಳದ್ದು ವಿಶೇಷ ಸಂದರ್ಭ. ಹೇಗೆಂದರೆ, 1950ರಲ್ಲಿ ಈ ಸಮುದಾಯಗಳಿಗೆ ಮೀಸಲಾತಿ ನೀಡಿದಾಗ, ಕರ್ನಾಟಕದಲ್ಲಿ ಒಂಬತ್ತು ಜಿಲ್ಲೆಗಳು ಮಾತ್ರ ಇದ್ದವು. ಏಕೀಕರಣದ ಬಳಿಕ 19 ಜಿಲ್ಲೆಗಳಿದ್ದವು. ಆಗ, ಎಸ್.ಸಿಯಲ್ಲಿ ಒಂಬತ್ತು ಮತ್ತು ಎಸ್.ಟಿಯಲ್ಲಿ ಆರು ಜಾತ್ರಿಗಳು ಮಾತ್ರ ಇದ್ದವು. ಈಗ ಎಸ್.ಸಿ ಪಟ್ಟಿಯಲ್ಲಿ 101 ಮತ್ತು ಎಸ್.ಟಿ ಪಟ್ಟಿಯಲ್ಲಿ 54 ಜಾತಿಗಳಿವೆ. ಹಿಂದೆ ಪ್ರದೇಶ ನಿರ್ಬಂಧ ಕಾಯ್ದೆ ಇತ್ತು. ಅದರ ಪ್ರಕಾರ, ಕೆಲವೊಂದು ಜಾತಿಗಳನ್ನು ಕೆಲವೇ ಜಿಲ್ಲೆಗಳಿಗೆ ಸೀಮಿತವಾಗಿ ಎಸ್.ಸಿ ಅಥವಾ ಎಸ್.ಟಿ ಪಟ್ಟಿಯಲ್ಲಿ ಸೇರಿಸಲಾಗುತ್ತಿತ್ತು. ಈ ಕಾಯ್ದೆ ರದ್ದಾಗಿದ್ದು, ಈಗ ಎಸ್.ಸಿ ಮತ್ತು ಎಸ್.ಟಿ ಪಟ್ಟಿ ಇಡೀ ರಾಜ್ಯಕ್ಕೆ ಅನ್ವಯಿಸುತ್ತದೆ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದ್ದ ಹಲವು ಜಾತಿಗಳನ್ನು ಎಸ್.ಸಿ ಮತ್ತು ಎಸ್.ಟಿ ಪಟ್ಟಿಗೆ ಸೇರಿಸಲಾಗಿದೆ. ಅದಕ್ಕೆ ಪೂರಕವಾಗಿ ಈ ಸಮುದಾಯಗಳ ಮೀಸಲಾತಿ ಹೆಚ್ಚಿಸಿಲ್ಲ. ಈ ಸಮುದಾಯಗಳ ಜನರ ಸಾಕ್ಷರತಾ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ. ಸಿ ಮತ್ತು ಡಿ ದರ್ಜೆ ಹುದ್ದೆಗಳಲ್ಲಿ ಅವರ ಕೋಟಾ ಭರ್ತಿಯಾಗುತ್ತಿದೆ. ಆದರೆ, ಎ ಮತ್ತು ಬಿ ದರ್ಜೆ ಹುದ್ದೆಗಳಲ್ಲಿ ಕೋಟಾ ಭರ್ತಿಯಾಗುತ್ತಿಲ್ಲ. ಔದ್ಯೋಗಿಕವಾಗಿ ಅವರು ತೀರಾ ಹಿಂದುಳಿದಿರುವುದಕ್ಕೆ ಇದು ಪುರಾವೆ. ಆರೋಗ್ಯ, ವಸತಿ, ಭೂ ಹಿಡುವಳಿ, ಕೈಗಾರಿಕೆ, ಮಾಧ್ಯಮ ಸೇರಿದಂತೆ ಖಾಸಗಿ ಕ್ಷೇತ್ರದ ಪ್ರಾತಿನಿಧ್ಯದಲ್ಲೂ ಅವರು ತೀರಾ ಹಿಂದೆ ಇದ್ದಾರೆ. ಇವೆಲ್ಲವೂ ವಿಶೇಷ ಸನ್ನಿವೇಶಗಳು.

● **ಮೀಸಲಾತಿಗೆ ಸಂಬಂಧಿಸಿದ ಎಲ್ಲ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಿದೆಯೆ?**

ಮೀಸಲಾತಿ ಹೆಚ್ಚಳ, ಪ್ರವರ್ಗ ಬದಲಾವಣೆ ಸೇರಿದಂತೆ ರಾಜ್ಯದಲ್ಲಿ ಈಗ 44 ಜಾತಿಗಳು ಮೀಸಲಾತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಎತ್ತಿವೆ. ನಿಖರವಾದ ಅಂಕಿಅಂಶಗಳ (ಎಂಪರಿಕಲ್ ಡೇಟಾ) ಆಧಾರದಲ್ಲಿ ಮೀಸಲಾತಿ ನೀತಿಯನ್ನು ತಿದ್ದುಪಡಿ ಮಾಡಬೇಕಿದೆ. ಕಾಂತರಾಜ್ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು ಜಾತಿ ಗಣತಿ ನಡೆಸಿ ಸಲ್ಲಿಸಿರುವ ವರದಿಯಲ್ಲಿನ ಅಂಕಿಅಂಶಗಳನ್ನು ಇದಕ್ಕಾಗಿ ಬಳಸಿಕೊಳ್ಳಬಹುದು. ಇಲ್ಲವಾದರೆ ಮತ್ತೊಂದು ಸಮೀಕ್ಷೆ ನಡೆಸಿ ಮೀಸಲಾತಿ ಪಟ್ಟಿಯನ್ನು ವೈಜ್ಞಾನಿಕವಾಗಿ ಮರುರೂಪಿಸಬೇಕು. ಸಮಾನ ಸಾಮರ್ಥ್ಯದ ಜಾತಿಗಳನ್ನು ಒಂದು ಪಟ್ಟಿಯಲ್ಲಿ ಇರಿಸುವಂತಹ ವೈಜ್ಞಾನಿಕವಾದ ವರ್ಗೀಕರಣ ಕೂಡ ಮಾಡಬೇಕು. ಈವರೆಗೆ ಹೆಚ್ಚು ಲಾಭ ಪಡೆದಿರುವ ಸಮುದಾಯಗಳ ಮೀಸಲಾತಿ ಪ್ರಮಾಣವನ್ನು ಸ್ವಲ್ಪ ಕಡಿಮೆ ಮಾಡಿ, ಮೀಸಲಾತಿಯನ್ನೇ ಅನುಭವಿಸದ ಸಮುದಾಯಗಳಿಗೆ ಹೆಚ್ಚಳ ಮಾಡಬೇಕು.

● **ಎಲ್ಲ ಸಮುದಾಯಗಳ ಮೀಸಲಾತಿ ಬೇಡಿಕೆಯನ್ನೂ ಪರಿಹರಿಸಲು ಸಾಧ್ಯವೆ?**

ಪಂಚಮಸಾಲಿಗಳು, ಒಕ್ಕಲಿಗರು, ಕುರುಬರು ಸೇರಿದಂತೆ ಅನೇಕ ಸಮುದಾಯಗಳು ಮೀಸಲಾತಿ ಹೆಚ್ಚಳಕ್ಕೆ ಬೇಡಿಕೆ ಇಟ್ಟಿವೆ. ಈ ಜಾತಿಗಳಲ್ಲಿ ಶೇಕಡ 80ರಷ್ಟು ಜನರು ಕೃಷಿಕರಾಗಿದ್ದಾರೆ. 1950ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಮೀಸಲಾತಿ ಕಲ್ಪಿಸಿದಾಗ ದೇಶದ ರೈತರು ಅದನ್ನು ವಿರೋಧಿಸಿರಲಿಲ್ಲ. ನಮಗೂ ಮೀಸಲಾತಿ ಕೊಡಿ ಎಂದೂ ಕೇಳಿರಲಿಲ್ಲ. 75 ವರ್ಷಗಳಲ್ಲಿ ಸರ್ಕಾರ ಅನುಸರಿಸಿದ ನೀತಿಗಳ ಪರಿಣಾಮವಾಗಿ ಕೃಷಿ ಕ್ಷೇತ್ರ ಬಿಕ್ಕಟ್ಟಿನಲ್ಲಿದೆ. ರೈತರು ದಿವಾಳಿಯಾಗಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ತಲುಪಿದ್ದಾರೆ. ಮೀಸಲಾತಿ ಕೇಳುತ್ತಿರುವ ವರ್ಗಗಳಲ್ಲಿ ಶೇ 80ರಷ್ಟು ಮಂದಿ ಈಗ ಕಷ್ಟದಲ್ಲಿದ್ದಾರೆ. ಅವರ ನೋವಿನ ಬಗ್ಗೆ ನನಗೆ ಕಳಕಳಿ ಇದೆ. ಆದರೆ, ಸರಿ ಮಾರ್ಗ ಯಾವುದು ಎಂದು ಅವರಿಗೆ ಯಾರೂ ಹೇಳುತ್ತಿಲ್ಲ. ‘ಅವರೆಲ್ಲರೂ ಮೀಸಲಾತಿ ಪಡೆದು ಚೆನ್ನಾಗಿದ್ದಾರೆ. ನೀವೂ ಮೀಸಲಾತಿ ಕೇಳಿ’ ಎಂದು ಕೆಲವರು ಹೇಳುತ್ತಾರೆ. ಇವರು ಜೈ ಎನ್ನುತ್ತಾ ಝುಂಡಾ ಎತ್ತುತ್ತಿದ್ದಾರೆ. ಅವರೆಲ್ಲರ ಮೀಸಲಾತಿ ಬೇಡಿಕೆಯನ್ನು ಈಡೇರಿಸಿದರೂ ಆ ಸಮುದಾಯಗಳ ಶೇ 4ರಿಂದ 5ರಷ್ಟು ಪ್ರಮಾಣದ ಯುವಜನರಿಗೆ ಮಾತ್ರ ಅನುಕೂಲ ಆಗಬಹುದು. ಉಳಿದವರಿಗೆ ಏನು ಮಾಡುತ್ತೀರಿ? ಕೃಷಿ ಕ್ಷೇತ್ರದಲ್ಲಿನ ಬಿಕ್ಕಟ್ಟು ಪರಿಹರಿಸುವುದೊಂದೇ ದಾರಿ. ಯಾವ ಸಮುದಾಯವೂ ಆ ದಿಕ್ಕಿನಲ್ಲಿ ಧ್ವನಿ ಎತ್ತುತ್ತಿಲ್ಲ.

● **ಕೆಲವೇ ಜನರು ಮೀಸಲಾತಿಯ ಲಾಭ ಪಡೆಯುವುದನ್ನು ತಪ್ಪಿಸಬೇಕು ಎಂಬ ಆಗ್ರಹದ ಬಗ್ಗೆ ನಿಮ್ಮ ನಿಲುವೇನು?**

ಕೆನೆಪದರದ ಪ್ರಶ್ನೆ ಹಿಂದುಳಿದ ವರ್ಗಗಳಿಗೆ ಮಾತ್ರ ಅನ್ವಯವಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅನ್ವಯಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಆಗಲೇ ಹೇಳಿದೆ. ಈ ತೀರ್ಪು ಬಂದು 30 ವರ್ಷಗಳಾಗಿವೆ. ಎಷ್ಟು ಮಂದಿ ನಿರಂತರವಾಗಿ ಅಂತಹ ಸೌಲಭ್ಯ ಪಡೆದಿದ್ದಾರೆ ಎಂಬುದರ ಕುರಿತು ಆಯೋಗವೊಂದರ ಮೂಲಕ ದತ್ತಾಂಶ ಸಂಗ್ರಹಿಸಬಹುದು. ಅದಕ್ಕೆ ತಡೆಯೊಡ್ಡಬೇಕಾದ ಅನಿವಾರ್ಯ ಕಂಡುಬಂದರೆ ಅದನ್ನೂ ಮಾಡಬಹುದು. ಆದರೆ, ಆ ಸೌಲಭ್ಯ ಅದೇ ಸಮುದಾಯದ ಮತ್ತೊಬ್ಬ ವ್ಯಕ್ತಿಗೆ ಸಿಗುವಂತೆ ಆಗಬೇಕು.

● **ಒಳ ಮೀಸಲಾತಿ ಅನುಷ್ಠಾನಕ್ಕೆ ತರದೇ ಎಸ್.ಸಿ ಮತ್ತು ಎಸ್.ಟಿ ಮೀಸಲಾತಿ ಪ್ರಮಾಣದ ಹೆಚ್ಚಳವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯವೆ?**


ಒಳ ಮೀಸಲಾತಿ ಬೇಕು ಎಂದೇ ನಮ್ಮ ಆಯೋಗ ಶಿಫಾರಸು ಮಾಡಿತ್ತು. ಆದರೆ, ದತ್ತಾಂಶ ಸಂಗ್ರಹಿಸಿ ಅದರ ಆಧಾರದಲ್ಲಿ ವೈಜ್ಞಾನಿಕವಾಗಿ ವರ್ಗೀಕರಣ ಮಾಡಿ, ಆದ್ಯತೆಯ ಮೇರೆಗೆ ಮೀಸಲಾತಿ ಕಲ್ಪಿಸಬೇಕು ಎಂದು ನಮ್ಮ ಆಯೋಗ ಹೇಳಿದೆ. ಆಯಾ ಪ್ರವರ್ಗಗಳಲ್ಲಿನ ಯಾವ ಸಮುದಾಯವೂ ಮೀಸಲಾತಿಯ ಲಾಭದಿಂದ ವಂಚಿತವಾಗದಂತೆ ಒಳಮೀಸಲು ಕಲ್ಪಿಸಿದರೆ ಮಾತ್ರವೇ ನಿಜವಾಗಿ ಎಲ್ಲರಿಗೂ ನ್ಯಾಯ ದೊರಕಿಸಿದಂತಾಗುತ್ತದೆ. ❖

● **ಎಸ್.ಸಿ ಮತ್ತು ಎಸ್.ಟಿ ಸಮುದಾಯಗಳಿಗೆ ನೀಡಿರುವ ಹೆಚ್ಚುವರಿ ಮೀಸಲಾತಿಯ ಪ್ರಮಾಣವನ್ನು ಯಾವ ಪ್ರವರ್ಗದಿಂದ ಕಟಾವು ಮಾಡಬೇಕು?**

ಈ ವಿಚಾರದಲ್ಲಿ ಆಯೋಗ ಸ್ಪಷ್ಟವಾಗಿ ಶಿಫಾರಸು ಮಾಡಿತ್ತು. ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಒಟ್ಟು ಜನಸಂಖ್ಯೆ ಶೇ 52ರಷ್ಟಿದೆ. ಅವರಿಗೆ ನೀಡಿರುವ ಒಟ್ಟು ಮೀಸಲಾತಿ ಪ್ರಮಾಣ ಶೇ 32. 207 ಜಾತಿಗಳು ಒಬಿಸಿ ಪಟ್ಟಿಯಲ್ಲಿವೆ. ಅವುಗಳ ಮೀಸಲಾತಿಯನ್ನು ಕಡಿತ ಮಾಡಲು ಸಾಧ್ಯವಿಲ್ಲ. ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ನೀಡಿರುವುದರಿಂದ ಅಲ್ಲಿರುವ ಯಾರಿಗೂ ಈಗ ತೊಂದರೆ ಆಗುವುದಿಲ್ಲ. ಆದ್ದರಿಂದ ಸಾಮಾನ್ಯ ವರ್ಗಕ್ಕೆ ದೊರೆಯುವ ಸ್ಥಾನಗಳಲ್ಲಿಯೇ ಕಡಿತ ಮಾಡಬೇಕು.

ಕಾನೂನಿನ ಮಾನವೀಯ ಮುಖ ಚಂದ್ರಚೂಡ್

● ಹಮೀದ್ ಕೆ.



ವ್ಯಕ್ತಿತ್ವ

‘ಕಾನೂನನ್ನು ವ್ಯಾಖ್ಯಾನಿಸುವಾಗ ಸ್ತ್ರೀವಾದಿ ಚಿಂತನೆಯನ್ನು ನಿಮ್ಮೊಳಗೆ ರೂಢಿಸಿಕೊಳ್ಳಿ ಎಂದು ನಾನು ನಿಮಗೆ ಸಲಹೆ ನೀಡುತ್ತೇನೆ’– ಇದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಧನಂಜಯ ಯಶವಂತ ಚಂದ್ರಚೂಡ್ (ಡಿ.ವೈ.ಚಂದ್ರಚೂಡ್) ಅವರು ದೆಹಲಿಯ ನ್ಯಾಷನಲ್ ಲಾ ಯುನಿವರ್ಸಿಟಿಯ ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತಾ ಹೇಳಿದ ಕಿವಿಮಾತು. ಈ ಮಾತು ಕಿವಿಮಾತಾಗಿ ಉಳಿಯಲಿಲ್ಲ, ದೊಡ್ಡ ಸುದ್ದಿಯಾಯಿತು. ಚರ್ಚೆ, ವಿವಾದವೂ ಆಯಿತು. ಚಂದ್ರಚೂಡ್ ಅವರ ವ್ಯಕ್ತಿತ್ವವೇ ಹಾಗೆ. ಹೇಳಬೇಕಿರುವುದನ್ನು ಅವರು ನೇರವಾಗಿ ಹೇಳುತ್ತಾರೆ. ಅವರಲ್ಲಿ ಅಳುಕು ಇರುವುದಿಲ್ಲ. ಹಾಗಂತ ಅವರು ಕಠೋರ ವ್ಯಕ್ತಿ ಅಲ್ಲವೇ ಅಲ್ಲ. ತಾಯಿ ಹೃದಯದವರು. ಶೋಷಣೆಗೆ ಒಳಗಾದವರು, ಮಹಿಳೆಯರು, ತೃತೀಯ ಲಿಂಗಿಗಳು, ಅನ್ಯಾಯಕ್ಕೆ ಒಳಗಾದವರು ಇಂಥವರ ಬಗ್ಗೆ ಅಪಾರವಾದ ಕಳಕಳಿ ಉಳ್ಳವರು.

ಮಹಿಳೆಯರ ಮೇಲಿನ ಅಪರಾಧಗಳನ್ನು ತಪ್ಪಿಸುವುದರ ಕುರಿತು, ಕಾನೂನನ್ನು ಮಹಿಳಾ ದೃಷ್ಟಿಕೋನದಲ್ಲಿ ನೋಡುವುದರ ಕುರಿತು ಚಂದ್ರಚೂಡ್ ಬಹಳ ಬಾರಿ ಮಾತನಾಡಿದ್ದಾರೆ. ಬಾಂಬೆ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿದ್ದ ದಿನಗಳ ಬಗ್ಗೆ ಚಂದ್ರಚೂಡ್ ಅವರು ಯಾವತ್ತೂ ಸಂಭ್ರಮದಿಂದಲೇ ಮಾತನಾಡುತ್ತಾರೆ. ಆ ದಿನಗಳು ತಮ್ಮ ಮನಸ್ಸಿನಲ್ಲಿ ಮಾರ್ದವ ತುಂಬಿದ್ದು ಹೇಗೆ ಎಂಬುದನ್ನು ಹಲವು ಬಾರಿ ಅವರು ಹೇಳಿಕೊಂಡಿದ್ದಾರೆ. ನ್ಯಾಯಮೂರ್ತಿ ರಂಜನಾ ದೇಸಾಯಿ ಅವರೊಂದಿಗೆ ಕೆಲಸ ಮಾಡಿದ ದಿನಗಳು ಮಹಿಳೆಯರ ಮೇಲಿನ ಅಪರಾಧಗಳ ನ್ಯಾಯ ತೀರ್ಮಾನವನ್ನು ಹೇಗೆ ಮಾಡಬೇಕು ಎಂಬುದರ ಕುರಿತ ತಮ್ಮ ಧೋರಣೆಯನ್ನೇ ಬದಲಿಸಿತು. ಸಮಾಜದ ವಾಸ್ತವಗಳಿಗೆ ಕಾನೂನನ್ನು ಅನ್ವಯಿಸುವಾಗ ಸ್ತ್ರೀವಾದಿ ಮನೋಧೋರಣೆ ಅಗತ್ಯ ಎಂಬುದನ್ನು ರಂಜನಾ ಅವರಿಂದ ಕಲಿತೆ ಎಂಬುದನ್ನು ಚಂದ್ರಚೂಡ್ ನೆನಪಿಸಿಕೊಂಡಿದ್ದಾರೆ.

ಅಪಾರ ವಿದ್ವತ್ತು ಚಂದ್ರಚೂಡ್ ಅವರ ಬಹುದೊಡ್ಡ ಆಸ್ತಿ. 1959ರ ನವೆಂಬರ್ 11ರಂದು ಹುಟ್ಟಿದ ಅವರು 1979ರಲ್ಲಿ ದೆಹಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿನಿಂದ ಅರ್ಥಶಾಸ್ತ್ರ ಮತ್ತು ಗಣಿತದಲ್ಲಿ ಆನರ್ಸ್ ಪದವಿ ಪಡೆದರು. ದೆಹಲಿ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದದ್ದು 1982ರಲ್ಲಿ. 1983ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಕಾನೂನಿನಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಇನ್‌ಲಾಕ್ಸ್ ವಿದ್ಯಾರ್ಥಿವೇತನ ಪಡೆದು ಸ್ನಾತಕೋತ್ತರ ಪದವಿಗೆ ಸೇರಿಕೊಂಡಿದ್ದ ಅವರಿಗೆ ‘ಕಾನೂನುಗಳ ಸಂಘರ್ಷ’ ಕೋರ್ಸ್‌ನಲ್ಲಿ ಅತಿ ಹೆಚ್ಚು ಅಂಕ ಪಡೆದದ್ದಕ್ಕಾಗಿ ಜೋಸೆಫ್ ಎಚ್ ಬೀಲ್ ಬಹುಮಾನವೂ ಸಿಕ್ಕಿತು. 1986ರ ವರೆಗೆ ಹಾರ್ವರ್ಡ್‌ನಲ್ಲಿಯೇ ಇದ್ದ ಅವರು ಪಿಎಚ್.ಡಿಯನ್ನೂ ಅಲ್ಲಿಂದಲೇ ಪಡೆದುಕೊಂಡರು. ಶಿಕ್ಷಣ ಪೂರ್ಣಗೊಳಿಸಿದ ಬಳಿಕ ಮಹಾರಾಷ್ಟ್ರ ವಕೀಲರ ಸಂಘದಲ್ಲಿ ನೋಂದಣಿ ಮಾಡಿಕೊಂಡರು.

ಅವರ ಮನಸ್ಸು ಜನರ ಕಷ್ಟಗಳಿಗಾಗಿ ಸದಾ ಮಿಡಿಯುತ್ತಿರುತ್ತದೆ ಎಂಬುದನ್ನು ಅವರ ವಕೀಲಿಕೆಯ ದಿನಗಳಿಂದಲೇ ಗುರುತಿಸಬಹುದು. 1997ರಲ್ಲಿ, ಎಚ್‌ಐವಿ ಸೋಂಕು ತಗಲಿತು ಎಂಬ ಕಾರಣಕ್ಕೆ ಕೆಲಸದಿಂದ ವಜಾ ಮಾಡಲಾದ ವ್ಯಕ್ತಿಯೊಬ್ಬರ ಪರವಾಗಿ ಚಂದ್ರಚೂಡ್ ವಾದಿಸಿದ್ದರು. ಸೋಂಕು ತಗಲಿದೆ ಎಂಬ ಕಾರಣಕ್ಕೆ ವ್ಯಕ್ತಿಗೆ ಬದುಕುವ ಹಕ್ಕನ್ನು ನಿರಾಕರಿಸಲಾಗದು ಎಂದು ಅವರು ಪ್ರತಿಪಾದಿಸಿದ್ದರು. ಜೀತದ ಮಹಿಳೆಯರು, ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರ ಪರವಾಗಿ ಹಲವು ಪ್ರಕರಣಗಳಲ್ಲಿ ಅವರು ವಾದಿಸಿದ್ದರು.

ಚಂದ್ರಚೂಡ್ ನ್ಯಾಯಪಂಡಿತನಷ್ಟೇ ಅಲ್ಲದೆ, ಉತ್ತಮ ಶಿಕ್ಷಕನೂ ಹೌದು. 1988ರಿಂದ 1997ರವರೆಗೆ ಅವರು ಬಾಂಬೆ ವಿಶ್ವವಿದ್ಯಾಲಯದ ಕಾನೂನು ಕಾಲೇಜಿನಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. 1998 ಚಂದ್ರಚೂಡ್ ಪಾಲಿಗೆ ಮಹತ್ವದ ವರ್ಷ. ಅವರಿಗೆ ಹಿರಿಯ ವಕೀಲ ಪದವಿ ಸಿಕ್ಕಿತು. ಆಗ ಅವರಿಗೆ 38 ವರ್ಷವಷ್ಟೇ ಆಗಿತ್ತು. 40 ವರ್ಷ ದಾಟುವುದಕ್ಕೆ ಮೊದಲು ಹಿರಿಯ ವಕೀಲ ಪದವಿ ನೀಡಿಕೆ ಬಹಳ ವಿರಳ. ಅದೇ ವರ್ಷ ಅವರನ್ನು ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿಯೂ ನೇಮಿಸಲಾಯಿತು. 2000ನೇ ಇಸವಿಯ ಮಾರ್ಚ್ 29ರಂದು ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕ ಆಗುವ ತನಕ ಈ ಹುದ್ದೆಯಲ್ಲಿ ಅವರು ಇದ್ದರು. 2013ರ ಅಕ್ಟೋಬರ್ 31ರಂದು ಅಲಹಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 2016ರ ಮೇ 13ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದುಕೊಂಡರು. ಇದೇ ಬುಧವಾರ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅವರ ಮಟ್ಟಿಗೆ ಇದು ಅತ್ಯಂತ ಧನ್ಯತೆಯ ಕ್ಷಣವಾಗಬಹುದು. ಏಕೆಂದರೆ, ಅವರ ತಂದೆ ಯಶವಂತ ವಿಷ್ಣು ಚಂದ್ರಚೂಡ್ ಅವರು ಕೂಡ ಭಾರತದ ಮುಖ್ಯ ನ್ಯಾಯಮೂರ್ತಿ ಆಗಿದ್ದರು. 1978ರ ಫೆಬ್ರುವರಿಯಿಂದ 1985ರ ಜುಲೈವರೆಗೆ ಅವರು ಈ ಹುದ್ದೆಯಲ್ಲಿ ಇದ್ದರು. ಅತಿ ದೀರ್ಘ ಕಾಲ ಈ ಹುದ್ದೆಯಲ್ಲಿದ್ದ ವ್ಯಕ್ತಿ ಎಂಬ ಹೆಗ್ಗಳಿಕೆಯೂ ಅವರಿಗೆ ಇದೆ. ಡಿ.ವೈ. ಚಂದ್ರಚೂಡ್ ಅವರು 2024ರ ನವೆಂಬರ್ 10ರವರೆಗೆ ಮುಖ್ಯ ನ್ಯಾಯಮೂರ್ತಿ ಆಗಿ ಇರಲಿದ್ದಾರೆ.

ದೂರಗಾಮಿ ಪರಿಣಾಮಗಳನ್ನು ಉಂಟು ಮಾಡುವಂತಹ ಮತ್ತು ಅತ್ಯಂತ ಮಹತ್ವದ್ದಾದ ಹಲವು ತೀರ್ಪುಗಳನ್ನು ಚಂದ್ರಚೂಡ್ ನೀಡಿದ್ದಾರೆ. ಅವರು ನೀಡಿರುವ ತೀರ್ಪುಗಳೇ ಅವರ ವ್ಯಕ್ತಿತ್ವವನ್ನು ಬಿಚ್ಚಿಡುತ್ತದೆ ಎಂಬುದು ವಿಶೇಷ. ನ್ಯಾಯಮೂರ್ತಿ ಕೆ.ಎಸ್. ಪುಟ್ಟಸ್ವಾಮಿ ಮತ್ತು ಭಾರತ ಸರ್ಕಾರ ನಡುವಣ ಪ್ರಕರಣದಲ್ಲಿ ಚಂದ್ರಚೂಡ್ ಅವರು ಭಿನ್ನಮತದ ತೀರ್ಪು ನೀಡಿ, ಆಧಾರ್ ಮಸೂದೆಯನ್ನು ಹಣಕಾಸು ಮಸೂದೆಯಾಗಿ ಅಂಗೀಕರಿಸಿದ್ದು ಅಸಾಂವಿಧಾನಿಕ ಎಂದು ಅತ್ಯಂತ ಸ್ಪಷ್ಟವಾಗಿ ಹೇಳಿದ್ದರು.

ಸಲಿಂಗ ಸಂಭೋಗವನ್ನು ಅಪರಾಧಮುಕ್ತಗೊಳಿಸಿದ ಪ್ರಕರಣದಲ್ಲಿ ಸಹಮತದ, ಆದರೆ ಪ್ರತ್ಯೇಕ ತೀರ್ಪು ಕೊಟ್ಟಿದ್ದರು. ಈ ಓಬಿರಾಯನ ಕಾಲದ ವಸಾಹತು ಕಾಯ್ದೆಯು ಜನರ ಮೂಲಭೂತ ಹಕ್ಕಿನ ಉಲ್ಲಂಘನೆ ಎಂದು ಹೇಳಿದ್ದರು. ಕೇರಳದ ಹಾದಿಯಾ ಪ್ರಕರಣದಲ್ಲಿ, ಧರ್ಮ ಮತ್ತು ಜೀವನಸಂಗಾತಿಯನ್ನು ಆಯ್ದುಕೊಳ್ಳುವುದು ಆಕೆಯ ಹಕ್ಕು ಎಂದು ತೀರ್ಪು ನೀಡಿದ್ದರು. ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಐವರು ಮಾನವ ಹಕ್ಕುಗಳ ಹೋರಾಟಗಾರರ ಬಂಧನವನ್ನೂ ಅವರು ವಿರೋಧಿಸಿದ್ದರು. ದೆಹಲಿಯಲ್ಲಿ ಚುನಾಯಿತ ಸರ್ಕಾರಕ್ಕೆ ಹೆಚ್ಚು ಅಧಿಕಾರವೇ ಲೆಫ್ಟಿನೆಂಟ್ ಗವರ್ನರ್ ಅಧಿಕಾರ ಹೆಚ್ಚೇ ಎಂಬ ಪ್ರಕರಣದಲ್ಲಿಯೂ ಎಲ್.ಜಿ ಅವರು ದೆಹಲಿ ಕಾರ್ಯಾಂಗದ ಮುಖ್ಯಸ್ಥರಲ್ಲ ಎಂಬ ತೀರ್ಪು ನೀಡಿದ್ದರು. ಶಬರಿಮಲೆಗೆ ಎಲ್ಲ ವಯಸ್ಸಿನ ಮಹಿಳೆಯರಿಗೆ ಪ್ರವೇಶ ನೀಡಬೇಕು ಎಂಬ ತೀರ್ಪು ನೀಡಿದ್ದ ಪೀಠದಲ್ಲಿಯೂ ಅವರು ಇದ್ದರು.

ಜನರ ಕುರಿತು ಅಪಾರ ಕಳಕಳಿ ಹೊಂದಿರುವ ಚಂದ್ರಚೂಡ್ ಅವರು ಮುಖ್ಯ ನ್ಯಾಯಮೂರ್ತಿ ಹುದ್ದೆಗೆ ಏರುತ್ತಿರುವುದು ನ್ಯಾಯಾಂಗದ ಮೇಲಿನ ವಿಶ್ವಾಸ ಹೆಚ್ಚುವಂತೆ ಮಾಡಿದೆ. ಅವರು ಸಾಗಿ ಬಂದ ಹಾದಿ, ಅವರು ನೀಡಿರುವ ತೀರ್ಪುಗಳು ಅದಕ್ಕೆ ಖಂಡಿತವಾಗಿಯೂ ಪುಷ್ಟಿ ನೀಡುತ್ತವೆ. ❖



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಹಠ ಬಿಡದ ಮೇನಾದೇವಿ

ಮೇನಾದೇವಿ ತನ್ನ ಕೆಟ್ಟ ಹಠವನ್ನು ಸಡಿಲಿಸಲಿಲ್ಲ. ಅವಳ ರೋಷ ಮತ್ತೆ ಪಾರ್ವತಿಯತ್ತ ತಿರುಗಿತು. ‘ಈ ದುಷ್ಟೆಯಿಂದ ನನಗೂ ಗಿರಿರಾಜನಿಗೂ ನಮ್ಮ ಕುಲಕ್ಕೂ ಅಪಮಾನವಾಗಿದೆ. ಇವಳಿಗೀಗ ಘೋರವಿಷವನ್ನು ಕುಡಿಸುವೆ. ಇಲ್ಲವೇ ಬಾವಿಯಲ್ಲಿ ತಳ್ಳಿ ಮುಳುಗಿಸುವೆ. ಅಥವಾ ಶಸ್ತ್ರಗಳಿಂದ ಚೂರುಚೂರಾಗಿ ಕತ್ತರಿಸುವೆ. ಅದಾಗದಿದ್ದರೆ ನಾನೇ ಪ್ರಾಣವನ್ನು ಬಿಡುವೆ. ಇದರ ಹೊರತು ಭಯಂಕರ ರೂಪಿಯಾದ ಶಂಕರನಿಗೆ ನನ್ನ ಮಗಳನ್ನು ಕೊಡುವುದಿಲ್ಲ. ಶಿವನಿಗೆ ತಂದೆತಾಯಿಗಳಿಲ್ಲ. ಬಂಧುಗಳಿಲ್ಲ. ರೂಪವು ಮೊದಲೇ ಇಲ್ಲ. ಇವನ ವಯಸ್ಸೆಷ್ಟೋ, ತಿಳಿಯದು. ಧನ ಇಲ್ಲ, ವಿದ್ಯೆಯೂ ಇಲ್ಲ. ಪಾವಿತ್ರ್ಯವೂ ಇಲ್ಲ. ಹೀಗಿರುವ ಶಿವನಿಗೆ ನನ್ನ ಪ್ರಿಯಪುತ್ರಿಯನ್ನು ಹೇಗೆ ಮದುವೆ ಮಾಡಿಕೊಡಲಿ?’ ಎಂದು ಮೇನಾದೇವಿ ದುಃಖದಿಂದ ರೋದಿಸಿದಳು.

ಆಗ ಬಂದ ಬ್ರಹ್ಮ ಅವಳ ಅಜ್ಞಾನವನ್ನು ತೊಲಗಿಸುವುದಕ್ಕಾಗಿ ಶಿವತತ್ವವನ್ನು ಉಪದೇಶಿಸಿದ. ‘ಮೇನಾದೇವಿ, ಶಂಕರ ಜಗತ್ತನ್ನು ಸೃಷ್ಟಿಸುವವನು, ಪಾಲಿಸುವವನು ಮತ್ತು ಸಂಹರಿಸುವವನು. ಇವನ ಸ್ವರೂಪವನ್ನು ನೀನು ತಿಳಿದಿಲ್ಲ. ತಪ್ಪು ತಿಳಿವಳಿಕೆಯಿಂದ ಸುಮ್ಮನೆ ದುಃಖ ಪಡುತ್ತಿರುವೆ. ಶಂಕರನಿಗೆ ಅನೇಕ ರೂಪಗಳು, ನಾಮಗಳು ಇವೆ. ಶಿವನಿಗೆ ಯಾವ ವಿಕಾರಗಳೂ ಇಲ್ಲ. ಶಿವನಿಗೆ ಪಾರ್ವತಿಯನ್ನು ಕೊಡು’ ಎಂದ.


ಮೇನಾದೇವಿ, ‘ಬ್ರಹ್ಮನೇ, ನೀನು ಸಹ ಗಿರಿಜೆಯ ಸುಂದರರೂಪವನ್ನು ವ್ಯರ್ಥಮಾಡಬೇಕೆಂದು ಎಣಿಸಿರುವೆಯಾ? ಅದರ ಬದಲು ಇವಳನ್ನು ನೀನೇ ಕೊಲ್ಲಬಾರದೆ? ನನ್ನ ಪುತ್ರಿಯನ್ನು ಶಿವನಿಗೆ ನಾನು ಕೊಡಲಾರೆ’ ಎಂದಳು. ಆಗ ಸನಕ ಮೊದಲಾದ ಸಿದ್ಧರು ಮೇನಾದೇವಿಯ ಮನವೊಲಿಸಲು ಯತ್ನಿಸಿದರು. ಆಗಲೂ ಆಕೆ ಹಠ ಬಿಡಲಿಲ್ಲ. ವಿಷ್ಣು, ‘ಮೇನಾದೇವಿ, ನಿನ್ನ ಕುಲವು ಉತ್ತಮವಾದ ಬ್ರಹ್ಮನ ಕುಲ. ಧರ್ಮಿಷ್ಠಳಾದ ನೀನೇ ಧರ್ಮವನ್ನು ಬಿಡಲು ಉದ್ಯುಕ್ತಳಾಗಿರುವೆಯಲ್ಲಾ? ಶಿವನ ಸ್ವರೂಪವನ್ನು ನೀನು ತಿಳಿದಿಲ್ಲ. ಅವನು ವಸ್ತುತಃ ನಿರ್ಗುಣ. ಲೀಲೆಯಿಂದ ಸಗುಣನೂ ಆಗುವನು. ಅವನು ವಿಕಾರವಾದ ರೂಪವುಳ್ಳವನೂ ಆಗುವನು, ಸುಂದರರೂಪವುಳ್ಳವನೂ ಆಗುವನು. ಶಿವನು ನಿರ್ಮಿಸಿದ ಪ್ರಕೃತಿಪುರುಷರಿಂದ ನಾನೂ ಬ್ರಹ್ಮ ಜನಿಸಿರುವೆವು. ಪರಮೇಶ್ವರನು ಲೋಕಹಿತಕ್ಕಾಗಿ ರುದ್ರರೂಪದಿಂದ ಅವತರಿಸಿದ್ದಾನೆ. ಶಂಕರನಿಂದಲೇ ನಾನು, ಬ್ರಹ್ಮ, ವೇದಗಳು, ದೇವತೆಗಳು ಮತ್ತು ಜಗತ್ತೆಲ್ಲವೂ ಆಗಿವೆ. ಇಂತಹ ಪರಮೇಶ್ವರನ ರೂಪವನ್ನು ವರ್ಣಿಸಲು ಯಾರಿಗೂ ಸಾಧ್ಯವಿಲ್ಲ. ಬ್ರಹ್ಮ ಮೊದಲುಗೊಂಡು ಸಣ್ಣ ಕ್ರಿಮಿಯವರೆಗೆ ಇರುವ ಈ ಜಗತ್ತೆಲ್ಲವೂ ಶಿವನ ರೂಪ. ಇಂಥ ಪರಶಿವನೇ ಸುಂದರವಾದ ಶಿವರೂಪ ಧರಿಸಿ ನಿನ್ನ ಮನೆ ಬಾಗಿಲಿಗೇ ಬಂದಿದ್ದಾನೆ. ದುಃಖವನ್ನು ಬಿಟ್ಟು, ಶಿವನನ್ನು ಭಜಿಸು. ಅದರಿಂದ ನಿನಗೆ ಸೌಖ್ಯವುಂಟಾಗುವುದು’ ಎಂದ.

ಹೀಗೆ ಹರಿ ನಾನಾ ವಿಧವಾಗಿ ಬೋಧಿಸಿದ್ದರಿಂದ ಮೇನಾದೇವಿ ಮನಸ್ಸು ಸ್ವಲ್ಪ ಮೃದುವಾಯಿತು. ಆದರೆ ಮೇನಾದೇವಿ ತನ್ನ ಕೆಟ್ಟ ಹಠವನ್ನು ಬಿಡದೆ, ‘ಹರಿ, ಶಿವನಿಗೆ ಸುಂದರ ಶರೀರವಿದ್ದರೆ ನನ್ನ ಮಗಳನ್ನು ಕೊಡುವೆ. ಅದಿಲ್ಲದೆ ನೀವು ಕೋಟಿ ಪ್ರಯತ್ನಗಳನ್ನು ಮಾಡಿದರೂ ನಾನು ಕೊಡಲಾರೆ. ಇದು ನನ್ನ ದೃಢವಾದ ಪ್ರತಿಜ್ಞೆ’ ಎಂದಳು.

ಇಲ್ಲಿಗೆ ಪಾರ್ವತೀಖಂಡದ ನಲವತ್ತನಾಲ್ಕನೆಯ ಅಧ್ಯಾಯ ಮುಗಿಯುತ್ತದೆ. ●

ಪದಬಂಧ 5129

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಭಾರವಿರುವ ಅಡಿಪಾಯ! (4)
3.ಉತ್ತಮ ಕುಲದಲ್ಲಿ ಹುಟ್ಟಿದವನು (4)
6.ಮೊಸರು ಮಾರುವವಳ ನಾಮ (3)
8.ಹಾಡಿನ ಪುನರಾವರ್ತನೆಗೊಳ್ಳುವ ಸಾಲು (3)
10.ಕರುವಿಗೆ ತೋರಿದ ದಯೆ (3)
11.ಜಗತ್ತಿನ ಒಳಿತಿದು (5)
12.ಮಲಗುವಾಗ ಸೇವಕ ಕಾಣಿಸಿಹನಲ್ಲಾ! (3)
13.ಇನ್ನೂ ಕರು ಹಾಕದ ಹಸು (3)
15.ದೀಪವನ್ನು ಹಚ್ಚಿಡುವ ಮಣ್ಣಿನ ಬಟ್ಟಲು (3)
18.ತೋರಿಕೆಗೆ ಸ್ನೇಹಿತನಂತಿದ್ದು ಮರೆಯಲ್ಲಿ ಹಗೆ ಸಾಧಿಸುವವನು (4)
19.ಒಪ್ಪವಾಗಿ ಬಳಿಯುವುದು (4)

ಮೇಲಿಂದ ಕೆಳಕ್ಕೆ
1.ಸಾಮಾನ್ಯವಾಗಿ ದೊರಕದೆ ವಿರಳವಾಗಿರುವಂಥದ್ದು (4)
2.ಭಾವನೆಗಳನ್ನು ಹಂಚಿಕೊಂಡಿರುವ ಅಕ್ಕನ ಗಂಡ (2)
4.ಬಿಡುಗಡೆಯಾಗುವಾಗ ತೋರಿದ ದಾಕ್ಷಿಣ್ಯ (2)
5.ಶಿರ ಮೇಲೆತ್ತಿರುವ ಧೂರ್ತ! (4)
7.ಎರಡುರಾಶಿಗಳು ಸಮವೆಂದು ದೃಢೀಕರಿಸುವುದು (5)
9.ವಿರುದ್ಧವಾದುದನ್ನು ಹೀಗೆನ್ನಿ (3)
10.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
12.ಒಳ್ಳೆಯದನ್ನ ಗ್ರಹಿಸುವವನು (4)
14.ಚಾರನಿಗೆ ಕಾಣುತ್ತಿರುವ ಕಾಮನಬಿಲ್ಲು (4)
16.ಪಾಶವೀವೃತ್ತಿಯವ ಹಿಡಿದಿರುವ ಹಗ್ಗ (2)
17.ತಲೆಗೂದಲಿಗೆ ಹತ್ತುವ ಕ್ರಿಮಿ (2)

5128ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕೌತುಕ 3.ಸರ್ವಸ್ವ
5.ಗಡಾರಿ 6.ಅಳು
7.ಕರಗ 9.ವಿಷಾದ
10.ಮಾತುಲ 12.ನಗರ
15.ದಿಟ 17.ಹಮಾಲ
19.ಬಯಲು 20.ನಜರು

ಮೇಲಿಂದ ಕೆಳಕ್ಕೆ:
1.ಕೌಲು 2.ಕರುಳು
3.ಸರಿಗೆ 4.ಸ್ವರ
5.ಗಟಾರ 6.ಅಡವಿ
7.ಕದನ 8.ಗಮಾರ
11.ಲಲಾಟ 13.ಗದ್ದಲ
14.ಮಹಲು 15.ದಿವಾನ
16.ಬಿಂಬ 18.ನಾರು

ಸುಡೊಕು 5515

9		1			7		3	
			2	3		1		5
5		2		1				7
2		5					7	
				5	3	8		9
	9		8				5	
4		3			2			
	5			4		7		2
7		9	6		5		1	

5514 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ನವೆಂಬರ್ 5, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ದ್ವಾದಶಿ ಗಂ. 17-07 ನಕ್ಷತ್ರ: ಉತ್ತರಾಭಾದ್ರಾ ಗಂ. 23-57 ಯೋಗ: ಹರ್ಷಣ ಗಂ. 25-22, ಕರಣ: ಬಾಲವ ಗಂ. 17-07, ತುಲಾ ಮಾಸದ 18 ನೇ ದಿನ.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-29 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 09 ರಬಿಯುಸ್ಸಾನಿ
ದಿನ ವಿಶೇಷ : ಶನಿ ಪ್ರದೋಷ ಅದೃಷ್ಟ ಸಂಖ್ಯೆ : 1, 8

ಮೇಷ: ಹೊಸದಾಗಿ ಕೈಗೊಂಡ ಕೆಲಸವೊಂದು ಸುಗಮವಾಗಿ ಸಾಗಲೆಂದು ದೇವತಾ ಕಾರ್ಯ ಕೈಗೊಳ್ಳುವುದು ಉತ್ತಮ. ಇನ್ನೊಬ್ಬರ ಮೇಲಿನ ಅವಲಂಬನೆ ಎದ್ದು ಕಾಣಲಿದೆ. ಈ ದಿನ ಕೃಷಿ ಕಾರ್ಯಗಳಿಂದಾಗಿ ಹೆಚ್ಚಿನ ಆದಾಯ.

ವೃಷಭ: ಕಟ್ಟಡ ಕಂಟ್ರಾಕ್ಟರ್‌ಗಳಿಗೆ ಕೆಲಸಗಾರರ ಕೊರತೆ ಕಾಡಲಿದೆ ಅಥವಾ ಪರಿಣಿತ ಕೆಲಸಗಾರರ ಗೈರುಹಾಜರಿಯಿಂದ ನಷ್ಟ ಸಂಭವಿಸುವುದು. ಮನೆಯವರೊಂದಿಗೆ ಮನೋರಂಜನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ.

ಮಿಥುನ: ಸಂಸ್ಥೆಯ ಜವಾಬ್ದಾರಿ ನೋಡುವಂತಹ ಸಿಬ್ಬಂದಿಗೆ ಕೆಲಸದಲ್ಲಿ ಸ್ವಲ್ಪ ಬಿಡುವು ಸಿಗುವುದು. ಹೆಂಡತಿಯ ಆರೋಗ್ಯದ ಬಗ್ಗೆ ಅನಗತ್ಯ ಭೀತಿ ಅಗತ್ಯವಿಲ್ಲ. ಮನೆಗೆ ಹಿರಿಯರ ಆಗಮನದಿಂದ ನವೋಲ್ಲಾಸ.

ಕರ್ಕಾಟಕ: ನಿಮ್ಮ ಜೀವನ ಶೈಲಿಗೆ ವಿರುದ್ಧವಾದ ಘಟನೆ ಇಂದು ನಡೆಯಬಹುದು. ಬಣ್ಣದ ವ್ಯಾಪಾರಸ್ಥರಿಗೆ ಹೆಚ್ಚಿನ ಲಾಭ. ಕಾಲು ಅಥವಾ ಬೆನ್ನು ನೋವು ಕಾಣಿಸಿಕೊಳ್ಳಬಹುದು, ಯೋಗಾಭ್ಯಾಸದಿಂದ ಸರಿಪಡಿಸಿಕೊಳ್ಳಿರಿ.

ಸಿಂಹ: ದಾಂಪತ್ಯದಲ್ಲಿ ಸಣ್ಣ ಪುಟ್ಟ ವಿಚಾರಗಳಿಂದ ಮಾನಸಿಕ ಅಸಮಾಧಾನ ಕಾಡಲಿದೆ. ಆಧ್ಯಾತ್ಮಿಕ ವಿಚಾರಗಳ ಪುಸ್ತಕಗಳನ್ನು ಕೊಳ್ಳಲು ಧನ ವಿನಿಯೋಗವಾಗುವುದು. ಸಿನೆಮಾ ರಂಗದವರಿಗೆ ಅಡೆತಡೆಗಳು ಉಂಟಾಗಬಹುದು.

ಕನ್ಯಾ: ಧಾರ್ಮಿಕ ನಾಯಕರಿಗೆ ನಾಸ್ತಿಕನ ಮನಸ್ಸನ್ನು ಪರಿವರ್ತನೆ ಮಾಡುವ ಕೆಲಸ ಸಿಗಲಿದೆ. ಜಲೋತ್ಪನ್ನ ವಸ್ತುಗಳ ಮಾರಾಟಗಾರರಿಗೆ ಅಥವಾ ನೀರಿಗೆ ಸಂಬಂಧಿಸಿದ ವ್ಯವಹಾರ ನಡೆಸುವವರಿಗೆ ಅಧಿಕ ಆದಾಯ ಇರಲಿದೆ.

ತುಲಾ: ಈ ದಿನದ ನಿಮ್ಮ ಸಂತೋಷಕ್ಕೆ ನಿಮ್ಮ ಹತ್ತಿರದವರಿಂದ ತಡೆ ಉಂಟಾಗಬಹುದು. ಕೈಗೊಂಡ ಕೆಲಸದಲ್ಲಿ ಯಶಸ್ಸನ್ನು ಸಾಧಿಸುವಿರಿ. ನಾಲ್ಕಾರು ಜನರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ನಿಮ್ಮ ಏಳಿಗೆಗೆ ದಾರಿಯಾಗಲಿದೆ.

ವೃಶ್ಚಿಕ: ವೃತ್ತಿ ಸಂಬಂಧಿತ ಪೈಪೋಟಿಯನ್ನು ಸಮರ್ಥವಾಗಿ ಎದುರಿಸುವಿರಿ. ಆದರೆ ಯಾವ ಕಾರಣಕ್ಕೂ ನಿಮ್ಮ ಸ್ವಾರ್ಥಕ್ಕಾಗಿ ಇನ್ನೊಬ್ಬರ ಜೀವನದಲ್ಲಿ ಆಟವಾಡಬೇಡಿ. ಅಧ್ಯಯನ ನಿರತರಿಗೆ ಸೂಕ್ತ ಮಾರ್ಗದರ್ಶನ ಸಿಗುತ್ತದೆ.

ಧನು: ಹಣಕಾಸಿನ ವಿಚಾರದಲ್ಲಿ ನಷ್ಟ ಉಂಟಾಗುವ ಲಕ್ಷಣ. ಬಂಧುಗಳಲ್ಲಿ ನಿಷ್ಠುರ ವರ್ತನೆಗೆ ಆಸ್ಪದ ನೀಡುವುದು ಸರಿಯಲ್ಲ. ಮಕ್ಕಳ ಸಂತೋಷಕ್ಕಾಗಿ ಆಟಿಕೆಗಳಿಂದ ಅಥವಾ ಅಲಂಕಾರಿಕ ವಸ್ತುಗಳ ಖರೀದಿಯಿಂದ ಹಣ ವ್ಯಯ.

ಮಕರ: ಆದಾಯ ಮೂಲ ಹೆಚ್ಚಿಸಿಕೊಳ್ಳಲು ಹೊಸ ಯೋಜನೆಗಳನ್ನು ರೂಢಿಸಿಕೊಳ್ಳಬಹುದು. ಕಾನೂನಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ತಿಳಿಯುವುದು ಅನಿವಾರ್ಯ. ನಿಮ್ಮ ಶ್ರಮಕ್ಕೆ ಮನೆಯವರ ಸಹಾಯ ಸಹಕಾರ ಒದಗಲಿದೆ.

ಕುಂಭ: ವೃತ್ತಿಯಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ನಿಮ್ಮೊಳಗಿನ ನಾಯಕನನ್ನು ಜಾಗೃತಗೊಳಿಸುವಿರಿ. ಇಂದು ಎಲ್ಲರೂ ನಿಮ್ಮನ್ನು, ನಿಮ್ಮ ಕೆಲಸವನ್ನು ಗಮನಿಸುತ್ತಾರೆ. ಸ್ನೇಹಿತರೊಂದಿಗೆ ಕಿರು ಪ್ರವಾಸದ ಯೋಜನೆ.

ಮೀನ: ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳ. ಜೀವನದಲ್ಲಿ ನಡೆದ ಕಹಿ ಘಟನೆ ನೆನಪಿನಿಂದ ದುಃಖ. ಮಕ್ಕಳ ಬೆಳವಣಿಗೆ ವಿಚಾರದಲ್ಲಿ ಕಾಳಜಿ ತೋರುವ ಅನಿವಾರ್ಯತೆ ಹೆಚ್ಚಲಿದೆ.

ಮರಣ ದಂಡನೆಯಿಂದ ವಿನಾಯಿತಿ ನೀಡಿದ ಸುಪ್ರೀಂ ಕೋರ್ಟ್

ಉಮೇಶ್ ರೆಡ್ಡಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಳಗಾವಿ ಜೈಲಿನಲ್ಲಿರುವ ಸರಣಿ ಅತ್ಯಾಚಾರ, ದರೋಡೆ ಮತ್ತು ಕೊಲೆ ಪ್ರಕರಣಗಳ ಅಪರಾಧಿ ವಿಕೃತಕಾಮಿ ಉಮೇಶ್ ರೆಡ್ಡಿ ಅಲಿಯಾಸ್ ಬಿ.ಎ. ಉಮೇಶ್‌ಗೆ ಮರಣ ದಂಡನೆಯಿಂದ ವಿನಾಯಿತಿ ನೀಡಿರುವ ಸುಪ್ರೀಂ ಕೋರ್ಟ್, 30 ವರ್ಷ ಜೈಲು ಶಿಕ್ಷೆ ಅನುಭವಿಸುವಂತೆ ಶುಕ್ರವಾರ ತೀರ್ಪು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಮತ್ತು ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಮತ್ತು ಬೇಲಾ ಎಂ.ತ್ರಿವೇದಿ ಅವರಿದ್ದ ಪೀಠವು ಈ ತೀರ್ಪು ನೀಡಿದೆ. ವಿಚಾರಣಾ ನ್ಯಾಯಾಲಯದಿಂದ ಮರಣ ದಂಡನೆಗೆ ಗುರಿಯಾಗಿದ್ದ ಉಮೇಶ್ ರೆಡ್ಡಿ 10 ವರ್ಷಗಳಿಂದ ಬೆಳಗಾವಿ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾನೆ.

'ಕಾನೂನು ಉಲ್ಲಂಘಿಸಿ ಏಕಾಂತದ ಬಂಧನದಲ್ಲಿರಿಸಿದ್ದು, ಇದರಿಂದ ತನ್ನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಿದೆ ಎಂದು ಅಪರಾಧಿ ಸಲ್ಲಿಸಿರುವ ಅರ್ಜಿ ಪರಿಗಣಿಸುವ ಮೊದಲು

ಮುಖ್ಯಾಂಶಗಳು

- 30 ವರ್ಷ ಜೈಲು ಶಿಕ್ಷೆ ಅನುಭವಿಸುವಂತೆ ತೀರ್ಪು ನೀಡಿದ 'ಸುಪ್ರೀಂ'
- 10 ವರ್ಷಗಳಿಂದ ಬೆಳಗಾವಿ ಜೈಲಿನಲ್ಲಿರುವ ಉಮೇಶ್ ರೆಡ್ಡಿ

ಪೀಠವು, ಕನಿಷ್ಠ 30 ವರ್ಷ ಶಿಕ್ಷೆ ಅನುಭವಿಸಬೇಕು' ಎಂದು ಆದೇಶಿಸಿತು.

ರೆಡ್ಡಿ ಸಲ್ಲಿಸಿದ್ದ ಕ್ಷಮಾಪಣಾ ಅರ್ಜಿಯನ್ನು 2021ರ ಸೆಪ್ಟೆಂಬರ್ 29ರಂದು ಹೈಕೋರ್ಟ್ ರದ್ದುಪಡಿಸಿತ್ತು. ಕ್ಷಮಾಪಣಾ ಅರ್ಜಿಯ ವಿಚಾರಣೆ ವಿಳಂಬದ ಕಾರಣ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ. ಜತೆಗೆ ವಿಚಾರಣಾ ನ್ಯಾಯಾಲಯ 2006ರಲ್ಲಿ ತನಗೆ ಮರಣ ದಂಡನೆ ವಿಧಿಸಿದಾಗಿನಿಂದಲೂ ಏಕಾಂತದ ಬಂಧನದಲ್ಲಿರಿಸಿದ್ದನ್ನೂ ಪ್ರಶ್ನಿಸಿದ್ದ.

ಮರಣ ದಂಡನೆಗೆ ಗುರಿಯಾಗಿದ್ದ ಅಪರಾಧಿ ಕ್ಷಮಾಪಣೆ ಅರ್ಜಿ ವಿಲೇವಾರಿಗೆ ಎರಡು ವರ್ಷ ಮತ್ತು



ಮೂರು ತಿಂಗಳು (2011ರ ಮಾರ್ಚ್ 3– 2013ರ ಮೇ 12) ಸಮಯ ತೆಗೆದುಕೊಂಡಿರುವುದನ್ನು ಪೀಠ ಗಮನಿಸಿತು.

'ಏಕಾಂತದ ಬಂಧನ ಅರ್ಜಿದಾರನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಈ ಹಿನ್ನೆಲೆಯಲ್ಲಿ ಕೋರ್ಟ್ ದೃಷ್ಟಿಯಲ್ಲಿ ಅರ್ಜಿದಾರ ಮರಣದಂಡನೆಗೆ ಬದಲು ಜೀವಿತಾವಧಿ ಶಿಕ್ಷೆಗೆ ಪರಿವರ್ತನೆ ಬಹುದು. ಮರಣದಂಡನೆ ರದ್ದುಪಡಿಸುವಂತೆ ಕೋರಿ ಅರ್ಜಿ ಸಲ್ಲಿಸಿ, ಏಳು ದಿನಗಳು ಕಳೆಯುವುದರೊಳಗಾಗಿ ಕ್ಷಮಾದಾನಕ್ಕಾಗಿ ಅರ್ಜಿ ಸಲ್ಲಿಸಬಾರದು. ಈ ಸಂಬಂಧ ನ್ಯಾಯಾಲಯದಲ್ಲಿ ಪರಿಹಾರಕ್ಕಾಗಿ ಎಲ್ಲ ರೀತಿಯ ಪ್ರಯತ್ನಗಳನ್ನು ಮುಗಿಸಿಕೊಂಡ ಮೇಲೆ ಕ್ಷಮಾದಾನಕ್ಕೆ ಅರ್ಜಿ ಸಲ್ಲಿಸಬೇಕು' ಎಂದು ಪೀಠ ಸ್ಪಷ್ಟಪಡಿಸಿತು.

2016ರಲ್ಲಿ ಮರಣ ದಂಡನೆ ತೀರ್ಪು ಮರುಪರಿಶೀಲಿಸಲು ಕೋರಿ ರೆಡ್ಡಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ 'ಅರ್ಜಿದಾರನು ಸಮಾಜಕ್ಕೆ ಅಪಾಯಕಾರಿ ಮತ್ತು ಬದಲಾಗದವನು' ಎಂದು ತೀರ್ಮಾನಿಸಿ, ರೆಡ್ಡಿಗೆ ವಿಧಿಸಿದ್ದ ಮರಣ ದಂಡನೆಯನ್ನು ಎತ್ತಿಹಿಡಿದಿತ್ತು.

ವಿಧವೆ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿದ್ದ ಆರೋಪದ ಮೊದಲ ಪ್ರಕರಣ 1998ರ ಫೆಬ್ರುವರಿ 28ರಂದು ರೆಡ್ಡಿ ವಿರುದ್ಧ ಬೆಂಗಳೂರಿನ ಪೀಣ್ಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು. ಅಲ್ಲದೆ ರೆಡ್ಡಿ ವಿರುದ್ಧ ಇಂತಹದೇ ಏಳು ಪ್ರಕರಣಗಳು ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದವು. ಪೊಲೀಸ್ ಇಲಾಖೆಯಲ್ಲಿ ಕಾನ್‌ಸ್ಟೆಬಲ್ ಆಗಿದ್ದ ಈತ ತನ್ನ ವಿಕೃತ ಲೈಂಗಿಕ ಅಪರಾಧಗಳಿಂದ 'ವಿಕೃತ ಕಾಮಿ' ಎಂದೇ ಕುಖ್ಯಾತನಾಗಿದ್ದಾನೆ. ಮಹಿಳೆಯರನ್ನು ಕೊಲೆ ಮಾಡಿದ ಶವದ ಮೇಲೆ ಅತ್ಯಾಚಾರ ಎಸಗುತ್ತಿದ್ದ ಅಪರಾಧ ಈತನ ವಿರುದ್ಧ ಸಾಬೀತಾಗಿದೆ.

ಕಾರ್–ಬಸ್ ಡಿಕ್ಕಿ: 9 ಕಾರ್ಮಿಕರ ಸಾವು

ಬೈತೂಲ್ (ಪಿಟಿಐ): 'ಮಧ್ಯಪ್ರದೇಶದ ಬೈತೂಲ್ ಜಿಲ್ಲೆಯ ಝಲಾರ್ ಎಂಬಲ್ಲಿ ಗುರುವಾರ ಮಧ್ಯರಾತ್ರಿ ಎಸ್‌ಯುವಿ ಕಾರೊಂದು ಬಸ್‌ಗೆ ಡಿಕ್ಕಿ ಹೊಡೆದುದರಿಂದ ಒಂಬತ್ತು ಮಂದಿ ಕಾರ್ಮಿಕರ ಸಹಿತ 11 ಮಂದಿ ಮೃತಪಟ್ಟಿದ್ದಾರೆ.

ಮೃತರೆಲ್ಲರೂ ಮಹಾರಾಷ್ಟ್ರದ ಅಮರಾವತಿಯಿಂದ ಮನೆಗೆ ತೆರಳುತ್ತಿದ್ದ ಕೂಲಿ ಕಾರ್ಮಿಕರು ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

'ರಾತ್ರಿ 2ರ ಸುಮಾರಿಗೆ ಅಪಘಾತ ಸಂಭವಿಸಿದೆ. ಕಾರಿನಲ್ಲಿದ್ದ ಆರು ಪುರುಷರು, ಮೂವರು ಮಹಿಳೆಯರು, ಐದು ವರ್ಷದ ಹೆಣ್ಣುಮಗು ಮತ್ತು ಒಂದೂವರೆ ವರ್ಷದ ಗಂಡು ಮಗು ಮೃತಪಟ್ಟಿದ್ದಾರೆ. ಬಸ್ ಚಾಲಕನನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

'ನಿದ್ರೆಯ ಮಂಪರಿನಲ್ಲಿದ್ದ ಚಾಲಕನಿಗೆ ಕಾರಿನ ನಿಯಂತ್ರಣ ತಪ್ಪಿತು. ಈ ಕಾರಣದಿಂದಾಗಿ ಅಪಘಾತ ಸಂಭವಿಸಿದೆ. ಮೃತಪಟ್ಟವರಲ್ಲಿ ಒಂಬತ್ತು ಜನರ ವಯಸ್ಸು 25ರಿಂದ 48ರ ಮಧ್ಯೆ ಇದೆ' ಎಂದು ಹೇಳಿದರು.

ಪ್ರಧಾನಿ ಮೋದಿ ಅವರು ಮೃತರ ಕುಟುಂಬಕ್ಕೆ ₹2 ಲಕ್ಷ ಘೋಷಣೆ ಮಾಡಿದ್ದಾರೆ.

ಬಿಜೆಪಿಯಿಂದ ಟಿಆರ್‌ಎಸ್ ಶಾಸಕರ ಖರೀದಿ ಯತ್ನ: ವಿಡಿಯೊ

ಪ್ರಜಾವಾಣಿ ವಾರ್ತೆ

ಬಂಧಿಸಿ ಕ್ರಮ ಕೈಗೊಳ್ಳಿ: ಪ್ರಧಾನಿಗೆ ಮನವಿ

ಸರ್ಕಾರಗಳನ್ನು ಈ ರೀತಿ ಬೀಳಿಸುವಂತಹ ಹೇಯ ಕೃತ್ಯಗಳಿಗೆ ಕಡಿವಾಣ ಹಾಕಬೇಕು ಮತ್ತು ಇದರಲ್ಲಿ ಭಾಗಿಯಾಗಿರುವ ಎಲ್ಲರನ್ನೂ ಬಂಧಿಸಿ ಕ್ರಮ ತೆಗೆದುಕೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರಲ್ಲಿ ಮನವಿ ಮಾಡುತ್ತೇನೆ ಎಂದು ಕೆಸಿಆರ್ ಹೇಳಿದ್ದಾರೆ.

'ನಾನು ಪ್ರಾಣ ತ್ಯಾಗಕ್ಕೂ ಸಿದ್ಧನಿದ್ದೇನೆ. ಆದರೆ ಈ ವಿಷಯದಲ್ಲಿ ಮೌನವಾಗಿ ಇರುವುದಿಲ್ಲ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ನಾವ್ಯಾರು ಸಾವಿರ ವರ್ಷ ಬದುಕುವುದಿಲ್ಲ. ನಿಮಗೆ ಎರಡನೇ ಬಾರಿ ಪ್ರಧಾನಿಯಾಗಿ ಸೇವೆ ಸಲ್ಲಿಸುವ ಅವಕಾಶ ದೊರೆತಿದೆ. ಹೀಗಾಗಿ ನೀವು ಅದೃಷ್ಟವಂತರು. ಆದರೆ ಇತಿಹಾಸದ ಪುಟಗಳಲ್ಲಿ ನೀವು ನಿಮ್ಮ ಹೆಸರನ್ನು ಭ್ರಷ್ಟಗೊಳಿಸಿಕೊಳ್ಳುತ್ತಿದ್ದೀರಿ. ಸರ್ಕಾರಗಳನ್ನು ಉರುಳಿಸುವ, ಪ್ರಜಾಸತ್ತಾತ್ಮಕವಲ್ಲದ ಕೆಲಸಗಳಿಂದ ಏನು ಸಾಧಿಸುವುದು?' ಎಂದು ಅವರು ಪ್ರಶ್ನಿಸಿದ್ದಾರೆ.

ಹೈದರಾಬಾದ್: ಬಿಜೆಪಿಯು ಟಿಆರ್‌ಎಸ್ ನಾಲ್ವರು ಶಾಸಕರನ್ನು ಖರೀದಿಸಲು ಯತ್ನಿಸುತ್ತಿದೆ ಎಂದು ಆರೋಪಿಸಿರುವ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್, ಅದಕ್ಕೆ ಸಂಬಂಧಿಸಿದ ವಿಡಿಯೊವನ್ನು ಗುರುವಾರ ಸಂಜೆ ಬಿಡುಗಡೆ ಮಾಡಿದ್ದಾರೆ.

ತೆಲಂಗಾಣ ರಾಷ್ಟ್ರ ಸಮಿತಿಯ (ಟಿಆರ್‌ಎಸ್) ನಾಲ್ವರು ಶಾಸಕರನ್ನು ಬಿಜೆಪಿಗೆ ಸೆಳೆಯಲು ಆಮಿಷ ಒಡ್ಡುತ್ತಿರುವ ಮಧ್ಯವರ್ತಿಗಳ ಸಂಭಾಷಣೆ ಈ ವಿಡಿಯೊದಲ್ಲಿದೆ. ಇದರಲ್ಲಿ ಇಬ್ಬರು ಶ್ರೀಗಳು ಹಾಗೂ ಒಬ್ಬರು ಮಧ್ಯವರ್ತಿ ಇದ್ದಾರೆ. ಮಧ್ಯವರ್ತಿಯೊಬ್ಬ ಶಾಸಕರಿಗೆ ತಲಾ ₹ 50 ಕೋಟಿ ನೀಡುವುದಾಗಿ ಹೇಳುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.

'ಪ್ರತಿಯೊಬ್ಬ ಶಾಸಕನಿಗೆ ₹ 50 ಕೋಟಿ ಖರ್ಚು ಮಾಡಲು ನಾವು ಸಿದ್ಧರಿದ್ದೇವೆ. ಬಿಜೆಪಿಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್ ಸಂತೋಷ್ ಅವರು ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಸಭೆ ಏರ್ಪಡಿಸುತ್ತಾರೆ' ಎಂಬ ಮಧ್ಯವರ್ತಿಗಳ ಮಾತನ್ನು ಉಲ್ಲೇಖಿಸಿ ಸಿಎಂ ಕೆಸಿಆರ್ ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

ಟಿಆರ್‌ಎಸ್ ಶಾಸಕರಾದ ಜಿ. ಬಾಲರಾಜು, ಬಿ ಹರ್ಷವರ್ಧನ್ ರೆಡ್ಡಿ, ಆರ್. ಕಾಂತರಾವ್ ಮತ್ತು ರೋಹಿತ್ ರೆಡ್ಡಿ ಅವರಿಗೆ ಪಕ್ಷ ತೊರೆಯುವಂತೆ ಆಮಿಷವೊಡ್ಡುತ್ತಿದ್ದ ವೇಳೆ ದಾಳಿ ನಡೆಸಿದ್ದ ಪೊಲೀಸರು, ಮೂವರನ್ನು ವಶಕ್ಕೆ ಪಡೆದಿದ್ದರು. ಶಾಸಕರು ನೀಡಿದ್ದ ಮಾಹಿತಿ ಮೇರೆಗೆ ಅಕ್ಟೋಬರ್ 26ರಂದು ಪೊಲೀಸರು ಕಾರ್ಯಾಚರಣೆ ನಡೆಸಿದ್ದರು.

'ಕಳೆದ ವಾರ ಹೈದರಾಬಾದ್‌ನಲ್ಲಿ ಬಂಧನಕ್ಕೆ ಒಳಗಾದ ಮಧ್ಯವರ್ತಿಗಳು ತೆಲಂಗಾಣದ ಜತೆಗೆ ರಾಜಸ್ಥಾನ, ದೆಹಲಿ ಮತ್ತು ಆಂಧ್ರ ಪ್ರದೇಶದ ಸರ್ಕಾರಗಳನ್ನು ಉರುಳಿಸಲು ಯೋಜಿಸುತ್ತಿದ್ದರು' ಎಂದು ಅವರು ತಿಳಿಸಿದ್ದಾರೆ.

ಈ ಮಧ್ಯವರ್ತಿಗಳು ಕರ್ನಾಟಕ, ಮಹಾರಾಷ್ಟ್ರದಲ್ಲಿ ಇಂತಹ ಕೆಲಸಗಳನ್ನು ಹೇಗೆ ಮಾಡಿದ್ದರು ಎಂಬುದನ್ನು ನಾಚಿಕೆಯಿಲ್ಲದೆ ವಿವರಿಸುತ್ತಿರುವುದು ವಿಡಿಯೊದಲ್ಲಿದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಎಂಟು ರಾಜ್ಯ ಸರ್ಕಾರಗಳನ್ನು ಉರುಳಿಸಲಾಗಿದೆ. ಮತ್ತು ಈಗ ತೆಲಂಗಾಣ, ಆಂಧ್ರ, ರಾಜಸ್ಥಾನ ಮತ್ತು ದೆಹಲಿಯಲ್ಲಿ ಪ್ರಕ್ರಿಯೆ ನಡೆಯುತ್ತಿದೆ ಎಂಬುದನ್ನು ಈ ಮಧ್ಯವರ್ತಿಗಳು ಹೇಳಿದ್ದಾರೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಕಳೆದ ವಾರ ಸೈಬರಾಬಾದ್ ಪೊಲೀಸರು ದೆಹಲಿ ಮೂಲದ ರಾಮಚಂದ್ರ ಭಾರತಿ, ತಿರುಪತಿಯ ಸಿಂಹಯಾಜಿ, ಹೈದರಾಬಾದ್‌ನ ನಂದಕುಮಾರ್ ಅವರನ್ನು ಬಂಧಿಸಿದ್ದರು. ಮಧ್ಯವರ್ತಿಗಳ ಈ ಯೋಜನೆಗೆ ಸಂಬಂಧಿಸಿದಂತೆ ಪೊಲೀಸರು ಗೋಪ್ಯ ಆಡಿಯೊ ಮತ್ತು ವಿಡಿಯೊ ರೆಕಾರ್ಡ್‌ಗಳ ಮೂಲಕ ಪುರಾವೆ ಸಂಗ್ರಹಿಸಿದ್ದಾರೆ. ಟಿಆರ್‌ಎಸ್ ಶಾಸಕ ರೋಹಿತ್ ರೆಡ್ಡಿ ಅವರಿಂದ ಈ ಮಧ್ಯವರ್ತಿಗಳ ಬಗ್ಗೆ ಸುಳಿವು ಪಡೆದ ಪೊಲೀಸರು ದಾಳಿ ನಡೆಸಿ, ಬಂಧಿಸಿದ್ದಾರೆ. 'ಇದಕ್ಕೆ ಸಂಬಂಧಿಸಿದ ಪುರಾವೆ, ಸಾಕ್ಷ್ಯಗಳನ್ನು ತೆಲಂಗಾಣ ಹೈಕೋರ್ಟ್‌ಗೆ ಸಲ್ಲಿಸಲಾಗಿದೆ.

'ಇದೀಗ ಈ ಸ್ಫೋಟಕ ವಿಡಿಯೊಗಳು ಮತ್ತು ಸಂಬಂಧಿತ ಮಾಹಿತಿಯನ್ನು ದೇಶದ ಎಲ್ಲಾ ನ್ಯಾಯಮೂರ್ತಿಗಳು, ಮುಖ್ಯಮಂತ್ರಿಗಳು, ರಾಜಕೀಯ ಪಕ್ಷಗಳ ಮುಖ್ಯಸ್ಥರು, ಮಾಧ್ಯಮ ಸಂಸ್ಥೆಗಳು ಮತ್ತು ತನಿಖಾ ಸಂಸ್ಥೆಗಳಿಗೆ ಕಳುಹಿಸುತ್ತಿದ್ದೇನೆ' ಎಂದು ಕೆಸಿಆರ್ ತಿಳಿಸಿದ್ದಾರೆ.

ಶಿವಸೇನಾ ಮುಖಂಡ ಸುಧೀರ್ ಸೂರಿ ಹತ್ಯೆ


ಅಮೃತಸರ/ ಚಂಡೀಗಡ (ಪಿಟಿಐ): ಶಿವಸೇನಾ ಮುಖಂಡ ಸುಧೀರ್ ಸೂರಿ ಅವರನ್ನು ಶುಕ್ರವಾರ ದುಷ್ಕರ್ಮಿಗಳು ಅಮೃತಸರದಲ್ಲಿ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

'ಸೂರಿ ಸೇರಿದಂತೆ ಪಕ್ಷದ ಹಲವು ಮುಖಂಡರು ಇಲ್ಲಿನ ಮಜೀಟಾ ರಸ್ತೆಯ ಗೋಪಾಲ್ ಮಂದಿರದ ಹೊರಗೆ ಪ್ರತಿಭಟನೆ ನಡೆಸುತ್ತಿದ್ದರು. ಈ ವೇಳೆ ಕೃತ್ಯ ನಡೆದಿದೆ. ಸೂರಿ ಅವರ ಮೇಲೆ ಐದಕ್ಕೂ ಹೆಚ್ಚು ಬಾರಿ ಗುಂಡಿನ ದಾಳಿ ನಡೆಸಲಾಗಿತ್ತು. ತೀವ್ರ ಗಾಯಗೊಂಡ ಅವರು ಮೃತಪಟ್ಟರು. ಘಟನೆ ಬೆನ್ನಲ್ಲೇ ಆರೋಪಿಯನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ್ದ ಪಿಸ್ತೂಲನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಸೂರಿ ಅವರಿಗೆ ಹಲವಾರು ಪಾತಕಿಗಳಿಂದ ಜೀವ ಬೆದರಿಕೆ ಇದ್ದ ಕಾರಣ ಸರ್ಕಾರ ಅವರಿಗೆ ಭದ್ರತೆ ಒದಗಿಸಿತ್ತು ಎಂದು ಅವರು ಮಾಹಿತಿ ನೀಡಿದರು. ಸೂರಿ ಅವರ ಹತ್ಯೆ ಬಗ್ಗೆ ಪ್ರತಿಕ್ರಿಯೆ ನೀಡಿರುವ ಪಂಜಾಬ್ ಬಿಜೆಪಿ ಅಧ್ಯಕ್ಷ ಅಶ್ವಿನಿ ಶರ್ಮಾ, 'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.



ಇನ್ವೆಸ್ಟ್ ಕರ್ನಾಟಕ











ವನ್ಯಜೀವಿ ಚಲನಚಿತ್ರ ನಿರ್ಮಾಪಕರಾಗಿ ಮತ್ತು ಪ್ರಸಿದ್ಧ ನೈಸರ್ಗಿಕ ಇತಿಹಾಸಕಾರ ಹಂಟರ್, ಜುಕರ್ ಬರ್ಗ್ ಮೀಡಿಯಾ ಸಂಸ್ಥಾಪಕಿ ರ್‍ಯಾಂಡಿ ಜುಕರ್‌ಬರ್ಗ್

‘ಬ್ರ್ಯಾಂಡ್ ಬೆಂಗಳೂರು’ ಜತೆ, ‘ಬಿಯಾಂಡ್ ಬೆಂಗಳೂರು’ ಪರಿಕಲ್ಪನೆಯನ್ನು ಯಶಸ್ವಿಯಾಗಿಸಿದೆ ‘ಜಿಮ್’2022’

ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಅದ್ಧೂರಿ ತೆರೆ

ಹೂಡಿಕೆದಾರರ ಮೆಚ್ಚಿನ ತಾಣ ಕರ್ನಾಟಕ

ಜಾಗತಿಕ ಹೂಡಿಕೆದಾರರ ಸಮಾವೇಶ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ. ಈ ಬಾರಿ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ 5 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆ ಹಾಗೂ ಐದು ಲಕ್ಷ ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆ ಸರ್ಕಾರದ್ದಾಗಿತ್ತು.

ಆದರೆ, ವಿಶ್ವದ ಅಗ್ರಮಾನ್ಯ ಉದ್ಯಮಿಗಳು ರಾಜ್ಯದಲ್ಲಿ ಅತಿ ಹೆಚ್ಚು ಬಂಡವಾಳ ಹೂಡಿಕೆ ಮಾಡಲು ಮುಂದೆ ಬಂದಿರುವುದು ನಮ್ಮ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚುವಂತೆ ಮಾಡಿದೆ. ರಾಜ್ಯದಲ್ಲಿ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗುವ ಅಂದಾಜಿದ್ದು, ನಮ್ಮ ಕನ್ನಡಿಗರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಸಿಗಲಿವೆ ಎಂಬುದೇ ಅತ್ಯಂತ ಸಂತಸದ ವಿಷಯ.

‘ಗ್ಲೋಬಲ್ ಇನ್ವೆಸ್ಟರ್ಸ್‌ಮೀಟ್’ ಕರ್ನಾಟಕದಲ್ಲಿ ನಡೆಯುತ್ತಿರುವ ಐದನೆಯ ಮತ್ತು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಡಾ.ಮುರುಗೇಶ ಆರ್. ನಿರಾಣಿ ನೇತೃತ್ವದಲ್ಲಿ ನಡೆಯುತ್ತಿರುವ ಮೂರನೇ ಜಾಗತಿಕ ಹೂಡಿಕೆದಾರರ ಸಮಾವೇಶ.

ಸನ್ಮಾನ್ಯ ಪ್ರಧಾನಿ ನರೇಂದ್ರ ಮೋದಿ ಅವರು ವೀಡಿಯೋ ಕಾನ್ಫರೆನ್ಸ್‌ಮೂಲಕ ಸಮಾವೇಶವನ್ನು ಉದ್ಘಾಟನೆ ಮಾಡಿದ್ದೇ, ಈ ಬಾರಿಯ ಸಮಾವೇಶಕ್ಕೆ ವಿಶೇಷ ಮೆರಗು ತಂದುಕೊಟ್ಟಿತ್ತು.

ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ, ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಡಾ. ಮುರುಗೇಶ ಆರ್ ನಿರಾಣಿ ಮತ್ತು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ವಾಣಿಜ್ಯ ಮತ್ತು ಕೈಗಾರಿಕೆ, ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಜವಳಿ ಸಚಿವ ಪಿಯೂಷ್ ಗೋಯಲ್, ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಲ್ಹಾದ್ ಜೋಶಿ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಬೆಂಗಳೂರಿನ ಅರಮನೆಯಲ್ಲಿ ನವೆಂಬರ್2ರಂದು ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ಉದ್ಘಾಟನಾ ಸಮಾವೇಶದಲ್ಲಿ ಉಪಸ್ಥಿತರಿದ್ದರು.

ಅಗ್ರ ಕೈಗಾರಿಕೋದ್ಯಮಿಗಳಾದ ಜಿಂದಾಲ್ ಗ್ರೂಪ್ ಅಧ್ಯಕ್ಷ ಶ್ರೀ ಸಜ್ಜನ್ ಜಿಂದಾಲ್, ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಪ್ರೈವೇಟ್ ಲಿಮಿಟೆಡ್‌ನ ಉಪಾಧ್ಯಕ್ಷ ಶ್ರೀ ವಿಕ್ರಮ್ ಎಸ್ ಕಿರ್ಲೋಸ್ಕರ್, ವಿಪ್ರೋ ಅಧ್ಯಕ್ಷರು ರಿಷಾದ್ ಪ್ರೇಮ್‌ಜೀ, ಭಾರತಿ ಎಂಟರ್‌ಪ್ರೈಸಸ್‌ನ ಉಪಾಧ್ಯಕ್ಷ ರಾಜನ್ ಭಾರತಿ ಮಿತ್ತ, ಅದಾನಿ ಪೋರ್ಟ್ಸ್ ಮತ್ತು ಎಸ್‌ಇಝಡ್‌ನ ಸಿಇಒ ಕರಣ್ ಅದಾನಿ ಮತ್ತು ಸ್ಟೆರ್ಲೈಟ್ ಪವರ್ ಎಂಡಿ ಪ್ರತೀಕ್ ಅಗರ್ವಾಲ್ ಅವರು ಕರ್ನಾಟಕದಲ್ಲಿ ತಮ್ಮ ಉದ್ಯಮ ಅನುಭವವನ್ನು ಹಂಚಿಕೊಂಡರು ಜತೆಗೆ, ರಾಜ್ಯದಲ್ಲಿ ಇನ್ನೂ ಹೆಚ್ಚಿನ ಹೂಡಿಕೆ ಮಾಡುವ ಇಂಗಿತ ವ್ಯಕ್ತಪಡಿಸಿದರು.

ಎರಡನೇ ದಿನದ ಸಮಾವೇಶದಲ್ಲಿ ವನ್ಯಜೀವಿ ಚಲನಚಿತ್ರ ನಿರ್ಮಾಪಕರಾಗಿ ಮತ್ತು ಪ್ರಸಿದ್ಧ ನೈಸರ್ಗಿಕ ಇತಿಹಾಸಕಾರ ಹಂಟರ್‌ತಮ್ಮ ವೃತ್ತಿ ಬದುಕಿನ ರೋಚಕ ವಿಷಯಗಳನ್ನು ಹಂಚಿಕೊಂಡರು. ಜುಕರ್‌ಬರ್ಗ್‌ಮೀಡಿಯಾ ಸಂಸ್ಥಾಪಕಿ ರ್‍ಯಾಂಡಿ ಜುಕರ್‌ಬರ್ಗ್, ‘‘ಬೆಂಗಳೂರು ತಂತ್ರಜ್ಞಾನದ ತವರೂರು, ಇಡೀ ಜಗತ್ತಿಗೆ ಚಿರಪರಿಚಿತವಾದ ಹೆಸರು,’’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


‘‘ಡ್ರೈವಿಂಗ್ ಇಂಡಿಯಾ ಇನ್ ದ ಫ್ಯೂಚರ್: ರೆವಲ್ಯೂಷನ್ ಇನ್ ಇಂಡಿಯಾಸ್ ಮೊಬಿಲಿಟಿ" - ಸೆಷನ್‌ನಲ್ಲಿ ಸನ್ ಮೊಬಿಲಿಟಿಯ ಸಹ ಸಂಸ್ಥಾಪಕ ಮತ್ತು ಅಧ್ಯಕ್ಷ ಚೇತನ್ ಮೈನಿ, ಟಿಎಂಎಲ್ ಸ್ಮಾರ್ಟ್ ಸಿಟಿ ಮೊಬಿಲಿಟಿ ಸೊಲ್ಯೂಷನ್ಸ್ ಸಿಇಒ ಮತ್ತು ಎಂಡಿ ಅಸಿಮ್ ಕುಮಾರ್ ಮುಖೋಪಾಧ್ಯಾಯ ಮತ್ತು ಸ್ವಿಚ್ ಮೊಬಿಲಿಟಿಯ ಚೀಫ್‌ರೆವಿನ್ಯೂ ಅಧಿಕಾರಿ ಸಚಿನ್ ನಿಜವಾನ್ ಭಾಗವಹಿಸಿದ್ದರು.

ಇಂಧನ ಕ್ಷೇತ್ರ ಕುರಿತ ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದ ವಿಜಯ್‌ನಿರಾಣಿ, ‘‘ಏಷ್ಯಾದಲ್ಲೇ ಅತಿ ಹೆಚ್ಚು ಎಥನಾಲ್ ಉತ್ಪಾದನೆ ಮಾಡುವ ರಾಜ್ಯ ಕರ್ನಾಟಕ. ಪವನ ಹಾಗೂ ಸೌರ ವಿದ್ಯುತ್‌ಉತ್ಪಾದನೆ ಯೋಜನೆಯನ್ನು ಅಭಿವೃದ್ಧಿಪಡಿಸಿ, ಮುಂದಿನ ಐದು ವರ್ಷಗಳಲ್ಲಿ ಕರ್ನಾಟಕದ ನವೀಕರಿಸಬಹುದಾದ ಇಂಧನದ ಸಾಮರ್ಥ್ಯವನ್ನು 10 ಪಟ್ಟು ಹೆಚ್ಚಿಸಲು ಯೋಜಿಸಲಾಗಿದೆ,’’ ಎಂದರು.

ಮೂರನೇ ದಿನದ ಸಮಾವೇಶದಲ್ಲಿ ಜೀವ್‌ಸೇಗ್ಲ್ - ಸಹ-ಸಂಸ್ಥಾಪಕ, ಸ್ಟಾರ್ಬಕ್ಸ್ ತಮ್ಮ ವೃತ್ತಿ ಬದುಕಿನ ಅನುಭವ ಹಂಚಿಕೊಂಡರು. ಕೊವಿಡ್‌ನಂಥ ಪರಿಸ್ಥಿತಿ ಎದುರಿಸುವ ಸನ್ನದ್ಧತೆ ಕುರಿತ ಸಮಾವೇಶದಲ್ಲಿ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ನಾರಾಯಣ ಹೆಲ್ತ್‌ನ ಸಂಸ್ಥಾಪಕ ಡಾ. ದೇವಿ ಶೆಟ್ಟಿ, ವಿಶ್ವ ಆರೋಗ್ಯ ಸಂಸ್ಥೆಯ ಡಾ. ಸೌಮ್ಯ ಸ್ವಾಮಿನಾಥನ್‌ಪಾಲ್ಗೊಂಡು ಅರ್ಥಪೂರ್ಣ ಚರ್ಚೆ ನಡೆಸಿದರು. ದಿ ಪ್ರಿಂಟ್‌ನ ಸಂಸ್ಥಾಪಕ ಶೇಖರ್‌ಗುಪ್ತ ಸಂವಾದ ನಡೆಸಿಕೊಟ್ಟರು.

ಕರ್ನಾಟಕದಲ್ಲಿ ಹೂಡಿಕೆ ಮಾಡಿರುವ ಉದ್ಯಮಿಗಳ ಯಶೋಗಾಥೆಗೆ ರಿಸಿಲಿಯಂಟ್ ಕರ್ನಾಟಕ ವೇದಿಕೆ ಸಾಕ್ಷಿಯಾಯಿತು.





“ರಾಜ್ಯ ಮತ್ತು ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇರುವುದರಿಂದ ಹೂಡಿಕೆ ಸಮಾವೇಶ ಸಾಕಾರವಾಯಿತು. ಕೇಂದ್ರ ಸರ್ಕಾರದ ಸಹಕಾರದಿಂದ ಕರ್ನಾಟಕ ಈ ಸಾಧನೆ ಮಾಡಿದೆ. ಡಬಲ್‌ಇಂಜಿನ್‌ಸರ್ಕಾರದಿಂದ ಕಾರ್ಯಕ್ರಮಗಳ ಅನುಷ್ಠಾನ ಸಾಧ್ಯವಾಗಿದೆ. ಕೇಂದ್ರ ಸರ್ಕಾರ 5 ಟ್ರಿಲಿಯನ್‌ಡಾಲರ್‌ಆರ್ಥಿಕ ಗುರಿ ಹೊಂದಿದೆ. ಕರ್ನಾಟಕ ಒಂದು ಟ್ರಿಲಿಯನ್‌ಕೊಡುಗೆ ನೀಡಲಿದೆ. ಈಗಾಲೇ ಕರ್ನಾಟಕ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಹೂಡಿಕೆದಾರರ ಹೆಗಲಿಗೆ ಹೆಗಲು ಕೊಟ್ಟು ಸರ್ಕಾರ ಕೆಲಸ ಮಾಡಲಿದೆ.’’

ಬಸವರಾಜ ಎಸ್. ಬೊಮ್ಮಾಯಿ
ಮುಖ್ಯಮಂತ್ರಿ



“ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡುವವರಿಗೆ ನಮ್ಮ ಸರ್ಕಾರ ವಿಶ್ವದರ್ಜೆಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಿದ್ದು, ಉದ್ದಿಮೆದಾರರು ಬಂಡವಾಳ ಹೂಡಲು ಮುಂದೆ ಬರಬೇಕು”

ಮುರುಗೇಶ ಆರ್. ನಿರಾಣಿ
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ನಿರೀಕ್ಷೆಗೂ ಮೀರಿ ಹರಿದು ಬಂದ ಬಂಡವಾಳ

ಬ್ರ್ಯಾಂಡ್ ಬೆಂಗಳೂರು ಜತೆಗೆ ಬಿಯಾಂಡ್‌ಬೆಂಗಳೂರು ಯಶಸ್ವಿ

ಬ್ರಾಂಡ್ ಬೆಂಗಳೂರಿನ ಘನತೆ ಹೆಚ್ಚಿಸುವುದರೊಂದಿಗೆ ಬಿಯಾಂಡ್ ಬೆಂಗಳೂರು ಮೂಲಕ 2-3ನೇ ಹಂತದ ನಗರಗಳಿಗೆ ಕೈಗಾರಿಕೆಗಳನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯೊಂದಿಗೆ ಆರಂಭವಾದ ಈ ಸಮಾವೇಶ ತನ್ನ ಉದ್ದೇಶ ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಬ್ಯುಲ್ಡ್ ಫಾರ್ ದಿ ವರ್ಲ್ಡ್ ಎಂಬ ಘೋಷವಾಕ್ಯದೊಂದಿಗೆ ನಡೆದ ಮೂರು ದಿನಗಳ ಸಮಾವೇಶದಲ್ಲಿ 10 ಲಕ್ಷ ಕೋಟಿ ರೂಪಾಯಿಗೂ ಹೆಚ್ಚಿನ ಹೂಡಿಕೆ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಅದರಲ್ಲಿ ಬಹುತೇಕ ಹೂಡಿಕೆಗಳು ಬೆಂಗಳೂರು ಅಲ್ಲದೇ ಟೈರ್ 2 ಮತ್ತು ಟೈರ್ 3 ನಗರ-ಪಟ್ಟಣಗಳು ಮತ್ತು ಅದರ ಸುತ್ತಲಿನ ಪ್ರದೇಶಗಳಲ್ಲಿ ಅನುಷ್ಠಾನಗೊಳ್ಳುವಂತಹದ್ದು.

ಮತ್ತೊಂದೆಡೆ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಬೆಂಗಳೂರಿನ ಸಾಧನೆ ಪರಿಗಣಿಸಿ ಈ ಕ್ಷೇತ್ರದ ಹೂಡಿಕೆಗಳು ಬೆಂಗಳೂರಿಗೆ ಭಾರೀ ಪ್ರಮಾಣದಲ್ಲಿ ಬರುವುದರೊಂದಿಗೆ ಬ್ರಾಂಡ್ ಬೆಂಗಳೂರು ಕೂಡ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದೆ.

ಹೂಡಿಕೆದಾರರ ಸಮಾವೇಶಗಳೆಂದರೆ ಅಲ್ಲಿ ಬೆಂಗಳೂರು ನಗರ ಮತ್ತು ಸುತ್ತಮುತ್ತ ಹಾಗೂ ಪ್ರಮುಖ ನಗರಗಳಿಗೆ ಮಾತ್ರ ಸೀಮಿತವಾಗಿರುತ್ತವೆ ಎಂಬ ಭಾವನೆಯನ್ನು ಈ ಬಾರಿಯ ಸಮಾವೇಶ ಖಂಡಿತವಾಗಿಯೂ ದೂರ ಮಾಡಿದೆ. ಬೆಂಗಳೂರಿನ ಆಚೆಗೂ ಅತಿ ಹೆಚ್ಚು ಹೂಡಿಕೆಗಳನ್ನು ಆಕರ್ಷಿಸುವಲ್ಲಿ ಇನ್ವೆಸ್ಟ್ ಕರ್ನಾಟಕ- 2022 ಯಶಸ್ವಿಯಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್



ಬಿಯಾಂಡ್ ಬೆಂಗಳೂರಿಗೆ ಬಲ

ಬೆಂಗಳೂರಿನ ಹೊರಗೆ ಅಂದರೆ ಟೈರ್ 2 ಮತ್ತು 3 ನಗರಗಳಲ್ಲಿ ಅಂದರೆ ಮೈಸೂರು, ಮಂಗಳೂರು, ಹುಬ್ಬಳ್ಳಿ ಧಾರವಾಡ, ಕೊಪ್ಪಳ, ವಿಜಯಪುರ ಹೀಗೆ ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಆ ಭಾಗದಲ್ಲಿರುವ ಮಾನವ ಸಂಪನ್ಮೂಲವನ್ನು ಸ್ಥಳೀಯವಾಗಿ ಬಳಸಿಕೊಂಡು ಆ ಪ್ರದೇಶಗಳ ಆರ್ಥಿಕ ಬೆಳವಣಿಗೆಗೆ ಅವಕಾಶ ಕಲ್ಪಿಸುವ ಮೂಲಕ ರಾಜ್ಯದ ಸುಸ್ಥಿರ ಮತ್ತು ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು ಎಂಬುದು ಸರಕಾರದ ಉದ್ದೇಶ.

ಅದರಲ್ಲೂ ಮುಖ್ಯವಾಗಿ ಗ್ರೀನ್ ಹೈಡ್ರೋಜನ್, ನವೀಕರಿಸಬಹುದಾದ ಇಂಧನ, ಏರೋಸ್ಪೇಸ್ ಮತ್ತು ರಕ್ಷಣೆ ಮುಂತಾದ ವಲಯಗಳಲ್ಲಿ ಆ ಭಾಗದಲ್ಲಿ ಸಾಕಷ್ಟು ಹೂಡಿಕೆ ಮಾಡಲು ಆಸಕ್ತಿ ತೋರಿರುವ ಕೈಗಾರಿಕೋದ್ಯಮಿಗಳು ಈ ಕುರಿತಂತೆ ಸರಕಾರದ ಜತೆ ಒಪ್ಪಂದ ಮಾಡಿಕೊಂಡಿದ್ದಾರೆ.

ಬಿಯಾಂಡ್ ಬೆಂಗಳೂರಿಗಾಗಿ ಸರಕಾರ ಮೊದಲೇ ಸಿದ್ಧತೆ ಮಾಡಿಕೊಂಡಿತ್ತು. ವಿದೇಶಗಳು ಮತ್ತು ದೇಶದ ಪ್ರಮುಖ ನಗರಗಳಲ್ಲಿ ನಡೆದ ರೋಡ್ ಶೋ ವೇಳೆ ಈ ಕುರಿತು ಉದ್ಯಮಿಗಳ ಜತೆ ಮಾತುಕತೆ ನಡೆಸಲಾಗಿತ್ತು. ಅದಕ್ಕೂ ಮೊದಲು ನೂತನ ಕೈಗಾರಿಕಾ ನೀತಿ 2020-25ರಲ್ಲಿ ರಾಜ್ಯದ ಸಮಗ್ರ ಅಭಿವೃದ್ಧಿ ಹಾಗೂ ಬೆಂಗಳೂರಿನಿಂದ ಹೊರಗೆ ಕೈಗಾರಿಕೆಗಳನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಹಿಂದುಳಿದಿರುವ ಕೈಗಾರಿಕಾ ಅಭಿವೃದ್ಧಿಯನುಸಾರ ಬಂಡವಾಳ ಹೂಡಿಕೆಗಳಿಗೆ ರಿಯಾಯಿತಿ ಒದಗಿಸಲು ರಾಜ್ಯದ ಜಿಲ್ಲೆಗಳನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿತ್ತು.

ಬೆಂಗಳೂರು ಕೇಂದ್ರಿತ ಕೈಗಾರಿಕೆಗಳ ಸ್ಥಾಪನೆ ತಪ್ಪಿಸುವ ನಿಟ್ಟಿನಲ್ಲಿ ರೂಪಿಸಿರುವ ಒಂದು ಜಿಲ್ಲೆ ಒಂದು ಉತ್ಪಾದನೆ ಕಾರ್ಯಕ್ರಮದಡಿ ಕೊಪ್ಪಳದಲ್ಲಿಆಟಿಕೆ ಕ್ಲಸ್ಟರ್, ಹುಬ್ಬಳ್ಳಿ ಧಾರವಾಡದಲ್ಲಿ ಎಫ್‌ಎಂಸಿಜಿ ಕ್ಲಸ್ಟರ್, ಯಾದಗಿರಿಯ ಜಿಲ್ಲೆಯಲ್ಲಿ ಫಾರ್ಮಾ ಕ್ಲಸ್ಟರ್, ಕಲಬುರ್ಗಿಯಲ್ಲಿ ಜವಳಿ, ಜ್ಯವೆಲ್ಲರಿ ಪಾರ್ಕ್, ಹುಬ್ಬಳ್ಳಿ-ಧಾರವಾಡದಲ್ಲಿ ಐಟಿ ಪಾರ್ಕ್ ಅಭಿವೃದ್ಧಿಪಡಿಸಲಾಗಿತ್ತು. ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೆ ಸ್ಥಾಪನೆಗೆ, ಅದರಲ್ಲಿಯೂ ಕೃಷಿ ಆಧಾರಿತ ಟೆಕ್‌ಸ್ಟೈಲ್ ಹಾಗೂ ಫುಡ್ ಪ್ರೊಸೆಸ್ಸಿಂಗ್ ಕೈಗಾರಿಕೆಗಳ ಸ್ಥಾಪನೆಗೆ ಆದ್ಯತೆ ನೀಡಸಲಾಗಿತ್ತು. ತುಮಕೂರು ಮಷಿನ್‌ಟೂಲ್ಸ್‌ಪಾರ್ಕ್, ಫುಡ್‌ಪಾರ್ಕ್, ಜಪಾನೀಸ್‌ಕೈಗಾರಿಕಾ ಪ್ರದೇಶ ಹೀಗೆ ಹಲವಾರು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗಿತ್ತು.





‘ಬ್ರ್ಯಾಂಡ್ ನಿರ್ಮಿಸಿ ಯಶಸ್ವಿ ಉದ್ಯಮಿಯಾಗಿ’

ಬೆಂಗಳೂರು: ‘ಯಾವುದೇ ಉತ್ಪನ್ನಕ್ಕೆ ವಿಶಾಲ ಒಳನೋಟ ಹೊಂದಿರುವ ಬ್ರ್ಯಾಂಡ್ ನಿರ್ಮಿಸುವ ಮೂಲಕ ಉದ್ಯಮವನ್ನು ಬೆಳೆಸಲು ಸಾಧ್ಯ’ ಎಂದು ಸ್ಟಾರ್‌ಬಕ್ಸ್ ಸಹ ಸಂಸ್ಥಾಪಕ ಝುಡ್ ಸೀಗಲ್ ಅಭಿಪ್ರಾಯಪಟ್ಟರು.

ಜಾಗತಿಕ ಹೂಡಿಕೆದಾರರ ಸಮಾವೇಶದ ಕೊನೆಯ ದಿನವಾದ ಶುಕ್ರವಾರ ನಡೆದ ‘ಆವಿಷ್ಕಾರ ಕ್ರಾಂತಿಯಲ್ಲಿ ಭಾರತ ಹೇಗೆ ಮುನ್ನಡೆ ಸಾಧಿಸಲಿದೆ’ ಎನ್ನುವ ಗೋಷ್ಠಿಯಲ್ಲಿ ಮಾತನಾಡಿದ ಅವರು ಸ್ಟಾರ್‌ಬಕ್ಸ್ ಸ್ಥಾಪನೆ ಮತ್ತು ಬೆಳವಣಿಗೆ ಕುರಿತು ವಿವರಿಸಿದರು.

'ಸ್ಟಾರ್‌ಬಕ್ಸ್ ಆರಂಭಿಸಿದಾಗ ಕಂಪ್ಯೂಟರ್ ಸಹ ಇರಲಿಲ್ಲ. 1982ರಲ್ಲಿ ಮೊದಲ ಬಾರಿ ಮಾರಾಟ ಮತ್ತು ಮಾರುಕಟ್ಟೆಯ ನಿರ್ದೇಶಕರನ್ನು ನೇಮಿಸಲಾಯಿತು. ನಂತರ, ಲಾಂಛನವನ್ನು ಕಂದು ಬಣ್ಣದಿಂದ ಹಸಿರು ಬಣ್ಣಗೆ ಬದಲಾಯಿಸಲಾಯಿತು. ಈ ರೀತಿಯ ಹಲವು ಬದಲಾವಣೆಗಳನ್ನು ಕಂಪನಿ ನಿರಂತರವಾಗಿ ಕಂಡಿದೆ’ ಎಂದು ತಿಳಿಸಿದರು.

‘ನಾವು ಕೆಲವು ತತ್ವ ಸಿದ್ಧಾಂತಗಳ ಆಧಾರದ ಮೇಲೆ ಉದ್ಯಮ ನಡೆಸುತ್ತಿದ್ದೇವೆ. ಭಾರತದಲ್ಲೇ 300ಕ್ಕೂ ಹೆಚ್ಚು ಹಾಗೂ ಇಡೀ ವಿಶ್ವದಾದ್ಯಂತ 3,200 ಸ್ಟಾರ್‌ಬಕ್ಸ್ ಸ್ಟೋರ್‌ಗಳನ್ನು ಹೊಂದಿದ್ದೇವೆ. ಕಾಫಿಯ ಗುಣಮಟ್ಟದ ವಿಷಯದಲ್ಲಿ ನಾವು ಎಂದಿಗೂ ರಾಜಿಯಾಗಿಲ್ಲ. ಗ್ರಾಹಕರ ದೃಷ್ಟಿಕೋನದಿಂದಲೇ ಯೋಚಿಸುತ್ತೇವೆ. ಅವರ ದೃಷ್ಟಿಕೋನದಿಂದಲೇ ಬ್ರ್ಯಾಂಡ್ ಬಗ್ಗೆ ಗಮನಹರಿಸಬೇಕು. ಕಾಫಿ ಸೇವಿಸುವುದು ಸಹ ಉತ್ತಮ ಅನುಭವ ನೀಡಬೇಕು. ಇಂತಹ ಯೋಚನೆಗಳಿಂದ ಮಾತ್ರ ಮಾರುಕಟ್ಟೆಯಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯ’ ಎಂದು ಅಭಿಪ್ರಾಯಪಟ್ಟರು.



ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಸ್ಟಾರ್‌ಬಕ್ಸ್ ಸಹ ಸಂಸ್ಥಾಪಕ ಝುಡ್ ಸೀಗಲ್ ಮಾತನಾಡಿದರು. ಆಕ್ಸೆಲ್ ಪಾರ್ಟ್ನರ್ಸ್‌ನ ಪ್ರಶಾಂತ್ ಪ್ರಕಾಶ್ ಇದ್ದರು.

‘ಸ್ಟಾರ್‌ಬಕ್ಸ್ ಸೇರಿದಂತೆ ಹಲವು ಕಂಪನಿಗಳಿಗೆ ಭಾರತ ಮೂಲದ ಅಮೆರಿಕನ್ನರು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ (ಸಿಇಒ) ಕಾರ್ಯನಿರ್ವಹಿಸುತ್ತಿದ್ದಾರೆ. ಭಾರತೀಯರಿಗೆ ಬ್ರ್ಯಾಂಡ್ ಬಗ್ಗೆ ತಿಳಿವಳಿಕೆ ನೀಡುವ ಅಗತ್ಯ ಇಲ್ಲ. ಅವರು ಬ್ರ್ಯಾಂಡ್ ನಿರ್ಮಿಸುವಲ್ಲಿ ಯಶಸ್ವಿಯಾಗಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


‘ಕೋವಿಡ್ ಹಲವು ಸಂಕಷ್ಟಗಳನ್ನು ತಂದಿದ್ದು ನಿಜ. ಆದರೆ, ಹಲವು ರೀತಿ ವಿಭಿನ್ನ ವಿಪುಲ ಅವಕಾಶಗಳನ್ನು ಸೃಷ್ಟಿಸಿದೆ. ಕೋವಿಡ್ ಬಳಿಕ ಹೂಡಿಕೆಗೆ ಉತ್ತಮ ವಾತಾವರಣ ಸೃಷ್ಟಿಸಿರುವುದರಿಂದ ಉದ್ಯಮಿಯಾಗಲು ಇದು ಸಕಾಲ’ ಎಂದು ಅಭಿಪ್ರಾಯಪಟ್ಟರು.



ವಸುಂದರಾ ದಾಸ್ ಅವರಿಂದ ವಿನೂತನ ಸಂಗೀತ ಕಾರ್ಯಕ್ರಮ



ಷೇರುಪೇಟೆ ವಹಿವಾಟು ▲ 114



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,053
ಇಂದಿನ ಅಂತ್ಯ	18,117
▲	64
ದಿನದ ಗರಿಷ್ಠ	18,135

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹520

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹305-680
ದ್ವಿತಳಿ (ಬಿ.ವಿ) ₹100-845

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1580)
ಸೋಯಾ (ರಿಫೈನ್ಡ್)	₹1390 (1387)
ಸೂರ್ಯಕಾಂತಿ (ರಿಫೈನ್ಡ್)	₹1660 (1650)
ಪಾಮೋಲಿನ್	₹1030 (1020)

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹2500-3500
ಮಧ್ಯಮ	₹1500-2500
ಸಣ್ಣ	₹500-1500

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹131

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-56000
ಚಿತ್ರದುರ್ಗ	
ಆಪಿ	29000-29400
ಬೆಟ್ಟೆ	45139-36599
ಕೆಂಪುಗೋಟು	36139-36599
ರಾಶಿ	45619-46059
ಹೊಸನಗರ	
ಬಿಳಿಗೋಟು	20819-20819
ಚಾಲಿ	33009-36109
ಕೆಂಪುಗೋಟು	33000-36441
ರಾಶಿ	46099-47299
ಕುಮಟ	
ಚಿಪ್ಪು	25509-33289
ಕೋಕ	19069-30999
ಹೊಸಚಾಲಿ	38609-41599
ಫ್ಯಾಕ್ಟರಿ	11119-20929
ಶಿವಮೊಗ್ಗ	
ಗೊರಬಲು	17000-36069
ಹೊಸತು	45509-46689
ರಾಶಿ	44859-47819
ಸರಕು	56869-80040
ಸಿದ್ದಾಪುರ	
ಬಿಳಿಗೋಟು	29012-33899
ಚಾಲಿ	37339-41599
ಕೋಕ	26099-33899
ಕೆಂಪುಗೋಟು	29019-35119
ರಾಶಿ	44069-43499
ತಟ್ಟಿಬೆಟ್ಟೆ	38609-42369
ಶಿರಸಿ	
ಬೆಟ್ಟೆ	36199-45889
ಬಿಳಿಗೋಟು	16719-36001
ಚಾಲಿ	36109-42866
ರಾಶಿ	42899-47399
ಯಲ್ಲಾಪುರ	
ಬಿಳಿಗೋಟು	26899-33818
ಚಾಲಿ	37819-42369
ಕೋಕ	18899-31899
ಕೆಂಪುಗೋಟು	29199-35919
ರಾಶಿ	47840-53939
ತಟ್ಟಿಬೆಟ್ಟೆ	37399-45340

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14500	14000	14200	182.15 ಸೆಂಟ್ಸ್
ಎಸಿ	7280	8000	7300	
ಆರ್‌ಪಿ	8500	9000	8800	ಲಂಡನ್
ಆರ್‌ಸಿ	4600	3925	4300	1882 ಡಾಲರ್ಸ್

ಮಾರುತಿ: ₹ 7 ಸಾವಿರ ಕೋಟಿ ಬಂಡವಾಳ ಹೂಡಿಕೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಪ್ರಸಕ್ತ ಹಣಕಾಸು ವರ್ಷದಲ್ಲಿ ವಹಿವಾಟು ವಿಸ್ತರಣೆಯ ಭಾಗವಾಗಿ ₹ 7 ಸಾವಿರ ಕೋಟಿಗೂ ಅಧಿಕ ಬಂಡವಾಳ ಹೂಡಿಕೆ ಮಾಡಲು ಯೋಜಿಸಿದೆ ಎಂದು ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಅಜಯ್ ಸೇಠ್ ತಿಳಿಸಿದ್ದಾರೆ.

ಹೊಸ ಮಾದರಿಗಳ ಬಿಡುಗಡೆ ಮತ್ತು ಹರಿಯಾಣದಲ್ಲಿ ಹೊಸ ಘಟಕ ಸ್ಥಾಪನೆಗೆ ಹೂಡಿಕೆಯ ಹೆಚ್ಚಿನ ಪಾಲು ಬಳಸಲಾಗುವುದು ಎಂದು ಅವರು ಹೇಳಿದ್ದಾರೆ.

ಹರಿಯಾಣದ ಖಾರ್ಖೋಡದಲ್ಲಿ ಹೊಸ ಘಟಕ ನಿರ್ಮಾಣ ಕಾರ್ಯವು ಈಗಾಗಲೇ ಆರಂಭ ಆಗಿದೆ. 2025ರ ವೇಳೆಗೆ ಅದು ಕಾರ್ಯಾಚರಣೆಗೆ ಸಿದ್ಧವಾಗಲಿದ್ದು, ಮೊದಲ ಹಂತದಲ್ಲಿ ವಾರ್ಷಿಕ 2.5 ಲಕ್ಷ ವಾಹನಗಳನ್ನು ತಯಾರಿಸಲಾಗುವುದು ಎಂದು ಅಜಯ್ ಅವರು ಮಾಹಿತಿ ನೀಡಿದ್ದಾರೆ.

ಸದ್ಯ ಹರಿಯಾಣದ ಗುರುಗ್ರಾಮ ಮತ್ತು ಮಾನೇಸರ್‌ನ ಒಟ್ಟು ವಾಹನ ತಯಾರಿಕಾ ಸಾಮರ್ಥ್ಯ ವಾರ್ಷಿಕ 15.5 ಲಕ್ಷ ಇದ್ದು, ಮಾತೃಸಂಸ್ಥೆ ಸುಜುಕಿ ಮೋಟರ್ಸ್ ಗುಜರಾತ್‌ನಲ್ಲಿ ಹೊಂದಿರುವ ಘಟಕದ ಸಾಮರ್ಥ್ಯವನ್ನೂ ಪರಿಗಣಿಸಿದರೆ ವಾರ್ಷಿಕ ಸಾಮರ್ಥ್ಯವು 22 ಲಕ್ಷವನ್ನು ದಾಟಲಿದೆ.

ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಇನ್ನಿತರ ನಿರ್ವಹಣಾ ಕೆಲಸಗಳಿಗೂ ಈ ಹೂಡಿಕೆಯನ್ನು ಬಳಸಿಕೊಳ್ಳಲಾಗುವುದು ಎಂದು ಸೇಠ್ ಹೇಳಿದ್ದಾರೆ.

ದೆಹಲಿ: ಪ್ರಾಥಮಿಕ ಶಾಲೆಗಳಿಗೆ ರಜೆ

ತೀವ್ರ ಹದಗೆಟ್ಟ ವಾಯು ಗುಣಮಟ್ಟ: ಏರ್ ಪ್ಯೂರಿಫೈಯರ್‌ಗೆ ಹೆಚ್ಚಿದ ಬೇಡಿಕೆ

ನವದೆಹಲಿ (ಪಿಟಿಐ): ರಾಜಧಾನಿಯ ವಾಯು ಗುಣಮಟ್ಟ ತೀವ್ರ ಹದಗೆಟ್ಟಿರುವ ಕಾರಣ ಇಲ್ಲಿನ ಪ್ರಾಥಮಿಕ ಶಾಲೆಗಳಿಗೆ ಶನಿವಾರದಿಂದ ರಜೆ ನೀಡಿ ದೆಹಲಿ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದೆ. ಮುಂದಿನ ಆದೇಶದ ವರೆಗೂ ಶಾಲೆ ತೆರೆಯುವಂತಿಲ್ಲ ಎಂದೂ ಹೇಳಿದೆ.

'ಪ್ರಾಥಮಿಕ ಶಾಲೆಗಳನ್ನು ಮುಚ್ಚಲಾಗುತ್ತದೆ. ಐದನೇ ತರಗತಿಯ ನಂತರದ ಮಕ್ಕಳ ಹೊರಾಂಗಣ ತರಗತಿಗಳನ್ನು ವಜಾ ಮಾಡಲಾಗುವುದು. ಜೊತೆಗೆ ಹಿರಿಯ ನಾಗರಿಕ ಹೊರಾಂಗಣ ಚಟುವಟಿಕೆಗಳಿಗೆ ನಿಯಂತ್ರಣ ಹೇರಲಾಗುವುದು' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

ತೀವ್ರ ಮಾಲಿನ್ಯ: ಶುಕ್ರವಾರ ಮಧ್ಯಾಹ್ನ 2ರ ವೇಳೆಗೆ ಪ್ರತಿ ಘನ ಮೀಟರ್ ಗಾಳಿಯಲ್ಲಿ 445 ಮಾಲಿನ್ಯಕಾರಕ ಕಣಗಳು ಇದ್ದು, ಮಾಲಿನ್ಯದ ಮಟ್ಟವು 'ತೀವ್ರ'ವಾಗಿತ್ತು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಹೇಳಿದೆ. ಎರಡು ದಿನಗಳಿಂದ ದೆಹಲಿಯಲ್ಲಿ ಇದೇ ಮಟ್ಟದ ಮಾಲಿನ್ಯವಿದೆ.

ಏರ್ ಪ್ಯೂರಿಫೈಯರ್‌ಗೆ ಹೆಚ್ಚಿದ ಬೇಡಿಕೆ: ಒಂದು ಕಾಲದಲ್ಲಿ ಐಷಾರಾಮಿ ಉತ್ಪನ್ನವಾಗಿದ್ದ ಏರ್ ಪ್ಯೂರಿಫೈಯರ್, ಇಂದು ದೆಹಲಿ ಜನರ ಅಗತ್ಯವಾಗಿದೆ. ದೀಪಾವಳಿ ನಂತರದಲ್ಲಿ ಏರ್ ಪ್ಯೂರಿಫೈಯರ್‌ಗೆ ಬೇಡಿಕೆ ಹೆಚ್ಚಾಗಿದೆ ಎಂದು ಕಂಪನಿಗಳು ತಿಳಿಸಿವೆ.

'ಬೇಡಿಕೆ ಹೆಚ್ಚಾಗಿರುವ ಕಾರಣಕ್ಕೆ ಏರ್ ಪ್ಯೂರಿಫೈಯರ್ ಕಂಪನಿಗಳು ತಮ್ಮ ಉತ್ಪನ್ನವನ್ನು ಕಡಿಮೆ ಬೆಲೆಗೆ ಮಾರುತ್ತಿವೆ. ಹಿಂದೆ ₹15 ಸಾವಿರದಿಂದ 20 ಸಾವಿರ ಇದ್ದ ಬೆಲೆ, ಈಗ ₹7 ಸಾವಿರದಿಂದ ₹8 ಸಾವಿರವಾಗಿದೆ. ಆನ್‌ಲೈನ್ ಮೂಲಕವಾಗಿ ಜನರು ಹೆಚ್ಚು ಹೆಚ್ಚು ಖರೀದಿ ಮಾಡುತ್ತಿದ್ದಾರೆ' ಎಂದು ಎಲೆಕ್ಟ್ರಿಕಲ್ ಅಂಗಡಿಯೊಂದ ಮಾಲೀಕ ಮನೀಶ್ ಶೇಟ್ ತಿಳಿಸಿದರು.

ಎನ್‌ಎಚ್‌ಆರ್‌ಸಿ ಸೂಚನೆ: ದೆಹಲಿ ಹಾಗೂ ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ (ಎನ್‌ಸಿಆರ್) ಹದಗೆಟ್ಟಿರುವ ವಾಯು ಗುಣಮಟ್ಟದ ಕುರಿತು ನವೆಂಬರ್ 10ರಂದು ನಡೆಸಲಾಗುವ ಸಭೆಗೆ ಹಾಜರಾಗವಂತೆ ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ಮತ್ತು ದೆಹಲಿಯ ಮುಖ್ಯ ಕಾರ್ಯದರ್ಶಿ ಅವರಿಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸೂಚಿಸಿದೆ.

ವಾಯು ಗುಣಮಟ್ಟವನ್ನು ಸುಧಾರಿಸುವ, ಭತ್ತದ ಹಲ್ಲನ್ನು ಸುಡದಂತೆ ತಡೆಯುವ ಬಗ್ಗೆ ತೆಗೆದುಕೊಂಡು ಕ್ರಮಗಳ ಬಗ್ಗೆ ಈ ನಾಲ್ಕು ರಾಜ್ಯಗಳು ಒಂದು ವಾರದೊಳಗೆ ಮಾಹಿತಿ ನೀಡಬೇಕು ಎಂದು ಆಯೋಗ ಹೇಳಿದೆ.



ಸತತ ಎರಡನೇ ದಿನವಾದ ಶುಕ್ರವಾರವೂ ದೆಹಲಿಯಲ್ಲಿ ವಾಯು ಗುಣಮಟ್ಟವು ಕನಿಷ್ಠ ಮಟ್ಟಕ್ಕೆ ಕುಸಿದಿತ್ತು –ಪಿಟಿಐ ಚಿತ್ರ

'ಕೃಷಿತ್ಯಾಜ್ಯಕ್ಕೆ ಬೆಂಕಿ: ನಾವೇ ಹೊಣೆ'

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಶುಕ್ರವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿದರು. ಪಂಜಾಬ್‌ನಲ್ಲಿ ಕೃಷಿತ್ಯಾಜ್ಯಕ್ಕೆ ಬೆಂಕಿ ಹಾಕುತ್ತಿರುವುದರ ಹೊಣೆಯನ್ನು ಹೊತ್ತುಕೊಳ್ಳುತ್ತೇವೆ. ಮುಂದಿನ ಚಳಿಗಾಲದ ವೇಳೆಗೆ ಕೃಷಿ ತ್ಯಾಜ್ಯಕ್ಕೆ ಬೆಂಕಿ ಹಚ್ಚುವುದನ್ನು ನಿಯಂತ್ರಿಸುತ್ತೇವೆ ಎಂದರು.

'ಇದು ದೆಹಲಿಗೆ ಮಾತ್ರ ಸಂಬಂಧಿಸಿದ ಸಮಸ್ಯೆಯಲ್ಲ. ಇದು ಇಡೀ ಉತ್ತರ ಭಾರತದ ಸಮಸ್ಯೆಯಾಗಿದೆ. ಆದ್ದರಿಂದ ಈ ವಿಷಯವನ್ನು ರಾಜಕೀಯ ಹೋಯ್ದಾಟ ಮಾಡುವುದು ಸರಿಯಲ್ಲ' ಎಂದು ಅರವಿಂದ ಕೇಜ್ರಿವಾಲ್ ಹೇಳಿದರು. 'ಕೃಷಿತ್ಯಾಜ್ಯಗಳಿಗೆ ಬೆಂಕಿ ಇಡುತ್ತಿರುವ ಕುರಿತು ರೈತರನ್ನು ಜವಾಬ್ದಾರರನ್ನಾಗಿ ಮಾಡುವುದು ಸರಿಯಲ್ಲ. ಕೇಂದ್ರ ಸರ್ಕಾರ ಈ ಕುರಿತು ಕ್ರಮ ಕೈಗೊಳ್ಳಬೇಕು' ಎಂದರು.

ಚಿನ್ನ ₹ 604 ಏರಿಕೆ

ನವದೆಹಲಿ (ಪಿಟಿಐ): ಶುಕ್ರವಾರ ಚಿನ್ನದ ದರ ₹ 604ರಷ್ಟು ಹೆಚ್ಚಾಗಿ 10 ಗ್ರಾಂಗೆ ₹ 50,869ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 2,061ರಷ್ಟು ಏರಿಕೆ ಕಂಡು ₹ 59,477ಕ್ಕೆ ತಲುಪಿತು.

ಮುಂಬೈ ಧಾರಣೆ

ಶೇಂಗಾ

4-11-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10100-10200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1590)
ಒಂದು ವಾರದ ಡೆಲಿವರಿ	1575 (1585)
ಸೋಯಾ ಕಚ್ಚಾ	1332 (1320)
ಪಾಮ್ ವಾರದ ಡೆಲಿವರಿ	1028 (1018)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,250 (49,900)
ಬೆಳ್ಳಿ ಕೆ.ಜಿ 58,700 (57,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

ರಿಲಯನ್ಸ್ ಸ್ವತಂತ್ರ ನಿರ್ದೇಶಕ ಕಾಮತ್

ಬೆಂಗಳೂರು: ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಕಂಪನಿಯ ಆಡಳಿತ ಮಂಡಳಿಯು, ಹಿರಿಯ ಬ್ಯಾಂಕರ್ ಕೆ.ವಿ. ಕಾಮತ್ ಅವರನ್ನು ಮಂಡಳಿಯ ಸ್ವತಂತ್ರ ನಿರ್ದೇಶಕರನ್ನಾಗಿ ನೇಮಿಸಲು ಶಿಫಾರಸು ಮಾಡಿದೆ. ಈ ನೇಮಕಕ್ಕೆ ಷೇರುದಾರರ ಸಮ್ಮತಿ ಬೇಕಿದೆ. ಕಾಮತ್ ಅವರು ಕುಂದಾಪುರ ಮೂಲದವರು.

ಕಾಮತ್ ಅವರನ್ನು ಐದು ವರ್ಷಗಳ ಅವಧಿಗೆ ಸ್ವತಂತ್ರ ನಿರ್ದೇಶಕರನ್ನಾಗಿ ನೇಮಿಸಲು ಶುಕ್ರವಾರ ನಡೆದ ಆಡಳಿತ ಮಂಡಳಿ ಸಭೆಯು ಶಿಫಾರಸು ಮಾಡಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಟೈಟನ್ ಲಾಭ ಏರಿಕೆ

ಬೆಂಗಳೂರು (ರಾಯಿಟರ್ಸ್): ಟಾಟಾ ಸಮೂಹದ ಒಡೆತನದಲ್ಲಿರುವ ಟೈಟನ್ ಕಂಪನಿಯ ಸೆಪ್ಟೆಂಬರ್ ತ್ರೈಮಾಸಿಕದ ಲಾಭ ಶೇಕಡ 33.7ರಷ್ಟು ಹೆಚ್ಚಾಗಿದೆ. ಹಬ್ಬಗಳು ಹಾಗೂ ಮದುವೆಯ ಋತುವಿನಲ್ಲಿ ಚಿನ್ನದ ಮಾರಾಟ ಹೆಚ್ಚಾಗಿದ್ದು ಲಾಭ ಹೆಚ್ಚಳಕ್ಕೆ ಕಾರಣ ಎಂದು ಕಂಪನಿ ಹೇಳಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು ₹ 8,308 ಕೋಟಿ ವರಮಾನ ಗಳಿಸಿದೆ. ತೆರಿಗೆ ಪೂರ್ವದ ಲಾಭ ₹ 1,155 ಕೋಟಿ ಆಗಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹ 868 ಕೋಟಿ ಲಾಭ ಗಳಿಸಿತ್ತು.

ಟಿವಿಎಸ್‌ಗೆ ಲಾಭ

ನವದೆಹಲಿ (ಪಿಟಿಐ): ಟಿವಿಎಸ್ ಮೋಟರ್ ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 373 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದಲ್ಲಿ ₹ 234 ಕೋಟಿ ಲಾಭ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇಕಡ 59ರಷ್ಟು ಹೆಚ್ಚಾಗಿದೆ ಎಂದು ಕಂಪನಿಯು ತಿಳಿಸಿದೆ.

ಕಾರ್ಯಾಚರಣಾ ವರಮಾನ ₹6,483 ಕೋಟಿಯಿಂದ ₹ 8,561 ಕೋಟಿಗೆ ಏರಿಕೆ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಮಾರಾಟದಲ್ಲಿ ಆಗಿರುವ ಹೆಚ್ಚಳವೇ ನಿವ್ವಳ ಲಾಭದಲ್ಲಿ ಏರಿಕೆ ಆಗಲು ಕಾರಣ ಎಂದು ಹೇಳಿದೆ.

ಬ್ಯಾಸ್ಕೆಟ್‌ಬಾಲ್: ಬ್ಯಾಂಕ್ ಆಫ್ ಬರೋಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಆಫ್ ಬರೋಡ ತಂಡದವರು ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಲೀಗ್‌ನಲ್ಲಿ ಎರಡೂ ಪಂದ್ಯಗಳಲ್ಲಿ ಗೆಲುವು ಪಡೆದರು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪುರುಷರ ವಿಭಾಗದ ಮೊದಲ ಪಂದ್ಯದಲ್ಲಿ ಬ್ಯಾಂಕ್ ಆಫ್ ಬರೋಡ ತಂಡ 70–71 ರಲ್ಲಿ ಯಂಗ್ ಓರಿಯನ್ಸ್ ವಿರುದ್ಧ ರೋಚಕವಾಗಿ ಗೆದ್ದಿತು. ಎರಡನೇ ಪಂದ್ಯದಲ್ಲಿ 75–67 ರಲ್ಲಿ ಸಿಎಂಪಿ ತಂಡವನ್ನು ಮಣಿಸಿತು. ಹರೀಶ್ ಮತ್ತು ಕಾರ್ತಿಕ್ ಎರಡೂ ಪಂದ್ಯಗಳಲ್ಲಿ ಮಿಂಚಿದರು.

ಯಂಗ್ ಓರಿಯನ್ಸ್ ತನ್ನ ಎರಡನೇ ಪಂದ್ಯದಲ್ಲಿ 79–59 ರಲ್ಲಿ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಮಣಿಸಿತು. ವಿರಾಮದ ವೇಳೆಗೆ ವಿಜಯಿ ತಂಡ 38–29 ರಲ್ಲಿ ಮುನ್ನಡೆಯಲ್ಲಿತ್ತು. ತಲಾ 16 ಪಾಯಿಂಟ್ಸ್ ಗಳಿಸಿದ ಪ್ರತ್ಯಾಂಶು ಮತ್ತು ಸುಮಂತ್ ಅವರು ಓರಿಯನ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಅರ್ಜುನ್ 13 ಪಾಯಿಂಟ್ಸ್ ಗಳಿಸಿದರು.

ಮಂಗಳೂರು ತನ್ನ ಮೊದಲ ಪಂದ್ಯದಲ್ಲಿ 72–56 ರಲ್ಲಿ ಸಿಎಂಪಿ ವಿರುದ್ಧ ಗೆದ್ದಿತು. ಅಶ್ವಿಜ್ (16) ಮತ್ತು ಪ್ರದ್ಯುಮ್ನಾ (14) ಗಮನ ಸೆಳೆದರು.

ಮೌಂಟ್ಸ್ ಕ್ಲಬ್‌ಗೆ ಗೆಲುವು: ಮಹಿಳೆಯರ ವಿಭಾಗದಲ್ಲಿ ಮೌಂಟ್ಸ್ ಕ್ಲಬ್ ತಂಡದವರು ಎರಡೂ ಪಂದ್ಯಗಳನ್ನು ಗೆದ್ದರು. ಬೆಳಿಗ್ಗೆ ನಡೆದ ಪಂದ್ಯದಲ್ಲಿ 56–54 ರಲ್ಲಿ ಎಸ್‌ಡಬ್ಲ್ಯುಆರ್ ತಂಡವನ್ನು ಮಣಿಸಿದರೆ, ಎರಡನೇ ಪಂದ್ಯದಲ್ಲಿ 59–48 ರಲ್ಲಿ ನಿಟ್ಟೆಯ ಕೆ.ಎಸ್.ಹೆಗ್ಡೆ ತಂಡವನ್ನು ಸೋಲಿಸಿತು. ಕೃತಿಕಾ, ಲೋಪಮುದ್ರ ಮತ್ತು ನೀಹಾರಿಕಾ ಅವರು ಉತ್ತಮ ಪ್ರದರ್ಶನ ನೀಡಿದರು.

ಡಿವೈಇಎಸ್ ಮೈಸೂರು ತಂಡ 57–52 ರಲ್ಲಿ ಕೆ.ಎಸ್.ಹೆಗ್ಡೆ ತಂಡವನ್ನು ಮಣಿಸಿತು. ಎಸ್‌ಡಬ್ಲ್ಯುಆರ್ 68–36 ರಲ್ಲಿ ಮೈಸೂರು ವಿರುದ್ಧ ಗೆದ್ದಿತು.



ಯಂಗ್ ಓರಿಯನ್ಸ್ ತಂಡದ ಕರಣ್ ಪಾಯಿಂಟ್ ಗಳಿಸಲು ಪ್ರಯತ್ನಿಸಿದರು ಪ್ರಜಾವಾಣಿ ಚಿತ್ರ/ ವಿ.ಪುಷ್ಕರ್

ಏಷ್ಯನ್ ಎಲೀಟ್ ಬಾಕ್ಸಿಂಗ್ ಚಾಂಪಿಯನ್‌ಷಿಪ್

ಎಂಟರಘಟ್ಟಕ್ಕೆ ಶಿವ ಥಾಪಾ

ನವದೆಹಲಿ (ಪಿಟಿಐ): ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಗೆದ್ದ ಭಾರತದ ಶಿವ ಥಾಪಾ ಅವರು ಏಷ್ಯನ್ ಎಲೀಟ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ತಲುಪಿದರು.

ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ 63.5 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ಶಿವ, ಪ್ರೀಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಶುಕ್ರವಾರ 3–2ರಿಂದ ಮಂಗೋಲಿಯಾದ ಬ್ಯಾಂಬಾತ್ಸೊಗ್ ತುಗುಲ್ದೂರ್ ಅವರನ್ನು ಮಣಿಸಿದರು.



ಶಿವ ಥಾಪಾ– ಪಿಟಿಐ ಚಿತ್ರ

ಐದು ಬಾರಿಯ ಏಷ್ಯನ್ ಚಾಂಪಿಯನ್‌ಷಿಪ್ ಪದಕ ವಿಜೇತ ಶಿವ ಮತ್ತು ಬ್ಯಾಂಬಾತ್ಸೊಗ್ ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿದರು. ಇಬ್ಬರೂ ಪರಸ್ಪರ ಪ್ರಬಲ ಪಂಚ್‌ಗಳನ್ನು ಮಾಡಿದರು. ಅಂತಿಮವಾಗಿ ಭಾರತದ ಬಾಕ್ಸರ್ ತಮ್ಮ ಅನುಭವ ಮತ್ತು ಚುರುಕಿನ ನಡೆಗಳ ಮೂಲಕ ಗೆಲುವು ಒಲಿಸಿಕೊಂಡರು.

ಶಿವ ಅವರು ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ, ಹೈದರ್ ಅಲಾಸಲಿ ಮತ್ತು ಮಿನ್ಸು ಚೊಯಿ ನಡುವಣ ಪಂದ್ಯದ ವಿಜೇತರನ್ನು ಎದುರಿಸುವರು.

ಶನಿವಾರ ನಡೆಯುವ ಮಹಿಳೆಯರ ಕ್ವಾರ್ಟರ್‌ಫೈನಲ್ ಬೌಟ್‌ಗಳಲ್ಲಿ ಟೋಕಿಯೊ ಒಲಿಂಪಿಕ್ಸ್ ಕಂಚು ವಿಜೇತೆ ಲವ್ಲಿನಾ ಬೊರ್ಗೊಹೈನ್ (75 ಕೆಜಿ ವಿಭಾಗ) ಸೇರಿದಂತೆ ಭಾರತದ ಏಳು ಮಂದಿ ಕಣಕ್ಕಿಳಿಯಲಿದ್ದಾರೆ.

ಐಎಸ್‌ಎಲ್ ಟೂರ್ನಿ: ಚೆನ್ನೈಯಿನ್‌ಗೆ ಜಯ

ಕೋಲ್ಕತ್ತ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಚೆನ್ನೈಯಿನ್ ಎಫ್‌ಸಿ ತಂಡವು 1–0ಯಿಂದ ಈಸ್ಟ್ ಬೆಂಗಾಲ್ ತಂಡವನ್ನು ಸೋಲಿಸಿತು.

ಇಲ್ಲಿ ನಡೆದ ಪಂದ್ಯದಲ್ಲಿ ಚೆನ್ನೈ ಪರ 69ನೇ ನಿಮಿಷದಲ್ಲಿ ವಫಾ ಹಕಮನೇಶಿ ಗೋಲು ದಾಖಲಿಸಿದರು.

ಫುಟ್‌ಬಾಲ್: ಎಂಇಜಿಗೆ ಜಯ

ಬೆಂಗಳೂರು: ಎಂಇಜಿ ಆ್ಯಂಡ್ ಸೆಂಟರ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಎಂಇಜಿ 1–0ಯಿಂದ ಕೊಡಗು ಎಫ್‌ಸಿ ವಿರುದ್ಧ ಗೆದ್ದಿತು. ವಿಜೇತ ತಂಡಕ್ಕಾಗಿ ಶೇಕ್ ಮುಜೀಬ್ (15ನೇ ನಿಮಿಷ) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಬಿಎಫ್‌ಸಿ 3–3ರಿಂದ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ಬಿಎಫ್‌ಸಿಗಾಗಿ ಅಮಯ್ ಮೊರ್ಜೊಕರ್ (37ನೇ ನಿ.), ಮೋನಿರುಲ್ ಮೊಲ್ಲಾ (39ನೇ ನಿ.) ಮತ್ತು ದಮಿತ್‌ಫಾಂಗ್ ಲಿಂಗ್ಡೊ (52ನೇ ನಿ.) ಗೋಲು ಹೊಡೆದರು. ಫ್ರೆಂಡ್ಸ್ ಪರ ವಿಜಯ್ ತಂಗವೇಲ್ (45 + 1 ಮತ್ತು 84ನೇ ನಿ.), ವಿನೀತ್ ವೆಂಕಟೇಶ್ (89ನೇ ನಿ. ಪೆನಾಲ್ಟಿ) ಗೋಲು ಹೊಡೆದರು.

ಮತ್ತೊಂದು ಹಣಾಹಣಿಯಲ್ಲಿ ಬೆಂಗಳೂರು ಈಗಲ್ಸ್ ಎಫ್‌ಸಿ- ಕಿಕ್‌ಸ್ಟಾರ್ಟ್ ಎಫ್‌ಸಿ 1–1ರಿಂದ ಡ್ರಾ ಸಾಧಿಸಿದವು.

ಬ್ಯಾಡ್ಮಿಂಟನ್: ಸೆಮಿಗೆ ಗಾಯತ್ರಿ– ತ್ರಿಶಾ

ಸಾರ್‌ಬ್ರೂಕನ್, ಜರ್ಮನಿ(ಪಿಟಿಐ): ಭಾರತದ ತ್ರಿಶಾ–ಜೋಲಿ ಹಾಗೂ ಗಾಯತ್ರಿ ಗೋಪಿಚಂದ್ ಅವರು ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಡಬಲ್ಸ್ ವಿಭಾಗದ ಸೆಮಿಫೈನಲ್ ತಲುಪಿದ್ದಾರೆ.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತದ ಜೋಡಿ 21-17 18-21 21-8ರಿಂದ ಚೀನಾ ತೈಪೆಯ ಸು ಯಾ ಚಿಂಗ್- ಲಿನ್ ವಾನ್ ಚಿಂಗ್ ಎದುರು ಗೆದ್ದರು.



ಗಾಯತ್ರಿ

ಪುರುಷರ ಡಬಲ್ಸ್ ಎಂಟರಘಟ್ಟದ ಪಂದ್ಯದಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿಯು 17-21, 14-21ರಿಂದ ಇಂಗ್ಲೆಂಡ್‌ನ ಬೆನ್ ಲೇನ್- ಸೀನ್ ವೆಂಡಿ ಎದುರು ಸೋತರು.

ಮಹಿಳಾ ಸಿಂಗಲ್ಸ್‌ನಲ್ಲಿ ಮಾಳವಿಕಾ ಬನ್ಸೋದ್ ಅವರೂ 17-21, 10-21ರಿಂದ ಇಂಡೊನೇಷ್ಯಾದ ಗ್ರೆಗರಿಯಾ ಮರಿಸ್ಕಾ ತಜುಂಗ್ ವಿರುದ್ಧ ಎಡವಿದರು.

ವಯಾಕಾಮ್ 18ರಲ್ಲಿ ದಕ್ಷಿಣ ಆಫ್ರಿಕಾ ಟಿ20 ಲೀಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಟಿ20 ಕ್ರಿಕೆಟ್ ಲೀಗ್ ಟೂರ್ನಿಯನ್ನು ನೇರ ಪ್ರಸಾರ ಮಾಡಲು 10 ವರ್ಷಗಳ ಒಪ್ಪಂದಕ್ಕೆ ವಯಾಕಾಮ್ 18 ಸಹಿ ಹಾಕಿದೆ.

ಆರು ತಂಡಗಳನ್ನು ಒಳಗೊಂಡ ಲೀಗ್ 2023ರ ಜನವರಿ 10ರಂದು ಆರಂಭವಾಗಲಿದೆ. ವಯಾಕಾಮ್ 18 ಭಾರತದಲ್ಲಿ ಪಂದ್ಯಗಳ ಪ್ರಸಾರ ಹಕ್ಕು ಪಡೆದುಕೊಂಡಿದೆ.

ನಾಯಕ ಕೇನ್ ವಿಲಿಯಮ್ಸನ್ ಮಿಂಚು: ಐರ್ಲೆಂಡ್ ವಿರುದ್ಧ 35 ರನ್‌ಗಳ ಗೆಲುವು

ಸೆಮಿಫೈನಲ್‌ಗೆ ಲಗ್ಗೆಯಿಟ್ಟ ಕಿವೀಸ್

ಅಡಿಲೇಡ್ (ಪಿಟಿಐ): ನ್ಯೂಜಿಲೆಂಡ್ ತಂಡ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸ್ಥಾನ ಪಡೆದ ಮೊದಲ ತಂಡ ಎನಿಸಿಕೊಂಡಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಕೇನ್ ವಿಲಿಯಮ್ಸನ್ ಬಳಗ 35 ರನ್‌ಗಳಿಂದ ಐರ್ಲೆಂಡ್ ತಂಡವನ್ನು ಮಣಿಸಿತು. ಈ ಮೂಲಕ ಐದು ಪಂದ್ಯಗಳಿಂದ ಏಳು ಪಾಯಿಂಟ್ಸ್ ಗಳಿಸಿ ತನ್ನ ಲೀಗ್ ವ್ಯವಹಾರ ಕೊನೆಗೊಳಿಸಿತು. ಆಸ್ಟ್ರೇಲಿಯಾ ಕೂಡಾ ಏಳು ಪಾಯಿಂಟ್ಸ್ ಹೊಂದಿದೆ.

ಆದರೆ ಉತ್ತಮ ರನ್‌ರೇಟ್ ಹೊಂದಿರುವುದರಿಂದ ನ್ಯೂಜಿಲೆಂಡ್ ತಂಡ 'ಗುಂಪು 1' ರಲ್ಲಿ ಅಗ್ರಸ್ಥಾನ ಪಡೆದು ನಾಲ್ಕರಘಟ್ಟ ಪ್ರವೇಶಿಸಿತು.

ವಿಲಿಯಮ್ಸನ್ ಮಿಂಚು: ಅಡಿಲೇಡ್ ಓವಲ್‌ನಲ್ಲಿ ಶುಕ್ರವಾರ ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್, ವಿಲಿಯಮ್ಸನ್ (61 ರನ್, 35 ಎ., 4X5, 6X3) ಅವರ ಬಿರುಸಿನ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 185 ರನ್ ಪೇರಿಸಿತು.

ದಿಟ್ಟ ಹೋರಾಟ ನಡೆಸಿದರೂ ಐರ್ಲೆಂಡ್ ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗೆ 150 ರನ್ ಮಾತ್ರ ಗಳಿಸಿತು.

ಗೆಲುವು ಅನಿವಾರ್ಯವಾಗಿದ್ದ ಪಂದ್ಯದಲ್ಲಿ ಫಿನ್ ಅಲೆನ್ (32 ರನ್, 18 ಎ.) ಮತ್ತು ಡೆವೊನ್ ಕಾನ್ವೆ (28) ಮೊದಲ ವಿಕೆಟ್‌ಗೆ 52 ರನ್ ಸೇರಿಸಿ ನ್ಯೂಜಿಲೆಂಡ್‌ಗೆ ಉತ್ತಮ ಆರಂಭ ಒದಗಿಸಿಕೊಟ್ಟರು.

ಭದ್ರ ಬುನಾದಿಯ ಮೇಲೆ ವಿಲಿಯಮ್ಸನ್ ಇನಿಂಗ್ಸ್ ಬೆಳೆಸಿದರು. ಡೆರಿಲ್ ಮಿಚೆಲ್ (ಔಟಾಗದೆ 31, 21 ಎ.) ಜತೆ ನಾಲ್ಕನೇ ವಿಕೆಟ್‌ಗೆ 60 ರನ್ ಕಲೆಹಾಕಿದ್ದರಿಂದ ತಂಡ ಸವಾಲಿನ ಮೊತ್ತ ಪೇರಿಸಿತು. ಈ ಹಿಂದಿನ ಪಂದ್ಯಗಳಲ್ಲಿ ಪರದಾಡಿದ್ದ ವಿಲಿಯಮ್ಸನ್ ಸೂಕ್ತ ಸಮಯದಲ್ಲಿ ಫಾರ್ಮ್ ಕಂಡುಕೊಂಡರು.

ಉತ್ತಮ ಆರಂಭ: ಐರ್ಲೆಂಡ್ ತಂಡದ ಪಾಲ್ ಸ್ಟರ್ಲಿಂಗ್ (37 ರನ್, 27ಎ.) ಮತ್ತು ಆ್ಯಂಡಿ ಬಲ್ಬಿರ್ನಿ (30 ರನ್, 25 ಎ.) ಮೊದಲ ವಿಕೆಟ್‌ಗೆ 68 ರನ್ ಸೇರಿಸಿ ನ್ಯೂಜಿಲೆಂಡ್ ಆಟಗಾರರಲ್ಲಿ ಆತಂಕ ಮೂಡಿಸಿದ್ದರು.

ಬಲ್ಬಿರ್ನಿ ಅವರನ್ನು ಬೌಲ್ಡ್ ಮಾಡಿದ ಮಿಚೆಲ್ ಸ್ಯಾಂಟ್ನರ್ ಈ ಜತೆಯಾಟ ಮುರಿದ ಬಳಿಕ ನ್ಯೂಜಿಲೆಂಡ್ ಬೌಲರ್‌ಗಳು ಹಿಡಿತ ಸಾಧಿಸಿದರು. 22 ರನ್‌ಗಳಿಗೆ ಮೂರು ವಿಕೆಟ್ ಪಡೆದ ಲಾಕಿ ಫರ್ಗ್ಯುಸನ್ ಮಧ್ಯಮ ಕ್ರಮಾಂಕಕ್ಕೆ ಪೆಟ್ಟು ಕೊಟ್ಟರು. 5 ಪಂದ್ಯಗಳಿಂದ 3 ಪಾಯಿಂಟ್ಸ್‌ಗಳೊಂದಿಗೆ ಐರ್ಲೆಂಡ್ ತನ್ನ ಅಭಿಯಾನ ಕೊನೆಗೊಳಿಸಿತು.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 185 (ಫಿನ್ ಅಲೆನ್ 32, ಡೆವೊನ್ ಕಾನ್ವೆ 28, ಕೇನ್ ವಿಲಿಯಮ್ಸನ್ 61, ಗ್ಲೆನ್ ಫಿಲಿಪ್ಸ್ 17, ಡೆರಿಲ್ ಮಿಚೆಲ್ ಔಟಾಗದೆ 31, ಜೋಶ್ ಲಿಟ್ಲ್ 22ಕ್ಕೆ 3, ಗರೆತ್ ಡೆಲಾನಿ 30ಕ್ಕೆ 2, ಮಾರ್ಕ್ ಅಡೇರ್ 39ಕ್ಕೆ 1)

ಐರ್ಲೆಂಡ್ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 150 (ಪಾಲ್ ಸ್ಟರ್ಲಿಂಗ್ 37, ಆ್ಯಂಡಿ ಬಲ್ಬಿರ್ನಿ 30, ಲೋರ್ಕನ್ ಟಕರ್ 13, ಗರೆತ್ ಡೆಲಾನಿ 10, ಜಾರ್ಜ್ ಡಾಕ್ರೆಲ್ 23, ಟಿಮ್ ಸೌಥಿ 29ಕ್ಕೆ 2, ಲಾಕಿ ಫರ್ಗ್ಯುಸನ್ 22ಕ್ಕೆ 3, ಮಿಚೆಲ್ ಸ್ಯಾಂಟ್ನರ್ 26ಕ್ಕೆ 2, ಈಶ್ ಸೋಧಿ 31ಕ್ಕೆ 2) ಫಲಿತಾಂಶ: ನ್ಯೂಜಿಲೆಂಡ್‌ಗೆ 35 ರನ್ ಗೆಲುವು


ನ್ಯೂಜಿಲೆಂಡ್ ತಂಡದ ಕೇನ್ ವಿಲಿಯಮ್ಸನ್ ಬ್ಯಾಟಿಂಗ್ ವೈಖರಿ –ಎಪಿ ಚಿತ್ರ

ಜೋಶ್ ಲಿಟ್ಲ್ ಹ್ಯಾಟ್ರಿಕ್

ಐರ್ಲೆಂಡ್‌ನ ಜೋಶ್ ಲಿಟ್ಲ್ ಹ್ಯಾಟ್ರಿಕ್ ಸಾಧನೆ ಮಾಡಿದರು. 19ನೇ ಓವರ್ ಬೌಲ್ ಮಾಡಿದ ಅವರು ಸತತ ಮೂರು ಎಸೆತಗಳಲ್ಲಿ ವಿಲಿಯಮ್ಸನ್, ಜೇಮ್ಸ್ ನೀಶಮ್ ಮತ್ತು ಮಿಚೆಲ್ ಸ್ಯಾಂಟ್ನರ್ ವಿಕೆಟ್ ಪಡೆದರು.

ಈ ವಿಶ್ವಕಪ್‌ನ ಎರಡನೇ ಹ್ಯಾಟ್ರಿಕ್ ಇದು. ಯುಎಇಯ ಕಾರ್ತಿಕ್ ಮೇಯಪ್ಪನ್ ಅವರು ಶ್ರೀಲಂಕಾ ವಿರುದ್ಧ ಹ್ಯಾಟ್ರಿಕ್ ಸಾಧನೆ ಮಾಡಿದ್ದರು.

ಮುಖ್ಯಾಂಶಗಳು

- 35 ಎಸೆತಗಳಲ್ಲಿ 61 ರನ್ ಗಳಿಸಿದ ವಿಲಿಯಮ್ಸನ್
- ಫರ್ಗ್ಯುಸನ್, ಸಾಂಟ್ನೆರ್ ಪ್ರಭಾವಿ ಬೌಲಿಂಗ್
- ನ್ಯೂಜಿಲೆಂಡ್‌ಗೆ 'ಗುಂಪು 1' ರಲ್ಲಿ ಅಗ್ರಸ್ಥಾನ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್ಸ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	5	3	1	1	7	2.113
ಆಸ್ಟ್ರೇಲಿಯಾ	5	3	1	1	7	-0.173
ಇಂಗ್ಲೆಂಡ್	4	2	1	1	5	0.547
ಶ್ರೀಲಂಕಾ	4	2	2	0	4	-0.457
ಐರ್ಲೆಂಡ್	5	1	3	1	3	-1.615
ಅಫ್ಘಾನಿಸ್ತಾನ	5	0	3	2	2	-0.571
ಗುಂಪು 2						
ಭಾರತ	4	3	1	0	6	0.730
ದಕ್ಷಿಣ ಆಫ್ರಿಕಾ	4	2	1	1	5	1.441
ಪಾಕಿಸ್ತಾನ	4	2	2	0	4	1.117
ಬಾಂಗ್ಲಾದೇಶ	4	2	2	0	4	-1.276
ಜಿಂಬಾಬ್ವೆ	4	1	2	1	3	-0.313
ನೆದರ್ಲೆಂಡ್ಸ್	4	1	3	0	2	-1.233

ಶ್ರೀಲಂಕಾ ಎದುರು ಇಂಗ್ಲೆಂಡ್ ತಂಡಕ್ಕೆ ಜಯ ಅನಿವಾರ್ಯ

ಸಿಡ್ನಿ (ರಾಯಿಟರ್ಸ್): ಇಂಗ್ಲೆಂಡ್ ತಂಡ ಟಿ20 ವಿಶ್ವಕಪ್ ಟೂರ್ನಿಯ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಶನಿವಾರ ಶ್ರೀಲಂಕಾ ತಂಡವನ್ನು ಎದುರಿಸಲಿದೆ. ಸೆಮಿಫೈನಲ್‌ನಲ್ಲಿ ಸ್ಥಾನ ಪಡೆಯಲು ಜೋಸ್ ಬಟ್ಲರ್ ಬಳಗಕ್ಕೆ ಗೆಲುವು ಅನಿವಾರ್ಯ.

ಇಂಗ್ಲೆಂಡ್ ತಂಡ ಐದು ಪಾಯಿಂಟ್ಸ್‌ಗಳೊಂದಿಗೆ 'ಗುಂಪು 1' ರಲ್ಲಿ ಮೂರನೇ ಸ್ಥಾನದಲ್ಲಿದೆ. ಗುಂಪಿನಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ನಾಲ್ಕರಘಟ್ಟ ಪ್ರವೇಶಿಸಲಿವೆ.

ಅಗ್ರಸ್ಥಾನ ಪಡೆದಿರುವ ನ್ಯೂಜಿಲೆಂಡ್ ಈಗಾಗಲೇ ಸೆಮಿಗೆ ಅರ್ಹತೆ ಗಳಿಸಿದೆ. ಆಸ್ಟ್ರೇಲಿಯಾ ಬಳಿ ಏಳು ಪಾಯಿಂಟ್ಸ್ ಇದೆ. ಶನಿವಾರ ಇಂಗ್ಲೆಂಡ್ ಗೆದ್ದರೆ ಪಾಯಿಂಟ್ಸ್ ಏಳು ಆಗಲಿದೆ. ಬಟ್ಲರ್ ಬಳಗವು ಆಸ್ಟ್ರೇಲಿಯಾಕ್ಕಿಂತ ಉತ್ತಮ ರನ್‌ರೇಟ್ ಹೊಂದಿರುವುದರಿಂದ ನಾಲ್ಕರಘಟ್ಟ ಪ್ರವೇಶಿಸಲಿದೆ.

ಶ್ರೀಲಂಕಾ ಜಯಿಸಿದರೆ ಇಂಗ್ಲೆಂಡ್‌ನ ಸೆಮಿ ಕನಸು ನುಚ್ಚು-ನೂರಾಗಲಿದೆ. ಆಸ್ಟ್ರೇಲಿಯಾ ತಂಡ ಅದೃಷ್ಟದ ಬಲದೊಂದಿಗೆ ನಾಲ್ಕರಘಟ್ಟಕ್ಕೆ ಅರ್ಹತೆ ಗಿಟ್ಟಿಸಿಕೊಳ್ಳಲಿದೆ.

ಪಂದ್ಯ ರದ್ದುಗೊಂಡರೆ?: ಶನಿವಾರದ ಪಂದ್ಯ ಮಳೆಯಿಂದ ರದ್ದುಗೊಂಡರೆ ಎರಡೂ ತಂಡಗಳು ತಲಾ ಒಂದು ಪಾಯಿಂಟ್ಸ್ ಗಳಿಸಲಿವೆ. ಹಾಗಾದಲ್ಲಿ ಇಂಗ್ಲೆಂಡ್‌ಗೆ ಆರು, ಶ್ರೀಲಂಕಾಕ್ಕೆ ಐದು ಪಾಯಿಂಟ್ಸ್ ಆಗಲಿವೆ. ಏಳು ಪಾಯಿಂಟ್ಸ್ ಹೊಂದಿರುವ ಆಸ್ಟ್ರೇಲಿಯಾ ಎರಡನೇ ತಂಡವಾಗಿ ಸೆಮಿ ಪ್ರವೇಶಿಸಲಿದೆ. ಹವಾಮಾನ ಇಲಾಖೆಯ ವರದಿ ಪ್ರಕಾರ ಸಿಡ್ನಿಯಲ್ಲಿ ಶನಿವಾರ ಮಳೆಯಾಗುವ ಸಾಧ್ಯತೆ ತೀರಾ ಕಡಿಮೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಹೈಕೋರ್ಟ್ ಮೊರೆ ಹೋದ ಧೋನಿ

ಚೆನ್ನೈ (ಪಿಟಿಐ): ಕ್ರಿಕೆಟ್‌ನಲ್ಲಿ ನಡೆದಿರುವ ಮೋಸದಾಟದ ವಿಷಯಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಮತ್ತು ಕೆಲವು ಹಿರಿಯ ವಕೀಲರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಕ್ಕಾಗಿ ಐಪಿಎಸ್ ಅಧಿಕಾರಿ ಜಿ.ಸಂಪತ್ ಕುಮಾರ್ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮ ತೆಗೆದುಕೊಳ್ಳಲು ಮತ್ತು ಸಮನ್ಸ್ ಜಾರಿ ಮಾಡುವಂತೆ ಕೋರಿ ಕ್ರಿಕೆಟಿಗ ಮಹೇಂದ್ರಸಿಂಗ್ ಧೋನಿ, ಮದ್ರಾಸ್ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಮ್ಯಾಚ್ ಫಿಕ್ಸಿಂಗ್ ಮತ್ತು ಸ್ಪಾಟ್ ಫಿಕ್ಸಿಂಗ್‌ನಲ್ಲಿ ತಮ್ಮ ಹೆಸರನ್ನು ತಳಕುಹಾಕಿ ಯಾವುದೇ ಹೇಳಿಕೆ ನೀಡದಂತೆ ಆಗಿನ ಐಜಿಪಿಯಾಗಿದ್ದ ಸಂಪತ್‌ಕುಮಾರ್ ಅವರನ್ನು ನಿರ್ಬಂಧಿಸಬೇಕು ಎಂದು ಕೋರಿ ಧೋನಿ-2014ರಲ್ಲಿ ಸಿವಿಲ್ ಮೊಕದ್ದಮೆ ಹೂಡಿದ್ದರು. 2014ರ ಮಾರ್ಚ್ 18ರಂದು ಮಧ್ಯಂತರ ಆದೇಶ ನೀಡಿದ್ದ ನ್ಯಾಯಾಲಯ, ಧೋನಿ ಬಗ್ಗೆ ಯಾವುದೇ ಹೇಳಿಕೆ ನೀಡದಂತೆ ಸಂಪತ್‌ಕುಮಾರ್ ಅವರನ್ನು ನಿರ್ಬಂಧಿಸಿತ್ತು.

'ಭಾರತ ವಿರುದ್ಧ ಗೆದ್ದರೆ ಜಿಂಬಾಬ್ವೆ ಯುವಕನ ಜೊತೆ ಮದುವೆ'


ಸೆಹರ್ ಶಿನ್ವರಿ

ಕರಾಚಿ: ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಿಂಬಾಬ್ವೆ ತಂಡ ಭಾರತದ ವಿರುದ್ಧ ಗೆದ್ದರೆ, ಆ ದೇಶದ ಯುವಕನನ್ನು ಮದುವೆಯಾಗುತ್ತೇನೆ ಎಂದು ಪಾಕಿಸ್ತಾನದ ನಟಿ ಸೆಹರ್ ಶಿನ್ವರಿ ಹೇಳಿದ್ದಾರೆ. ವಿಶ್ವಕಪ್ ಟೂರ್ನಿಯ 'ಗುಂಪು 2' ರ ಪಂದ್ಯದಲ್ಲಿ ಭಾನುವಾರ ಮೆಲ್ಬರ್ನ್‌ನಲ್ಲಿ ಭಾರತ–ಜಿಂಬಾಬ್ವೆ ಎದುರಾಗಲಿದೆ. ಪಾಕ್ ಸೆಮಿ ಪ್ರವೇಶಿ ಸುವ ಸಾಧ್ಯತೆಗೆ ಜಿಂಬಾಬ್ವೆ ಜಯ ಅಗತ್ಯ.

'ಮುಂದಿನ ಪಂದ್ಯದಲ್ಲಿ ಜಿಂಬಾಬ್ವೆ, ಭಾರತದ ವಿರುದ್ಧ ಗೆದ್ದರೆ ಜಿಂಬಾಬ್ವೆ ಯುವಕನನ್ನು ಮದುವೆಯಾಗುತ್ತೇನೆ' ಎಂದು ಸೆಹರ್ ಟ್ವೀಟ್ ಮಾಡಿದ್ದಾರೆ.

ನಾಯಕತ್ವ ತ್ಯಜಿಸಿದ ಮೊಹಮ್ಮದ್ ನಬಿ

ಅಡಿಲೇಡ್ (ಪಿಟಿಐ): ಮೊಹಮ್ಮದ್ ನಬಿ ಅಫ್ಘಾನಿಸ್ತಾನ ಟಿ20 ಕ್ರಿಕೆಟ್ ತಂಡದ ನಾಯಕತ್ವ ತ್ಯಜಿಸಿದ್ದಾರೆ. ಆಸ್ಟ್ರೇಲಿಯಾ ಎದುರಿನ ಪಂದ್ಯದ ಬೆನ್ನಲ್ಲೇ ಅವರ ನಿರ್ಧಾರ ಹೊರಬಿದ್ದಿದೆ.

'ವಿಶ್ವಕಪ್‌ಗೆ ನಮಗೆ ಸರಿಯಾಗಿ ಸಿದ್ಧತೆ ನಡೆಸಲು ಆಗಿಲ್ಲ. ಕಳೆದ ಕೆಲ ಸರಣಿಗಳಲ್ಲಿ ತಂಡದ ಮ್ಯಾನೇಜರ್, ಆಯ್ಕೆ ಸಮಿತಿ ಮತ್ತು ನಾಯಕನ ನಡುವೆ ಕೆಲವೊಂದು ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಮೂಡಿತ್ತು. ಇದು ತಂಡದ ಸಮತೋಲನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಆದ್ದರಿಂದ ತಕ್ಷಣದಿಂದಲೇ ನಾಯಕತ್ವದಿಂದ ಕೆಳಗಿಳಿಯುತ್ತಿದ್ದೇನೆ. ತಂಡದ ಆಡಳಿತ ಬಯ ಸುವುದಾದರೆ ಆಟಗಾರನಾಗಿ ಮುಂದುವರಿಯಲು ಸಿದ್ಧನಿದ್ದೇನೆ' ' ಎಂದು ಟ್ವಿಟರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆಸ್ಟ್ರೇಲಿಯಾ ಸೆಮಿ ಆಸೆ ಜೀವಂತ

ಗ್ಲೆನ್ ಮ್ಯಾಕ್ಸ್‌ವೆಲ್ ಅರ್ಧಶತಕ; ಹೋರಾಡಿ ಸೋತ ಅಫ್ಘಾನಿಸ್ತಾನ ತಂಡ

ಅಡಿಲೇಡ್ (ಪಿಟಿಐ): ರಶೀದ್ ಖಾನ್ ಕೊನೆಯಲ್ಲಿ ಅಬ್ಬರದ ಆಟವಾಡಿದರೂ ಒತ್ತಡವನ್ನು ಮೆಟ್ಟಿನಿಂತ ಆಸ್ಟ್ರೇಲಿಯಾ ತಂಡ ಅಫ್ಘಾನಿಸ್ತಾನ ವಿರುದ್ಧ 4 ರನ್ ಜಯ ಪಡೆದು ಸೆಮಿಫೈನಲ್ ಪ್ರವೇಶದ ಸಾಧ್ಯತೆಯನ್ನು ಜೀವಂತವಾಗಿರಿಸಿಕೊಂಡಿತು.

ಅಡಿಲೇಡ್ ಓವಲ್‌ನಲ್ಲಿ ಶುಕ್ರವಾರ ನಡೆದ ಟಿ20 ವಿಶ್ವಕಪ್ ಟೂರ್ನಿಯ ತಮ್ಮ ಕೊನೆಯ ಲೀಗ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 168 ರನ್ ಗಳಿಸಿತು. ಮೊಹಮ್ಮದ್ ನಬಿ ಬಳಗ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 164 ರನ್ ಪೇರಿಸಿತು.

ಈ ಪಂದ್ಯದಲ್ಲಿ ಗೆದ್ದರೂ ಆತಿಥೇಯರಿಗೆ ನಾಲ್ಕರಘಟ್ಟದಲ್ಲಿ ಸ್ಥಾನ ಖಚಿತ ಆಗಿಲ್ಲ. ಶನಿವಾರ ನಡೆಯಲಿರುವ ಇಂಗ್ಲೆಂಡ್– ಶ್ರೀಲಂಕಾ ಪಂದ್ಯದ ಫಲಿತಾಂಶವನ್ನು ಅವಲಂಬಿಸಬೇಕಾಗಿದೆ. ಲಂಕಾ ಗೆದ್ದರೆ ಮಾತ್ರ ಆಸ್ಟ್ರೇಲಿಯಾ ಸೆಮಿ ಪ್ರವೇಶಿಸಲಿದೆ.

ರನ್‌ರೇಟ್‌ನಲ್ಲಿ ಇಂಗ್ಲೆಂಡ್‌ಅನ್ನು ಹಿಂದಿಕ್ಕಲು, ಆಸ್ಟ್ರೇಲಿಯಾ ತಂಡ ಈ ಪಂದ್ಯದಲ್ಲಿ ನಬಿ ಬಳಗವನ್ನು 106 ರನ್‌ಗಳ ಒಳಗೆ ನಿಯಂತ್ರಿಸಬೇಕಿತ್ತು. ಆದರೆ ಅದು ಸಾಧ್ಯವಾಗಲಿಲ್ಲ.


ಗ್ಲೆನ್ ಮ್ಯಾಕ್ಸ್‌ವೆಲ್ ಬ್ಯಾಟಿಂಗ್ – ಎಪಿ ಚಿತ್ರ

ಸವಾಲಿನ ಗುರಿ ಬೆನ್ನಟ್ಟಿದ ಅಫ್ಗನ್ ತಂಡ 2 ವಿಕೆಟ್‌ಗೆ 99 ರನ್ ಗಳಿಸಿ ಅಚ್ಚರಿಯ ಫಲಿತಾಂಶದ ಸೂಚನೆ ನೀಡಿತ್ತು. ಅಗ್ರ ಕ್ರಮಾಂಕದಲ್ಲಿ ರಹ್ಮಾನುಲ್ಲಾ ಗುರ್ಬಾಜ್ (30 ರನ್, 17 ಎ.), ಇಬ್ರಾಹಿಂ ಜದ್ರಾನ್ (26) ಮತ್ತು ಗುಲ್ಬದಿನ್ ನೈಬ್ (39 ರನ್, 23 ಎ.) ಉತ್ತಮ ಕೊಡುಗೆ ನೀಡಿದರು.ಆದರೆ ನಾಲ್ಕು ರನ್ ಗಳಿಸುವಷ್ಟರಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ಹಿನ್ನಡೆ ಅನುಭವಿಸಿತು. ರಶೀದ್ ಖಾನ್ (ಔಟಾಗದೆ 48, 23 ಎ.) ಕೊನೆಯ ಓವರ್‌ಗಳಲ್ಲಿ ಆತಿಥೇಯರ ಮೇಲೆ ಸುಂಟರಗಾಳಿಯಂತೆ ಎರಗಿದರೂ ಗೆಲುವು ದಕ್ಕಲಿಲ್ಲ.

ಇದಕ್ಕೂ ಮುನ್ನ ಆಸ್ಟ್ರೇಲಿಯಾ ತಂಡಕ್ಕೆ ಗ್ಲೆನ್ ಮ್ಯಾಕ್ಸ್‌ವೆಲ್ (ಔಟಾಗದೆ 54, 32 ಎ., 4X6, 6X2) ಆಸರೆಯಾದರು. ಅಗ್ರ ಕ್ರಮಾಂಕದಲ್ಲಿ ಮಿಚೆಲ್ ಮಾರ್ಷ್ (45 ರನ್, 30 ಎ.) ಮಿಂಚಿದರು.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 168 (ಡೇವಿಡ್ ವಾರ್ನರ್ 25, ಮಿಷೆಲ್ ಮಾರ್ಷ್ 45, ಮಾರ್ಕಸ್ ಸ್ಟೊಯಿನಿಸ್ 25, ಗ್ಲೆನ್ ಮ್ಯಾಕ್ಸ್‌ವೆಲ್ ಔಟಾಗದೆ 54, ಫಜಲ್‌ಹಕ್ ಫರೂಕಿ 29ಕ್ಕೆ 2, ನವೀನ್ ಉಲ್ ಹಕ್ 21ಕ್ಕೆ 3, ರಶೀದ್ ಖಾನ್ 29ಕ್ಕೆ 1) ಅಫ್ಘಾನಿಸ್ತಾನ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 164 (ರಹ್ಮಾನುಲ್ಲಾ ಗುರ್ಬಾಜ್ 30, ಇಬ್ರಾಹಿಂ ಜದ್ರಾನ್ 26, ಗುಲ್ಬದಿನ್ ನೈಬ್ 39, ರಶೀದ್ ಖಾನ್ ಔಟಾಗದೆ 48, ಜೋಶ್ ಹ್ಯಾಜಲ್‌ವುಡ್ 33ಕ್ಕೆ 2, ಆ್ಯಡಮ್ ಜಂಪಾ 22ಕ್ಕೆ 2) ಫಲಿತಾಂಶ: ಆಸ್ಟ್ರೇಲಿಯಾಕ್ಕೆ 4 ರನ್ ಜಯ


ರಿಷಭ್ ಶೆಟ್ಟಿ ಮತ್ತು ಡಿವಿಲಿಯರ್ಸ್

ಡಿವಿಲಿಯರ್ಸ್–ರಿಷಭ್ ಶೆಟ್ಟಿ ಭೇಟಿ

ಬೆಂಗಳೂರು: ಕಾಂತಾರ ಚಿತ್ರದ ನಿರ್ದೇಶಕ ಮತ್ತು ನಟ ರಿಷಭ್ ಶೆಟ್ಟಿ ಅವರು ಕ್ರಿಕೆಟಿಗ ಎಬಿ ಡಿವಿಲಿಯರ್ಸ್ ಅವರನ್ನು ಭೇಟಿಯಾಗಿದ್ದಾರೆ.

'360 ಡಿಗ್ರಿ' ಬ್ಯಾಟರ್ ಖ್ಯಾತಿಯ, ದಕ್ಷಿಣ ಆಫ್ರಿಕಾ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮಾಜಿ ಆಟಗಾರ ಎಬಿ ಡಿವಿಲಿಯರ್ಸ್ ಅವರನ್ನು ಭೇಟಿಯಾದ ಸಂಭ್ರಮ ಹಂಚಿಕೊಂಡಿರುವ ರಿಷಭ್, 'ರಿಯಲ್ 360 ಸೂಪರ್‌ಹೀರೊ ಅವರನ್ನು ಭೇಟಿಯಾದೆ. ಅವರು ನಮ್ಮ ಬೆಂಗಳೂರಿಗೆ ಮರಳಿ ಬಂದಿದ್ದಾರೆ' ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ವಿಡಿಯೊ ಹಂಚಿಕೊಂಡಿದ್ದಾರೆ.

ಕಳೆದ ವರ್ಷದ ನವೆಂಬರ್‌ನಲ್ಲಿ ಎಬಿ ಡಿವಿಲಿಯರ್ಸ್ ಎಲ್ಲ ಮಾದರಿಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು.

ಏಷ್ಯನ್ ಸ್ಕ್ವಾಷ್: ಪುರುಷರ ತಂಡದ ಸಾಧನೆ

ಭಾರತಕ್ಕೆ ಐತಿಹಾಸಿಕ ಚಿನ್ನ

ಚೆಂಗ್‌ಜು, ದಕ್ಷಿಣ ಕೊರಿಯಾ (ಪಿಟಿಐ): ಸೌರವ್ ಘೋಷಾಲ್ ಅವರನ್ನೊಳಗೊಂಡ ಭಾರತ ಪುರುಷರ ತಂಡವು ಏಷ್ಯನ್ ಸ್ಕ್ವಾಷ್ ತಂಡ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಇದರೊಂದಿಗೆ ಇದೇ ಮೊದಲ ಬಾರಿ ಈ ಸಾಧನೆ ಮಾಡಿದ ಶ್ರೇಯ ಗಳಿಸಿದೆ.

ಶುಕ್ರವಾರ ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತ 2–0ಯಿಂದ ಕುವೈತ್ ತಂಡವನ್ನು ಪರಾಭವಗೊಳಿಸಿತು.

ಮೊದಲ ಪಂದ್ಯದಲ್ಲಿ ಭಾರತದ ರಮಿತ್ ಟಂಡನ್ 11-5, 11-7, 11-4ರಿಂದ ಅಲಿ ಅಲಮೇಜಿ ಎದುರು ಗೆದ್ದು ಮುನ್ನಡೆ ಮುನ್ನಡೆ ತಂದು ಕೊಟ್ಟರು. ಬಳಿಕ ಸೌರವ್ 11-9, 11-2, 11-3ರಿಂದ ಅಮ್ಮಾರ್ ಅಲ್ತಾಮಿಮಿ ಅವರನ್ನು ಪರಾಭವಗೊಳಿಸಿದರು.

ಇವೆರಡೇ ಪಂದ್ಯಗಳಲ್ಲಿ ಫಲಿತಾಂಶ ನಿರ್ಧಾರವಾದ್ದರಿಂದ ಅಭಯ್ ಸಿಂಗ್ ಮತ್ತು ಫಲಾಹ್ ಮೊಹಮ್ಮದ್ ನಡುವಣ ಹಣಾಹಣಿ ನಡೆಯಲಿಲ್ಲ.


ಭಾರತ ತಂಡದ ಆಟಗಾರರ ಸಂಭ್ರಮ

ಹಿಂದಿನ ಎರಡು ಆವೃತ್ತಿಗಳಲ್ಲಿ ಬೆಳ್ಳಿ ಪದಕ ಜಯಿಸಿದ್ದ ಭಾರತ ಈ ಬಾರಿ ಶ್ರೇಷ್ಠ ಸಾಮರ್ಥ್ಯದ ಮೂಲಕ ಚಿನ್ನ ಒಲಿಸಿಕೊಂಡಿತು. ಎ ಗುಂಪಿನಲ್ಲಿ ಕತಾರ್, ಪಾಕಿಸ್ತಾನ, ಕುವೈತ್, ದಕ್ಷಿಣ ಕೊರಿಯಾ ಮತ್ತು ಚೀನಾ ತೈಪೆ ತಂಡಗಳನ್ನು ಸೋಲಿಸಿ ಅಗ್ರಸ್ಥಾನ ಗಳಿಸಿದ್ದ ಭಾರತ, ನಾಲ್ಕರ ಘಟ್ಟದಲ್ಲಿ 2–1ರಿಂದ ಮಲೇಷ್ಯಾ ತಂಡವನ್ನು ಮಣಿಸಿತ್ತು.

ಮಹಿಳಾ ತಂಡಕ್ಕೆ ಕಂಚು: ಭಾರತ ಮಹಿಳಾ ತಂಡವು ಸೆಮಿಫೈನಲ್‌ನಲ್ಲಿ 1–2ರಿಂದ ಮಲೇಷ್ಯಾ ಎದುರು ಸೋತು ಕಂಚು ತನ್ನದಾಗಿಸಿಕೊಂಡಿತು. ಬಿ ಗುಂಪಿನಲ್ಲಿ ಎರಡನೇ ಸ್ಥಾನ ಗಳಿಸಿದ್ದ ಭಾರತ ತಂಡವು ಇರಾನ್ ಹಾಗೂ ಸಿಂಗಪುರ ವಿರುದ್ಧ 3–0ಯಿಂದ ಗೆದ್ದರೆ, ಹಾಂಗ್‌ಕಾಂಗ್ ಎದುರು 0–3ರಿಂದ ಸೋಲು ಕಂಡಿತ್ತು.

ಕೊಲೆ ಪ್ರಕರಣ: ಸುಶೀಲ್‌ಗೆ ಮಧ್ಯಂತರ ಜಾಮೀನು

ನವದೆಹಲಿ (ಪಿಟಿಐ): ಕೊಲೆ ಆರೋಪದ ಮೇಲೆ ನ್ಯಾಯಾಂಗ ಬಂಧನದಲ್ಲಿರುವ ಒಲಿಂಪಿಯನ್ ಕುಸ್ತಿಪಟು ಸುಶೀಲ್ ಕುಮಾರ್ ಅವರಿಗೆ ಇಲ್ಲಿಯ ನ್ಯಾಯಾಲಯ ಒಂಬತ್ತು ದಿನಗಳ ಮಧ್ಯಂತರ ಜಾಮೀನು ನೀಡಿದೆ.


ಸುಶೀಲ್

ಸುಶೀಲ್ ಅವರ ಪತ್ನಿ ಬೆನ್ನು ನೋವಿನ ಚಿಕಿತ್ಸೆಗೆ ಒಳಗಾಗಿದ್ದು, ವೈದ್ಯಕೀಯ ಮತ್ತು ಮಾನವೀಯತೆ ಹಿನ್ನೆಲೆಯಲ್ಲಿ ಅವರಿಗೆ ನವೆಂಬರ್ 12ರವರೆಗೆ ಜಾಮೀನು ನೀಡಲಾಗಿದೆ.

ರಾಷ್ಟ್ರೀಯ ಜೂನಿಯರ್ ಕುಸ್ತಿ ಚಾಂಪಿಯನ್ ಸಾಗರ್ ಧನಕರ್ ಹತ್ಯೆ ಪ್ರಕರಣದಲ್ಲಿ ಸುಶೀಲ್, 2021ರ ಜೂನ್ 2ರಿಂದ ಸುಶೀಲ್ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಕಬಡ್ಡಿ: ಮುಂಬಾ ಮಣಿಸಿದ ಪಟ್ನಾ

ಪುಣೆ: ಸಚಿನ್ ಅವರ ಅಮೋಘ ರೇಡಿಂಗ್‌ನ ನೆರವಿನಿಂದ ಪಟ್ನಾ ಪೈರೇಟ್ಸ್ ತಂಡದವರು ಪ್ರೊ ಕಬಡ್ಡಿ ಲೀಗ್‌ನಲ್ಲಿ ಸತತ 3ನೇ ಜಯ ಪಡೆದರು.

ಶುಕ್ರವಾರ ನಡೆದ ಪಂದ್ಯದಲ್ಲಿ ಪೈರೇಟ್ಸ್ 34–31 ರಲ್ಲಿ ಯು ಮುಂಬಾ ತಂಡವನ್ನು ಮಣಿಸಿತು. ಸಚಿನ್ 12 ಪಾಯಿಂಟ್ಸ್ ಗಳಿಸಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಪ್ರಥಮಾರ್ಧ ಕೊನೆಗೊಂಡಾಗ 13–18 ರಲ್ಲಿ ಹಿನ್ನಡೆಯಲ್ಲಿದ್ದ ಪೈರೇಟ್ಸ್ ದ್ವಿತೀಯಾರ್ಧದಲ್ಲಿ ಪುಟಿದೆದ್ದು ನಿಂತಿತು. ಸಚಿನ್ ಅವರು ಎದುರಾಳಿ ತಂಡವನ್ನು ಕಾಡಿದರು. ಅವರಿಗೆ ತಕ್ಕ ಬೆಂಬಲ ನೀಡಿದ ಸುನಿಲ್ 6 ಪಾಯಿಂಟ್ಸ್ ತಂದಿತ್ತರು. ಮುಂಬಾದ ಸತತ 3 ಪಂದ್ಯಗಳ ಜಯದ ಓಟಕ್ಕೆ ತಡೆ ಬಿತ್ತು

ಗೆಲುವಿನ ಹಾದಿಗೆ ಪ್ಯಾಂಥರ್ಸ್: ದಿನದ ಎರಡನೇ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 45–40ರಲ್ಲಿ ದಬಾಂಬ್ ಡೆಲ್ಲಿ ತಂಡ ವನ್ನು ಸೋಲಿಸಿತು. ಸತತ 3 ಪಂದ್ಯಗಳಲ್ಲಿ ನಿರಾಸೆ ಅನುಭವಿಸಿದ್ದ ಪ್ಯಾಂಥರ್ಸ್ ಕೊನೆಗೂ ಗೆಲುವಿನ ಹಾದಿಗೆ ಮರಳಿತು. 16 ಪಾಯಿಂಟ್ಸ್ ಗಳಿಸಿದ ಅರ್ಜುನ್ ದೇಶ್ವಾಲ್, ಪ್ಯಾಂಥರ್ಸ್ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ರಾಹುಲ್ ಚೌಧರಿ ಆರು ಪಾಯಿಂಟ್ಸ್ ತಂದುಕೊಟ್ಟರು. ಪ್ರಥಮಾರ್ಧದ ಆಟದಲ್ಲಿ ಜೈಪುರದ ತಂಡ 28–19 ರಲ್ಲಿ ಮೇಲುಗೈ ಸಾಧಿಸಿತ್ತು. 2ನೇ ಅವಧಿಯಲ್ಲಿ ಆಶು ಮಲಿಕ್ (15) ಮತ್ತು ನವೀನ್ ಕುಮಾರ್ (12) ಆಟದ ನೆರವಿನಿಂದ ದಬಾಂಗ್ ಮರುಹೋರಾಟ ನಡೆಸಿದರೂ ಗೆಲುವು ಒಲಿಯಲಿಲ್ಲ. ಇನ್ನೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ 40–31ರಿಂದ ಯುಪಿ ಯೋಧಾಸ್ ವಿರುದ್ಧ ಗೆದ್ದಿತು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	10	6	2	2	37
ಬೆಂಗಳೂರು	10	6	3	1	35
ಜೈಪುರ	10	6	4	0	32
ಮುಂಬಾ	10	6	4	0	32
ಡೆಲ್ಲಿ	11	5	6	0	30
ಪಟ್ನಾ	10	4	4	2	28

ಇಂದಿನ ಪಂದ್ಯಗಳು

ಗುಜರಾತ್ ಜೈಂಟ್ಸ್– ಬೆಂಗಾಲ್ ವಾರಿಯರ್ಸ್ (ರಾತ್ರಿ 7.30ರಿಂದ)

ತಮಿಳ್ ತಲೈವಾಸ್– ತೆಲುಗು ಟೈಟನ್ಸ್ (ರಾತ್ರಿ 8.30ರಿಂದ)

ಹರಿಯಾಣ ಸ್ಟೀಲರ್ಸ್– ಯು.ಪಿ. ಯೋಧಾಸ್ (ರಾತ್ರಿ 9.30ರಿಂದ)

ಪ್ರೊ ಲೀಗ್ ಹಾಕಿ: ಭಾರತ ತಂಡಕ್ಕೆ ಭರ್ಜರಿ ಗೆಲುವು

ಭುವನೇಶ್ವರ (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಕಾರ್ತಿ ಸೆಲ್ವಂ ಅವರ ಮಿಂಚಿನ ಆಟದ ನೆರವಿನಿಂದ ಭಾರತ ತಂಡ ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು 7–4 ಗೋಲುಗಳಿಂದ ಮಣಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ 1–3 ಗೋಲುಗಳಿಂದ ಹಿನ್ನಡೆಯಲ್ಲಿದ್ದ ಭಾರತ, ಆ ಬಳಿಕ ಮರುಹೋರಾಟ ನಡೆಸಿತು.

ಹರ್ಮನ್‌ಪ್ರೀತ್ ಸಿಂಗ್ (7 ಮತ್ತು 19ನೇ ನಿ.) ಹಾಗೂ ಕಾರ್ತಿ ಸೆಲ್ವಂ (17 ಮತ್ತು 38ನೇ ನಿ.) ತಲಾ ಎರಡು ಗೋಲುಗಳನ್ನು ಗಳಿಸಿದರು. ಹರ್ಮನ್ ಎರಡೂ ಗೋಲುಗಳನ್ನು ಪೆನಾಲ್ಟಿ ಅವಕಾಶದಲ್ಲಿ ತಂದಿತ್ತರು.

ಭಾರತದ ಇತರ ಗೋಲುಗಳನ್ನು ರಾಜ್‌ಕುಮಾರ್ ಪಾಲ್ (31), ಸುಖ್‌ಜೀತ್ ಸಿಂಗ್ (50) ಮತ್ತು ಜುಗ್ರಾಜ್ ಸಿಂಗ್ (53) ಅವರು ಗಳಿಸಿದರು.

ನ್ಯೂಜಿಲೆಂಡ್ ತಂಡದ ಪರ ಸೈಮನ್ ಚೈಲ್ಡ್ (2), ಸ್ಯಾಮ್ ಲೇನ್ (9), ಜೇಕ್ ಸ್ಮಿತ್ (14) ಹಾಗೂ ನಿಕ್ ವುಡ್ಸ್ (54) ಅವರು ಚೆಂಡನ್ನು ಗುರಿ ಸೇರಿಸಿದರು. ಪಂದ್ಯದಲ್ಲಿ ಭಾರತಕ್ಕೆ ಒಟ್ಟು 11 ಪೆನಾಲ್ಟಿ ಕಾರ್ನರ್ ಅವಕಾಶಗಳು ಲಭಿಸಿದ್ದವು. ಅದರಲ್ಲಿ ಮೂರರಲ್ಲಿ ಮಾತ್ರ ಗೋಲು ಬಂದವು.

ಭಾರತ ತನ್ನ ಮುಂದಿನ ಪಂದ್ಯದಲ್ಲಿ ಭಾನುವಾರ, ಸ್ಪೇನ್ ವಿರುದ್ಧ ಆಡಲಿದೆ. ಆತಿಥೇಯರು ಮೊದಲ ಲೆಗ್‌ನಲ್ಲಿ ಸ್ಪೇನ್ ಕೈಯಲ್ಲಿ 2–3 ರಿಂದ ಸೋತಿದ್ದರು.